ಮಂಗಳೂರು
ಗುರುವಾರ, 18 ಜೂನ್ 2026
ಸಂಪುಟ 48, ಸಂಚಿಕೆ 91, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಫ್ಘಾನ್ ವಿರುದ್ಧ ಏಕದಿನ ಸರಣಿ ಗೆದ್ದ ಭಾರತ |೧೧ ಇಯು ಜತೆ ಎಫ್‌ಟಿಎ ಶೀಘ್ರ | ೦೨ ಫಿಫಾ ವಿಶ್ವಕಪ್: ಮೆಸ್ಸಿ ಮ್ಯಾಜಿಕ್ ಹ್ಯಾಟ್ರಿಕ್ |೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುಷ್ಯ

ದಿನದ ಮಾತು

ದೇವರಲ್ಲಿನ ನಂಬಿಕೆ ಮತ್ತು ಆತ್ಮ ವಿಶ್ವಾಸಗಳೆರಡು ಒಂದೇ ನಾಣ್ಯದ ಎರಡು ಮುಖಗಳಂತೆ.
▲ ಭರ್ತೃಹರಿ

ನೋಂದಣಿ ಮಾಡಿಕೊಳ್ಳದಿರುವುದು ಅಪರಾಧವಲ್ಲ
ಲೇಖನ
• ಅನೂಪ್ ದೇಶಪಾಂಡೆ
• ಪುಟ ೬

ಕಿರುಸುದ್ದಿ

ನೌಕಾಪಡೆಗೆ ವಾರಾಂತ್ಯದಲ್ಲಿ ಮೂರು ಹಡಗು ಸೇರ್ಪಡೆ
• ಪುಟ ೨

ಉದ್ಯೋಗ ಸೃಷ್ಟಿಗೆ ₹2,400 ಕೋಟಿ ಪ್ರೋತ್ಸಾಹಧನ
• ಪುಟ ೨

ಟೆಲಿಗ್ರಾಂ ನಿರ್ಬಂಧ ತಡೆಗೆ ದಿಲ್ಲಿ ಹೈ ನಕಾರ
• ಪುಟ ೨

ಇಡಿಯಿಂದ ಪಿಣರಾಯಿ ಪುತ್ರಿ ವೀಣಾ ವಿಚಾರಣೆ
• ಪುಟ ೨

232 ತಹಸೀಲ್ದಾರ್ ಹುದ್ದೆ ಬಡ್ತಿ: ಡಿಸಿಎಂ ಪರಮೇಶ್ವರ್
• ಪುಟ ೫

ರಕ್ಷಣಾ ಉತ್ಪಾದನೆ 1.78 ಲಕ್ಷ ಕೋಟಿ ರೂ.ಗೆ ಏರಿಕೆ
• ಪುಟ ೨

ಖರ್ಗೆ ವಿರುದ್ಧ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ ಬಿಜೆಪಿ
• ಪುಟ ೨

ಮಾವು ಬೆಲೆ ಕುಸಿತ: ಕೇಂದ್ರ ಕೃಷಿ ಸಚಿವರಿಗೆ ಎಚ್‌ಡಿಕೆ ಪತ್ರ
• ಪುಟ ೫



ಮತಾಂತರ ಕಾಯ್ದೆ ಮತ್ತು ಭಿನ್ನಾಭಿಪ್ರಾಯಗಳು
• ಪುಟ ೨
ಸುದ್ದಿ ಸಮಗ್ರ

ಮೋದಿ–ಟ್ರಂಪ್ ಭೇಟಿ | ಇರಾನ್ ಶಾಂತಿ ಒಪ್ಪಂದ ಪ್ರಸ್ತಾಪ

ನಾವಿಕರ ಸುರಕ್ಷತೆಗೆ ಪಣ

• **ಎವಿಯಾನ್-ಲೆ-ಬೈನ್ಸ್ (ಫ್ರಾನ್ಸ್):** ಇರಾನ್‌ನೊಂದಿಗೆ ಅಮೆರಿಕ ಕೈಗೊಳ್ಳುತ್ತಿರುವ ಶಾಂತಿ ಒಪ್ಪಂದದಲ್ಲಿ ಭಾರತೀಯ ನಾವಿಕರ ಸುರಕ್ಷತೆಗೆ ವಿಶೇಷ ಆದ್ಯತೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಟ್ರಂಪ್, ಭಾರತಕ್ಕೆ ಯಾವುದೇ ಭದ್ರತಾ ಸವಾಲುಗಳು ಎದುರಾದರೆ ಅಮೆರಿಕ ಬೆಂಬಲ ನೀಡಲಿದೆ ಎಂದು ಪ್ರತಿಜ್ಞೆ ಮಾಡಿದರು.

ಜಿ7 ಶೃಂಗಸಭೆಯ ಅಂಗವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾದ ಪ್ರಧಾನಿ ಮೋದಿಯವರು, ಕಳೆದ ವರ್ಷ ಭಾರತ-ಅಮೆರಿಕ ಸಂಬಂಧಗಳಲ್ಲಿ ಉಂಟಾಗಿದ್ದ ಬಿಕ್ಕಟ್ಟಿನ ನಡುವೆಯೂ ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಒಪ್ಪಿಕೊಂಡರು. ಮೋದಿ ತಮ್ಮ ಭಾಷಣದಲ್ಲಿ ಪಶ್ಚಿಮ ಏಷ್ಯಾದ ಸಂಘರ್ಷ ಅಂತ್ಯಗೊಳಿಸಲು ಟ್ರಂಪ್ ಕೈಗೊಂಡಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ಜತೆಗೆ, ಜಾಗತಿಕ ಸಮುದ್ರ ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲಕ್ಷಾಂತರ ಭಾರತೀಯ ನಾವಿಕರ ಸುರಕ್ಷತೆಯ ಪ್ರಶ್ನೆಯನ್ನು ಪ್ರಸ್ತಾಪಿಸಿದರು. ಒಮಾನ್ ಕರಾವಳಿಯ ಸಮೀಪ ಅಮೆರಿಕದ ಸೇನಾ ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟ ಹಿನ್ನೆಲೆಯಲ್ಲಿ ಮೋದಿಯವರು, ನಾವಿಕರ ಸುರಕ್ಷತೆಯ ಬಗ್ಗೆ ಟ್ರಂಪ್ ಅವರನ್ನು ಪ್ರಶ್ನಿಸಿದರು.

ಹಾರ್ಮುಜ್ ಜಲಸಂಧಿ ಮುಕ್ತವಾಗಿ ಕಾರ್ಯನಿರ್ವಹಿಸುವುದು ಜಾಗತಿಕ ಆರ್ಥಿಕತೆಗೆ ಅತ್ಯಗತ್ಯ. ಸಮುದ್ರ ಮಾರ್ಗಗಳ ಸ್ವಾತಂತ್ರ್ಯ ಕಾಪಾಡಲು ಭಾರತ ಸದಾ ಒತ್ತು ನೀಡಿದೆ. ಈ ವಿಷಯದಲ್ಲಿ ನಾವು ಒಟ್ಟಾಗಿ ಕೆಲಸ ಮಾಡಬೇಕು ಎಂದು ಮೋದಿ ಹೇಳಿದರು.

ಶಾಂತಿ ಒಪ್ಪಂದದಲ್ಲಿ ಭದ್ರತಾ ಕ್ರಮಗಳ ನಿರೀಕ್ಷೆ: ಇರಾನ್‌ನೊಂದಿಗೆ ಶಾಂತಿ ಒಪ್ಪಂದ ಸಾಧಿಸಲು ಟ್ರಂಪ್ ಮಹತ್ವದ ಪಾತ್ರ ವಹಿಸಿರುವುದನ್ನು ಉಲ್ಲೇಖಿಸಿದ ಮೋದಿ, ಅದರ ಅನುಷ್ಠಾನದಲ್ಲಿ ನಾವಿಕರ ಸುರಕ್ಷತೆಗೆ ಅತ್ಯುನ್ನತ ಆದ್ಯತೆ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಾಗತಿಕ ವ್ಯಾಪಾರ ಮಾರ್ಗಗಳಲ್ಲಿ ಲಕ್ಷಾಂತರ ಭಾರತೀಯ ನಾವಿಕರು ಕೆಲಸ ಮಾಡುತ್ತಿದ್ದಾರೆ. ಅವರ ಸುರಕ್ಷತೆ ನಮಗೆ ಅತ್ಯಂತ ಮುಖ್ಯ. ➡ಪುಟ ೪



ಮೋದಿ ಭೇಟಿ ಅದ್ಭುತ ಎಂದ ಟ್ರಂಪ್

ಮೋದಿಯವರೊಂದಿಗಿನ ಭೇಟಿಯನ್ನು ಅದ್ಭುತ ಎಂದು ಬಣ್ಣಿಸಿದ ಟ್ರಂಪ್, ಪ್ರಧಾನಿ ಮೋದಿಯವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಯಾವುದೇ ನಿರ್ದಿಷ್ಟ ದಿನಾಂಕವನ್ನು ನೀಡದೆಯೇ ಶೀಘ್ರದಲ್ಲೇ ತಾವು ಭಾರತಕ್ಕೆ ಭೇಟಿ ನೀಡುವುದಾಗಿ ಟ್ರಂಪ್ ತಿಳಿಸಿದರು. ➡ಪುಟ ೪

ಭಾರತದ ಭದ್ರತಾ ಸವಾಲಿಗೆ ಅಮೆರಿಕ ಬೆಂಬಲ: ಟ್ರಂಪ್

ಭಾರತದ ಭದ್ರತೆ ಕುರಿತ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, ಭಾರತ ಯಾವುದೇ ಭದ್ರತಾ ಸವಾಲು ಅಥವಾ ದಾಳಿಯನ್ನು ಎದುರಿಸಿದರೆ ಅಮೆರಿಕ ಬೆಂಬಲ ನೀಡುತ್ತದೆ ಎಂದು ಹೇಳಿದರು. ಮೂವರು ಭಾರತೀಯ ನಾವಿಕರ ಸಾವಿನ ಬಗ್ಗೆ ಕೇಳಿದಾಗ, ನನಗೆ ಆ ವಿಷಯ ಗೊತ್ತು. ಅದು ನಿಜಕ್ಕೂ ಕಠಿಣ ವೃತ್ತಿ, ಅದರಲ್ಲಿ ಯಾವುದೇ ಸಂಶಯವಿಲ್ಲ. ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದರು. ಭಾರತಕ್ಕೆ ಯಾವುದೇ ಭದ್ರತಾ ಸವಾಲುಗಳು ಎದುರಾದರೆ ಅಮೆರಿಕ ಬೆಂಬಲ ನೀಡಲಿದೆ ಎಂದೂ ಅವರು ಸ್ಪಷ್ಟಪಡಿಸಿದರು.

> ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ. ಆದರೆ ಅವರು ತುಂಬಾ ಕಠಿಣ ವ್ಯಕ್ತಿ ಮತ್ತು ಕಠಿಣ ಸಮಾಲೋಚಕ. ಅವರು ಭಾರತೀಯರನ್ನು ಪ್ರೀತಿಸುತ್ತಾರೆ.
> ■ ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ವ್ಯಾಪಾರ ಒಪ್ಪಂದದ ಆಶಾವಾದ


ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಕುರಿತು ಕೇಳಿದ ಪ್ರಶ್ನೆಗೆ ಟ್ರಂಪ್ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು. ಉಭಯ ರಾಷ್ಟ್ರಗಳ ನಡುವಿನ ಮಾತುಕತೆಗಳು ಉತ್ತಮ ದಿಕ್ಕಿನಲ್ಲಿ ಸಾಗುತ್ತಿವೆ ಎಂದರು.ಅಮೆರಿಕ ಭಾರತಕ್ಕೆ ವಿಧಿಸಿದ್ದ ಹೆಚ್ಚುವರಿ ಸುಂಕಗಳು, ಎಚ್-1ಬಿ ವೀಸಾ ಶುಲ್ಕ ಹೆಚ್ಚಳ ಹಾಗೂ 2025ರ ಭಾರತ-ಪಾಕಿಸ್ತಾನ ಉದ್ವಿಗ್ನತೆ ಕುರಿತು ಟ್ರಂಪ್ ಮಾಡಿದ ಹೇಳಿಕೆಗಳಿಂದ ಉಭಯ ರಾಷ್ಟ್ರಗಳ ಸಂಬಂಧಗಳಲ್ಲಿ ಒತ್ತಡ ಉಂಟಾಗಿತ್ತು. ಆದರೆ, ಇತ್ತೀಚಿನ ತಿಂಗಳುಗಳಲ್ಲಿ ಎರಡೂ ದೇಶಗಳು ಸಂಬಂಧ ಸುಧಾರಣೆಗೆ ಕ್ರಮ ಕೈಗೊಂಡಿದ್ದು, ಪರಸ್ಪರ ವ್ಯಾಪಾರ ಒಪ್ಪಂದದತ್ತ ಮುನ್ನಡೆಯುತ್ತಿವೆ.

ಧರ್ಮಸ್ಥಳ ಪ್ರಕರಣ: ಚಕ್ರವರ್ತಿ ಸೂಲಿಬೆಲೆ, ವಸಂತ ಗಿಳಿಯಾರ್, ವಿಕಾಸ್ ಪುತ್ತೂರು ಆಗ್ರಹ

ಚಿನ್ನಯ್ಯ ಹೇಳಿದವರನ್ನೂ ಎಸ್‌ಐಟಿ ತನಿಖೆ ನಡೆಸಲಿ



• **ಬೆಂಗಳೂರು:** ಧರ್ಮಸ್ಥಳ ಪ್ರಕರಣದ ಮಾಸ್ಕ್ ಮ್ಯಾನ್ ಚಿನ್ನಯ್ಯ ತನ್ನ ರಿಟ್ ಅರ್ಜಿಯಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು ವಿಶೇಷ ತನಿಖಾ ತಂಡ (ಎಸ್‌ಐಟಿ)ದ ತನಿಖೆಯ ವ್ಯಾಪ್ತಿಗೆ ಒಳಪಡಬೇಕು. ಎಸ್‌ಐಟಿ ಮಧ್ಯಂತರ ವರದಿ ಸಲ್ಲಿಸಬೇಕು ಎಂದು ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಆಗ್ರಹಿಸಿದೆ. ಬುಧವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಚಕ್ರವರ್ತಿ ಸೂಲಿಬೆಲೆ, ವಸಂತ ಗಿಳಿಯಾರ್ ಮತ್ತು ವಿಕಾಸ್ ಪುತ್ತೂರು ಒತ್ತಾಯಿಸಿದ್ದಾರೆ.


ಚಿನ್ನಯ್ಯ

ಧರ್ಮಸ್ಥಳದ ವಿರುದ್ಧ ದೊಡ್ಡ ಮಟ್ಟದ ಷಡ್ಯಂತ್ರ ನಡೆದಿದೆ ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೆವು, ಅದೀಗ ನಿಜವಾಗಿದೆ. ದೂರುದಾರ ಚಿನ್ನಯ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಎಲ್ಲವೂ ಬಯಲಾಗಿದೆ. ನಟ ಪ್ರಕಾಶ್ ರಾಜ್ ಅವರ ಹೆಸರೂ ಅಲ್ಲಿ ಉಲ್ಲೇಖವಾಗಿತ್ತು. ಇಂದು ಖುದ್ದು ಪ್ರಕಾಶ್ ರಾಜ್ ಅವರೇ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಜತೆ ಚರ್ಚಿಸಿರುವುದನ್ನು ಒಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸರು ತಕ್ಷಣ ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ನಿರ್ದೇಶನಕ್ಕಾಗಿ ಮಾಸ್ಕ್ ಹಾಕಿದ್ದು: ಧರ್ಮಸ್ಥಳದಲ್ಲಿ ಮಹಿಳೆಯರ ಶವ ಹೂತು ಹಾಕಿದ್ದೇನೆಂದು ಹೇಳಿದ ಚಿನ್ನಯ್ಯ ಎಸ್‌ಐಟಿ ಜತೆಯಲ್ಲಿದ್ದಾಗ ಮುಖಕ್ಕೆ ಮಾಸ್ಕ್ ಹಾಕಿದ್ದ. ಇದನ್ನು ಎಸ್‌ಐಟಿಯವರು ಹಾಕಿದ್ದಲ್ಲ. ➡ಪುಟ ೪

ಅಲ್ಲಲ್ಲಿ ಜನಾಗ್ರಹ ಸಭೆಗಳ ಆಯೋಜನೆ

ಧರ್ಮಸ್ಥಳ ಹಾಗೂ ಕರ್ನಾಟಕವಲ್ಲದೆ ದೇಶದ ಬೇರೆ ಬೇರೆ ಹಿಂದು ಧಾರ್ಮಿಕ ಕ್ಷೇತ್ರಗಳ ವಿರುದ್ಧ ಷಡ್ಯಂತ್ರ ರೂಪಿಸಲಾಗಿತ್ತು. ಧರ್ಮಸ್ಥಳ ಪ್ರಕರಣದಲ್ಲಿ 200 ಕೋಟಿ ರೂ. ಡೀಲ್ ಬಗ್ಗೆಯೂ ರಿಟ್ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಇಷ್ಟೊಂದು ದೊಡ್ಡ ಮೊತ್ತದ ಹಣದ ಸಹಾಯ ಒದಗಿಸಿದವರು ಯಾರು? ಈ ಷಡ್ಯಂತ್ರದಲ್ಲಿ ಯಾರಿದ್ದಾರೆ ಎಂಬುದು ಬಹಿರಂಗವಾಗಬೇಕು. ಇದಕ್ಕಾಗಿ ಸಮಿತಿಯಿಂದ ಅಲ್ಲಲ್ಲಿ ಜನಾಗ್ರಹ ಸಭೆಗಳನ್ನು ನಡೆಸಲಾಗುತ್ತದೆ ಎಂದು ವಿವರಿಸಿದರು. ಸಿಎಂ ಡಿ.ಕೆ.ಶಿವಕುಮಾರ್ ಅವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಪ್ರಕರಣದ ತನಿಖೆ ಮುಂದುವರಿಯುವಂತೆ ನೋಡಬೇಕು. ➡ಪುಟ ೪

ಬೆಳವಣಿಗೆ ಮರೆಮಾಚಲು ಸುಳ್ಳು ಕಥನಗಳ ಸೃಷ್ಟಿ: ಭಾಗವತ್

ಭಾರತದ ಉನ್ನತಿ ತಡೆಗೆ ಹುನ್ನಾರ

• **ಉದಯಪುರ:** ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಭಾರತದ ಶಕ್ತಿ ಮತ್ತು ಉನ್ನತಿಯನ್ನು ದುರ್ಬಲಗೊಳಿಸಲು ದೇಶದ ಒಳಗೆ ಮತ್ತು ಹೊರಗೆ ಸುಳ್ಳು ನಿರೂಪಣೆಗಳನ್ನು ಸೃಷ್ಟಿಸಲಾಗುತ್ತಿದೆ. ಸತತವಾಗಿ ನಡೆಯುತ್ತಿರುವ ಇಂತಹ ಸುಳ್ಳು ಪ್ರಚಾರ ಮತ್ತು ಇದರ ಹಿಂದಿರುವ ಹುನ್ನಾರಗಳ ಬಗ್ಗೆ ಎಚ್ಚೆತ್ತುಕೊಂಡು ಒಗ್ಗಟ್ಟಿನಿಂದ ಎದುರಿಸಿ ನಿಲ್ಲಬೇಕು ಎಂಬುದನ್ನು ಇತಿಹಾಸದ ಪಾಠದಿಂದ ನಾವು ಕಲಿತುಕೊಳ್ಳಬೇಕಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದ್ದಾರೆ.

ಮಹಾರಾಣಾ ಪ್ರತಾಪ್‌ಸಿಂಹರ ಜಯಂತಿ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಮಾತನಾಡಿದ ಭಾಗವತ್, ಇಂದು ಕೆಲವರು ಭಾರತದ ಬೆಳವಣಿಗೆಯನ್ನು ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ. ಈ ಉದ್ದೇಶಕ್ಕಾಗಿ ಸುಳ್ಳು ನಿರೂಪಣೆಗಳನ್ನು, ತರ್ಕಗಳನ್ನು ಸೃಷ್ಟಿಸಲಾಗುತ್ತದೆ. ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ಜನರನ್ನು ದಾರಿ ತಪ್ಪಿಸಲು ವಿವಿಧ ತಂತ್ರಗಳನ್ನು ಬಳಸಲಾಗುತ್ತಿದೆ ಎಂದು ಎಚ್ಚರಿಸಿದರು. ➡ಪುಟ ೪



> ಸುಳ್ಳು ನಿರೂಪಣೆ ಮಾಡುತ್ತಿರುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರು ಹಣ ಮತ್ತು ಸಂಘಟನಾ ಸಾಮರ್ಥ್ಯದಂತಹ ಬೆಂಬಲ ಕೂಡ ಹೊಂದಿದ್ದಾರೆ. ಆದರೆ ಇದೆಲ್ಲದರ ಹೊರತಾಗಿಯೂ, ಜನರು ಇದಕ್ಕೆ ಬಲಿಯಾಗದೆ ತಮ್ಮ ಮೌಲ್ಯಗಳ ಮೇಲೆ ದೃಢವಾಗಿ ನಿಲ್ಲಬೇಕು.
> ■ ಡಾ.ಮೋಹನ್ ಭಾಗವತ್, ಆರೆಸ್ಸೆಸ್ ಸರಸಂಘಚಾಲಕ

5ನೇ ಅಭ್ಯರ್ಥಿ ಗೆಲುವಿಗೆ ಕೈ ಕಸರತ್ತು | ಎಲ್ಲ ಪಕ್ಷಗಳಿಂದ ತಂತ್ರ

ಪರಿಷತ್ 7 ಸ್ಥಾನಕ್ಕಿಂದು ಚುನಾವಣೆ

• **ಬೆಂಗಳೂರು:** ಮೇಲ್ಮನೆ ಚುನಾವಣೆಯಲ್ಲಿ ಮೇಲುಗೈ ಸಾಧಿಸಲು ಕಾಂಗ್ರೆಸ್ ಪಡೆ ಭರ್ಜರಿ ತಯಾರಿ ನಡೆಸಿದ್ದು, 5ನೇ ಅಭ್ಯರ್ಥಿಗೆ ಕೊರತೆ ಇರುವ ಅಲ್ಪ ಮತಗಳನ್ನು ತನ್ನತ್ತ ಸೆಳೆಯುವ ಮೂಲಕ ವಿಪಕ್ಷಗಳಿಗೆ ಮುಖಭಂಗ ಮಾಡಲು ರಣತಂತ್ರ ರೂಪಿಸಿದೆ. ಇದೇ ವೇಳೆ, ಬಿಜೆಪಿಯ ಹೆಚ್ಚುವರಿ ಮತಗಳ ಜತೆಗೆ ಅತೃಪ್ತ ಕೈ ಶಾಸಕರ ಮತಗಳನ್ನು ಪಡೆಯುವ ಮೂಲಕ ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಗೆಲ್ಲಿಸಲು ಯೋಜನೆ ರೂಪಿಸಿದೆ.



ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಜತೆಗೆ ಬಿಜೆಪಿಯ ಉಚ್ಚಾಟಿತ ಶಾಸಕರ ಪೈಕಿ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಗುರುತಿಸಿಕೊಂಡಿದ್ದು, ಇನ್ನೂ ಇಬ್ಬರು ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ, ಪುಟ್ಟಸ್ವಾಮಿಗೌಡ, ಎಸ್‌ಕೆಪಿಯ ದರ್ಶನ್ ಪುಟ್ಟಣ್ಣಯ್ಯ ಬೆಂಬಲ ನೀಡುವುದು ಖಚಿತವಾಗಿರುವುದರಿಂದ ಕಾಂಗ್ರೆಸ್ ಗೆಲುವಿನ ನಿರೀಕ್ಷೆಯಲ್ಲಿದೆ. ➡ಪುಟ ೪

ಅಭ್ಯರ್ಥಿಗಳು ಯಾರು?

ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ ಕಮಕನೂರ, ಪಿ.ವಿ ಮೋಹನ್, ಶಿವಣ್ಣ ಮಳವಳ್ಳಿ, ವಿನಯ್ ಕಾರ್ತಿಕ್ ಸ್ಪರ್ಧಿಸಿದ್ದರೆ, ಬಿಜೆಪಿಯಿಂದ ರಘು ಕೌಟಿಲ್ಯ, ಲಿಂಗರಾಜ್ ಪಾಟೀಲ ಹಾಗೂ ಜೆಡಿಎಸ್‌ನಿಂದ ಗೋವಿಂದರಾಜು ಅಖಾಡದಲ್ಲಿದ್ದಾರೆ.

ಬೆ.9ರಿಂದ ಸಂಜೆ 4ರವರೆಗೆ ಮತದಾನ

ವಿಧಾನಪರಿಷತ್ತಿನ ಚುನಾವಣೆ ವಿಧಾನಸೌಧದ ಮೊದಲನೇ ಮಹಡಿಯಲ್ಲಿನ 106 ಸಂಖ್ಯೆಯ ಕೊಠಡಿಯಲ್ಲಿ ಗುರುವಾರ (ಜೂ.18) ಬೆಳಗ್ಗೆ 9ರಿಂದ ಸಂಜೆ 4 ರವರೆಗೆ ಮತದಾನ ನಡೆಯಲಿದೆ. ಸಂಜೆ 5 ಗಂಟೆಗೆ ಮತ ಎಣಿಕೆ ಕಾರ್ಯ ನಡೆಯಲಿದ್ದು, ಗುರುವಾರವೇ ಫಲಿತಾಂಶ ಪ್ರಕಟವಾಗಲಿದೆ.

ಯುಬಿಟಿಗೆ ಬಂಡಾಯ ಬಿಸಿ

- ಪ್ರತ್ಯೇಕ ಗುಂಪು ಮಾನ್ಯತೆಗೆ ಶೀಘ್ರ ಮನವಿ ಸಾಧ್ಯತೆ
- 6 ಸಂಸದರ ಬೆಂಬಲ: ಸ್ಪೀಕರ್‌ಗೆ ಬಂಡಾಯ ನಾಯಕರ ಹೇಳಿಕೆ

• **ಹೊಸದಿಲ್ಲಿ:** ಶಿವಸೇನೆ ಯುಬಿಟಿ(ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಯಲ್ಲಿ ಮತ್ತೊಂದು ವಿಭಜನೆಯ ಸುಳಿವು ದಟ್ಟವಾಗಿದ್ದು, ಪಕ್ಷದ ಕೆಲವು ಬಂಡಾಯ ನಾಯಕರು ಬುಧವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಅನೌಪಚಾರಿಕವಾಗಿ ಭೇಟಿಯಾಗಿ, ಲೋಕಸಭೆಯಲ್ಲಿರುವ ಪಕ್ಷದ 9 ಸಂಸದರ ಪೈಕಿ 6 ಮಂದಿ ತಮ್ಮೊಂದಿಗಿರುವುದಾಗಿ ಹೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಬಂಡಾಯ ಸಂಸದರು ಪ್ರತ್ಯೇಕ ಗುಂಪಿನ ಮಾನ್ಯತೆ ಕೋರಿ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಗೆ ವಿಲೀನಗೊಳ್ಳುವ ಸಂಬಂಧ ಶೀಘ್ರದಲ್ಲೇ ಅಧಿಕೃತವಾಗಿ ಸ್ಪೀಕರ್ ಭೇಟಿಯಾಗುವ ಸಾಧ್ಯತೆಯಿದೆ. ➡ಪುಟ ೪

ನಾಗರಿಕ ಸೇವೆಯ ಸಾಮಾನ್ಯ ನೇಮಕಾತಿಯಲ್ಲಿ ಅವಕಾಶ

ಕ್ರೀಡಾಳುಗಳಿಗೆ ಶೇ.2 ಮೀಸಲು

▸ ವೀರಣ್ಣ ಬಳಿಗಾರ

• **ಬೆಂಗಳೂರು:** ರಾಜ್ಯ ನಾಗರಿಕ ಸೇವೆಯ ಸಾಮಾನ್ಯ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಶೇ.2 ಮೀಸಲಾತಿ ನೀಡಲು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ್ದು, 34 ಕ್ರೀಡೆಯಲ್ಲಿ ಸಾಧನೆಗೈದ ಕ್ರೀಡಾಪಟುಗಳಿಗೆ ಭರ್ತಿಯಲ್ಲಿ ಶೇ.2 ಮೀಸಲಾತಿಯ ಅವಕಾಶ ಸಿಗಲಿದೆ. ಸರ್ಕಾರದ ನೇಮಕಾತಿಯ ಯಾವುದೇ ಸಾಮಾನ್ಯ ಅಧಿಸೂಚನೆಗಳಿಗೆ ಮೀಸಲಿಡಲಾದ ಶೇ.2ರಷ್ಟು ಖಾಲಿ ಹುದ್ದೆಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿ ಪ್ರವರ್ಗಗಳಲ್ಲಿ ಕ್ರೀಡಾ ಸಾಧಕರಾಗಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುತ್ತದೆ.

ದಿಗಂತ ವಿಶೇಷ

ರಾಜ್ಯದಲ್ಲಿ ಕನಿಷ್ಠ 10 ವರ್ಷ ಕರ್ನಾಟಕದಲ್ಲಿ ವಾಸವಾಗಿರುವ ಅಭ್ಯರ್ಥಿಯು ಸರ್ಕಾರ ಗುರುತಿಸಿರುವ 34 ಕ್ರೀಡೆಗಳಲ್ಲಿ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ವೈಯಕ್ತಿಕವಾಗಿ ಅಥವಾ ತಂಡದ ಸದಸ್ಯರಾಗಿ ಭಾಗವಹಿಸಿ, ಕನಿಷ್ಠ ಒಂದು ರಾಷ್ಟ್ರೀಯ ಚಾಂಪಿಯನ್ ಶಿಪ್ ಅಥವಾ ಕನಿಷ್ಠ ಒಂದು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕರ್ನಾಟಕ ಅಥವಾ ರೈಲ್ವೆಯಂತಹ ಸಂಸ್ಥೆಗಳನ್ನು ಸೇರಿ ಇತರ ರಾಜ್ಯಗಳನ್ನು ಪ್ರತಿನಿಧಿಸಿದ್ದ ಕ್ರೀಡಾಪಟು ಶೇ.2 ಮೀಸಲಾತಿ ಪಡೆಯಲು ಅರ್ಹನಾಗಿರುತ್ತಾನೆ. ➡ಪುಟ ೪



ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದರೆ 50 ಕೃಪಾಂಕ

ಸಾಮಾನ್ಯ ನೇಮಕಾತಿಯಲ್ಲಿ ಭರ್ತಿಗೆ ಅವಕಾಶ ಪಡೆಯುವ ಕ್ರೀಡಾ ಸಾಧಕರು ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದರೆ ಶೇ.50 ಕೃಪಾಂಕ, ಬೆಳ್ಳಿ ಪಡೆದರೆ 49 ಕೃಪಾಂಕ, ಕಂಚಿನ ಪದಕಕ್ಕೆ 48 ಕೃಪಾಂಕ ಸಿಗಲಿದೆ. ➡ಪುಟ ೪

ರಾಂಚಿ ಆರೆಸ್ಸೆಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ದಾಳಿ

• **ಹೊಸದಿಲ್ಲಿ:** ರಾಂಚಿಯಲ್ಲಿರುವ ತನ್ನ ಕಚೇರಿಯ ಮೇಲೆ ಮುಂಜಾನೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ ಎಂದು ಆರ್‌ಎಸ್‌ಎಸ್ ಬುಧವಾರ ಹೇಳಿದೆ. ಈ ಸಂಬಂಧ ತನಿಖೆಗಾಗಿ ಪೊಲೀಸರು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿದ್ದಾರೆ. ಚುಟಿಯಾ ಪೊಲೀಸ್ ಠಾಣಾ ಪ್ರದೇಶದ ನಿವಾರನ್ಪುರದ ಆರ್‌ಎಸ್‌ಎಸ್ ಕಚೇರಿಯಲ್ಲಿ ಬುಧವಾರ ಮುಂಜಾನೆ 12.30ರ ಸುಮಾರಿಗೆ ಈ ಕೃತ್ಯ ನಡೆದಿದೆ. ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಮಾಧ್ಯಮ ಸಮನ್ವಯ ಮುಖ್ಯಸ್ಥರಾದ ಸ್ನಿಗ್ಧಾ ರಂಜನ್, ಆರ್‌ಎಸ್‌ಎಸ್ ಕಚೇರಿಯ ಆವರಣದ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ. ವಿಸ್ತೃತ ತನಿಖೆ ಬಳಿಕವೇ ಬಳಸಿದ ವಸ್ತುಗಳ ನಿಖರವಾದ ಸ್ವರೂಪ ದೃಢೀಕರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ➡ಪುಟ ೪

ಜಿ7 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಎಚ್ಚರಿಕೆ

ಪಶ್ಚಿಮ ಏಷ್ಯಾ ಬಿಕ್ಕಟ್ಟು ಬಡ ರಾಷ್ಟ್ರಗಳಿಗೆ ಹೊರೆ

• ಎಎನ್‌ಎಸ್-ಲೀಸ್-ಟೈನ್ಸ್(ಫ್ರಾನ್ಸ್): ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಇಂಧನ, ರಸಗೊಬ್ಬರ ಹಾಗೂ ಆಹಾರ ಪೂರೈಕೆ ಸರಪಳಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಅದರ ದೀರ್ಘಕಾಲೀನ ಪರಿಣಾಮಗಳನ್ನು ಅಭಿವೃದ್ಧಿಶೀಲ ರಾಷ್ಟ್ರಗಳು ಎದುರಿಸಬೇಕಾಗಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದರು. ಜಿ7 ಶೃಂಗಸಭೆಯ ಔಟ್‌ರೀಚ್ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಭೂರಾಜಕೀಯ ಸಂಘರ್ಷಗಳ ಭಾರವನ್ನು ಅತ್ಯಂತ ದುರ್ಬಲ ರಾಷ್ಟ್ರಗಳ ಮೇಲೆ ಹಾಕಬಾರದು ಎಂದರು. ಇಂತಹ ಆಘಾತಗಳಿಂದ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ರಕ್ಷಿಸಲು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ವಿಶೇಷ ಬೆಂಬಲ ವ್ಯವಸ್ಥೆಗಳನ್ನು ರೂಪಿಸಬೇಕು ಎಂದು ಕರೆ ನೀಡಿದರು.

IMPACT ಎಂಬ ಹೊಸ ಜಾಗತಿಕ ಯೋಜನೆ: ಈ ಸಂದರ್ಭದಲ್ಲಿ ಮೋದಿ ಇಂಟರ್‌ನ್ಯಾಷನಲ್ ಮೊಬಿಲೈಸೇಶನ್ ಪಾರ್ಟ್ನರ್‌ಶಿಪ್ ಫಾರ್ ಅಕ್ಸಿಲರೇಟಿಂಗ್ ಕನೆಕ್ಟಿವಿಟಿ ಆ್ಯಂಡ್ ಟ್ರೇಡ್ (IMPACT) ಎಂಬ ಹೊಸ ಜಾಗತಿಕ ಸಹಭಾಗಿತ್ವ ಚೌಕಟ್ಟನ್ನು ಪ್ರಸ್ತಾಪಿಸಿದರು. ಜಿ7 ರಾಷ್ಟ್ರಗಳ ಬಂಡವಾಳ, ಭಾರತದ ಪ್ರತಿಭೆ ಮತ್ತು ಗ್ಲೋಬಲ್ ಸೌತ್ ರಾಷ್ಟ್ರಗಳ ಪಾಲುದಾರಿಕೆಯನ್ನು ಒಟ್ಟುಗೂಡಿಸಿ ವ್ಯಾಪಾರ, ತಂತ್ರಜ್ಞಾನ, ಇಂಧನ ಹಾಗೂ ಅವಕಾಶಗಳನ್ನು ಸಂಪರ್ಕಿಸುವ ಆರ್ಥಿಕ ಕಾರಿಡಾರ್‌ಗಳನ್ನು ನಿರ್ಮಿಸಬಹುದು ಎಂದು ಹೇಳಿದರು.

ಐಎಂಇಸಿ ಮಾದರಿಯಲ್ಲೇ ಹೊಸ ಸಂಪರ್ಕ ಯೋಜನೆ: ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ (IMEC) ಯೋಜನೆಯಿಂದ ಪ್ರೇರಣೆ ಪಡೆದು, ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಪೆಸಿಫಿಕ್ ದ್ವೀಪ ರಾಷ್ಟ್ರಗಳೊಂದಿಗೆ ಹೊಸ ಸಂಪರ್ಕ ಯೋಜನೆಗಳನ್ನು ಕೈಗೊಳ್ಳಬಹುದು ಎಂದು ಮೋದಿ ಅಭಿಪ್ರಾಯಪಟ್ಟರು.

2023ರ ಜಿ20 ಶೃಂಗಸಭೆಯಲ್ಲಿ ಘೋಷಿಸಲಾದ IMEC ಯೋಜನೆಯು ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್ ನಡುವೆ ವ್ಯಾಪಾರ ಹಾಗೂ ಸಂಪರ್ಕವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯ ಉಪಕ್ರಮವಾಗಿದೆ. ಆದರೆ ಮಧ್ಯಪ್ರಾಚ್ಯದ ಬಿಕ್ಕಟ್ಟಿನ ಕಾರಣದಿಂದ ಯೋಜನೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ.

ಅಭಿವೃದ್ಧಿಯ ನಿಜವಾದ ಅರ್ಥವೇನು?: ಇಂದಿನ ಜಗತ್ತಿನಲ್ಲಿ ಅಭಿವೃದ್ಧಿಯನ್ನು ಕೇವಲ ಜಿಡಿಪಿ ಅಥವಾ ವ್ಯಾಪಾರದ ಅಂಕಿ-ಅಂಶಗಳಿಂದ ಅಳೆಯಲಾಗುವುದಿಲ್ಲ ಎಂದು ಹೇಳಿದರು. ಅಭಿವೃದ್ಧಿ ಯಾರಿಗಾಗಿ, ಯಾರೊಂದಿಗೆ ಮತ್ತು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದೇ ಮುಖ್ಯ ಪ್ರಶ್ನೆ ಎಂದು ಅವರು ತಿಳಿಸಿದರು. ಭಾರತದ ಅಭಿವೃದ್ಧಿ ಕಥೆಯು ಸಮಗ್ರತೆ, ಜನಸಂಖ್ಯೆಯ ವ್ಯಾಪ್ತಿ ಮತ್ತು ಪ್ರಜಾಸತ್ತಾತ್ಮಕ ಸಬಲೀಕರಣದ ಕಥೆಯಾಗಿದೆ ಎಂದು ಹೇಳಿದ ಅವರು, ಭಾರತ ಅಭಿವೃದ್ಧಿಯಾದರೆ ಮಾನವಕುಲದ ಆರನೇ ಒಂದು ಭಾಗ ಅಭಿವೃದ್ಧಿಯಾಗುತ್ತದೆ ಎಂದರು.

ಯುವಶಕ್ತಿ ಮತ್ತು ಕೌಶಲಕ್ಕೆ ಜಾಗತಿಕ ವೇದಿಕೆ: ಅನೇಕ ದೇಶಗಳು ವೃದ್ಧಜನಸಂಖ್ಯೆಯ ಸವಾಲು ಎದುರಿಸುತ್ತಿರುವಾಗ ಭಾರತ ಹಾಗೂ ಗ್ಲೋಬಲ್ ಸೌತ್ ರಾಷ್ಟ್ರಗಳಲ್ಲಿ ಅಪಾರ ಯುವ ಪ್ರತಿಭೆ, ಉದ್ಯಮಶೀಲತೆ ಮತ್ತು ಕೌಶಲ ಸಂಪನ್ಮೂಲಗಳಿವೆ ಎಂದು ಮೋದಿ ಹೇಳಿದರು.



ಜಾಗತಿಕ ಸಮೃದ್ಧಿಗೆ ಭಾರತದ ಬದ್ಧತೆ

ಕಳೆದ ಕೆಲವು ವರ್ಷಗಳಲ್ಲಿ ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕ ರಾಷ್ಟ್ರಗಳೊಂದಿಗೆ ಭಾರತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದೆ. ಭಾರತ ವಿಭಜನೆಗಿಂತ ಏಕೀಕರಣ, ಸಂರಕ್ಷಣಾತ್ಮಕ ನೀತಿಗಿಂತ ಸಹಭಾಗಿತ್ವ ಮತ್ತು ಅನಿಶ್ಚಿತತೆಯ ಬದಲು ಹಂಚಿಕೆಯ ಸಮೃದ್ಧಿಯನ್ನು ನಂಬುತ್ತದೆ ಎಂದು ಅವರು ಪ್ರತಿಪಾದಿಸಿದರು. ಮುಂದಿನ ದಿನಗಳಲ್ಲಿ ಜಾಗತಿಕ ಆರ್ಥಿಕ ಸ್ಥಿರತೆ, ವಿಶ್ವಾಸಾರ್ಹ ಪೂರೈಕೆ ಸರಪಳಿ ಮತ್ತು ಸಮೃದ್ಧ ಆರ್ಥಿಕ ವ್ಯವಸ್ಥೆ ನಿರ್ಮಾಣಕ್ಕಾಗಿ ಭಾರತ ಎಲ್ಲ ರಾಷ್ಟ್ರಗಳೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸಲಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಇಯು ಜತೆ ಎಫ್‌ಟಿಎ ಶೀಘ್ರ

• ಎಎನ್‌ಎಸ್-ಲೀಸ್-ಟೈನ್ಸ್: ಭಾರತ ಮತ್ತು ಯುರೋಪಿಯನ್ ಯೂನಿಯನ್(ಇಯು) ಈ ವರ್ಷದ ಅಂತ್ಯದೊಳಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದು ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಬುಧವಾರ ಪ್ರಕಟಿಸಿದ್ದಾರೆ.

ಫ್ರಾನ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಡೆಸಿದ ಮಾತುಕತೆಯ ನಂತರ ಈ ಘೋಷಣೆ ಹೊರಬಿದ್ದಿದೆ. ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಅವರೂ ಈ ಸಭೆಯಲ್ಲಿ ಭಾಗವಹಿಸಿದ್ದು, ಉಭಯ ಬಣಗಳು ಭದ್ರತೆ ಮತ್ತು ರಕ್ಷಣಾ ಸಹಕಾರವನ್ನು ಹೆಚ್ಚಿಸಲು ನಿರ್ಧರಿಸಿವೆ.

ಈ ಒಪ್ಪಂದ, ಇಯುಗೆ ರಫ್ತಾಗುವ ಭಾರತದ ಶೇ.99ರಷ್ಟು ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡುತ್ತದೆ ಮತ್ತು ಭಾರತಕ್ಕೆ ರಫ್ತಾಗುವ ಇಯುನ ಶೇ.97ಕ್ಕೂ ಹೆಚ್ಚು ಸರಕುಗಳ ಮೇಲಿನ ಸುಂಕವನ್ನು ಕಡಿತಗೊಳಿಸಲಿದೆ. ಯುರೋಪಿಯನ್ ರಫ್ತುದಾರರಿಗೆ ವಾರ್ಷಿಕ ಸುಂಕದಲ್ಲಿ ನಾಲ್ಕು ಬಿಲಿಯನ್ ಯುರೋಗಳಷ್ಟು ಉಳಿತಾಯವಾಗಲಿದೆ ಎಂದು ಇಯು ಅಂದಾಜಿಸಿದೆ. 2024-25ರ ಆರ್ಥಿಕ ವರ್ಷದಲ್ಲಿ, ಇಯು ಜತೆಗಿನ ಭಾರತದ ಒಟ್ಟು ಸರಕು ವ್ಯಾಪಾರ ಸುಮಾರು 136 ಬಿಲಿಯನ್ ಡಾಲರ್ ಆಗಿದ್ದು, ರಫ್ತು 76 ಬಿಲಿಯನ್ ಡಾಲರ್ ಮತ್ತು ಆಮದು 60 ಬಿಲಿಯನ್ ಡಾಲರ್‌ಆಗಿತ್ತು.

ಜನವರಿ 2026ರಲ್ಲಿ ಅನುಮೋದಿಸಲಾದ ಜಂಟಿ ಭಾರತ-ಇಯು ಸಮಗ್ರ ಕಾರ್ಯತಂತ್ರದ ಕಾರ್ಯಸೂಚಿಯ ಪ್ರಗತಿಯ ಬಗ್ಗೆ ನಾಯಕರು ಚರ್ಚಿಸಿದ್ದಾರೆ ಎನ್ನಲಾಗಿದ್ದು, ಭಾರತ-ಮಧ್ಯಪ್ರಾಚ್ಯ-ಯುರೋಪ್ ಕಾರಿಡಾರ್ ಯೋಜನೆಯನ್ನು ಮುನ್ನಡೆಸಲು ಒಪ್ಪಿಗೆ ಸೂಚಿಸಿದ್ದಾರೆ.

ಮತಾಂತರ ಕಾಯ್ದೆ ಮತ್ತು ಭಿನ್ನಾಭಿಪ್ರಾಯಗಳು

ಗಮನಾರ್ಹ ಅಂಶಗಳು

- ದೇಶದಲ್ಲಿ ಯಾವುದೇ ಕೇಂದ್ರೀಯ ಫೆಡರಲ್ ಕಾಯ್ದೆ ಇಲ್ಲ
- 12 ರಾಜ್ಯಗಳಲ್ಲಿ ಪ್ರಾದೇಶಿಕ ಕಾನೂನುಗಳು ಜಾರಿಯಲ್ಲಿವೆ
- ಸಾಬೀತುಪಡಿಸುವ ಜವಾಬ್ದಾರಿ ಆರೋಪಿಯ ಮೇಲಿರುತ್ತದೆ
- ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರ ಮತಾಂತರಕ್ಕೆ ಕಠಿಣ ಶಿಕ್ಷೆ
- ಕೇವಲ ಮತಾಂತರಕ್ಕಾಗಿ ನಡೆಯುವ ವಿವಾಹಗಳು ಅಸಿಂಧು

ಕುತೂಹಲ ಮೂಡಿಸಿರುವ ಅರ್ಜಿ ವಿಚಾರಣೆ

ಈ ಕಾನೂನುಗಳ ತೀವ್ರ ಕಠಿಣ ನಿಯಮಗಳು ವ್ಯಕ್ತಿಯ ಮುಕ್ತ ಬದುಕಿನ ಹಕ್ಕನ್ನು ಹರಣ ಮಾಡುತ್ತವೆ ಎಂದು ವಾದಿಸಿ, ಉತ್ತರ ಪ್ರದೇಶ, ಗುಜರಾತ್ ಮತ್ತು ಹಿಮಾಚಲ ಪ್ರದೇಶದ ಕಾಯ್ದೆಗಳ ವಿರುದ್ಧ ಸಲ್ಲಿಕೆಯಾಗಿರುವ ಹಲವು ಪ್ರಮುಖ ಸಾಂವಿಧಾನಿಕ ಸವಾಲುಗಳ ಅರ್ಜಿಗಳು ಪ್ರಸ್ತುತ ಸುಪ್ರೀಂ ಕೋರ್ಟ್‌ನ ಪರಿಶೀಲನೆಯಲ್ಲಿದ್ದು, ತೀವ್ರ ಕುತೂಹಲ ಮೂಡಿಸಿವೆ.

ನಾಗ್ಪುರದಲ್ಲಿ ವಾಯುಪಡೆ ಅಧಿಕಾರಿಯೊಬ್ಬರ ಪತ್ನಿಯ ಮೇಲೆ ನಡೆದ ಬಲವಂತದ ಮತಾಂತರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣ ದೇಶದ ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಮತಾಂತರ ವಿರೋಧಿ ಕಾಯ್ದೆಗಳ ಕಾನೂನು ಸ್ವರೂಪದ ಕುರಿತು ರಾಷ್ಟ್ರಮಟ್ಟದಲ್ಲಿ ತೀವ್ರ ಕಾನೂನು ಚರ್ಚೆಯನ್ನು ಹುಟ್ಟುಹಾಕಿದೆ. ಈ ಗಂಭೀರ ಘಟನೆಯ ಬೆನ್ನಲ್ಲೇ, ಸದ್ಯ ಭಾರತದ ಹನ್ನೆರಡು ರಾಜ್ಯಗಳಲ್ಲಿ ಜಾರಿಯಲ್ಲಿರುವ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಗಳು ಮತ್ತು ಅವು ನಾಗರಿಕರ ಮೂಲಭೂತ ಸಾಂವಿಧಾನಿಕ ಹಕ್ಕುಗಳೊಂದಿಗೆ ಹೊಂದಿರುವ ಸಂಘರ್ಷದ ಕುರಿತು ಕಾನೂನು ತಜ್ಞರು ಹಾಗೂ ನಾಗರಿಕ ಹಕ್ಕುಗಳ ಸಂಸ್ಥೆಗಳ ನಡುವೆ ಗಂಭೀರ ವೈಚಾರಿಕ ಸಂಘರ್ಷ ಆರಂಭವಾಗಿದ್ದು, ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.



ನಾಗ್ಪುರ ಪ್ರಕರಣವೇನು?

ನಾಗ್ಪುರದ ಸೋನೇಗಾಂವ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ಪ್ರಕಾರ, 24 ವರ್ಷದ ಮಹಿಳೆಯನ್ನು ಆಕೆ ವ್ಯವಹಾರದ ನೆಪದಲ್ಲಿ ಹೋಟೆಲ್‌ಗೆ ಕರೆದೊಯ್ದು, ಮಾದಕ ದ್ರವ್ಯ ನೀಡಿ ಪ್ರಜ್ಞೆ ತಪ್ಪಿಸಲಾಗಿತ್ತು. ಮುಖ್ಯ ಆರೋಪಿ ಅಯ್ಯಾಜ್ ಶಾಜ್ ಮದಾರ್ ಎಂಬಾತ ಆಕೆಯ ಅಶ್ಲೀಲ ದೃಶ್ಯಗಳನ್ನು ಚಿತ್ರೀಕರಿಸಿ, ಜಾಲತಾಣಗಳಲ್ಲಿ ಹಂಚಿಕೊಳ್ಳುವುದಾಗಿ ಬೆದರಿಸಿ ನಿರಂತರ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ, ಸುಮಾರು 3 ಲಕ್ಷದಿಂದ 4 ಲಕ್ಷ ರೂ.ವರೆಗೆ ಹಣವನ್ನೂ ಸುಲಿಗೆ ಮಾಡಿದ್ದ. ಬಳಿಕ, ಮೇ 31ರಂದು ಆರೋಪಿಯು ಅಮೀನ್ ಶೇಖ್ ಎಂಬಾತನ ನೆರವಿನಿಂದ ಸಂತ್ರಸ್ತೆಯನ್ನು ಕಲ್ಮೇಶ್ವರದ ನಿರ್ದಿಷ್ಟ ಸ್ಥಳಕ್ಕೆ ಬಲವಂತವಾಗಿ ಕರೆದೊಯ್ದು, ಅಲ್ಲಿ ಮಧ್ಯಪ್ರದೇಶದ ಮೌಲ್ವಿ ಹಜರತ್ ಮೌಲಾನಾ ಎಂಬಾತ ಸಂತ್ರಸ್ತೆಯ ಇಚ್ಛೆಗೆ ವಿರುದ್ಧವಾಗಿ ಧಾರ್ಮಿಕ ವಿಧಿಗಳನ್ನು ನಡೆಸಿ, ಇಸ್ಲಾಮ್‌ಗೆ ಮತಾಂತರಗೊಳಿಸಿರುವುದಾಗಿ ಘೋಷಿಸಿದ್ದ. ಘಟನೆಯ ವೀಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ನಂತರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ತಲೆಮರೆಸಿಕೊಂಡಿರುವ ಮೌಲ್ವಿಯ ಪತ್ತೆಗಾಗಿ ವಿಶೇಷ ತಂಡವನ್ನು ರಚಿಸಿದ್ದಾರೆ.



ಕಠಿಣ ನಿಯಮಗಳು ಮತ್ತು ಕಾರ್ಯವಿಧಾನ

ಭಾರತದಲ್ಲಿ ಮತಾಂತರವನ್ನು ನಿಯಂತ್ರಿಸಲು ಯಾವುದೇ ಕೇಂದ್ರ ಕಾನೂನು ಇಲ್ಲದ ಕಾರಣ, ವಿವಿಧ ರಾಜ್ಯಗಳು ತಮ್ಮದೇ ಆದ ಸ್ವಂತ ಕಾಯ್ದೆಗಳನ್ನು ಜಾರಿಗೆ ತಂದಿವೆ. ಇತ್ತೀಚೆಗೆ ಮಾರ್ಚ್ ತಿಂಗಳಲ್ಲಿ ಮಹಾರಾಷ್ಟ್ರ ಈ ಕಾನೂನನ್ನು ಅಂಗೀಕರಿಸಿದ್ದು, ಒಟ್ಟು 12 ರಾಜ್ಯಗಳು ಪ್ರಸ್ತುತ ಇಂತಹ ನಿಯಮಗಳನ್ನು ಹೊಂದಿವೆ. ಈ ಆಧುನಿಕ ಕಾಯ್ದೆಗಳು ಸಾಂಪ್ರದಾಯಿಕ ಕ್ರಿಮಿನಲ್ ಕಾನೂನಿನ ಸ್ವರೂಪವನ್ನೇ ಸಂಪೂರ್ಣವಾಗಿ ಬದಲಾಯಿಸಿವೆ. ಸಾಮಾನ್ಯವಾಗಿ ಯಾವುದೇ ಅಪರಾಧದ ಸಂದರ್ಭದಲ್ಲಿ ಆರೋಪ ಹೊರಿಸಿದ ಪ್ರಾಸಿಕ್ಯೂಷನ್ ವಿಭಾಗವೇ ಆರೋಪವನ್ನು ಸಾಬೀತುಪಡಿಸಬೇಕು. ಆದರೆ ಮತಾಂತರ ವಿರೋಧಿ ಕಾಯ್ದೆಗಳಲ್ಲಿ ಸಾಬೀತುಪಡಿಸುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ಆರೋಪಿಯ ಮೇಲೆಯೇ ಹೊರಿಸಲಾಗಿದೆ. ತಾನು ಯಾವುದೇ ಆಮಿಷ, ವಂಚನೆ ಅಥವಾ ಬಲವಂತದ ಮೂಲಕ ಮತಾಂತರ ಮಾಡಿಲ್ಲ ಎಂದು ಆರೋಪಿಯೇ ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕಾಗುತ್ತದೆ. ಜತೆಗೆ, ಧರ್ಮ ಬದಲಾಯಿಸಲು ಇಚ್ಛಿಸುವ ವ್ಯಕ್ತಿ ಮತ್ತು ಧಾರ್ಮಿಕ ವಿಧಿ ನಡೆಸುವ ಧರ್ಮಗುರುಗಳು ಕನಿಷ್ಠ 30ರಿಂದ 60 ದಿನಗಳ ಮುಂಚಿತವಾಗಿ ಜಿಲ್ಲಾಧಿಕಾರಿಗೆ ಮುನ್ಸೂಚನೆ ನೀಡುವುದು ಕಡ್ಡಾಯ.

ಗುಂಪುಗಳ ತಕರಾರು

ಈ ಕಾಯ್ದೆಗಳ ಸಿಂಧುತ್ವ, ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ತೀವ್ರ ಭಿನ್ನಾಭಿಪ್ರಾಯಕ್ಕೆ ದಾರಿ ಮಾಡಿಕೊಟ್ಟಿದೆ. 197 ರ ಐತಿಹಾಸಿಕ ರೆವರೆಂಡ್ ಸ್ಟೇನಿಸ್ಲಾಸ್ ಮತ್ತು ಮಧ್ಯಪ್ರದೇಶ ಸರ್ಕಾರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಸಂವಿಧಾನದ 25ನೇ ವಿಧಿಯಲ್ಲಿರುವ ಧರ್ಮ ಪ್ರಚಾರದ ಹಕ್ಕು ಮತ್ತೊಬ್ಬರನ್ನು ಮತಾಂತರಿಸುವ ಮೂಲಭೂತ ಹಕ್ಕನ್ನು ಒಳಗೊಂಡಿರುವುದಿಲ್ಲ.



ಸಾರ್ವಜನಿಕ ಸುವ್ಯವಸ್ಥೆ ಕಾಪಾಡಲು ರಾಜ್ಯಗಳು ಇಂತಹ ನಿಯಂತ್ರಣ ಹೇರಬಹುದು ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ಆದರೆ, ಇತ್ತೀಚಿನ ಕಠಿಣ ತಿದ್ದುಪಡಿಗಳು ಸಂವಿಧಾನದ 21ನೇ ವಿಧಿಯಲ್ಲಿ ಲಭ್ಯವಿರುವ ವ್ಯಕ್ತಿಯ ಗೌಪ್ಯತೆಯ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ನೇರವಾಗಿ ಇಕ್ಕಟ್ಟಿಗೆ ಸಿಲುಕಿಸುತ್ತವೆ ಎಂದು ನಾಗರಿಕ ಹಕ್ಕುಗಳ ಸಂಘಟನೆಗಳು ಮತ್ತು ಅಲ್ಪಸಂಖ್ಯಾತ ಸಂಸ್ಥೆಗಳು ವಾದಿಸುತ್ತಿವೆ. ವಯಸ್ಕರು ತಮ್ಮ ಜೀವನ ಸಂಗಾತಿಯನ್ನು ಅಥವಾ ತಮ್ಮ ಇಷ್ಟದ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾಯತ್ತತೆಗೆ ಈ ಕಾಯ್ದೆಗಳು ಕಂಟಕವಾಗಿವೆ ಎಂಬುದು ಈ ಗುಂಪುಗಳ ವಾದ.

ರದ್ದುಗೊಳಿಸುವ ಅಧಿಕಾರ

ಕಾನೂನು ತಜ್ಞರ ಪ್ರಕಾರ, ಈ ಕಾಯ್ದೆಗಳ ಇತ್ತೀಚಿನ ಸ್ವರೂಪಗಳು ಸಮಾಜದಲ್ಲಿ ಹೊಸ ಕಾನೂನು ಸಂಕಷ್ಟಗಳನ್ನು ಸೃಷ್ಟಿಸುತ್ತಿವೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದಂತಹ ರಾಜ್ಯಗಳಲ್ಲಿ ಕೇವಲ ಮತಾಂತರದ ಉದ್ದೇಶಕ್ಕಾಗಿ ನಡೆದ ವಿವಾಹಗಳನ್ನು ಕಾನೂನುಬದ್ಧವಾಗಿ ರದ್ದುಗೊಳಿಸುವ ಅಧಿಕಾರ ನೀಡಲಾಗಿದೆ.

ಕಿರುಸುದ್ದಿ

ಟೆಲಿಗ್ರಾಂ ನಿರ್ಬಂಧ ತಡೆಗೆ ಹೈಕೋರ್ಟ್ ನಕಾರ

• ಹೊಸದಿಲ್ಲಿ: ನೀಟ್ ಯುಜಿ 2026ರ ಮರುಪರೀಕ್ಷೆಗೆ ಮುಂಚಿತವಾಗಿ ಕೇಂದ್ರ ಹೇರಿದ್ದ ತಾತ್ಕಾಲಿಕ ನಿರ್ಬಂಧಕ್ಕೆ ತಡೆ ನೀಡಲು ದಿಲ್ಲಿ ಹೈಕೋರ್ಟ್ ಬುಧವಾರ ನಿರಾಕರಿಸಿದೆ. ಕೇಂದ್ರ ಸರ್ಕಾರದ ಈ ನಿರ್ಧಾರದ ವಿರುದ್ಧ ಟೆಲಿಗ್ರಾಂ ಸಂಸ್ಥೆ ಮತ್ತು ಅದರ ಸಿಇಒ ಪಾವೆಲ್ ಡುರೊವ್ ತೀವ್ರ ಆಕ್ರೋಶ ಹೊರಹಾಕಿದ್ದು, ಸರ್ಕಾರದ ಆದೇಶವನ್ನು ಪ್ರಶ್ನಿಸಿ ಬುಧವಾರ ದಿಲ್ಲಿ ಹೈಕೋರ್ಟ್‌ಗೆ ತುರ್ತು ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರ ರಜಾಕಾಲದ ಪೀಠದ ಮುಂದೆ ಪ್ರಸ್ತಾಪಿಸಲಾಯಿತು. ಪೀಠವು ಈ ಪ್ರಕರಣವನ್ನು ತುರ್ತು ಆಧಾರದ ಮೇಲೆ ಆಲಿಸಲು ಒಪ್ಪಿಕೊಂಡು ವಿಚಾರಣೆ ನಡೆಸಿದೆ. ಕೇಂದ್ರವು ತನ್ನ ಉತ್ತರವನ್ನು ಸಲ್ಲಿಸಲು ಸಮಯ ಕೋರಿದೆ. ಆದ್ದರಿಂದ ವಿಚಾರಣೆಯನ್ನು ಗುರುವಾರ ಮಧ್ಯಾಹ್ನಕ್ಕೆ ಮುಂದೂಡಿದೆ.

ಆರ್‌ಜಿ ಕರ್ ಅತ್ಯಾಚಾರ: ಸ್ಮಶಾನದಲ್ಲಿ ಸಿಬಿಐ ತನಿಖೆ

• ಕೋಲ್ಕತಾ: ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಸ್ಮಶಾನಕ್ಕೆ ಸಿಬಿಐ ತಂಡ ಭೇಟಿ ನೀಡಿ ಅತ್ಯಾಚಾರ ಸಂತ್ರಸ್ತೆ ಮಹಿಳಾ ವೈದ್ಯೆಯ ಅಂತ್ಯಕ್ರಿಯೆ ನಡೆಸಿದ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದಾರೆ. ಎರಡು ವರ್ಷಗಳ ಹಿಂದೆ ಆರ್.ಜಿ. ಕರ್ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ವೈದ್ಯೆ ಮೇಲೆ ನಡೆದ ಅತ್ಯಾಚಾರ-ಕೊಲೆ ತನಿಖೆಯನ್ನು ಸಿಬಿಐ ನಡೆಸುತ್ತಿದೆ. ಸಿಬಿಐ ಅಧಿಕಾರಿಗಳು ಘಾಟ್‌ನ ಸುತ್ತಲೂ ಪರಿಶೀಲನೆ ನಡೆಸಿ, ಮೃತ ವೈದ್ಯೆ ಅಂತ್ಯಕ್ರಿಯೆ ನಡೆದ ರಾತ್ರಿ ಮಾಡಿದ ನಮೂದುಗಳ ಬಗ್ಗೆ ರಿಜಿಸ್ಟರ್ ಪುಸ್ತಕದಿಂದ ವಿವರಗಳನ್ನು ಪಡೆದಿದ್ದಾರೆ.

ಇಡಿಯಿಂದ ಪಿಣರಾಯಿ ಪುತ್ರಿ ವೀಣಾ ವಿಚಾರಣೆ

• ತಿರುವನಂತಪುರಂ: ವಿವಾದಿತ ಗಣಿಗಾರಿಕೆ ಸಂಸ್ಥೆಯ ಹಗರಣದ ತನಿಖೆಯ ಭಾಗವಾಗಿ ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ.ಟಿ ಅವರನ್ನು ಬುಧವಾರ ಕೊಚ್ಚಿಯಲ್ಲಿ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಹಲವು ಗಂಟೆಗಳ ಕಾಲ ಪ್ರಶ್ನಿಸಿದ್ದಾರೆ. ವೀಣಾ ಅವರು ಬೆಳಗ್ಗೆ 10.30ರ ಸುಮಾರಿಗೆ ಇಡಿ ಕಚೇರಿಗೆ ಆಗಮಿಸಿದ್ದು, ತಡರಾತ್ರಿಯವರೆಗೂ ವಿಚಾರಣೆ ನಡೆದಿದೆ. ಇಡಿ ಕಳೆದ ತಿಂಗಳು ತಿರುವನಂತಪುರಂ ಮತ್ತು ಕಣ್ಣೂರಿನಲ್ಲಿರುವ ವಿಜಯನ್ ಅವರ ಮನೆಗಳ ಮೇಲೆ ದಾಳಿ ನಡೆಸಿತ್ತು. ನಂತರ ತಿರುವನಂತಪುರಂನಲ್ಲಿ ಸಿಪಿಎಂ ಕಾರ್ಯಕರ್ತರು ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು. ಬುಧವಾರ ಇಡಿ ಕಚೇರಿಯಲ್ಲಿ ಭಾರೀ ಪೊಲೀಸ್ ನಿಯೋಜನೆ ಮಾಡಲಾಗಿತ್ತು.

ರಕ್ಷಣಾ ಉತ್ಪಾದನೆ 1.78 ಲಕ್ಷ ಕೋಟಿ ರೂ.ಗೆ ಏರಿಕೆ

• ಹೊಸದಿಲ್ಲಿ: ಭಾರತದ ವಾರ್ಷಿಕ ರಕ್ಷಣಾ ಉತ್ಪಾದನೆ 2025-26ರ ಆರ್ಥಿಕ ವರ್ಷದಲ್ಲಿ 1.78 ಲಕ್ಷ ಕೋಟಿ ರೂ.ಗಳ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ ಎಂದು ರಕ್ಷಣಾ ಸಚಿವಾಲಯ ಬುಧವಾರ ಪ್ರಕಟಿಸಿದೆ. ಈ ಮೂಲಕ, ಹಿಂದಿನ ಆರ್ಥಿಕ ವರ್ಷದ 1.54 ಲಕ್ಷ ಕೋಟಿ ರೂ.ಗಳ ಉತ್ಪಾದನೆಗೆ ಹೋಲಿಸಿದರೆ ಶೇ.15.6ರಷ್ಟು ಪ್ರಗತಿ ಸಾಧಿಸಿ ಹೊಸ ಮೈಲಿಗಲ್ಲು ನೆಟ್ಟಂತಾಗಿದೆ. ಈ ಅಂಕಿ-ಅಂಶ, 2020-21ರಿಂದ ಶೇ.110ರಷ್ಟು ಹೆಚ್ಚಳವಾಗಿರುವುದನ್ನು ತೋರಿಸುತ್ತದೆ. 2013-14 ರಲ್ಲಿದ್ದ 43,746 ಕೋಟಿ ರೂ.ಗಳಿಂದ ಸುಮಾರು ನಾಲ್ಕು ಪಟ್ಟು ಹೆಚ್ಚಾಗಿದೆ.



ವಲಯವಾರು ಕೊಡುಗೆಗಳು: ಒಟ್ಟು ಉತ್ಪಾದನೆಯಲ್ಲಿ ರಕ್ಷಣಾ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಪಿಎಸ್‌ಯುಗಳು ಸರಿಸುಮಾರು ಶೇ.76ರಷ್ಟು ಪಾಲನ್ನು ಹೊಂದಿವೆ. ಖಾಸಗಿ ವಲಯ, ಶೇ.24ರಷ್ಟು ಕೊಡುಗೆ ನೀಡಿದ್ದು, ಇದು 2024-25ರಲ್ಲಿದ್ದ ಶೇ.22ಕ್ಕೆ ಹೋಲಿಸಿದರೆ ಹೆಚ್ಚಳವಾಗಿದೆ. ಇದರೊಂದಿಗೆ ಖಾಸಗಿ ವಲಯ, 2025-26ರಲ್ಲಿ ಸುಮಾರು 42,000 ಕೋಟಿ ರೂ.ಗಳ ಸಾರ್ವಕಾಲಿಕ ಗರಿಷ್ಠ ಪಾಲನ್ನು ತಲುಪಿದೆ.

ದಾಖಲೆಯ ರಫ್ತು ಪ್ರಗತಿ: ಉತ್ಪಾದನೆಯ ಬೆಳವಣಿಗೆ, 2025-26ರಲ್ಲಿ 38,424 ಕೋಟಿ ರೂ.ಗಳ ದಾಖಲೆಯ ರಕ್ಷಣಾ ರಫ್ತು ಸಾಧಿಸಲು ಕಾರಣವಾಗಿದೆ. ಈ ಸಾಧನೆ, ಆತ್ಮನಿರ್ಭರ ಭಾರತ ಯೋಜನೆಯಲ್ಲಿ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಸರ್ಕಾರ ನೀಡುತ್ತಿರುವ ಉತ್ತೇಜನದಿಂದ ಸಾಧ್ಯವಾಗಿದೆ, ಎಂದು ಸಚಿವಾಲಯ ತಿಳಿಸಿದೆ.

ಖರ್ಗೆ ವಿರುದ್ಧ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ ಬಿಜೆಪಿ

• ಹೊಸದಿಲ್ಲಿ: ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆರು ರಾಜ್ಯಸಭಾ ಸದಸ್ಯರು ಜಂಟಿಯಾಗಿ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ್ದಾರೆ. ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಅವಹೇಳನಕಾರಿ, ಅವಮಾನಕರ ಮತ್ತು ಅಗೌರವ ಹೇಳಿಕೆಗಳನ್ನು ನೀಡಿದ್ದಾರೆ ಮತ್ತು ಸಂಸತ್ತು ಮತ್ತು ಅದರ ಸದಸ್ಯರ ಘನತೆಯನ್ನು ಕುಗ್ಗಿಸಿದ್ದಾರೆ ಎಂದು ಸಂಸದರು ಆರೋಪಿಸಿದ್ದಾರೆ. ವಿರೋಧ ಪಕ್ಷದ ನಾಯಕ ಖರ್ಗೆ ವಿರುದ್ಧ ಬಿಜೆಪಿ ಸಂಸದರಾದ ಬ್ರಿಜ್ ಲಾಲ್, ಮಿಥಲೇಶ್ ಕುಮಾರ್, ಸುಮಿತ್ರ ಬಾಲ್ಮಿಕ್, ಶಿವೇಶ್ ಕುಮಾರ್, ಸಿಕಂದರ್ ಕುಮಾರ್ ಮತ್ತು ನಾಗೇಂದ್ರ ರೇ ಅವರು ಜಂಟಿಯಾಗಿ ನೋಟಿಸ್ ಸಲ್ಲಿಸಿದ್ದಾರೆ ರಾಜ್ಯಸಭೆಯ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ಈ ನೋಟಿಸ್ ಅನ್ನು ಪರಿಶೀಲನೆ, ತನಿಖೆ ಮತ್ತು ವರದಿಗಾಗಿ ವಿಶೇಷ ಹಕ್ಕುಗಳ ಸಮಿತಿಗೆ ಕಳುಹಿಸಿದ್ದಾರೆ. ಸಮಿತಿಯು ಈಗ ಈ ವಿಷಯವನ್ನು ತನಿಖೆ ಮಾಡಿ ತನ್ನ ವರದಿಯನ್ನು ಸಿದ್ಧಪಡಿಸುತ್ತದೆ. ವರದಿಯ ಆಧಾರದ ಮೇಲೆ ಮುಂದಿನ ಕ್ರಮವನ್ನು ನಿರ್ಧರಿಸಲಾಗುತ್ತದೆ. ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿ(ರಾಜ್ಯಸಭೆ) ಕಾರ್ಯವಿಧಾನ ಮತ್ತು ವ್ಯವಹಾರದ ನಡವಳಿಕೆಯ ನಿಯಮಗಳ ನಿಯಮ 188ರ ಅನ್ವಯದಲ್ಲಿ ಈ ನೋಟಿಸ್ ನೀಡಲಾಗಿದೆ. ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪದೇ ಪದೇ ಮತ್ತು ಉದ್ದೇಶಪೂರ್ವಕವಾಗಿ ಅತ್ಯಂತ ಅವಹೇಳನಕಾರಿ ಮತ್ತು ಅಗೌರವದ ಹೇಳಿಕೆಗಳನ್ನು ನೀಡಿದ್ದಾರೆ. ಇದರಿಂದಾಗಿ ಸಂಸತ್ತು ಮತ್ತು ಅದರ ಸದಸ್ಯರ ಘನತೆಗೆ ಧಕ್ಕೆ ಉಂಟಾಗಿದೆ ಎಂದು ನೋಟಿಸ್‌ನಲ್ಲಿ ಆರೋಪಿಸಲಾಗಿದೆ.

ಒಪ್ಪಂದಕ್ಕೆ ಸಹಿಯಾದ ಬಳಿಕ ಹಾರ್ಮುಜ್ ಪುನರಾರಂಭ

• ದುಬೈ: ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ಅಂತ್ಯಗೊಳಿಸಲು ರೂಪುಗೊಂಡಿರುವ ಮಧ್ಯಂತರ ಶಾಂತಿ ಒಪ್ಪಂದಕ್ಕೆ ಸಹಿ ಆದ ತಕ್ಷಣ ಇರಾನ್, ಹೋರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲಿದ್ದು, ತನ್ನ ತೈಲವನ್ನು ಯಾವುದೇ ನಿರ್ಬಂಧವಿಲ್ಲದೆ ಮಾರಾಟ ಮಾಡಲು ಅವಕಾಶ ಪಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಶುಕ್ರವಾರ ಸಹಿ ಆಗುವ ನಿರೀಕ್ಷೆಯಿರುವ ಈ ಒಪ್ಪಂದದ ಪ್ರಕಾರ, ಯುದ್ಧದಿಂದ ಹಾನಿಗೊಳಗಾದ ಇರಾನ್ ಪುನರ್‌ನಿರ್ಮಾಣಕ್ಕಾಗಿ ಕನಿಷ್ಠ 300 ಬಿಲಿಯನ್ ಡಾಲರ್ ನೆರವು ಪಡೆಯಬಹುದು. ಜತೆಗೆ, ಇರಾನ್‌ನ ಅಣು ಕಾರ್ಯಕ್ರಮ ಕುರಿತು ಅಂತಿಮ ಒಪ್ಪಂದವಾದರೆ ಅಮೆರಿಕ ಮತ್ತು ವಿಶ್ವಸಂಸ್ಥೆಯ ನಿರ್ಬಂಧಗಳನ್ನು ಹಂತ ಹಂತವಾಗಿ ತೆಗೆದುಹಾಕುವ ಭರವಸೆಯೂ ಇದೆ. ಆದರೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಒಪ್ಪಂದಕ್ಕೆ ನಿಗದಿತ ವೇಳಾಪಟ್ಟಿಯಂತೆ ಸಹಿ ಆಗುವುದೇ ಎಂಬ ಬಗ್ಗೆ ಅನಿಶ್ಚಿತತೆ ವ್ಯಕ್ತಪಡಿಸಿದ್ದಾರೆ. ಈ ಒಪ್ಪಂದವು ಯುದ್ಧವನ್ನು ತಕ್ಷಣ ನಿಲ್ಲಿಸಿ, ಮುಂದಿನ 60 ದಿನಗಳ ಅಣು ಮಾತುಕತೆಗಳಿಗೆ ದಾರಿ ಮಾಡಿಕೊಡಲಿದೆ. ಜಾಗತಿಕ ತೈಲ ಮತ್ತು ಅನಿಲ ಸಾಗಣೆಗೆ ಅತ್ಯಂತ ಪ್ರಮುಖವಾದ ಹಾರ್ಮುಜ್ ಜಲಸಂಧಿ ಪುನರಾರಂಭವಾದರೆ ವಿಶ್ವ ಆರ್ಥಿಕತೆಗೆ ದೊಡ್ಡ ಪರಿಹಾರ ಸಿಗಲಿದೆ. ಇಂಧನ ದರಗಳ ಏರಿಕೆ ಮತ್ತು ಸರಬರಾಜು ವ್ಯತ್ಯಯಗಳ ಮೇಲೂ ಇದರಿಂದ ನಿಯಂತ್ರಣ ಸಾಧ್ಯವಾಗಲಿದೆ. ಆದಾಗ್ಯೂ, ಇರಾನ್‌ನ ಅಣು ಚಟುವಟಿಕೆಗಳು, ನಿರ್ಬಂಧಗಳ ಸಂಪೂರ್ಣ ತೆರವು ಹಾಗೂ ಪ್ರಾದೇಶಿಕ ಭದ್ರತೆ ಸೇರಿದಂತೆ ಹಲವು ಪ್ರಮುಖ ವಿಷಯಗಳು ಮುಂದಿನ ಮಾತುಕತೆಗಳಲ್ಲಿ ನಿರ್ಧಾರವಾಗಬೇಕಿದೆ.

ಮತಾಂತರ: 8 ಜನರ ಬಂಧನ

• ಲಡಾಖ್: ಸಂಘಟಿತ ಮತಾಂತರ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಶಂಕೆ ಮೇಲೆ ಎಂಟು ಮಂದಿಯನ್ನು ಬುಧವಾರ ಬಂಧಿಸಲಾಗಿದೆ. ಲಡಾಖ್‌ನ ವಿವಿಧ ಭಾಗಗಳಲ್ಲಿ ಮತಾಂತರದ ಚಟುವಟಿಕೆಗಳ ಬಗ್ಗೆ ಖಚಿತ ಮಾಹಿತಿ ಆಧಾರದ ಮೇಲೆ, ಲೇಹ್ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸಂಬಂಧಿತ ನಿಬಂಧನೆಗಳ ಅನ್ವಯದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರೋಪಿಗಳು ಜನ್ಸ್ಕಾರ್, ಚಾಂಗ್ಥಾಂಗ್ ಮತ್ತು ಆರ್ಯನ್ ಕಣಿವೆಯ ಪ್ರದೇಶಗಳಲ್ಲಿ ಮತಾಂತರ ಸಂಬಂಧಿತ ಚಟುವಟಿಕೆಗಳಿಗಾಗಿ ಸ್ಥಳೀಯ ಯುವಕರನ್ನು ನೇಮಿಸಿಕೊಳ್ಳುವಲ್ಲಿ ತೊಡಗಿದ್ದಾರೆ ಎಂದು ಆರೋಪಿಸಲಾಗಿದೆ. ಈ ಗುಂಪು ಲೇಹ್‌ನ ಸ್ಕಾಂಪರಿಯಲ್ಲಿ ವಸತಿ ಆವರಣವನ್ನು ಬಾಡಿಗೆಗೆ ಪಡೆದಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಈ ಬಾಡಿಗೆ ನಿವಾಸದಲ್ಲಿ ಧಾರ್ಮಿಕ ವಸ್ತುಗಳ ಅನುವಾದ ಮತ್ತು ಪ್ರಸಾರಕ್ಕಾಗಿ ಕಚೇರಿಗಳನ್ನು ಸ್ಥಾಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಆವರಣವನ್ನು ಮತಾಂತರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೂ ಬಳಸಲಾಗಿದೆ ಎಂದು ಶಂಕಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ವಿಕಸಿತ ಭಾರತ ರೋಜಗಾರ್ ಯೋಜನೆ ಅನುದಾನ ನಾಳೆ ಬಿಡುಗಡೆ

ಉದ್ಯೋಗ ಸೃಷ್ಟಿಗೆ ₹2,400 ಕೋಟಿ ಪ್ರೋತ್ಸಾಹಧನ


• ಹೊಸದಿಲ್ಲಿ: ಉದ್ಯೋಗ ಸೃಷ್ಟಿ, ಔಪಚಾರಿಕ ಉದ್ಯೋಗ ವೃದ್ಧಿ ಹಾಗೂ ಸಾಮಾಜಿಕ ಭದ್ರತಾ ವ್ಯಾಪ್ತಿ ವಿಸ್ತರಣೆಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯಲ್ಲಿ ಸುಮಾರು 2,400 ಕೋಟಿ ರೂ. ಪ್ರೋತ್ಸಾಹಧನವನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಬಿಡುಗಡೆ ಮಾಡಲಿದ್ದಾರೆ.

ದಿಲ್ಲಿಯಲ್ಲಿ ನಡೆಯಲಿರುವ ವಿಶೇಷ ಕಾರ್ಯಕ್ರಮದಲ್ಲಿ ಈ ಮೊತ್ತವನ್ನು ವಿತರಿಸಲಾಗುವುದು. ಉದ್ಯೋಗಾಧಾರಿತ ಪ್ರೋತ್ಸಾಹ ಯೋಜನೆಯ ಅನುಷ್ಠಾನದಲ್ಲಿ ಇದು ಮಹತ್ವದ ಮೈಲುಗಲ್ಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಯೋಜನೆಯಲ್ಲಿ ಈಗಾಗಲೇ ದೇಶಾದ್ಯಂತ 15 ಲಕ್ಷ ಉದ್ಯೋಗಾವಕಾಶಗಳ ಸೃಷ್ಟಿಗೆ ನೆರವು ದೊರೆತಿದೆ. ಹೊಸದಾಗಿ ಉದ್ಯೋಗಕ್ಕೆ ಸೇರುವ ಯುವಜನರನ್ನು ಔಪಚಾರಿಕ ಉದ್ಯೋಗ ವ್ಯವಸ್ಥೆಗೆ ಕರೆತರುವುದು ಮತ್ತು ಹೆಚ್ಚುವರಿ ಉದ್ಯೋಗ ಸೃಷ್ಟಿಸುವ ಉದ್ಯೋಗದಾತರನ್ನು ಪ್ರೋತ್ಸಾಹಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

15 ಸಾವಿರ ರೂ.ವರೆಗೆ ನೆರವು: ಯೋಜನೆಯಲ್ಲಿ ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವ ನೌಕರರಿಗೆ 15 ಸಾವಿರ ರೂ. ವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಿಂದ ಉದ್ಯೋಗ ಜೀವನ ಆರಂಭಿಸುವ ಯುವಜನರಿಗೆ ಆರ್ಥಿಕ ಬೆಂಬಲ ಸಿಗಲಿದೆ. ಇದೇ ವೇಳೆ ಹೆಚ್ಚುವರಿ ಉದ್ಯೋಗ ಸೃಷ್ಟಿಸುವ ಉದ್ಯೋಗದಾತರಿಗೆ ಪ್ರತಿ ಹೆಚ್ಚುವರಿ ನೌಕರನಿಗೆ ತಿಂಗಳಿಗೆ 3 ಸಾವಿರ ರೂ.ವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಿಂದ ನಿರಂತರ ಉದ್ಯೋಗ ಸೃಷ್ಟಿಗೆ ಉತ್ತೇಜನ ದೊರೆಯಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಉತ್ಪಾದನಾ ವಲಯಕ್ಕೆ 4 ವರ್ಷ ಪ್ರೋತ್ಸಾಹ: ಆರ್ಥಿಕ ಬೆಳವಣಿಗೆಯಲ್ಲಿ ಉತ್ಪಾದನಾ ವಲಯದ ಮಹತ್ವವನ್ನು ಗಮನದಲ್ಲಿಟ್ಟುಕೊಂಡು, ಈ ವಲಯದ ಉದ್ಯೋಗದಾತರಿಗೆ ನಾಲ್ಕು ವರ್ಷಗಳವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇತರ ವಲಯಗಳ ಉದ್ಯೋಗದಾತರು ಎರಡು ವರ್ಷಗಳವರೆಗೆ ಈ ಸೌಲಭ್ಯ ಪಡೆಯಬಹುದಾಗಿದೆ.

ಯೋಜನೆಯ ಮುಖ್ಯಾಂಶಗಳು



- ಒಟ್ಟು ಅನುದಾನ: 99,446 ಕೋಟಿ ರೂ.
- ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿ
- ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರು ಸುಮಾರು 1.92 ಕೋಟಿ
- 15 ಸಾವಿರ ರೂ.ವರೆಗೆ ಉದ್ಯೋಗಿಗಳಿಗೆ ನೆರವು
- ಉದ್ಯೋಗದಾತರಿಗೆ ಪ್ರೋತ್ಸಾಹ
- ಯೋಜನೆ ಜಾರಿಗೆ ಬಂದ ದಿನ: 2025ರ ಆಗಸ್ಟ್ 1

ನೌಕಾಪಡೆಗೆ ವಾರಾಂತ್ಯದಲ್ಲಿ ಮೂರು ಹಡಗು ಸೇರ್ಪಡೆ

• ಹೊಸದಿಲ್ಲಿ: ಭಾರತೀಯ ನೌಕಾಪಡೆಯು ಈ ವಾರದ ಕೊನೆಯಲ್ಲಿ ಐಎನ್‌ಎಸ್ ದುನಾಗಿರಿ, ಐಎನ್‌ಎಸ್ ಅಗ್ರ ಮತ್ತು ಐಎನ್‌ಎಸ್ ಸಂಶೋಧಕ್ ಎಂಬ ಮೂರು ಮುಂಚೂಣಿ ಹಡಗುಗಳು ಕೋಲ್ಕತ್ತಾದಲ್ಲಿ ಒಟ್ಟಿಗೆ ಕಾರ್ಯಾರಂಭಕ್ಕೆ ಚಾಲನೆ ನೀಡಲಿದೆ. ಪ್ರಧಾನಿ ಕೋಲ್ಕತ್ತಾ ಭೇಟಿ ವೇಳೆಯಲ್ಲೇ ಈ ಸಮಾರಂಭ ನಡೆಯುವ ಸಾಧ್ಯತೆಯಿದೆ.

ಐಎನ್‌ಎಸ್ ದುನಾಗಿರಿ : ಬ್ರಹ್ಮೋಸ್ ಸೂಪರ್‌ಸೋನಿಕ್ ಕ್ರೂಸ್ ಕ್ಷಿಪಣಿಗಳು,ಆಧುನಿಕ ವಾಯು-ರಕ್ಷಣಾ ವ್ಯವಸ್ಥೆಗಳು ಮತ್ತು ಜಲಾಂತರ್ಗಾಮಿ ವಿರೋಧಿ ಶಸ್ತ್ರಾಸ್ತ್ರಗಳನ್ನು ಹೊಂದಿದ ಈ ಯುದ್ಧನೌಕೆಯನ್ನು ಸಮುದ್ರದಲ್ಲಿ ವ್ಯಾಪಕ ಶ್ರೇಣಿಯ ಯುದ್ಧ ಕಾರ್ಯಾಚರಣೆಗಳನ್ನು ಕೈಗೊಳ್ಳಲು ವಿನ್ಯಾಸಗೊಳಿಸಲಾಗಿದೆ.

ಐಎನ್‌ಎಸ್ ಅಗ್ರ: ಐಎನ್‌ಎಸ್ ಅಗ್ರಯು ಜಲಾಂತರ್ಗಾಮಿ ವಿರೋಧಿ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಕಡಲತೀರದ ನೀರಿನಲ್ಲಿ ಕಾರ್ಯಾಚರಣೆಗಾಗಿ ವಿನ್ಯಾಸಗೊಳಿಸಲಾದ ಈ ಹಡಗು ಹಗುರವಾದ ಟಾರ್ಪಿಡೋಗಳು, ಸ್ಥಳೀಯ ಜಲಾಂತರ್ಗಾಮಿ ವಿರೋಧಿ ರಾಕೆಟ್ ಲಾಂಚರ್‌ಗಳು ಮತ್ತು ಸುಧಾರಿತ ಸೋನಾರ್ ವ್ಯವಸ್ಥೆಗಳನ್ನು ಹೊಂದಿದೆ.

ಐಎನ್‌ಎಸ್ ಸಂಶೋಧಕ್: ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳ್ಳಲಿರುವ ಮೂರು ಹಡಗುಗಳನ್ನು ಪೂರ್ಣಗೊಳಿಸುವುದು ಐಎನ್‌ಎಸ್ ಸಂಶೋಧಕ್, ಇದು ಸಮೀಕ್ಷೆ ಹಡಗು (ದೊಡ್ಡ) ಕಾರ್ಯಕ್ರಮದ ಅಂತಿಮ ಹಡಗು. ಈ ವೇದಿಕೆಯು ಸುಧಾರಿತ ಹೈಡ್ರೋಗ್ರಾಫಿಕ್ ಸಮೀಕ್ಷೆ ಉಪಕರಣಗಳು, ಸ್ವಾಯತ್ತ ನೀರೊಳಗಿನ ವಾಹನಗಳು ಮತ್ತು ಸಮುದ್ರಾಳದ ಮ್ಯಾಪಿಂಗ್, ನ್ಯಾವಿಗೇಷನಲ್ ಚಾರ್ಟಿಂಗ್ ಮತ್ತು ಸಮುದ್ರಶಾಸ್ತ್ರದ ದತ್ತಾಂಶ ಸಂಗ್ರಹಣೆಗೆ ಬಳಸುವ ರಿಮೋಟ್ ಆಪರೇಟೆಡ್ ಸಿಸ್ಟಮ್‌ಗಳನ್ನು ಹೊಂದಿದೆ.

ಕಿರುಸುದ್ದಿ

ಜೀವನದಲ್ಲಿ ಜಿಗುಪ್ಸೆ: ವಿಷ ಸೇವಿಸಿದ್ದ ವ್ಯಕ್ತಿ ಆಸ್ಪತ್ರೆಯಲ್ಲಿ ಸಾವು

ಉಡುಪಿ: ಯಾವುದೋ ಕೌಟುಂಬಿಕ ಅಥವಾ ವೈಯಕ್ತಿಕ ವಿಷಯದಲ್ಲಿ ಜೀವನದಲ್ಲಿ ತೀವ್ರ ಬೇಸರಗೊಂಡು ವಿಷ ಪದಾರ್ಥ ಸೇವಿಸಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಬೈಂದೂರು ತಾಲೂಕಿನ ಕಾಲ್ತೋಡು ಗ್ರಾಮದ ಹೊಸಮನೆ ನಿವಾಸಿ ಶೇಖರ ಶೆಟ್ಟಿ (57) ಮೃತ ವ್ಯಕ್ತಿ. ಶೇಖರ ಶೆಟ್ಟಿ ಅವರು ಜೂನ್ 16ರಂದು ಮಧ್ಯಾಹ್ನ ಮನೆಯ ಹೊರಗಡೆ ವಿಷ ಪದಾರ್ಥ ಸೇವಿಸಿ ಮನೆಗೆ ವಾಪಸ್ ಬಂದಿದ್ದರು. ಅವರ ಸ್ಥಿತಿಯನ್ನು ಗಮನಿಸಿದ ಕುಟುಂಬಸ್ಥರು ತಕ್ಷಣ ಅವರನ್ನು ಕೋಟೇಶ್ವರದ ಎನ್. ಆರ್. ಆಚಾರ್ಯ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಪರಿಸ್ಥಿತಿ ಹದಗೆಟ್ಟಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಸಂಜೆ ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದ್ದಾರೆ ಎಂದು ವೈದ್ಯರು ದೃಢಪಡಿಸಿದ್ದಾರೆ. ಮೃತರ ಅಣ್ಣ ಚಂದ್ರಶೇಖರ ಶೆಟ್ಟಿ (87) ನೀಡಿದ ದೂರಿನಂತೆ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೌಟುಂಬಿಕ ಕಲಹ: ಪತ್ನಿಯ ಕುತ್ತಿಗೆಗೆ ಕತ್ತಿಯಿಂದ ಕಡಿದು ಕೊಲೆಗೆ ಯತ್ನಿಸಿದ ಪತಿ!

ಉಡುಪಿ: ದಿನನಿತ್ಯದ ಕೌಟುಂಬಿಕ ಜಗಳ ವಿಕೋಪಕ್ಕೆ ತಿರುಗಿ, ಪತಿಯೊಬ್ಬ ತನ್ನ ಹೆಂಡತಿಯನ್ನು ಕೊಲ್ಲುವ ಉದ್ದೇಶದಿಂದ ಕತ್ತಿಯಿಂದ ಕುತ್ತಿಗೆಗೆ ಕಡಿದು ಕೊಲೆಗೆ ಯತ್ನಿಸಿರುವ ಭೀಕರ ಘಟನೆ ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದಲ್ಲಿ ಸಂಭವಿಸಿದೆ. ನಿಟ್ಟೆ ಗ್ರಾಮದ ಬೇಬಿ (48) ತೀವ್ರವಾಗಿ ಗಾಯಗೊಂಡಾಕೆ. ಆರೋಪಿ ಧರ್ಮ ಎಂಬಾತ ಪ್ರತಿದಿನ ತನ್ನ ಹೆಂಡತಿ ಬೇಬಿ ಅವರೊಂದಿಗೆ ಜಗಳ ಆಡುತ್ತಿದ್ದನು. ಜೂನ್ 15ರಂದು ಸಂಜೆ 4.45ರ ಸುಮಾರಿಗೆ ಎಂದಿನಂತೆ ಹೆಂಡತಿಯೊಂದಿಗೆ ಜಗಳ ತೆಗೆದ ಧರ್ಮ, ನಿನಗೆ ಇವತ್ತು ಮುಕ್ತಿ ಕೊಡುತ್ತೇನೆ, ನಿನ್ನನ್ನು ಕೊಲ್ಲುತ್ತೇನೆ ಎಂದು ಕಿರುಚಾಡಿದ್ದಾನೆ. ತದನಂತರ ಮನೆಯಲ್ಲಿದ್ದ ಕತ್ತಿಯನ್ನು ತಂದು ಹೆಂಡತಿ ಬೇಬಿ ಅವರ ಕುತ್ತಿಗೆಗೆ ಬಲವಾಗಿ ಕಡಿದು ಕೊಲೆ ಮಾಡಲು ಯತ್ನಿಸಿದ್ದಾನೆ. ದಾಳಿಯಿಂದಾಗಿ ತೀವ್ರ ರಕ್ತಗಾಯ ಗೊಂಡು ಜೀವನ್ಮರಣದ ಹೋರಾಟ ನಡೆಸುತ್ತಿದ್ದ ಬೇಬಿ ಅವರನ್ನು ತಕ್ಷಣವೇ ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಗಾಯದ ಗಂಭೀರತೆ ಹೆಚ್ಚಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ರವಾನಿಸಲಾಗಿದೆ.

ಈ ಕುರಿತು ಮಗಳು ವಿಶಾಲಾಕ್ಷಿ (25) ನೀಡಿದ ದೂರಿನಂತೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಗಾಗಿ ಬಲೆ ಬೀಸಿದ್ದಾರೆ.

ನೇಣುಬಿಗಿದು ವ್ಯಕ್ತಿ ಆತ್ಮಹತ್ಯೆ

ಉಡುಪಿ: ವಿಪರೀತ ಮದ್ಯಪಾನ ಮಾಡುವ ಚಟದಿಂದ ಜೀವನದಲ್ಲಿ ಜಿಗುಪ್ಸೆಗೊಂಡಿದ್ದ ವ್ಯಕ್ತಿಯೊಬ್ಬರು ಮನೆಯ ಬಾತ್‌ರೂಮ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಾರ್ಕಳ ತಾಲೂಕಿನ ಮುಡ್ಕೂರು ಗ್ರಾಮದಲ್ಲಿ ಸಂಭವಿಸಿದೆ.

ಮುಡ್ಕೂರು ಗ್ರಾಮದ ನಿವಾಸಿ ರಮೇಶ್ ಸಫಲಿಗ (59) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ.

ಈ ಕುರಿತು ಮೃತರ ಮಗ ಭರತ್ ಕೆ. ಸಫಲಿಗ (26) ನೀಡಿದ ದೂರಿನಂತೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೌರೋಹಿತ್ಯ ಮೇಲ್ವಿಚಾರಕ ನಾಪತ್ತೆ

ಉಡುಪಿ: ಉಡುಪಿ ತಾಲೂಕು ಕೊಡವೂರು ಗ್ರಾಮದ ಮಹಾತೋಭಾರ ಶ್ರೀ ಶಂಕರನಾರಾಯಣ ದೇವಸ್ಥಾನದ ಪೌರೋಹಿತ್ಯಕ್ಕೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಹಾಗೂ ಉಸ್ತುವಾರಿಯಾಗಿದ್ದ ವೆಂಕಟಕೃಷ್ಣ (49) ಎಂಬ ವ್ಯಕ್ತಿಯು ಜೂನ್ 12 ರಂದು ಬೆಳಗ್ಗೆ 8 ಗಂಟೆಗೆ ಗ್ರಾಮದ ಕೆರೆಕಟ್ಟೆ ಗಣಪತಿ ದೇವಸ್ಥಾನದಿಂದ ಹೋಗಿದ್ದು, ಆ ಬಳಿಕ ದೇವಸ್ಥಾನಕ್ಕೂ ಬರದೇ, ಮನೆಗೂ ಹೋಗದೆ ನಾಪತ್ತೆಯಾಗಿರುತ್ತಾರೆ. 5 ಅಡಿ 5 ಇಂಚು ಎತ್ತರ, ಬಿಳಿ ಮೈಬಣ್ಣ, ಕಪ್ಪು ಮಿಶ್ರಿತ ಕೆಂಚು ಕೂದಲು ಹೊಂದಿದ್ದು, ಕನ್ನಡ, ತುಳು, ಹಿಂದಿ ಹಾಗೂ ಇಂಗ್ಲಿಷ್ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಮಲ್ಪೆ ಪೊಲೀಸ್ ಠಾಣೆ ದೂ.ಸಂ:0820-2537999, ಮಲ್ಪೆ ಪಿ.ಎಸ್.ಐ ಮೊ.ನಂ: 9480805447 ಹಾಗೂ ಮಲ್ಪೆ ವೃತ್ತ ನಿರೀಕ್ಷಕರ ಸಂಖ್ಯೆ: 9480805430 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಲ್ಪೆ ಪೊಲೀಸ್ ಠಾಣೆಯ ಉಪ ನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.



ಕೇರಳದಲ್ಲಿ ಜನಗಣತಿ - 2027 ಯೋಜನೆಗೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್ ಸೆಲ್ಫ್ ಎನ್ಯುಮರೇಶನ್ ಮೂಲಕ ಮಂಗಳವಾರ ತಿರುವನಂತಪುರದಲ್ಲಿ ಚಾಲನೆ ನೀಡಿದರು.

ಹಾರಾಡಿ ರೈಲ್ವೆ ಸೇತುವೆಯ ಕೆಳಭಾಗದಲ್ಲಿ ಕಾಮಗಾರಿ
ಇಂದಿನಿಂದ ಬದಲಿ ರಸ್ತೆಯಲ್ಲಿ ಸಂಚಾರ

ಪುತ್ತೂರು: ಪುತ್ತೂರು-ಉಪ್ಪಿನಂಗಡಿ ರಸ್ತೆ ಅಭಿವೃದ್ಧಿಯ ಭಾಗವಾಗಿ ಹಾರಾಡಿ ರೈಲ್ವೇ ಸೇತುವೆಯ ಕೆಳಭಾಗದಲ್ಲಿ ಕಾಂಕ್ರೀಟ್ ಕಾಮಗಾರಿಯ ಹಿನ್ನೆಲೆಯಲ್ಲಿ ಜೂ.18ರಿಂದ ಜು.18ರ ವರೆಗೆ ಒಂದು ತಿಂಗಳು ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಿ ದ.ಕ. ಜಿಲ್ಲಾಧಿಕಾರಿಯವರು ಆದೇಶ ನೀಡಿ ವಾಹನಗಳು ಪರ್ಯಾಯ ರಸ್ತೆಯಲ್ಲಿ ಸಂಚರಿಸುವಂತೆ ತಿಳಿಸಿದ್ದಾರೆ.

ಹಾರಾಡಿ ರೈಲ್ವೇ ಸೇತುವೆಯ ಕೆಳಭಾಗದಲ್ಲಿ ಕಾಮಗಾರಿ ನಡೆಸುವ ಹಿನ್ನೆಲೆಯಲ್ಲಿ ರಸ್ತೆ ಬಂದ್ ಮಾಡುವುದಕ್ಕೆ ಅನುಮತಿ ಕೋರಿ ಪುತ್ತೂರು ಲೋಕೋಪಯೋಗಿ ಇಲಾಖೆಯವರು ಪುತ್ತೂರು ಎಸಿಯವರ ಮೂಲಕ ಡಿಸಿಯವರಿಗೆ ಮನವಿ ಮಾಡಿದ್ದಾರೆ. ಅವರ ಮನವಿಯನ್ನು ಪುರಸ್ಕರಿಸಿದ ಡಿ.ಸಿ. ಯವರು ರಸ್ತೆ ಬಂದ್ ಮಾಡಲು ಅನುಮತಿ ನೀಡಿದ್ದಾರೆ.

ಹಾಲಿ ವಾಹನ ಸಂಚಾರ ನಿಷೇಧದ ಹಿನ್ನೆಲೆಯಲ್ಲಿ ಪುತ್ತೂರಿನಿಂದ ಉಪ್ಪಿನಂಗಡಿ ಕಡೆಗೆ ಸಂಚರಿಸುವ ವಾಹನಗಳು ಪುತ್ತೂರು ಖಾಸಗಿ ಬಸ್ ನಿಲ್ದಾಣ ಮಾರ್ಗವಾಗಿ ಕೋಟೆಚಾ ಹಾಲ್ ಬಳಿ ಉಪ್ಪಿನಂಗಡಿ ರಸ್ತೆಯನ್ನು ಸಂಪರ್ಕಿಸುವುದು.




ಉಪ್ಪಿನಂಗಡಿಯಿಂದ ಪುತ್ತೂರು ಕಡೆಗೆ ಸಂಚರಿಸುವ ವಾಹನಗಳು ಕೋಟೆಚಾ ಹಾಲ್ ಮೂಲಕ ಎಪಿಎಂಸಿ ರಸ್ತೆಯಾಗಿ ಪುತ್ತೂರು ಮುಖ್ಯ ರಸ್ತೆಯನ್ನು ಸಂಪರ್ಕಿಸುವುದು. ಉಪ್ಪಿನಂಗಡಿ ರಸ್ತೆಯಿಂದ ಮಂಗಳೂರು ಕಡೆಗೆ ಸಂಚರಿಸುವ ವಾಹನಗಳು ಪಡೀಲ್ ಜಂಕ್ಷನ್ ಮೂಲಕ ನಗರ ರಸ್ತೆಯಲ್ಲಿ ಸಂಚರಿಸುವಂತೆ ಡಿ.ಸಿ.ಯವರು ಆದೇಶದಲ್ಲಿ ವಿವರಿಸಿದ್ದಾರೆ.

ಐತಿಹಾಸಿಕ ಕುಂಬಳೆ ಆರಿಕ್ಕಾಡಿ ಕೋಟೆಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಭೇಟಿ
ಪ್ರವಾಸೋದ್ಯಮಕ್ಕೆ ಬೂಸ್ಟರ್ ಡೋಸ್?

ಕಾಸರಗೋಡು: ಐತಿಹಾಸಿಕ ಮಹತ್ವ ಹೊಂದಿರುವ ಹಾಗೂ ಪ್ರಸಿದ್ಧ ಪ್ರವಾಸೋದ್ಯಮ ಕೇಂದ್ರವಾಗಿರುವ ಅಲ್ಲದೆ ಪ್ರವಾಸೋದ್ಯಮ ಅಭಿವೃದ್ಧಿಗೆ ಅಪಾರ ಸಾಧ್ಯತೆಗಳಿರುವ ಕುಂಬಳೆ ಆರಿಕ್ಕಾಡಿ ಕೋಟೆ ಸೇರಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಅಳಿವಿನಂಚಿನಲ್ಲಿರುವ ಹಲವಾರು ಕೋಟೆಗಳ ಅಭಿವೃದ್ಧಿಗೆ ಜಿಲ್ಲಾಡಳಿತವು ರೂಪುರೇಷೆ ತಯಾರಿಸಿದೆ.

ಈ ನಿಟ್ಟಿನಲ್ಲಿ ಜಿಲ್ಲೆಯ ವಿವಿಧ ಕೋಟೆಗಳಿಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕೋಟೆಗಳ ಸ್ಥಿತಿಗತಿಗಳನ್ನು ಪರಿಶೀಲನೆ ನಡೆಸಿದ್ದರು. ಬಳಿಕ ವಿಶ್ವ ಬೈಸಿಕಲ್ ದಿನಾಚರಣೆಯ ಅಂಗವಾಗಿ ಜೂನ್ 3ರಂದು ಕೈಗೊಂಡ ಸೈಕಲ್ ಅಭಿಯಾನದ ಸಮಾರೋಪ ಸಮಾರಂಭದ ಸಂದರ್ಭ ಕುಂಬಳೆ ಆರಿಕ್ಕಾಡಿ ಕೋಟೆಗೆ ಭೇಟಿ ನೀಡಿದ್ದರು.

ಜಿಲ್ಲಾಧಿಕಾರಿಗಳ ಕೋಟೆ ಸಂದರ್ಶನವು ಪ್ರವಾಸೋದ್ಯಮ ಅಭಿವೃದ್ಧಿ ಕುರಿತಂತೆ ನಾಗರಿಕರಲ್ಲಿ ಹೊಸ ಆಶಾಭಾವನೆ ಮೂಡಿಸಿದೆ. ಜಿಲ್ಲೆಯ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗೆ ಜಿಲ್ಲಾಧಿಕಾರಿಗಳು ಕೈಗೊಂಡಿರುವ ವಿಶೇಷ ಆಸಕ್ತಿಯು ಜಿಲ್ಲೆಯ ಪ್ರವಾಸೋದ್ಯಮಕ್ಕೆ ನವಚೈತನ್ಯ ತುಂಬಿದೆ. ಹಲವು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಕುಂಬಳೆ ಆರಿಕ್ಕಾಡಿ ಕೋಟೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿರುವುದು ಗಮನಾರ್ಹ ವಿಷಯವಾಗಿದೆ.



ಕುಂಬಳೆ ನಗರ ಪ್ರದೇಶದಿಂದ ಒಂದು ಕಿಲೋ ಮೀಟರ್ ದೂರದಲ್ಲಿರುವ ಆರಿಕ್ಕಾಡಿ ಹನುಮಾನ್ ನಗರ ಶ್ರೀ ವೀರಾಂಜನೇಯ ಕ್ಷೇತ್ರ ಸಮೀಪದ ಆರಿಕ್ಕಾಡಿ ಕೋಟೆಯು ಪುರಾತತ್ವ ಇಲಾಖೆಯ ಅಧೀನದಲ್ಲಿದೆ. ಹಲವಾರು ವರ್ಷಗಳಿಂದ ಈ ಕೋಟೆಯನ್ನು ಪ್ರಸಿದ್ಧ ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸಬೇಕೆಂಬ ಆಗ್ರಹ ವ್ಯಾಪಕಗೊಂಡಿದ್ದರೂ ಇದುವರೆಗೆ ಯಾವುದೇ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿಲ್ಲ.

ಈ ಕೋಟೆಯ ಒಂದು ಭಾಗವು ಖಾಸಗಿ ವ್ಯಕ್ತಿಗಳ ಅತಿಕ್ರಮಣಕ್ಕೆ ಒಳಗಾಗಿದ್ದು, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಾಗಿ ಇನ್ನೊಂದು ಭಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಇದರ ಪರಿಣಾಮವಾಗಿ ಸುಮಾರು ಒಂದು ಎಕರೆ ಪ್ರದೇಶದಲ್ಲಿ ಮಾತ್ರ ಕೋಟೆಯು ಉಳಿದುಕೊಂಡಿದೆ. ಸಮರ್ಪಕ ನಿರ್ವಹಣೆಯ ಕೊರತೆಯಿಂದ ಕೋಟೆಯ ಪ್ರದೇಶವು ಕಾಡುಪೊದೆಗಳು ಮತ್ತು ಹುಲ್ಲುಗಳಿಂದ ತುಂಬಿರುವುದಲ್ಲದೆ ಸಮಾಜಘಾತುಕರ ಆವಾಸ ಸ್ಥಾನವಾಗಿ ಪರಿವರ್ತನೆಯಾಗಿದೆ.

ಕೇರಳದ ಮಾಜಿ ಸಚಿವರಾಗಿದ್ದ ಚೆರ್ಕಳಂ ಅಬ್ದುಲ್ಲ ಅವರ ಆಡಳಿತಾವಧಿಯಲ್ಲಿ ಈ ಕೋಟೆಯಲ್ಲಿ ಕಲಾಗ್ರಾಮ ಪ್ರವಾಸೋದ್ಯಮ ಯೋಜನೆಯನ್ನು ಜಾರಿಗೊಳಿಸುವ ಪ್ರಯತ್ನ ನಡೆಸಿದ್ದರೂ ಆಡಳಿತಾತ್ಮಕ ನಿರ್ಲಕ್ಷ್ಯ ಮತ್ತು ಸರಕಾರದ ಬದಲಾವಣೆಯಿಂದ ಅದು ಅರ್ಧದಲ್ಲೇ ಮೊಟಕುಗೊಂಡಿತ್ತು. ನಂತರ ಕುಂಬಳೆ ಗ್ರಾಮ ಪಂಚಾಯತ್ ಆಡಳಿತವು ವಿವಿಧ ಅಭಿವೃದ್ಧಿ ಯೋಜನೆಗಳ ರೂಪುರೇಷೆಗಳನ್ನು ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಲಿಲ್ಲ.

ಹೊಸ ಆದಾಯದ ಮೂಲಕ್ಕೂ ಮುನ್ನುಡಿ

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ಸಂದರ್ಶನ ಮತ್ತು ಆಸಕ್ತಿಯಿಂದ ಯೋಜನೆಗೆ ಮರುಜೀವ ಲಭಿಸುವ ಸಾಧ್ಯತೆಯಿದೆ. ಕುಂಬಳೆ ಆರಿಕ್ಕಾಡಿ ಕೋಟೆಯನ್ನು ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸಿದರೆ ಕುಂಬಳೆ ಪೇಟೆಯ ಸಮಗ್ರ ಪ್ರಗತಿಗೆ ವೇಗ ದೊರಕುವುದಲ್ಲದೆ ಗ್ರಾಮ ಪಂಚಾಯತ್‌ನ ಆದಾಯದ ಹೊಸ ಮೂಲಗಳು ಕೂಡಾ ಸೃಷ್ಟಿಯಾಗಲಿವೆ. ಆದ್ದರಿಂದ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಿ ಆರಿಕ್ಕಾಡಿ ಕೋಟೆಯನ್ನು ಜಿಲ್ಲೆಯ ಪ್ರಮುಖ ಪ್ರವಾಸಿ ತಾಣವನ್ನಾಗಿ ರೂಪಿಸಬೇಕೆಂಬುದು ಸಾರ್ವಜನಿಕ ವಲಯದ ಆಗ್ರಹವಾಗಿದೆ. ಬೇಕಲಕೋಟೆ ಹೊರತುಪಡಿಸಿ ಕಾಸರಗೋಡಿನಲ್ಲಿ ಇತಿಹಾಸಗಳನ್ನು



ಸಾರುವ ಅನೇಕ ಕೋಟೆಗಳಿದ್ದು ಅವುಗಳ ಕಾಯಕಲ್ಪ ಆಗಬೇಕಾಗಿದೆ. ಜಿಲ್ಲೆಯ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಯ ಮೂಲಕ ಕಿರು ಮತ್ತು ಬೃಹತ್ ಉದ್ದಿಮೆಗಳ ಬೆಳವಣಿಗೆಗೂ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತವು ಶೀಘ್ರ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ.

ಸಂಭಾವ್ಯ ಪ್ರಕೃತಿ ವಿಕೋಪ ಎದುರಿಸಲು ಕೊಡಗು ಜಿಲ್ಲೆ ಸನ್ನದ್ಧ: ಎಸ್ಪಿ ಬಿಂದುಮಣಿ

ಮಡಿಕೇರಿ: ಮುಂಗಾರು ಹಾಗೂ ಪ್ರಕೃತಿ ವಿಕೋಪದ ಸಂದರ್ಭಗಳನ್ನು ಸಮರ್ಥವಾಗಿ ಎದುರಿಸಲು ಕೊಡಗು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಂಪೂರ್ಣವಾಗಿ ಸನ್ನದ್ಧಗೊಂಡಿದೆ ಎಂದು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಆರ್ .ಎನ್ ಅವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಜಂಟಿ ಸಭೆಯ ನಿರ್ದೇಶನದಂತೆ, ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯು ಸಾರ್ವಜನಿಕರ ಜೀವ ಮತ್ತು ಆಸ್ತಿ ರಕ್ಷಣೆಗೆ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ ಎಂದು ವಿವರಿಸಿದರು.

ಜಿಲ್ಲೆಯಲ್ಲಿ ಯಾವುದೇ ತುರ್ತು ಪರಿಸ್ಥಿತಿಯನ್ನು ಎದುರಿಸಲು ನಾಲ್ಕು



ವಿಶೇಷ ಪೊಲೀಸ್ ರಕ್ಷಣಾ ತಂಡಗಳನ್ನು ರಚಿಸಲಾಗಿದೆ ಹಾಗೂ ಇವುಗಳ ಸನ್ನದ್ಧತೆಯನ್ನು ಪರಿಶೀಲಿಸಲು ಹಾರಂಗಿ ಜಲಾಶಯದ ಹಿನ್ನೀರಿನಲ್ಲಿ ಈಗಾಗಲೇ ಎರಡು ಬಾರಿ ಯಶಸ್ವಿ ಅಣಕು ಕಾರ್ಯಾಚರಣೆಗಳನ್ನು ನಡೆಸಲಾಗಿದೆ ಎಂದರು.

ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ

ವಿಪತ್ತು ನಿರ್ವಹಣೆಯಲ್ಲಿ ವಿಶೇಷ ಪರಿಣತಿ ಹೊಂದಿರುವ 30 ಸಿಬ್ಬಂದಿಗಳ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ (KBSD) ಈಗಾಗಲೇ ಜಿಲ್ಲೆಗೆ ಆಗಮಿಸಿ ಬೀಡುಬಿಟ್ಟಿದೆ. ಕಳೆದ ಸಾಲಿನಲ್ಲಿ ವಿಕೋಪಕ್ಕೆ ತುತ್ತಾಗಿದ್ದ ಹಾಗೂ ಈ ಬಾರಿ ವಿಕೋಪ ಸಂಭವಿಸಬಹುದಾದ ಸಂಭಾವ್ಯ ಸೂಕ್ಷ್ಮ ಪ್ರದೇಶಗಳಿಗೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ತುರ್ತು ರಕ್ಷಣಾ ಕಾರ್ಯಗಳಿಗಾಗಿ ಸ್ಥಳೀಯ ಸ್ವಯಂಸೇವಕರನ್ನು ಗುರುತಿಸಿ ಅವರ ವಿವರಗಳನ್ನು ಕ್ರೋಢೀಕರಿಸಲಾಗಿದ್ದು, ಕಾರ್ಯಾಚರಣೆಗೆ ಅಗತ್ಯವಿರುವ ಜೆಸಿಬಿ, ಕ್ರೇನ್, ಟೋಯಿಂಗ್ ವಾಹನ, 4x4 ಜೀಪ್‌ಗಳು ಹಾಗೂ ವುಡ್ ಕಟ್ಟರ್‌"ಗಳನ್ನು ಸಂಪೂರ್ಣ ಸಿದ್ಧಪಡಿಸಿಕೊಳ್ಳಲಾಗಿದೆ. ಪ್ರಕೃತಿ ವಿಕೋಪದಂತಹ ಕಠಿಣ ಸಂದರ್ಭಗಳಲ್ಲಿ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಸಂಘಟನೆಗಳ ಸ್ವಯಂಸೇವಕರು ಮತ್ತು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಕ್ರಿಯವಾಗಿ ಕೈಜೋಡಿಸಬೇಕೆಂದು ಈ ಸಂದರ್ಭ ಅವರು ಮನವಿ ಮಾಡಿದರು.

ಶಿಕ್ಷಕ ವೃತ್ತಿಯಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಕೆ.ಚಂದ ಪಾಟಾಳಿ ವಿಧಿವಶ

ಬಡಗನ್ನೂರು: ಶಿಕ್ಷಕವೃತ್ತಿಯಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತಗೊಂಡ ಮುಖ್ಯ ಶಿಕ್ಷಕ, ಬಡಗನ್ನೂರು ಗ್ರಾಮದ ಪಡು ಮಲೆ ನಿವಾಸಿ ಕೆ.ಸಿ. ಪಾಟಾಳಿ (78) ಅವರು ಅಲ್ಪಕಾಲದ ಅಸೌಖ್ಯದಿಂದಾಗಿ ಜೂ.17ರಂದು ಕಾಸರಗೋಡು ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದರು.

ಕೆ.ಸಿ. ಪಾಟಾಳಿ ಎಂದೇ ಪ್ರಸಿದ್ಧಿ ಪಡೆದು ಕೊಂಡಿರುವ ಕೆ. ಚಂದ ಪಾಟಾಳಿಯವರು ಶಿಕ್ಷಕರಾಗಿ, ಸಾಹಿತಿಯಾಗಿ, ಲೇಖಕರಾಗಿ ಜನಮನ್ನಣೆ ಗಳಿಸಿದ್ದಾರೆ. ಇರ್ದೆ ಉಪ್ಪಳಿಗೆ ಸರಕಾರಿ ಶಾಲೆಯಲ್ಲಿ ಶಿಕ್ಷಕ ವೃತ್ತಿ ಆರಂಭಿಸಿದ ಅವರು ಬಳಿಕ ಕುದ್ಮಾರು ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದರು. ಆ ನಂತರದ ದಿನಗಳಲ್ಲಿ ಸುಳ್ಯಪದವು ಶ್ರೀ ಬಾಲಸುಬ್ರಹ್ಮಣ್ಯ ಶಾಲೆಯಲ್ಲಿ ಬಳಿಕ ವರ್ಗಾವಣೆಗೊಂಡು ಈಶ್ವರಮಂಗಲ ಗಜಾನನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ ನಿವೃತ್ತಿಗೊಂಡಿದ್ದರು.



ಸಾಹಿತಿ, ಯಕ್ಷಗಾನ ಕಲಾವಿದ

ಕೆ.ಸಿ. ಪಾಟಾಳಿಯವರು ಶಿಕ್ಷಕರಾಗಿ, ಸಾಹಿತಿಯಾಗಿ, ಯಕ್ಷಗಾನ ಕಲಾವಿದ ರಾಗಿ, ಸಂಪನ್ಮೂಲ ವ್ಯಕ್ತಿಯಾಗಿ, ವಾಗ್ಮಿಯಾಗಿ ಗುರುತಿಸಿಕೊಂಡಿದ್ದರು. ಪಡುಮಲೆ ಕ್ಷೇತ್ರ ದರ್ಶನ, ಭಾಮಿನಿ ಷಟ್ಪದಿಯಲ್ಲಿರುವ ಶ್ರೀಅಯ್ಯಪ್ಪ ಸ್ವಾಮಿ ಚರಿತ್ರೆ, ಬಾಲ ರಶ್ಮಿ(ಶಿಶು ಗೀತೆಗಳ ಸಂಕಲನ) ಅಕ್ಷರ ದೀಪ(ಸಾಕ್ಷರತಾ ಗೀತಾವಳಿ), ಶ್ರೀ ಶಾಸ್ತಾರ ವಿಷ್ಣುಮೂರ್ತಿ ಭಜನಾವಳಿ, ರಾಜ್ಯ ಮಟ್ಟದ ಬಹುಮಾನಿತ ಕೃತಿ 'ಪ್ರಬಂಧ ಸಂಗಮ', ಯಕ್ಷಗಾನ ಅರ್ಥ ಸಾಹಿತ್ಯ 'ಗುರುದಕ್ಷಿಣೆ', ಯಕ್ಷಗಾನ ಪ್ರಸಂಗ 'ಪೂಮಾಣಿ ಕಿನ್ನಿಮಾಣಿ ದರ್ಶನ', ಶ್ರೀ ಆಂಜನೇಯ ದರ್ಶ, ಸತ್ವಪರೀಕ್ಷೆ (ಯಕ್ಷಗಾನ ಅರ್ಥ ಸಾಹಿತ್ಯ), ಶ್ರೀ ಪಡುಮಲೆ ಕ್ಷೇತ್ರ ದರ್ಶನ(ಪರಿಷ್ಕೃತ ದ್ವಿತೀಯ ಆವೃತ್ತಿ) ಇತ್ಯಾದಿ ಅನೇಕ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ.

ಶ್ರೀ ಕೋಟಿ ಚೆನ್ನಯರ ತವರೂರು ಪಡುಮಲೆಯು ಪ್ರವಾಸಿ ತಾಣವಾಗಬೇಕು ಆ ಮೂಲಕ ಅಭಿವೃದ್ಧಿ ಯನ್ನು ಹೊಂದಬೇಕು ಎಂಬುದು ಕೆ.ಸಿ. ಪಾಟಾಳಿಯವರು ಬಹು ದಿನದ ಕನಸು ಆಗಿತ್ತು. ಪಡುಮಲೆ ಅಭಿವೃದ್ಧಿ ಸಮಿತಿ ಇದರಲ್ಲಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅವ್ಯವಹಾರ, ಭ್ರಷ್ಟಾಚಾರ ನಡೆವ ಶಂಕೆ | ಆಪರೇಶನ್ ಆಹಾರ ಸುರಕ್ಷಾ ಕಾರ್ಯಾಚರಣೆ
ರೇಷನ್ ಅಂಗಡಿಗಳಿಗೆ ವಿಜಿಲೆನ್ಸ್ ದಾಳಿ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದ ಆಹಾರ ಮತ್ತು ಸಾರ್ವಜನಿಕ ವಿತರಣಾ ವಲಯದಲ್ಲಿ ಅವ್ಯವಹಾರ ಹಾಗೂ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಅದನ್ನು ಪತ್ತೆಹಚ್ಚಲು ವಿಜಿಲೆನ್ಸ್ ಆ್ಯಂಡ್ ಆ್ಯಂಟಿ ಕರಪ್ಷನ್ ಬ್ಯೂರೋ ನೇತೃತ್ವದಲ್ಲಿ ಆಪರೇಶನ್ ಆಹಾರ ಸುರಕ್ಷಾ ಎಂಬ ಹೆಸರಿನಲ್ಲಿ ವ್ಯಾಪಕ ಕಾರ್ಯಾಚರಣೆಯನ್ನು ನಡೆಸಲಾಗಿದೆ. ಅದರಂತೆ ಕಾಸರಗೋಡು ಜಿಲ್ಲೆಯ ವಿವಿಧೆಡೆ ವಿಜಿಲೆನ್ಸ್ ದಾಳಿ ಮುಂದುವರಿದಿದೆ.

ಪ್ರಾಜೆಕ್ಟ್ ಝೀರೋ ಎಂಬ ಯೋಜನೆಯಡಿ ಈ ಕಾರ್ಯಾಚರಣೆನಡೆಯುತ್ತಿದೆ. ರಾಜ್ಯ ವಿಜಿಲೆನ್ಸ್ ನಿರ್ದೇಶಕ ಮನೋಜ್ ಅಬ್ರಹಾಂ ನೀಡಿದ ನಿರ್ದೇಶನದಂತೆ ರಾಜ್ಯದ ಆಯ್ದ 14 ಎಸ್‌ಎಫ್‌ಎಸ್‌ಎ ಗೋದಾಮುಗಳು ಮತ್ತು 54 ರೇಷನ್ ಅಂಗಡಿಗಳಲ್ಲಿ ವಿಜಿಲೆನ್ಸ್‌ನ ವಿಶೇಷ ತಂಡವು ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದೆ.

ಕಾಸರಗೋಡು ಜಿಲ್ಲೆಯಲ್ಲಿ ಬಂದ್ಯೋಡಿನ ಗೋದಾಮು ಮತ್ತು ಜಿಲ್ಲೆಯ ನಾಲ್ಕು ರೇಷನ್ ಅಂಗಡಿಗಳಿಗೆ ವಿಜಿಲೆನ್ಸ್ ತಂಡವು ದಿಢೀರನೆ ದಾಳಿ ಮತ್ತು ಪರಿಶೀಲನೆ ನಡೆಸಿದೆ. ಗೋದಾಮಿನಲ್ಲಿ ಕೈಗೊಳ್ಳಲಾದ ಪರಿಶೀಲನೆಯಲ್ಲಿ ಬೆಳ್ತಿಗೆ ಅಕ್ಕಿ ಸ್ಟಾಕ್‌ನಲ್ಲಿ 12 ಕ್ವಿಂಟಾಲ್ ನಷ್ಟು ಕಡಿಮೆಯಿರುವುದನ್ನು ಪತ್ತೆಹಚ್ಚಲಾಗಿದೆ. ಮಾತ್ರವಲ್ಲದೆ ಗೋದಿ ಹಿಟ್ಟಿನಲ್ಲೂ ನಿಗದಿತ ಪ್ರಮಾಣಕ್ಕಿಂತ 5 ಕ್ವಿಂಟಾಲ್‌ನಷ್ಟು ಸ್ಟಾಕ್ ಕಡಿಮೆ ಕಂಡುಬಂದಿದೆ ಎಂದು ವಿಜಿಲೆನ್ಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಅಧಿಕಾರಿಗಳ ತಂಡದಿಂದ ವಿಶೇಷ ರೀತಿಯಲ್ಲಿ ತನಿಖೆ

ಗೋದಾಮುಗಳಲ್ಲಿರುವ ಆಹಾರ ಧಾನ್ಯಗಳ ದಾಸ್ತಾನುಗಳಲ್ಲಿರುವ ವ್ಯತ್ಯಾಸದ ಬಗ್ಗೆ ಸಮಗ್ರ ತನಿಖೆ ನಡೆಯುತ್ತಿದೆ. ಮಾತ್ರವಲ್ಲದೆ ಆಹಾರ ಧಾನ್ಯಗಳನ್ನು ಮತ್ತು ಅಕ್ಕಿ ಇನ್ನಿತರ ವಸ್ತುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿದೆಯೇ ಎಂಬ ಬಗ್ಗೆ ಪತ್ತೆಹಚ್ಚಲಾಗುತ್ತಿದೆ. ನಕಲಿ ಲಾಗಿಂಗ್ ಬಿಲ್ಲಿಂಗ್ ನಡೆಸಲಾಗಿದೆಯೇ ಅಥವಾ ತೂಕದಲ್ಲಿ ವ್ಯತ್ಯಾಸಗಳು ಕಂಡುಬರುತ್ತಿವೆಯೇ ಎಂಬುದನ್ನು ವಿಜಿಲೆನ್ಸ್ ತಂಡವು ವಿಶೇಷವಾಗಿ ಪರಿಶೀಲಿಸಲಾಗುತ್ತಿದೆ.

ಸುರತ್ಕಲ್: ತಡಂಬೈಲ್‌ನಲ್ಲಿ ತಡರಾತ್ರಿ ಸರಣಿ ಅಪಘಾತ, ಹಲವರಿಗೆ ಗಂಭೀರ ಗಾಯ

ಸುರತ್ಕಲ್: ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ತಡಂಬೈಲ್ ಜಂಕ್ಷನ್‌ನಲ್ಲಿ ಸಂಭವಿಸಿದ ಸರಣಿ ಅಪಘಾತದಲ್ಲಿ ಹಲವರು ಗಾಯಗೊಂಡಿದ್ದು, ಗಾಯಾಳುಗಳನ್ನು ತಕ್ಷಣ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾತ್ರಿ ಸುಮಾರು 11.30ರ ವೇಳೆಗೆ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಮಂಗಳೂರು ಕಡೆಯಿಂದ ಉಡುಪಿ ಕಡೆಗೆ ತೆರಳುತ್ತಿದ್ದ ಖಾಸಗಿ ಸಂಸ್ಥೆಗೆ ಸೇರಿದ ಸ್ಲೀಪರ್ ಬಸ್, ಮುಂದೆ ಸಾಗುತ್ತಿದ್ದ ಕಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಅದೇ ವೇಳೆ ಹಿಂದಿನಿಂದ ಬರುತ್ತಿದ್ದ ಮತ್ತೊಂದು ಕಾರು ಕೂಡ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗಿದೆ.

ಅಪಘಾತದ ತೀವ್ರತೆಗೆ ಎರಡೂ ಕಾರುಗಳಲ್ಲಿದ್ದ ಪ್ರಯಾಣಿಕರಿಗೆ ಗಾಯಗಳಾಗಿವೆ. ಸ್ಥಳೀಯರು ತಕ್ಷಣ 108 ಆಂಬ್ಯುಲೆನ್ಸ್‌ಗೆ ಮಾಹಿತಿ ನೀಡಿದ್ದು, ಗಾಯಾಳುಗಳನ್ನು ಸುರತ್ಕಲ್‌ನ ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿದೆ.

ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ?

ಅಪಘಾತದಿಂದ ಹೆದ್ದಾರಿಯಲ್ಲಿ ಕೆಲಕಾಲ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಸುರತ್ಕಲ್ ಸಂಚಾರಿ ಪೊಲೀಸರು ಸ್ಥಳಕ್ಕೆ ಧಾವಿಸಿ, ಕ್ರೇನ್ ಮೂಲಕ ವಾಹನಗಳನ್ನು ತೆರವುಗೊಳಿಸಿ ಸಂಚಾರ ಸುಗಮಗೊಳಿಸಿದರು. ಸುರತ್ಕಲ್ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ.


ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು: ವಿಧಾನಸಭೆಯಿಂದ ಆಯ್ಕೆಯಾಗುವ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಗುರುವಾರ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಖಾಸಗಿ ಹೋಟೆಲ್‌ನಲ್ಲಿ ಜರುಗಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿ ಕುಮಾರ್ ಅವರನ್ನು ಬೂತ್ ಏಜೆಂಟ್ ಆಗಿ ನಿಯೋಜಿಸಲಾಗಿದೆ. ಪಕ್ಷದಿಂದ ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ. ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾ ಕಣದಲ್ಲಿದ್ದಾರೆ. ಒಟ್ಟು 62 ಶಾಸಕರು ಬಿಜೆಪಿಯಲ್ಲಿದ್ದಾರೆ. ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಅವರೂ ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಆಗ ಬಿಜೆಪಿ ಸಂಖ್ಯಾಬಲ 63 ಆಗಲಿದೆ. ವಿಧಾನಸಭೆಯಲ್ಲಿ ಶಾಸಕರ ಸಂಖ್ಯಾ ಬಲದಲ್ಲಿ ಬಿಜೆಪಿಯ ಇಬ್ಬರೂ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಒಬ್ಬ ಅಭ್ಯರ್ಥಿಯು ಗೆಲುವಿಗೆ 28 ಮತಗಳನ್ನು ಪಡೆಯಬೇಕಾಗಿದೆ. ಇದರಿಂದ ಬಿಜೆಪಿ ಅಭ್ಯರ್ಥಿಗಳಿಗೆ 56 ಮತಗಳು ಬೇಕಾಗುತ್ತವೆ.

ಚುನಾವಣೆಯ ದೃಷ್ಟಿಯಲ್ಲಿ ಬಿಜೆಪಿ ನಿರಾಳವಾಗಿದೆ. ಅಡ್ಡಮತದಾನದ ಆತಂಕವಿಲ್ಲ. ಪಕ್ಷದ ಅಭ್ಯರ್ಥಿಗಳ ಪರವಾಗಿ ಮತದಾನ ಮಾಡುವವರೇ ಪಕ್ಷದಲ್ಲಿದ್ದಾರೆ. ಅಭ್ಯರ್ಥಿಗಳನ್ನು ಸುಲಭವಾಗಿ ಗೆಲ್ಲಿಸುವ ಲೆಕ್ಕಾಚಾರದಲ್ಲಿ ಬಿಜೆಪಿಯಿದೆ. ಪಕ್ಷದ ಪ್ರತಿಯೊಬ್ಬ ಅಭ್ಯರ್ಥಿಗೆ ತಲಾ 29 ಮತಗಳನ್ನು ಹಂಚಿಕೆ ಮಾಡಿದ್ದು, ಉಳಿದ ಐದು ಮತಗಳನ್ನು ಎನ್‌ಡಿಎ ಮಿತ್ರಪಕ್ಷವಾಗಿರುವ ಜೆಡಿಎಸ್ ಅಭ್ಯರ್ಥಿ ಟಿ.ಎ. ಗೋವಿಂದರಾಜು ಅವರಿಗೆ ಚಲಾಯಿಸುವಂತೆ ಸಭೆಯಲ್ಲಿ ಸೂಚನೆ ನೀಡಲಾಗಿದೆ. ಯಾವ ಶಾಸಕ ಯಾವ ಅಭ್ಯರ್ಥಿಗೆ ತಮ್ಮ ಮತ ಚಲಾಯಿಸಬೇಕು ಎಂಬುದನ್ನು ಸಭೆಯಲ್ಲಿ ಸೂಚಿಸಲಾಗಿದೆ. ಗುರುವಾರ ಬೆಳಗ್ಗೆ ರವಿ ಕುಮಾರ್ ಅವರು ವಿಪ್ ಜಾರಿ ಮಾಡುತ್ತಾರೆ. ವಿಧಾನ ಪರಿಷತ್ ಚುನಾವಣೆಯ ಮತದಾನದ ಕುರಿತು ಶಾಸಕರಿಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

ರಾಮ ಬಾಣ



ಕ್ರೀಡಾಳುಗಳಿಗೆ ಶೇ.2 ಮೀಸಲು

ಪುಟ ೧➡ ಆಯ್ಕೆ ಸಂದರ್ಭದಲ್ಲಿ ಕ್ರೀಡಾಪಟು ಒಂದಕ್ಕಿಂತ ಹೆಚ್ಚು ಆಟಗಳಲ್ಲಿ ಸಾಧನೆಗಳನ್ನು ಮಾಡಿದ್ದ ಸಂದರ್ಭದಲ್ಲಿ ಅವನ ಅತ್ಯುನ್ನತ ಸಾಧನೆಗೈದ ಕೃಪಾಂಕಗಳನ್ನು ಪರಿಗಣಿಸಲಾಗುತ್ತದೆ. ಅಭ್ಯರ್ಥಿಗಳು ಸಮಾನ ಅಂಕಗಳನ್ನು ಗಳಿಸಿದ ಸಂದರ್ಭದಲ್ಲಿ ತಂಡದ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರಿಗಿಂತ ವೈಯಕ್ತಿಕ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರಿಗೆ ಆದ್ಯತೆ ನೀಡಲಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ ಶೇ.2 ಕ್ರೀಡಾ ಕೋಟಾದ ಅಡಿಯಲ್ಲಿನ ಅಭ್ಯರ್ಥಿಗಳ ನಡುವಿನ ಪರಸ್ಪರ ಅರ್ಹತೆಯನ್ನು ನಿರ್ಧರಿಸಲು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇ.50 ಅಂಕಗಳು ಮತ್ತು ಅಭ್ಯರ್ಥಿಗಳಿಗೆ ಲಭ್ಯವಿರುವ ಸಂಪೂರ್ಣ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

34 ಕ್ರೀಡೆಗಳಿವು: ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ಬಿಲಿಯರ್ಡ್ಸ್ ಮತ್ತು ಸ್ನೂಕರ್ ಬಾಕ್ಸಿಂಗ್, ಕ್ಯಾನೋಯಿಂಗ್, ಚೆಸ್, ಕ್ರಿಕೆಟ್, ಸೈಕ್ಲಿಂಗ್, ಈಕ್ವೆಸ್ಟ್ರಿಯನ್, ಫೆನ್ಸಿಂಗ್, ಫುಟ್ಬಾಲ್, ಗಾಲ್ಫ್, ಜಿಮ್ನಾಸ್ಟಿಕ್ಸ್, ಹ್ಯಾಂಡಬಾಲ್, ಹಾಕಿ, ಜುಡೋ, ಕಬಡ್ಡಿ, ಕಯಾಕಿಂಗ್, ಖೋ ಖೋ, ನೆಟ್‌ಬಾಲ್, ರೋಯಿಂಗ್, ಶೂಟಿಂಗ್, ಸ್ಪೋರ್ಟ್ಸ್ ಕ್ಲೈಂಬಿಂಗ್, ಸ್ಕ್ವಾಷ್, ಟೇಬಲ್ ಟೆನ್ನಿಸ್, ಟೈಕ್ವಾಂಡೋ, ಟೆನ್ನಿಸ್, ಟ್ರೈಥ್ಲಾನ್, ವಾಲಿಬಾಲ್, ಭಾರ ಎತ್ತುವಿಕೆ, ಕುಸ್ತಿ, ಜಲಕ್ರೀಡೆಗಳು.

ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದರೆ 50 ಕೃಪಾಂಕ

ಪುಟ ೧➡ ಈ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ್ದರೂ 47 ಕೃಪಾಂಕ ಸಿಗಲಿದೆ. ಏಷ್ಯನ್ ಗೇಮ್ಸ್ ಗೇಮ್ಸ್, ಕಾಮನ್‌ವೆಲ್ತ್, ವಿಶ್ವಕಪ್, ವಿಶ್ವ ಚಾಂಪಿಯನ್‌ಶಿಪ್, ಏಷ್ಯನ್ ಚಾಂಪಿಯನ್‌ಶಿಪ್, ಯೂತ್ ಒಲಿಂಪಿಕ್ಸ್, ವಿಶ್ವವಿದ್ಯಾಲಯ, ಎಸ್.ಎ.ಎಫ್, ರಾಷ್ಟ್ರೀಯ, ಹಿರಿಯರ ಚಾಂಪಿಯನ್‌ಶಿಪ್, ಖೇಲೋ ಇಂಡಿಯಾ ಹಾಗೂ ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೂ ಕ್ರಮವಾಗಿ ಕೃಪಾಂಕ ಸಿಗಲಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ವಿರೋಧ ಪಕ್ಷದವರು ಇರುವುದೇ ಟೀಕೆ ಮಾಡಲಿಕ್ಕಾಗಿ.ನಾವು ಏನೇ ಒಳ್ಳೆಯದನ್ನು ಮಾಡಿದರೂ ಅದಕ್ಕೆ ಅವರು ಅಡ್ಡಗಾಲು ಹಾಕುತ್ತಾರೆ – ಡಿಕೆಶಿ

– ಪ್ರಧಾನಿ ನರೇಂದ್ರ ಮೋದಿಯವರದೂ ಇದೇ ಅನುಭವವಂತೆ.ಅವರು ದೇಶದ ಹಿತಕ್ಕಾಗಿ ಯಾವುದೇ ಕೆಲಸ ಮಾಡಿದರೂ ವಿರೋಧ ಪಕ್ಷಗಳು ಅಪಪ್ರಚಾರ ಮಾಡುವ ಮೂಲಕ ಅಡ್ಡಗಾಲು ಹಾಕುತ್ತಿವೆಯಂತೆ!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಹೆಚ್ಚು ಹೊಣೆ. ಆತ್ಮೀಯ ಸಂಬಂಧಕ್ಕೆ ಧಕ್ಕೆ. ವಿರಸದ ಹಾದಿ ಹಿಡಿಯದಿರಿ. ಆರ್ಥಿಕ ಹಿಂಜರಿಕೆ.

ವೃಷಭ
ಪೂರೈಸಲಾಗದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ಅನ್ಯರಿಗೆ ಹಾನಿಯಾಗುವ ಕಾರ್ಯ ಎಸಗದಿರಿ. ಕೌಟುಂಬಿಕ ಸಮಸ್ಯೆ ಕಾಡುವುದು.

ಮಿಥುನ
ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ
ಹೊಸತನಕ್ಕೆ ಯತ್ನಿಸುವಿರಿ. ಅದರಲ್ಲಿ ಆಂಶಿಕ ಯಶ. ಮನಸ್ಸು ಉಲ್ಲಸಿತ ಗೊಳಿಸುವ ಪ್ರಸಂಗ ಉಂಟಾದೀತು. ಪ್ರೀತಿಯಲ್ಲಿ ಸಫಲತೆ.

ಸಿಂಹ
ಒಳಿತು, ಕೆಡಕು ಎರಡನ್ನೂ ಎದುರಿಸುವಿರಿ. ಉದ್ವಿಗ್ನ ಸ್ಥಿತಿ ಕಾಣುವಿರಿ. ಅದರ ಜತೆಗೇ ಪರಿಹಾರದ ನಿರಾಳತೆಯೂ. ಆರೋಗ್ಯ ಬಗ್ಗೆ ಕಾಳಜಿ ವಹಿಸಿ.

ಕನ್ಯಾ
ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ತುಲಾ
ಫಲಪ್ರದ ಬೆಳವಣಿಗೆ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ವೃಶ್ಚಿಕ
ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಭಾವುಕ ಸನ್ನಿವೇಶ ಎದುರಿಸುವಿರಿ.

ಧನು
ಹೊಣೆಗಾರಿಕೆ, ಒತ್ತಡ ಕಡಿಮೆ. ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ಅದರ ಪ್ರಾಕ್ಟಿಕಲ್ ಆಯಾಮ ಪರಿಶೀಲಿಸಿ, ನಿರ್ಧರಿಸಿ.

ಮಕರ
ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಕ್ಷುಲ್ಲಕ ವಿಷಯ ಮನಸ್ಸು ಕೆಡಿಸಬಹುದು. ಕೆಲವರ ಜತೆ ವಾಗ್ವಾದ ನಡೆಯಬಹುದು.

ಕುಂಭ
ವೃತ್ತಿಯಲ್ಲಿ ನಿಮ್ಮ ಕಠಿಣ ದುಡಿಮೆಗೆ ತೃಪ್ತಿಕರ ಫಲಿತಾಂಶ. ಆದರೆ ಕೆಲವು ವಿಷಯಗಳು ಮನಸ್ಸು ಕದಡುತ್ತವೆ. ನಿಮ್ಮ ಮಾತು ತಪ್ಪರ್ಥ ಬಿಂಬಿಸಬಹುದು.

ಮೀನ
ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ. ಮುಖ್ಯ ಕಾರ್ಯ ಅಪೂರ್ಣ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 4,9,2,6

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರಾಜ್ಯ ಸರ್ಕಾರ ಹುಡುಗಾಟಿಕೆ: ಬಿವೈವಿ

ಪ್ರಧಾನಿ ಒಪ್ಪಿಗೆ ನೀಡಿಲ್ಲ

ರಾಮನಗರ: ಬಿಡದಿ ಟೌನ್‌ಶಿಪ್‌ಗೆ ಪ್ರಧಾನಿ ಒಪ್ಪಿಗೆ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ಪ್ರಧಾನಿಗಳು ಒಪ್ಪಿಗೆ ನೀಡಿಲ್ಲ. ರಾಜ್ಯ ಸರ್ಕಾರ ಈ ವಿಷಯದಲ್ಲಿ ಹುಡುಗಾಟಿಕೆ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಬಿಡದಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ಹಲವಾರು ಹಳ್ಳಿಗಳಿಗೆ ಭೇಟಿ ನೀಡಿದ್ದೇವೆ. ರೈತರನ್ನು ಮಾತನಾಡಿಸಿದ್ದೇವೆ. ಇಲ್ಲಿನ ವಾಸ್ತವ ತಿಳಿಸಲು ಮುಂದಾಗಿದ್ದೇವೆ. ಹೊರತು ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು. ದೇಶಕ್ಕೆ ಅನ್ನ ನೀಡುವ ರೈತ ಎಲ್ಲೇ ಇರಲಿ ಅವರ ಪರವಾಗಿ ಬಿಜೆಪಿ ಇರಲಿದೆ. ಈ ಹಿಂದೆ ಬಿ ಎಸ್ ಯಡಿಯೂರಪ್ಪ ಅವರೂ ರೈತರ ಪರವಾಗಿದ್ದರು. ಆದರೆ ಈ ಸರ್ಕಾರ ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇಲ್ಲಿನ ರೈತರು ತೆಂಗು, ಅಡಿಕೆ, ರೇಷ್ಮೆ ಬೆಳೆಯುತ್ತಿದ್ದಾರೆ. ಇಂತಹ ಫಲವತ್ತಾದ ಭೂಮಿಯನ್ನು ರೈತರಿಂದ ಬಲವಂತವಾಗಿ ಕಸಿಯಲು ಸರ್ಕಾರ ಮುಂದಾಗಿರುವುದು ಸರಿಯಲ್ಲ ಎಂದರು.

ರಾತ್ರೋ ರಾತ್ರಿ ಗೂಂಡಗಳು ಮನೆಗಳಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಕೆಲವು ರೈತರು ಹೇಳಿದ್ದಾರೆ. ಆದರೆ ನಮ್ಮ ಪ್ರಾಣ ಕೊಡ್ತೇವೆ. ಜಮೀನು ಬಿಟ್ಟು ಕೊಡಲ್ಲ ಎಂದು ರೈತರು ಹೇಳಿದ್ದಾರೆ. ಅನ್ನಕೊಡುವ ರೈತರ ಪರವಾಗಿ ನಿಲ್ಲಬೇಕಾದ ಮುಖ್ಯಮಂತ್ರಿಗಳು ರಿಯಲ್ ಎಸ್ಟೇಟ್ ಪರವಾಗಿ ಇದ್ದಾರೆ. ಸರ್ಕಾರ ಯಾವುದೇ ಕಾರಣಕ್ಕೂ ರೈತರ ಜೊತೆ ಚೆಲ್ಲಾಟ ಮಾಡಬಾರದು ಎಂದರು.

ಡಿ.ಕೆ. ಶಿವಕುಮಾರ್ ಅವರೇ ರಿಯಲ್ ಎಸ್ಟೇಟ್ ಧಂಧೆ ಮಾಡಲು ಬೇಕಾದಷ್ಟು ಜಾಗ ಇದೆ. ಇಲ್ಲಿನ ಸಣ್ಣ ಹಿಡುವಳಿದಾರರು ಬದುಕಬೇಕು. ಹೈನುಗಾರಿಕೆ ಮಾಡಿದವರು, ರೇಷ್ಮೆ ಬೆಳೆದವರು ಬೀದಿಗೆ ಬಿದ್ದರೆ ಭಗವಂತ ನಿಮ್ಮನ್ನು ಕ್ಷಮಿಸಲ್ಲ. ಪ್ರಧಾನಿ ಟೌನ್‌ಶಿಪ್‌ಗೆ ಒಪ್ಪಿಗೆ ನೀಡಿದ್ದಾರೆ ಎಂದು ಹೇಳುವ ನಿಮಗೆ ನಾಚಿಕೆ ಆಗಬೇಕು. ಮೋದಿ ಅವರ ಹೆಸರನ್ನು ಇಲ್ಲಿ ಎಳೆದುತಂದ ಡಿಕೆಶಿ ಅವರಿಗೆ ನಾಚಿಕೆ ಆಗಬೇಕು. ಮೋದಿ ಅವರು ಎಂದೂ ರೈತ ವಿರೋಧಿಯಾಗಿ ನಡೆದುಕೊಂಡಿಲ್ಲ ಎಂದರು. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆ ತನ್ನಿ, ಕೆಲಸ ಕೊಡಿ. ಫಲವತ್ತಾದ ಜಮೀನು ರಾಜ್ಯದ ಯಾವುದೇ ಭಾಗದಲ್ಲೂ ಕಸಿಯಲು ಬಿಡಲ್ಲ ಎಂದರು. ಬಿಡದಿ ವಿಷಯದಲ್ಲಿ ಪೋಸ್ಟರ್ ಕ್ಯಾಂಪೇನ್ ಮಾಡ್ತ ಇದ್ದಾರೆ. ನಾವು ನಿಮ್ಮ ಶಾಸಕರಲ್ಲ. ಇದರಲ್ಲಿ ದಬ್ಬಾಳಿಕೆ ಮಾಡಬೇಡಿ. ಗೂಂಡಾಗಳು ಮಾಡಿದ ಹಾಗೆ ನಮ್ಮ ಹತ್ರ ಮಾಡಬೇಡಿ.

ರೈತರ ಪರವಾಗಿ ನಾವು ಆಡಳಿತ ಮತ್ತು ವಿರೋಧ ಪಕ್ಷವಾಗಿ ಧ್ವನಿ ಎತ್ತೇ ಎತ್ತುತ್ತೇವೆ. ಮುಖ್ಯಮಂತ್ರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳಲು ರೈತರ ಪರವಾಗಿ ನಿಲ್ಲಲಿ. ರೈತರ ಹೊಟ್ಟೆ ಮೇಲೆ ಹೊಡೆದರೆ, ಕಣ್ಣೀರು ತರಿಸಿದರೆ ಒಳ್ಳೆಯದಾಗಲ್ಲ ಎಂದು ತಿಳಿಸಿದರು.ವಿಧಾನಸಭೆಯ ವಿಪಕ್ಷ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಸಂಸದ ಡಾ. ಸಿ.ಎನ್. ಮಂಜುನಾಥ್, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ರಾಮನಗರ ಜಿಲ್ಲಾಧ್ಯಕ್ಷ ಆನಂದಸ್ವಾಮಿ ಹಾಗೂ ಇತರರು ಇದ್ದರು.



ರಾಜಕೀಯ ಬೇಡ

ಬಿಡದಿ ಟೌನ್‌ಶಿಪ್ ವಿಷಯದಲ್ಲಿ ಸರ್ಕಾರ ರಾಜಕೀಯ ಮಾಡುವುದು ಬೇಡ. ಬಿಜೆಪಿ ಸಹ ಹುಡುಗಾಟ ಮಾಡುವುದಿಲ್ಲ. ಕಳೆದ ಹಲವಾರು ದಿನಗಳಿಂದ ಬಿಡದಿ ಮತ್ತು ಸುತ್ತಮುತ್ತಲಿನ ರೈತರು ಟೌನ್‌ಶಿಪ್ ವಿರೋಧಿಸಿ ನಿರಂತರ ಹೋರಾಟ ಮಾಡುತ್ತಾ ಇದ್ದಾರೆ. ಆದರೆ ಸರ್ಕಾರ ಮತ್ತೊಂದು ಕಡೆ ಶೇ.80 ರಷ್ಟು ರೈತರು ಭೂಸ್ವಾಧೀನಕ್ಕೆ ಒಪ್ಪಿದ್ದಾರೆ ಎನ್ನುತ್ತಿದೆ. ಇಲ್ಲಿನ ಭೂಮಿ ಬರಡಾಗಿದೆ ಎಂದು ಹೇಳುತ್ತಿದೆ ಎಂದರು.

ಇಬ್ಬಗೆ ನೀತಿ ಸರಿಯೇ: ಆರ್.ಅಶೋಕ್

ಡಿಕೆಶಿಯವರೇ, ಕನಕಪುರದಲ್ಲಿ ಚಿನ್ನದ ಬೆಲೆ ಕೊಡಿಸುತ್ತೇನೆ. ಜಮೀನು ಮಾರಬೇಡಿ ಎನ್ನುತ್ತೀರಿ. ಬಿಡದಿಯಲ್ಲಿ ಬಲವಂತವಾಗಿ ಮಾರಾಟ ಮಾಡಿಸುತ್ತೀದ್ದೀರಿ. ಈ ಇಬ್ಬಗೆ ನೀತಿ ಸರಿಯೇ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ವಿಧಾನಸಭಾ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದರು. ರೈತರ ಚಳವಳಿಯಲ್ಲಿ ಭಾಗವಹಿಸಿ ಮಾತನಾಡಿ, ಉಪನಗರ ಯೋಜನೆಯಿಂದ ಹಸಿರು ವಲಯ ಮತ್ತು ಹೈನೋದ್ಯಮ ನಾಶವಾಗಲಿದೆ. ಲಕ್ಷಾಂತರ ಹಸುಗಳು ಕಸಾಯಿಖಾನೆಗೆ ಹೋಗಬೇಕಾ? ಒಕ್ಕಲಿದ್ದವರು ಎಲ್ಲಿ ಹೋಗಬೇಕು?. ರೈತರು ತಲೆಮಾರಿನಿಂದ ಕಾಪಾಡಿಕೊಂಡು ಬಂದ ಆಸ್ತಿಯನ್ನು ಹೊರ ರಾಜ್ಯಗಳಿಂದ ಬಂದವರಿಗೆ ಸೈಟು ಮತ್ತು ಜಮೀನು ಕೊಟ್ಟು ಹಣ ಮಾಡಿಕೊಳ್ಳಲು ಯೋಜನೆ ಮಾಡುತ್ತೀರಾ? ಎಂದು ಪ್ರಶ್ನಿಸಿದರು. ಈ ಯೋಜನೆಗೆ ಬಲವಂತವಾಗಿ ಭೂ ಸ್ವಾಧೀನ ಮಾಡಲು ಹೊರಟಿರುವ ರಾಜ್ಯ ಸರಕಾರದ ವಿರುದ್ಧ ರೈತರು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೆ, ಮತ್ತೊಂದೆಡೆ ಡಿ.ಕೆ. ಶಿವಕುಮಾರ್ ರವರು ಶೇ.80ರಷ್ಟು ರೈತರು ಸ್ವಾಧೀನದ ಪರವಾಗಿದ್ದಾರೆ. ಭೂ ಸ್ವಾಧೀನಕ್ಕೆ ಒಳಪಡುವ ಜಾಗ ಬರಡು ಭೂಮಿ, ಯೋಜನೆಗೆ ಪ್ರಧಾನಿ ಮೋದಿರವರು ಕೂಡ ಒಪ್ಪಿಗೆ ನೀಡಿದ್ದಾರೆಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಸಂಘದ ಶಾಖೆಗೆ ಬಂದಾಗಲೇ ಅದರ ಅನುಭೂತಿ: ಸಿ.ಟಿ.ರವಿ

ಕಲಬುರಗಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುವ ಕೆಲಸದ ಜತೆಗೆ ಐಕ್ಯತೆ ಭಾವ, ವ್ಯಕ್ತಿಗಳಿಗೆ ದೇಶಭಕ್ತಿ ಹಾಗೂ ಸಮಾಜಮುಖಿಯಾಗಿ ಬೆಳೆಸುವಂತಹ ಕೆಲಸ ಮಾಡುತ್ತಿದ್ದು, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಪೂರ್ವ ಗೃಹ ಪೀಡಿತ ಚಿಂತನೆಗಳಿಂದ ಹೊರ ಬಂದು ಸಂಘದ ಶಾಖೆಗೆ ಬಂದಾಗ ಮಾತ್ರ ಸಂಘದ ಅನುಭೂತಿಯಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ,ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಜಿಲ್ಲೆಯ ಜೇವರ್ಗಿ ಭಾಗದಲ್ಲಿ ಹಾದು ಹೋಗುವ ಕೇಂದ್ರ ಸರ್ಕಾರದ ಹೆಮ್ಮೆಯ ಭಾರತ್ ಮಾಲಾ ರಸ್ತೆ ಯೋಜನೆ ರಸ್ತೆ ಕಾಮಗಾರಿ ವೀಕ್ಷಣೆ ಬಳಿಕ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದರು. ಆರೆಸ್ಸೆಸ್ ಸರಸಂಘಚಾಲಕರಿಗೆ ಪತ್ರ ಬರೆದು ಪ್ರಶ್ನೆ ಕೇಳಿರುವ ಪ್ರಿಯಾಂಕ್ ಖರ್ಗೆಗೆ ಸಂಘ ಏನೆಂಬುದು ಇವರಿಗೆ ಅರ್ಥವಾಗಬೇಕಿದ್ದರೆ, ಸಂಘದ ಶಾಖೆಗೆ ಬರಲಿ.ಆಗ ಅದರ ಅನುಭೂತಿ ಸಿಗಲಿದೆ. ಸಂಘದ ಶಾಖೆಗೆ ಪ್ರತಿಯೊಬ್ಬರಿಗೂ ಮುಕ್ತ ಆಹ್ವಾನವಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಸಿಕ್ಕಿದ್ದು 1947ರಲ್ಲಿ, ಸಂಘ ಆರಂಭವಾಗಿದ್ದು 1925ರಲ್ಲಿ . 1950ರಲ್ಲಿ ಸರ್ಕಾರ ಬ್ಯಾನ್ ವಾಪಸ್ ತೆಗಿದಿದೆ. ಆಗಲೇ ನೋಂದಣಿ ಮಾಡು ಅಂತ ಕೇಳಲಿಲ್ಲ. ಆಗ ಕೇಳಿದ್ದು ಸಂಘದ ಕಾರ್ಯ ಪದ್ಧತಿ ಮತ್ತು ಉದ್ದೇಶ ಇವುಗಳನ್ನು ಲಿಖಿತವಾಗಿ ತಿಳಿಸಿ ಅಂತ ಕೇಳಲಾಗಿತ್ತು.ಆಗ ಸಂಘ ತಿಳಿಸಿದೆ, ಉದ್ದೇಶ ತಾಯಿ ಭಾರತ ಮಾತೇಯನ್ನು ವಿಶ್ವಗುರು ಮಾಡುವುದು.

ಹಿಂದುಗಳನ್ನು ಸಂಘಟಿಸುವುದು, ವ್ಯಕ್ತಿಗೆ ಸಂಸ್ಕಾರ ಕೊಟ್ಟು ವ್ಯಕ್ತಿ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯ ಪದ್ಧತಿ ಲಿಖಿತವಾಗಿ ನೀಡಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಂಸದ ಡಾ.ಉಮೇಶ್ ಜಾಧವ್ ಮಾತನಾಡಿದರು.ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ,ಎಂಎಲ್ಸಿ ಶಶೀಲ್ ನಮೋಶಿ, ಒಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ,ಶಿವರಾಜ್ ಪಾಟೀಲ್ ರದ್ದೇವಾಡಗಿ, ಅಮರನಾಥ ಪಾಟೀಲ್, ಶರಣಪ್ಪ ತಳವಾರ, ನಿತೀನ್ ಗುತ್ತೇದಾರ್,ಶೋಭಾ ಬಾಣಿ, ಸಂಜಯ್ ಮಿಸ್ಕಿನ್,ಮಂಡಲ ಅಧ್ಯಕ್ಷ ದೇವೇಂದ್ರ ಮುತ್ಕೋಡ್, ಮಲ್ಲಿಕಾರ್ಜುನ ಕುಸ್ತಿ, ರೇವಣಸಿದ್ದಪ್ಪ ಸಂಕಾಲಿ, ಸುರೇಶ್ ಪಾಟೀಲ್ ನೇದಲಗಿ ಉಪಸ್ಥಿತರಿದ್ದರು.



ರಾಷ್ಟ್ರವಾದಿ ಸಂಘಟನೆ ಕೋಮುವಾದಿ ಅಂತ ಹೇಳೋದು ಒಂದು ಅಸಂಬದ್ಧ. ದೇಶವನ್ನೇ ವಿಭಜನೆ ಸಿದ್ಧಾಂತ ಅನುಸರಿಸುವಂತಹ ಮುಸ್ಲಿಂ ಲೀಗ್ ಜತೆಗೆ ಆಡಳಿತ ನಡೆಸುವವರು ರಾಷ್ಟ್ರವಾದಿ ಸಂಘಟನೆ ಮೇಲೆ ಆಪಾದನೆ ಮಾಡ್ತಾ ಇದಾರೆ. ದೇಶ ಒಡೆಯುವವರು ಸೆಕ್ಯೂಲರ್, ಅಖಂಡ ಭಾರತ ಬಗ್ಗೆ ಮಾತನಾಡುವವರು ಕಮ್ಯೂನಲ್. ಇವರ ಬುದ್ಧಿಮತ್ತೆಗೆ ಏನಾಗಿದೆ ಎಂಬುದು ಗೊತ್ತಾಗುತ್ತಿಲ್ಲ.

■ **ಸಿ.ಟಿ.ರವಿ, ಎಂಎಲ್ಸಿ**

ಭಾರತದ ಉನ್ನತಿ ತಡೆಗೆ ಹುನ್ನಾರ

ಪುಟ ೧➡ **ಸಂಚಿನ ಹಿಂದಿವೆ ದೊಡ್ಡ ಕೈಗಳು:** ಸುಳ್ಳು ನಿರೂಪಣೆ ಮಾಡುತ್ತಿರುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರು ಹಣ ಮತ್ತು ಸಂಘಟನಾ ಸಾಮರ್ಥ್ಯದಂತಹ ಬೆಂಬಲವನ್ನು ಕೂಡ ಹೊಂದಿದ್ದಾರೆ. ಆದರೆ ಇದೆಲ್ಲದರ ಹೊರತಾಗಿಯೂ, ಜನರು ಇದಕ್ಕೆ ಬಲಿಯಾಗದೆ ತಮ್ಮ ಮೌಲ್ಯಗಳ ಮೇಲೆ ದೃಢವಾಗಿ ನಿಲ್ಲಬೇಕು. ಭಾರತದ ಪ್ರಗತಿಯು ತನ್ನದೇ ಆದ ಕಲ್ಯಾಣಕ್ಕಾಗಿ ಮಾತ್ರವಲ್ಲದೆ ಇಡೀ ಪ್ರಪಂಚದ ಕಲ್ಯಾಣಕ್ಕಾಗಿ ಅತ್ಯಗತ್ಯ. ಜಗತ್ತಿನ ಒಳಿತಿಗೆ ಬಲಿಷ್ಠ ಭಾರತದ ಅಗತ್ಯವಿದೆ ಎಂದು ಭಾಗವತ್ ಹೇಳಿದರು.

ಹಲ್ದಿಘಾಟಿ ಮತ್ತು ಮಹಾರಾಣಾ ಪ್ರತಾಪ್ ಅವರ ಐತಿಹಾಸಿಕ ಯುದ್ಧದ ಪರಂಪರೆಯನ್ನು ನೆನಪಿಸಿಕೊಂಡ ಮೋಹನ್ ಭಾಗವತ್, ನಮ್ಮ ಇತಿಹಾಸ ಗುಲಾಮಗಿರಿಯದ್ದಲ್ಲ. ಇದು ನಮ್ಮನ್ನು ಗುಲಾಮರನ್ನಾಗಿ ಮಾಡಲು ಪ್ರಯತ್ನಿಸಿದವರ ವಿರುದ್ಧದ ಹೋರಾಟದ ಇತಿಹಾಸ. ಮಹಾರಾಣಾ ಪ್ರತಾಪ್ ಅವರ ಹೋರಾಟವು ಧರ್ಮ, ಸಂಸ್ಕೃತಿ ಮತ್ತು ಸ್ವಾಭಿಮಾನವನ್ನು ರಕ್ಷಿಸುವುದಾಗಿತ್ತು. ಮಹಾರಾಣಾ ಪ್ರತಾಪ್ ಯಾವುದೇ ವೈಯಕ್ತಿಕ ಲಾಭಕ್ಕಾಗಿ ಹೋರಾಡಲಿಲ್ಲ.

ಸಮಾಜ, ಸಂಸ್ಕೃತಿ ಮತ್ತು ತನ್ನ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಅವರು ಇಂತಹ ಆಕ್ರಮಣಗಳ ವಿರುದ್ಧ ಶೌರ್ಯ–ಪರಾಕ್ರಮದಿಂದ ಹೋರಾಡಿದ್ದರು ಎಂದು ನೆನಪಿಸಿದರು.

ಚಿನ್ನಯ್ಯ ಹೇಳಿದವರನ್ನೂ ಎಸ್‌ಐಟಿ ತನಿಖೆ ನಡೆಸಲಿ

ಪುಟ ೧➡ ಬದಲಾಗಿ ಆತನಿಗೆ ನಿರ್ದೇಶನ ನೀಡಲು ಷಡ್ಯಂತ್ರ ನಡೆಸಿದವರು ಹಾಕಿದ್ದಾಗಿದೆ. ಆತ ಶವ ಹೂತಿದ್ದೇನೆನ್ನುವ ಜಾಗಗಳನ್ನು ತೋರಿಸುವಾಗ ಇಯರ್‌ಫೋನ್ ಹಾಕಿಕೊಂಡಿದ್ದ. ಆ ಇಯರ್ ಫೋನ್ ಮುಚ್ಚಿಕೊಳ್ಳಲು ಮುಖಕ್ಕೆ ಮಾಸ್ಕ್ ಹಾಕಿಕೊಂಡಿದ್ದ. ಆವನಿಗೆ ಬೇರೆ ಯಾರೋ ವ್ಯಕ್ತಿಗಳು ಹೊರಗಿನಿಂದ ನಿರ್ದೇಶನ ನೀಡುತ್ತಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಪ್ರಕರಣದಲ್ಲಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಜೈಲಿಗೆ ಹೋದರೆ ಚಿನ್ನಯ್ಯನಿಗೆ 50 ಲಕ್ಷ ರೂ. ಮತ್ತು ಮನೆ ಕಟ್ಟಿಕೊಡುವ ಮಾತುಕತೆಯಾಗಿತ್ತು ಎಂಬುದನ್ನು ರಿಟ್ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಚಿನ್ನಯ್ಯನಿಗೆ ಬ್ರೈನ್ ಮ್ಯಾಪಿಂಗ್ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದರು.

ಉಪ ಮುಖ್ಯಮಂತ್ರಿಯಾಗಿದ್ದ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಯಲ್ಲಿ ಇದೊಂದು ಷಡ್ಯಂತ್ರ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಉಸ್ತುವಾರಿ ಸಚಿವರಾಗಿದ್ದ ದಿನೇಶ್ ಗುಂಡೂರಾವ್ ಅವರು ಎಡಪಂಥೀಯರ ಒತ್ತಡದಿಂದ ಎಸ್‌ಐಟಿ ರಚನೆ ಮಾಡಲಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಎಸ್‌ಐಟಿ ರಚನೆಗೂ ಮೊದಲೇ ಪ್ರಣಬ್ ಮೊಹಂತಿ ಅವರೇ ಎಸ್‌ಐಟಿ ಮುಖ್ಯಸ್ಥರಾಗಿರಬೇಕೆಂದು ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಚಿನ್ನಯ್ಯ ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಒಪ್ಪಿಕೊಂಡಿದ್ದ. ದ.ಕ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬ್ರೈನ್ ಮ್ಯಾಪಿಂಗ್‌ಗೆ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾಗ್ಯೂ, ಸರ್ಕಾರ ಎಸ್‌ಐಟಿ ರಚನೆ ಮಾಡಿತ್ತು. ಆದರೆ, ಈವರೆಗೆ ಎಸ್‌ಐಟಿ ಮಧ್ಯಂತರ ವರದಿ ಕೊಟ್ಟಿಲ್ಲ. ಹೀಗಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರವು ಈ ತನಿಖೆಯ ಮಧ್ಯಂತರ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಹೇಳಿದರು.

ಅಲ್ಲಲ್ಲಿ ಜನಾಗ್ರಹ ಸಭೆಗಳ ಆಯೋಜನೆ

ಪುಟ ೧➡ ಆದಷ್ಟು ಬೇಗ ಈ ಪ್ರಕರಣದಲ್ಲಿ ನ್ಯಾಯ ಹೊರತರಬೇಕು. ಹೊಸ ಗೃಹ ಸಚಿವರು ಕೂಡ ಈ ಪ್ರಕರಣದಲ್ಲಿ ನೂರಾರು ಕೋಟಿ ಆಸ್ತಿಕರಿಗೆ ಪರಿಹಾರ ಕೊಡಿಸುತ್ತಾರೆಂಬ ವಿಶ್ವಾಸವಿದೆ. ಒಂದು ವೇಳೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ಕೇಂದ್ರ ಸರ್ಕಾರಕ್ಕೆ ಮಧ್ಯ ಪ್ರವೇಶಿಸಲು ಮನವಿ ಮಾಡುತ್ತೇವೆ. ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸುತ್ತೇವೆ ಎಂದು ತಿಳಿಸಿದರು.



ನಟ ಪ್ರಕಾಶ್ ರಾಜ್ ಅವರು ತಾವು ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರಲ್ಲಿ ಮಾತುಕತೆ ನಡೆಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಈಗ ಎಸ್‌ಐಟಿ ವಿಚಾರಣೆಗೂ ಒಪ್ಪಿಕೊಂಡು ಬರಲಿ, ಆಗ ಅವರ ಕುರಿತಾಗಿರುವ ವಿಶ್ವಾಸ ಹೆಚ್ಚು ಬೆಳೆಯುತ್ತದೆ.

■ **ಚಕ್ರವರ್ತಿ ಸೂಲಿಬೆಲೆ,** ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ

ಪರಿಷತ್ ಏಳು ಸ್ಥಾನಕ್ಕಿಂದು ಚುನಾವಣೆ

ಪುಟ ೧➡ ಐದನೇ ಅಭ್ಯರ್ಥಿ ಗೆಲುವಿಗೆ ಅಡ್ಡಮತದಾನ ಆಗಲೇಬೇಕಿರುವುದರಿಂದ ಮೂರೂ ಪಕ್ಷಗಳು ತಮ್ಮ– ತಮ್ಮ ಶಾಸಕರಿಂದ ಅಡ್ಡಮತದಾನ ಆಗದಂತೆ ತಡೆಯಲು ಎಲ್ಲಾ ಪ್ರಯತ್ನಗಳನ್ನು ನಡೆಸಿವೆ. ಅಡ್ಡಮತದಾನ ತಪ್ಪಿಸಲು ಕಾಂಗ್ರೆಸ್ ಮಂಗಳವಾರ ಸಂಜೆಯಿಂದಲೇ ಶಾಸಕರನ್ನು ವಂಡರ್‌ಲಾ ರೆಸಾರ್ಟ್‌ನಲ್ಲಿಟ್ಟಿದೆ. ಸಿಎಂ ಆದ ನಂತರ ಡಿಕೆಶಿಗೆ ಇದು ಮೊದಲ ಚುನಾವಣೆಯಾಗಿದ್ದು, ಆರಂಭಿಕ ಯಶಸ್ಸು ಪಡೆಯುವ ಮೂಲಕ ತಮ್ಮ ಇಮೇಜ್ ವೃದ್ಧಿಸಿಕೊಳ್ಳಲು ಈ ಚುನಾವಣೆ ಅವಕಾಶವಾಗಿರುವುದರಿಂದ 5ನೇ ಅಭ್ಯರ್ಥಿ ಗೆಲ್ಲಿಸಲು ಪೂರ್ಣ ಪ್ರಮಾಣದ ತಯಾರಿ ಮಾಡಿಕೊಂಡಿದ್ದಾರೆ.

ರಾಂಚಿ ಆರೆಸ್ಸೆಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ದಾಳಿ

ಪುಟ ೧➡ ಸ್ಥಳದಿಂದ ಎರಡು ಗಾಜಿನ ಬಾಟಲಿಗಳ ಭಾಗಗಳನ್ನು ವಶಪಡಿಸಿಕೊಳ್ಳಲಾಗಿದ್ದು, ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಂಡವನ್ನು ಕರೆಸಲಾಗಿದೆ ಎಂದು ರಾಂಚಿ ಎಸ್‌ಪಿ ರಾಕೇಶ್ ರಂಜನ್ ತಿಳಿಸಿದ್ದಾರೆ.

ದೊಡ್ಡ ಪಿತೂರಿಯ ಭಾಗ: ಕೇಂದ್ರ ಸಚಿವ ಸಂಜಯ್ ಸೇಠ್, ಈ ಘಟನೆಯನ್ನು ರಾಜ್ಯದ ರಾಜಧಾನಿಯಲ್ಲಿ ಶಾಂತಿ ಕದಡುವ ಗುರಿಯನ್ನು ಹೊಂದಿರುವ ಗಂಭೀರ ಪಿತೂರಿ ಎಂದು ಕರೆದಿದ್ದಾರೆ. ಈ ಘಟನೆಯು ದೊಡ್ಡ ಪಿತೂರಿಯ ಭಾಗವೆಂದು ತೋರುತ್ತಿದೆ ಎಂದು ಸೇಠ ಅವರ ಹೇಳಿಕೆಯನ್ನು ಪುನರುಚ್ಚರಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ, ಇದರ ಹಿಂದೆ ಇರುವವರನ್ನು ಗುರುತಿಸಲು ಸಮಗ್ರ ತನಿಖೆಗೆ ಆಗ್ರಹಿಸಿದ್ದಾರೆ.

ಎಚ್‌ಡಿಕೆ ಕುಟುಂಬದ ವಿರುದ್ಧ ಪೋಸ್ಟರ್ ಪ್ರದರ್ಶನ

ರಾಮನಗರ: ತಾಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡಲು ಬುಧವಾರ ಭೈರಮಂಗಲಕ್ಕೆ ಭೇಟಿ ನೀಡಿದ ಬಿಜೆಪಿ ನಾಯಕರು ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕುಟುಂಬದ ವಿರುದ್ಧ ಅಪರಿಚಿತರು ಯೋಜನಾ ಪ್ರದೇಶದ ಕೆಲವೆಡೆ ಅವಹೇಳನಕಾರಿ ಪೋಸ್ಟರ್‌ಗಳನ್ನು ಅಂಟಿಸಿದ್ದಾರೆ.

ಯುಬಿಟಿಗೆ ಬಂಡಾಯ ಬಿಸಿ

ಪುಟ ೧➡ ಈ ಭೇಟಿ ಗುರುವಾರವೇ ನಡೆಯಬಹುದು ಎನ್ನಲಾಗಿದೆ.

ಇಂದು ಸಭೆ: ಈ ನಡುವೆ ಉದ್ಧವ್ ಠಾಕ್ರೆ ನಿಷ್ಠ ರಾಜಸಭಾ ಸದಸ್ಯ ಸಂಜಯ್ ರಾವತ್, ಆಡಳಿತಾರೂಢ ಶಿವಸೇನೆಗೆ ಸೇರುವ ಕುರಿತು ಪಕ್ಷಕ್ಕೆ ಯಾರಿಂದಲೂ ಮಾಹಿತಿ ಬಂದಿಲ್ಲ ಎಂದು ಹೇಳಿದ್ದಾರೆ. ಶಿವಸೇನೆ ಯುಬಿಟಿ ಸಂಸದರೆಲ್ಲರೂ ಗುರುವಾರ ಬೆಳಗ್ಗೆ 11 ಗಂಟೆಗೆ ನಡೆಯುವ ಸಂಸದೀಯ ಪಕ್ಷದ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಮೂರು ಸಾಲಿನ ವಿಪ್ ಜಾರಿಗೊಳಿಸಲಾಗಿದೆ. ಗುರುವಾರದ ಸಭೆಯ ನಂತರ ಎಲ್ಲವೂ ಸ್ಪಷ್ಟವಾಗಲಿದೆ ಎಂದು ರಾವತ್ ಸುದ್ದಿಗಾರರಿಗೆ ತಿಳಿಸಿದರು. ಅವರು ಪಕ್ಷದ ಲೋಕಸಭಾ ಸದಸ್ಯರಾದ ಅರವಿಂದ್ ಸಾವಂತ್ ಮತ್ತು ಅನಿಲ್ ದೇಸಾಯಿ ಅವರೊಂದಿಗೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾದರು.

ರಾವತ್ ಆಕ್ರೋಶ: ಶಿಂಧೆ ಶಿಬಿರದ ಮೂಲಗಳ ಪ್ರಕಾರ, ಬಂಡಾಯ ಸಂಸದರ ವಿರುದ್ಧ ಯುಬಿಟಿ ನಾಯಕರು ತೀವ್ರ ದಾಳಿ ನಡೆಸುವುದರಿಂದ ಅಸಮಾಧಾನ ಇನ್ನಷ್ಟು ಹೆಚ್ಚಾಗಿದೆ. ಸ್ಪೀಕರ್ ಭೇಟಿಗೂ ಮುನ್ನ ನಡೆದ ಸುದ್ದಿಗೋಷ್ಠಿಯಲ್ಲಿ ರಾವತ್ ಬಂಡಾಯ ಸಂಸದರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರು ಅವಾಚ್ಯ ಪದಗಳನ್ನು ಬಳಸಿದ ಪ್ರಸಂಗ ಕೂಡ ನಡೆದಿದೆ. ಸುದ್ದಿಗೋಷ್ಠಿಯಲ್ಲಿ ರಾವತ್ ಅವರೊಂದಿಗೆ ಅರವಿಂದ್ ಸಾವಂತ್, ಅನಿಲ್ ದೇಸಾಯಿ ಹಾಗೂ ಲೋಕಸಭಾ ಸದಸ್ಯ ರಾಜಾಭಾವು ವಾಜೆ ಮಾತ್ರ ಉಪಸ್ಥಿತರಿದ್ದರು. ಇದರಿಂದ ಪಕ್ಷ ಎದುರಿಸುತ್ತಿರುವ ಸಂಕಷ್ಟ ಮತ್ತಷ್ಟು ಸ್ಪಷ್ಟವಾಗಿದೆ.

ಆರು ಮಂದಿ ಒಟ್ಟಿಗೆ ಹೋದರೆ ಮಾತ್ರ ರಕ್ಷಣೆ: ಲೋಕಸಭೆಯಲ್ಲಿ ಶಿವಸೇನೆ ಯುಬಿಟಿಗೆ ಒಟ್ಟು 9 ಸಂಸದರು ಇದ್ದಾರೆ. ಪಕ್ಷಾಂತರ ವಿರೋಧಿ ಕಾನೂನಿನ ಅಡಿಯಲ್ಲಿ ಅನರ್ಹತೆಯಿಂದ ತಪ್ಪಿಸಿಕೊಳ್ಳಬೇಕಾದರೆ ಕನಿಷ್ಠ 6 ಮಂದಿ ಸಂಸದರು ಒಟ್ಟಿಗೇ ಬದಲಾಗಬೇಕಾಗುತ್ತದೆ. 2022ರಲ್ಲಿ ಅವಿಭಜಿತ ಶಿವಸೇನೆಯಲ್ಲಿ ನಡೆದ ದೊಡ್ಡ ವಿಭಜನೆಗೆ ಏಕನಾಥ ಶಿಂಧೆ ಪ್ರಮುಖ ಕಾರಣರಾಗಿದ್ದರು. ಆ ಬಂಡಾಯದಿಂದ ಮಹಾರಾಷ್ಟ್ರದ ಮಹಾ ವಿಕಾಸ್ ಅಘಾಡಿ ಸರಕಾರ ಪತನಗೊಂಡಿತ್ತು.

ಯಾಕೆ 6 ಸಂಖ್ಯೆಗೆ ಮಹತ್ವ?

ಶಿವಸೇನೆ ಯುಬಿಟಿಗೆ ಲೋಕಸಭೆಯಲ್ಲಿ 9 ಸಂಸದರು ಇದ್ದಾರೆ. ಪಕ್ಷಾಂತರ ವಿರೋಧಿ ಕಾನೂನಿನ ಪ್ರಕಾರ, ಅನರ್ಹತೆಯಿಂದ ತಪ್ಪಿಸಿಕೊಳ್ಳಲು ಕನಿಷ್ಠ ಎರಡು ಮೂರನೇ ಭಾಗದ ಬೆಂಬಲ ಬೇಕಾಗುತ್ತದೆ. ಈ ಲೆಕ್ಕದಲ್ಲಿ 6 ಸಂಸದರು ಒಟ್ಟಾಗಿ ನಿಲುವು ಬದಲಿಸಿದರೆ ಮಾತ್ರ ಬಂಡಾಯ ಗುಂಪು ಕಾನೂನು ರಕ್ಷಣೆಯ ವಾದ ಮಾಡಬಹುದು. ಆದರೆ ಯುಬಿಟಿ ನಾಯಕರು, ಮೂಲ ಪಕ್ಷವೇ ವಿಲೀನಗೊಳ್ಳಬೇಕೇ ಹೊರತು ಸಂಸದರ ಗುಂಪು ಮಾತ್ರ ಬೇರೆ ಪಕ್ಷಕ್ಕೆ ಸೇರುವುದು ಮಾನ್ಯವಲ್ಲ ಎಂದು ವಾದಿಸುತ್ತಿದ್ದಾರೆ.

ನಾವಿಕರ ಸುರಕ್ಷತೆಗೆ ಪಣ

ಪುಟ ೧➡ ಈ ಒಪ್ಪಂದದ ಅನುಷ್ಠಾನದಲ್ಲಿ ಅವರ ರಕ್ಷಣೆಗೆ ಆದ್ಯತೆ ಸಿಗುತ್ತದೆ ಎಂದು ನಂಬಿದ್ದೇನೆ ಎಂದರು. ಜಿ7 ಶೃಂಗ ಸಭೆಗೆ ಭಾರತವನ್ನು ಅತಿಥಿ ದೇಶವಾಗಿ ಆಹ್ವಾನಿಸಲಾಗಿದ್ದರಿಂದ ಪ್ರಧಾನಿ ಮೋದಿ ಫ್ರಾನ್ಸ್‌ಗೆ ಪ್ರಯಾಣ ಬೆಳೆಸಿದ್ದಾರೆ. ಜಿ7 ಒಕ್ಕೂಟವು ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್, ಅಮೆರಿಕ ಸೇರಿದಂತೆ ವಿಶ್ವದ ಮುಂದುವರಿದ ಆರ್ಥಿಕತೆಗಳನ್ನು ಒಳಗೊಂಡಿದೆ. ಯುರೋಪಿಯನ್ ಯೂನಿಯನ್ ಕೂಡ ಇದರ ಸದಸ್ಯ ರಾಷ್ಟ್ರವಾಗಿದೆ.

ಮೋದಿ ಭೇಟಿ ಅದ್ಭುತ ಎಂದ ಟ್ರಂಪ್

ಪುಟ ೧➡ ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ. ಆದರೆ ಅವರು ತುಂಬಾ ಕಠಿಣ ವ್ಯಕ್ತಿ ಮತ್ತು ಕಠಿಣ ಸಮಾಲೋಚಕ. ಅವರು ಭಾರತೀಯರನ್ನು ಪ್ರೀತಿಸುತ್ತಾರೆ, ಜತೆಗೆ ಅಮೆರಿಕವನ್ನೂ ಪ್ರೀತಿಸುತ್ತಾರೆ ಎಂದು ಟ್ರಂಪ್ ಹೇಳಿದರು. ಪಶ್ಚಿಮ ಏಷ್ಯಾದಲ್ಲಿ ನವದೆಹಲಿ ಪಾತ್ರದ ಕುರಿತು ಕೇಳಿದ ಪ್ರಶ್ನೆಗೆ, ಪ್ರಧಾನಿ ಮೋದಿ ನಾಯಕರಾಗಿರುವವರೆಗೆ ಭಾರತವು ಪ್ರತಿಯೊಂದರಲ್ಲೂ ದೊಡ್ಡ ಪಾತ್ರ ವಹಿಸುತ್ತದೆ ಎಂದು ನಾನು ಭಾವಿಸುತ್ತೇನೆ ಎಂದರು. ದ್ವಿಪಕ್ಷೀಯ ಸಂಬಂಧಗಳಲ್ಲಾದ ಬಿಕ್ಕಟ್ಟಿನ ಕುರಿತು ಉತ್ತರಿಸಿದ ಅವರು, ನಾನು ಶ್ವೇತಭವನದಲ್ಲಿ ಇರುವವರೆಗೂ ಭಾರತಕ್ಕೆ ಅಮೆರಿಕ ರೂಪದಲ್ಲಿ ಒಬ್ಬ ಉತ್ತಮ ಸ್ನೇಹಿತ ಇರುತ್ತಾನೆ ಎಂದು ಭರವಸೆ ನೀಡಿದರು.

ಎಸ್‌ಐಆರ್ ದ್ವಂದ್ವ ನಿಲುವು

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ರಾಜ್ಯ ಸರ್ಕಾರವೇ ಅಧಿಕಾರಿಗಳನ್ನು ಎತ್ತಿ ಕಟ್ಟುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರವೇ ಎಸ್‌ಐಆರ್ ವಿಚಾರದಲ್ಲಿ ದ್ವಂದ್ವ ನಿಲುವು ತೋರುತ್ತಿದೆ. ಅಧಿಕಾರಿಗಳನ್ನು ರಾಜ್ಯ ಸರ್ಕಾರವೇ ಎತ್ತಿ ಕಟ್ಟುತ್ತಿದೆ. ಬೂತ್ ಮಟ್ಟದ ಅಧಿಕಾರಿ(ಬಿಎಲ್‌ಒ)ಗಳು ಪ್ರತಿಭಟನೆ ಮಾಡುತ್ತಾರಂತೆ. ಇದಕ್ಕೆ ರಾಜ್ಯ ಸರ್ಕಾರವೇ ಕುಮ್ಮಕ್ಕು ಕೊಡುತ್ತಿದೆ ಎಂದು ಹೇಳಿದರು.

ವಾಸ್ತವ ಸತ್ಯವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರಿಯಾಂಕ್ ಖರ್ಗೆ ಅವರನ್ನು ಕೇಳುತ್ತೇವೆ. ನಿಮ್ಮ ಕಾಂಗ್ರೆಸ್ ಮಹಾನ್ ನಾಯಕ ರಾಹುಲ್ ಗಾಂಧಿ ದ್ವಿಪೌರತ್ವ ಪಡೆದಿದ್ದಾರೆ. ಇಲ್ಲವೆಂದು ಬಹಿರಂಗವಾಗಿ ಹೇಳಲಿ ನೋಡೋಣ. ರಾಹುಲ್ ಗಾಂಧಿ ಇನ್ನೊಂದು ದೇಶದ ಪೌರತ್ವ ಇಟ್ಟುಕೊಂಡು ಅಕ್ರಮವಾಗಿ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸತ್ಯ ಹೇಳುವ ಕೆಲಸ ಕಾಂಗ್ರೆಸ್ ಮಾಡಲಿ ಎಂದು ಸವಾಲು ಹಾಕಿದರು. ಸಾಂವಿಧಾನಿಕ ಸಂಸ್ಥೆ ವಿರುದ್ಧ ಅಧಿಕಾರಿಗಳನ್ನು, ಜನರನ್ನು ಎತ್ತಿ ಕಟ್ಟುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ ಎಂದು ಕಿಡಿಕಾರಿದರು.

ಮಾವು ಬೆಲೆ ಕುಸಿತ: ಕೇಂದ್ರ ಕೃಷಿ ಸಚಿವರಿಗೆ ಎಚ್‌ಡಿಕೆ ಪತ್ರ

ಬೆಂಗಳೂರು: ಬೆಲೆ ಕುಸಿತದಿಂದ ಕಂಗೆಟ್ಟಿರುವ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ಕೇಂದ್ರ ಎಚ್.ಡಿ ಕುಮಾರಸ್ವಾಮಿ ಅವರು ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಕೃಷಿ ಸಚಿವರಿಗೆ ಪತ್ರ ಬರೆದು, ರೈತರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿರುವ ಅವರು, 2026–27ರ ಋತುವಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟವನ್ನು ತಗ್ಗಿಸಲು



ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಮೂಲಕ ನೆರವಾಗಬೇಕು ಹಾಗೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕು ಎಂದು ವಿನಂತಿಸಿದ್ದಾರೆ.

ಕರ್ನಾಟಕವು ಅತಿಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಗಮನ ಸೆಳೆದಿದ್ದಾರೆ.

ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಧಾರವಾಡ, ತುಮಕೂರು ಮತ್ತು ಹಾವೇರಿಯಂತಹ ಜಿಲ್ಲೆಗಳಲ್ಲಿ ಸಾವಿರಾರು ರೈತ ಕುಟುಂಬಗಳು ಮಾವು ಕೃಷಿಯನ್ನು ಅವಲಂಬಿಸಿದೆ. ಇದು ಅತ್ಯಂತ ಪ್ರಮುಖ ವಾಣಿಜ್ಯ ತೋಟಗಾರಿಕಾ ಬೆಳೆಯಾಗಿದೆ. ಮಾರುಕಟ್ಟೆಯ ಏರಿಳಿತಗಳು ಮತ್ತು ಅತಿಯಾದ ಪೂರೈಕೆ ಪರಿಸ್ಥಿತಿಗಳಿಂದಾಗಿ ಅನೇಕ ಬೆಳೆಗಾರರು ತಮ್ಮ ಉತ್ಪನ್ನಗಳನ್ನು ಲಾಭದಾಯಕ ಮಟ್ಟಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ತಮ್ಮ ಪತ್ರದಲ್ಲಿ ಕೇಂದ್ರ ಸಚಿವರು ಉಲ್ಲೇಖಿಸಿದ್ದಾರೆ.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಸದಾಶಿವನಗರ ನಿವಾಸದ ಬಳಿ ಆಗಮಿಸಿದ್ದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

232 ತಹಸೀಲ್ದಾರ್ ಹುದ್ದೆ ಬಡ್ತಿ: ಡಿಸಿಎಂ

ಬೆಂಗಳೂರು: ಗ್ರೇಡ್–2 ತಹಸೀಲ್ದಾರ್ ಹುದ್ದೆಯಿಂದ ಗ್ರೇಡ್–1 ಹುದ್ದೆಗೆ ಬಡ್ತಿ



ನೀಡಬೇಕೆಂಬ ಬಹುಕಾಲದ ಬೇಡಿಕೆ ಕಳೆದ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ಸರ್ಕಾರವು ಇದನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಅರ್ಹತೆಗೆ ಅನುಸಾರವಾಗಿ ಬಡ್ತಿ ನೀಡಿದೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಇದು ಕೇವಲ ಆಡಳಿತಾತ್ಮಕ ಮೈಲುಗಲ್ಲಷ್ಟೇ ಅಲ್ಲ. ಬದಲಿಗೆ ನ್ಯಾಯಬದ್ಧ, ಪಾರದರ್ಶಕ ಹಾಗೂ ಸಮಯೋಚಿತ ನಿರ್ಧಾರಗಳ ಮೂಲಕ ಆಡಳಿತ ಯಂತ್ರವನ್ನು ಬಲಪಡಿಸುವ ಸರ್ಕಾರದ ದೃಢವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಒಟ್ಟು 232 ಗ್ರೇಡ್ –2 ತಹಸೀಲ್ದಾರ್‌ಗಳಿಗೆ ಗ್ರೇಡ್ 1 ತಹಸೀಲ್ದಾರ್ ಹುದ್ದೆಗೆ ಬಡ್ತಿ ನೀಡಲಾಗಿದೆ.

ಬಲಿಷ್ಠ ಮತ್ತು ಸ್ಫೂರ್ತಿದಾಯಕ ಆಡಳಿತ ಯಂತ್ರವೇ ಪರಿಣಾಮಕಾರಿ ಆಡಳಿತದ ಬುನಾದಿ. ಕಂದಾಯ ಇಲಾಖೆಯು ಪ್ರತಿಯೊಬ್ಬ ನಾಗರಿಕರಿಗೂ ಪಾರದರ್ಶಕ, ಉತ್ತರದಾಯಿ ಹಾಗೂ

> ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಮೂಲಕ, ಸರ್ಕಾರವು ಅರ್ಹತೆ, ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ಗುರುತಿಸಿ ಸದಾ ಪ್ರೋತ್ಸಾಹಿಸುತ್ತದೆ ಎಂಬ ವಿಶ್ವಾಸವನ್ನು ನೌಕರ ವರ್ಗದಲ್ಲಿ ಮೂಡಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂಬ ನಂಬಿಕೆ ನನಗಿದೆ.
> ■ **ಡಾ.ಜಿ.ಪರಮೇಶ್ವರ್,** ಡಿಸಿಎಂ

ಕಾಳಜಿಯುಕ್ತ ಸೇವೆಯನ್ನು ಒದಗಿಸಬೇಕೆಂಬ ರಾಜ್ಯ ಸರ್ಕಾರದ ಸಂಕಲ್ಪದ ಭಾಗವೇ ಈ ಮಹತ್ವದ ನಿರ್ಧಾರವಾಗಿದೆ.

ಈ ಕಾರ್ಯವನ್ನು ಸುಗಮವಾಗಿ ಸಾಕಾರಗೊಳಿಸಿದ ಎಲ್ಲಾ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯ ನಿರಂತರ ಪ್ರಯತ್ನಗಳಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಪರಮೇಶ್ವರ್ ಸಲ್ಲಿಸಿದ್ದಾರೆ.

ಉತ್ತರದಾಯಿ, ಪಾರದರ್ಶಕ, ಸಂವೇದನಾಶೀಲ ಮತ್ತು ಸರ್ವರಿಗೂ ಸುಲಭವಾಗಿ ಲಭ್ಯವಾಗುವ ಸೇವಾ ಮಾದರಿಯ ಮೂಲಕ ನವ ಕರ್ನಾಟಕವನ್ನು ಕಟ್ಟೋಣ ಎಂದು ಅಧಿಕಾರಿ ವರ್ಗದಲ್ಲಿ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ ಮನವಿ ಮಾಡಿದ್ದಾರೆ.

ಕಿರುಸುದ್ದಿ

150 ಪಿಡಿಒ ಭರ್ತಿಗೆ ಕೆಪಿಎಸ್‌ಸಿಗೆ ಖಂಡ್ರೆ ಪತ್ರ

ಬೆಂಗಳೂರು: ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) 150 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿಗೆ



ತಿಳಿಸಿದ್ದಾರೆ. ಕೆಪಿಎಸ್‌ಸಿ ಕಾರ್ಯದರ್ಶಿಗೆ ಕಳಿಸಿರುವ ಲಿಖಿತ ಸೂಚನೆಯಲ್ಲಿ ಅವರು, ಗ್ರಾಮೀಣ ಪ್ರದೇಶದ ಪ್ರಗತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದ್ದು, ಕಲ್ಯಾಣ ಕರ್ನಾಟಕ ವೃಂದದಲ್ಲಿ 97 ಹಾಗೂ ಉಳಿಕೆ ವೃಂದದಲ್ಲಿ 150 ಪಂಚಾಯ್ತಿ ಅಧಿಕಾರಿಗಳ ಹುದ್ದೆಗಳ ಭರ್ತಿಗೆ 2024ರಲ್ಲಿ ಅಧಿಸೂಚನೆ ಆಗಿದ್ದರೂ ಅಂತಿಮ ಪಟ್ಟಿ ಪ್ರಕಟಿಸದಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ನೇಮಕಾತಿಯಲ್ಲಿನ ವಿಳಂಬದಿಂದಾಗಿ ಗ್ರಾಮೀಣಾಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅಡ್ಡಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಆದಷ್ಟು ಶೀಘ್ರ ಪೂರ್ಣಗೊಳಿಸುವಂತೆ ತಿಳಿಸಿದ್ದಾರೆ.

ಶಾಲಾ ಸಿಬ್ಬಂದಿ ಭಿನ್ನಾಭಿಪ್ರಾಯ: ಮುಖ್ಯಶಿಕ್ಷಕ ಆತ್ಮಹತ್ಯೆ

ದಾವಣಗೆರೆ: ಜಿಲ್ಲೆಯ ಹರಿಹರ ತಾಲೂಕು ಕೊಕ್ಕನೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿಷ ಸೇವಿಸಿ ಗಂಭೀರ ಸ್ಥಿತಿಯಲ್ಲಿದ್ದ ಮುಖ್ಯಶಿಕ್ಷಕ ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಫಲಕಾರಿಯಾಗದೆ ತಡರಾತ್ರಿ ಸಾವನ್ನಪ್ಪಿದ್ದಾರೆ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ(55) ಮೃತಪಟ್ಟವರು. ಕೆಲ ದಿನಗಳಿಂದ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ ಹಾಗೂ ಶಾಲೆಯ ಸಹ ಶಿಕ್ಷಕರು, ಅಡುಗೆ ಸಿಬ್ಬಂದಿ ನಡುವೆ ಭಿನ್ನಾಭಿಪ್ರಾಯವಿತ್ತು. ವಿವಾದಕ್ಕೆ ಸಂಬಂಧಿಸಿದಂತೆ ಸೋಮವಾರ ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮದ ಮುಖಂಡರ ನೇತೃತ್ವದಲ್ಲಿ ರಾಜಿ ಸಂಧಾನ ಸಭೆ ನಡೆಸಲಾಗಿತ್ತು. ಸಮಸ್ಯೆ ಬಗೆಹರಿಯದ ಹಿನ್ನೆಲೆಯಲ್ಲಿ ಮಂಗಳವಾರ ಬಿಆರ್‌ಸಿ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು. ಸಭೆ ನಡೆಯುತ್ತಿದ್ದ ವೇಳೆಯೇ ಶೌಚಾಲಯಕ್ಕೆ ತೆರಳಿದ್ದ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ ಅಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಸ್ವಸ್ಥಗೊಂಡಿದ್ದ ಜಯಪ್ಪ ಅವರನ್ನು ಜಿಲ್ಲಾಸ್ಪತ್ರೆಗೆ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಬದುಕುಳಿಯಲಿಲ್ಲ. ಬಿಸಿಯೂಟದ ಅಕ್ರಮಗಳಿಗೆ ಬ್ರೇಕ್ ಹಾಕಿದ್ದೇ ಸಾವಿಗೆ ಕಾರಣ ಎಂಬುದಾಗಿ ಮೃತರ ಕುಟುಂಬಸ್ಥರು ಆರೋಪಿಸಿದ್ದಾರೆ.

ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸಿ: ಬಿ.ಶ್ರೀರಾಮುಲು

ಕೊಟ್ಟೂರು: ಗೃಹ ಮಂತ್ರಿ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಳ್ಳದ ಬಗ್ಗೆ ತಲೆಕೆಡಿಸಿಕೊಳ್ಳದೆ, ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸಲಿ. ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಳ್ಳದಿರುವುದಕ್ಕೆ ಪತ್ರ ವ್ಯವಹಾರ ಮಾಡುವ ಬದಲು ನೋಟೀಸ್ ನೀಡಲಿ. ಅವರ ಪತ್ರಕ್ಕೆ ಮುಖ್ಯಸ್ಥ ಮೋಹನ್ ಭಾಗವತ್ ಉತ್ತರಿಸಿದ್ದಾರೆ. ಅದು ಅರ್ಥವಾಗದಿದ್ದಲ್ಲಿ ಮತ್ತೊಮ್ಮೆ ತರಿಸಿಕೊಂಡು ಅರ್ಥ ಮಾಡಿಕೊಳ್ಳಲಿ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು. ಉಜ್ಜಯಿನಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ರಾಜ್ಯದಲ್ಲಿ ಗೃಹಲಕ್ಷ್ಮೀ ಯೋಜನೆಯ 5 ಸಾವಿರ ಕೋಟಿ ರೂ.ಗಳಿಗೆ ಈವರೆಗೂ ಇಲಾಖೆ ಲೆಕ್ಕ ನೀಡಿಲ್ಲ. ಆರ್ಥಿಕ ದಿವಾಳಿಯತ್ತ ಸಾಗಿರುವುದು ಸ್ಪಷ್ಟವಾಗಿದೆ. ಇದೇ ನೆಪದಲ್ಲಿ 16ಲಕ್ಷಕ್ಕೂ ಅಧಿಕ ಜನರಿಗೆ ಸಿಗುತ್ತಿದ್ದ ವಿವಿಧ ಯೋಜನೆ ಪಿಂಚಣಿಯನ್ನು ಸ್ಥಗಿತಗೊಳಿಸಿದ್ದಾರೆ ಎಂದು ಆರೋಪಿಸಿದರು.

ವಿಪಕ್ಷಕ್ಕೆ ಡಿಕೆಶಿ ಮುಖ್ಯಮಂತ್ರಿ ಆಗಿದ್ದು ಸಹಿಸಲಾಗುತ್ತಿಲ್ಲ: ಶಾಸಕ ಬಾಲಕೃಷ್ಣ

ಅವಕಾಶವಾದಿ ರಾಜಕಾರಣ

ಬಿಡದಿ: ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗಲೂ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿತ್ತು. ಆಗಲೂ ಕೆಲವು ರೈತರು ವಿರೋಧ ವ್ಯಕ್ತಪಡಿಸುತ್ತಿದ್ದರು. ಆಗ ಕುಮಾರಸ್ವಾಮಿ, ಆರ್. ಅಶೋಕ್ ಅವರು ಯಾಕೆ ಈ ರೈತರ ಪರ ಹೋರಾಟಕ್ಕೆ ಬರಲಿಲ್ಲ? ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲಾಗದೇ ಅವರನ್ನು ರಾಜಕೀಯವಾಗಿ ಹಣಿಯಲು ವಿರೋಧ ಪಕ್ಷದವರು ಈ ಯೋಜನೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಮಾಗಡಿ ಶಾಸಕ ಬಾಲಕೃಷ್ಣ ಅವರು ಹರಿಹಾಯ್ದರು.

ಬಿಡದಿಯ ರೆಸಾರ್ಟ್ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಜಗದೀಶ್ ಶೆಟ್ಟರ್ ಅವರು ಕೈಗಾರಿಕಾ ಸಚಿವರಾಗಿದ್ದಾಗ 1 ಸಾವಿರ ಎಕರೆ ಜಾಗ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದರು. ಆಗ ನಾನು ಜಮೀನು ತೆಗೆದುಕೊಳ್ಳುವುದಾದರೆ ಪೂರ್ತಿ ಜಾಗ ಸ್ವಾಧೀನಪಡಿಸಿಕೊಳ್ಳಿ. ಕೇವಲ 1 ಸಾವಿರ ಎಕರೆ ಮಾತ್ರ ಸ್ವಾಧೀನ ಪಡಿಸಿಕೊಂಡು ಉಳಿದ ಜಾಗ ಹಾಗೆ ರೆಡ್ ಜೋನ್‌ನಲ್ಲಿ ಇಡುವುದು ಸೂಕ್ತವಲ್ಲ ಎಂದು ಹೇಳಿದಾಗ ರೈತರು ಸ್ಪಂದಿಸಲಿಲ್ಲ ಎಂದರು.

ಬಳಿಕ ಈಗ ಹೋರಾಟ ಮಾಡುತ್ತಿರುವ ವಿಜಯೇಂದ್ರ ಅವರು ನಮ್ಮನ್ನು ಕರೆದು, ನೀವು ಹೋರಾಟ ಮಾಡಬೇಡಿ, ಕಾನೂನಾತ್ಮಕವಾಗಿ ಉತ್ತಮ ಬೆಲೆ ಕೊಡಿಸುತ್ತೇವೆ. ಇಲ್ಲಿ ಏರೋನಾಟಿಕಲ್‌ಗೆ ಸಂಬಂಧಿಸಿದ ಕೈಗಾರಿಕೆ ತರುವ ಆಲೋಚನೆ ಮಾಡಿದ್ದೇವೆ. ನೀವು ಸಹಕಾರ ನೀಡಿ ಎಂದು ನನಗೆ ಹೇಳಿದ್ದರು. ಬೇಕಾದರೆ ಅವರು ಹಾಗೇ ಹೇಳಿದ್ದರಾ? ಇಲ್ಲವಾ ಎಂದು ವಿಜಯೇಂದ್ರ ಅವರು ಹೇಳಬೇಕು ಎಂದರು. ಅವರನ್ನು ತಾವು ಭೇಟಿಯಾಗಿದ್ದ ಫೋಟೋಗಳನ್ನು ಬಹಿರಂಗಪಡಿಸಿದರು.

ಡಿ.ಕೆ.ಶಿವಕುಮಾರ್ ಅವರಿಗೆ ರಾಜಕೀಯ ವಿರೋಧ ಮಾಡುವುದಾದರೆ ಮಾಡಲಿ, ನನ್ನ ತಕರಾರಿಲ್ಲ. ಆದರೆ ವಿಜಯೇಂದ್ರ ಅವರು ಅಂದು ಆ ರೀತಿ ಮಾತನಾಡಿ, ಇಂದು ಯಾವ ಮನಸ್ಥಿತಿಯಲ್ಲಿ ಹೋರಾಟ ಮಾಡುತ್ತಾರೆ? ಅಶ್ವತ್ಥ ನಾರಾಯಣ ಅವರು ಹಾಗೂ ಆಗಿನ ಶಾಸಕರು ಈ ಬಗ್ಗೆ ಯಾವುದೇ ರೀತಿ ಪ್ರತಿಕ್ರಿಯೆ ನೀಡಿರಲಿಲ್ಲ. ಬಿಜೆಪಿಯವರು ಅಂದು ಮನಸ್ಸು ಮಾಡಿದ್ದರೆ ಈ ಯೋಜನೆ ಕೈಬಿಡಬಹುದಾಗಿತ್ತಲ್ಲವೇ?. ರೈತರು ಇಷ್ಟು ಗಲಾಟೆ ಮಾಡುವ ಅಗತ್ಯವೇ ಇರುತ್ತಿರಲಿಲ್ಲ. ಇಂದು ರಾಜಕೀಯವಾಗಿ ವಿರೋಧ ಮಾಡಲು ಬಂದಿದ್ದಾರೆ. ಇಲ್ಲಿ ಅವಕಾಶವಾದ ರಾಜಕಾರಣ ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ಈ ಯೋಜನೆ ಡಿ.ಕೆ. ಶಿವಕುಮಾರ್ ಅವರು ಪ್ರಾರಂಭ ಮಾಡಿರುವುದಲ್ಲ. ಕುಮಾರಸ್ವಾಮಿ ಅವರು ಪ್ರಾರಂಭ ಮಾಡಿದ್ದರು. ನಮ್ಮ ಸರ್ಕಾರ ಬಂದ ಮೇಲೆ ರೈತರು ರೆಡ್ ಜೋನ್ ತೆಗೆಯಿರಿ ಅಥವಾ ಪರಿಹಾರ ನೀಡಿ ಎಂದು ಮನವಿ ಮಾಡಿದ ಕಾರಣಕ್ಕೆ ಈ ಯೋಜನೆಗೆ ಚಾಲನೆ ನೀಡಲಾಯಿತು. ಇದು ಡಿ.ಕೆ. ಶಿವಕುಮಾರ್ ಸಿಎಂ ಆದ ಬಳಿಕ ಕೈಗೊಂಡ ಯೋಜನೆಯಲ್ಲ. ಈ ವಿಚಾರವಾಗಿ ವಿಜಯೇಂದ್ರ ಅವರ ಜೊತೆಗೆ ಚರ್ಚೆ ಮಾಡಲು ನಾನು ಸಿದ್ಧನಿದ್ದೇನೆ ಎಂದರು.

ರೈತರು 50% ಅಭಿವೃದ್ಧಿ ಹೊಂದಿದ ಭೂಮಿ ಪಡೆಯಲು ಅವಕಾಶ: ಕುಮಾರಸ್ವಾಮಿ ಅವರೇ ಈ ಭಾಗದ ಜನರಿಗೆ 40% ಅಭಿವೃದ್ಧಿ ಪಡಿಸಿದ ಭೂಮಿಯನ್ನು ಪರಿಹಾರ ನೀಡುತ್ತೇನೆ ಎಂದು ಭರವಸೆ ನೀಡಿರುವ ವಿಡಿಯೋ ನಾನೇ ತೋರಿಸಿದ್ದೇನೆ. ರೈತರಿಗೆ ಪರಿಹಾರದ ಮೊತ್ತ ಕಡಿಮೆಯಾದರೆ, ಅವರು ಹಣ ತೆಗೆದುಕೊಳ್ಳುವುದು ಬೇಡ 50% ಅಭಿವೃದ್ಧಿಪಡಿಸಿದ ಭೂಮಿಯನ್ನೇ ನೀಡುತ್ತೇವೆ. ಆಗ ಇಂದಿನ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಹಣ ಸಿಗುತ್ತದೆ. ದುಡ್ಡನ್ನೇ ಪಡೆಯಬೇಕು ಎಂದು ಒತ್ತಡ ಹಾಕುತ್ತಿಲ್ಲ ಎಂದರು.

ಅಶೋಕ್ ಅವರು ಅಧಿವೇಶನದಲ್ಲಿ ಯಾಕೆ ಪ್ರಸ್ತಾಪ ಮಾಡಲಿಲ್ಲ?

ಇದು ರೈತರ ಸಮಸ್ಯೆಯಲ್ಲವೇ. ಈ ವಿಚಾರ ಪ್ರಸ್ತಾಪಿಸಿದರೆ ಯಾರಾದರೂ ಅವರಿಗೆ ವಿರೋಧ ವ್ಯಕ್ತಪಡಿಸುತ್ತಿದ್ದರಾ? ಬೆಳಗಾವಿ ಅಧಿವೇಶನದ ಬಳಿಕ ಬೆಂಗಳೂರಿನಲ್ಲೂ ಅಧಿವೇಶನ ನಡೆಯಲಿಲ್ಲವೇ? ರಾಜ್ಯಪಾಲರ ಜಂಟಿ ಅಧಿವೇಶನ ಹಾಗೂ ಬಜೆಟ್ ಅಧಿವೇಶನ ನಡೆದಿವೆ. ಅವರಿಗೆ ಇಚ್ಛಾಶಕ್ತಿ ಇದ್ದಿದ್ದರೆ ಈ ಅಧಿವೇಶನಗಳಲ್ಲಿ ಯಾಕೆ ಈ ವಿಚಾರ ಎತ್ತಲಿಲ್ಲ? ಎಂದು ತಿಳಿಸಿದರು.

ರೈತರಿಗೆ ಮಾರುಕಟ್ಟೆ ಮೌಲ್ಯಕ್ಕಿಂತ ಪರಿಹಾರ ನಿಗದಿ

ಈ ಭಾಗವನ್ನು ರೆಡ್ ಜೋನ್ ಮಾಡಿದ ಕಾರಣಕ್ಕೆ ಇಲ್ಲಿ ವರ್ಗಾವಣೆ ಪ್ರಕ್ರಿಯೆ ಆಗಲಿಲ್ಲ. ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕಾದರೆ, 2 ವರ್ಷ ವರ್ಗಾವಣೆ ಸಮಯ ತೆಗೆದುಕೊಳ್ಳುತ್ತದೆ. ಇಲ್ಲಿ ವರ್ಗಾವಣೆ ಆಗದೆ ರೆಡ್ ಜೋನ್ ಆದ ಕಾರಣ ಎಸ್‌ಆರ್ ಮೌಲ್ಯ ಹೆಚ್ಚಾಗದೇ, ತಟಸ್ಥವಾಗಿ ಉಳಿಯಿತು. ಪ್ರತಿ ಎಕರೆಗೆ 1.50 ಕೋಟಿ ಮಾತ್ರ ನಿಗದಿಯಾಗಿತ್ತು. ಜಿಲ್ಲಾಧಿಕಾರಿಗಳು ಬೇರೆ ಬೇರೆ ಸುಪ್ರೀಂ ಕೋರ್ಟ್ ಆದೇಶ ತೆಗೆದು ರೈತರಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು 2.50 ಕೋಟಿಗೆ ನಿಗದಿ ಮಾಡಲಾಗಿದೆ. ಈ ಪರಿಹಾರವನ್ನು ರೈತರು ಒಪ್ಪಿದ್ದರು. ಹಿಂದೆಯಿಂದ ಕೆಲವರು ಕಡ್ಡಿಯಾಡಿಸಿರುವುದಕ್ಕೆ ಈ ರೀತಿ ಆಗಿದೆ. ಕಾನೂನು ಪ್ರಕಾರ ನಾವು ಎಸ್‌ಆರ್ ಮೌಲ್ಯದ ಮೂರು ಪಟ್ಟು ಪರಿಹಾರ ನೀಡಬೇಕು. ಆದರೆ ನಮ್ಮ ಸರ್ಕಾರ ಐದರಿಂದ ಆರುಪಟ್ಟು ಹೆಚ್ಚಿನ ಪರಿಹಾರ ನೀಡುತ್ತಿದೆ ಎಂದು ತಿಳಿಸಿದರು.



> ಶಿವಕುಮಾರ್ ಸಿಎಂ ಆಗಿರುವುದನ್ನು ನಮ್ಮ ಸಮುದಾಯದ ಬೇರೆ ಪಕ್ಷಗಳ ನಾಯಕರಿಗೆ ಸಹಿಸಲು ಆಗುತ್ತಿಲ್ಲ. ಅವರ ಹೊಟ್ಟೆ ತೊಳೆಸುತ್ತದೆ. ಸಿದ್ದರಾಮಯ್ಯ ಅವರು ದೊಡ್ಡ ಮನಸ್ಸು ಮಾಡಿ ಅಧಿಕಾರ ಬಿಟ್ಟುಕೊಟ್ಟಿರುವುದನ್ನು ಅವರಿಂದ ಸಹಿಸಲು ಆಗುತ್ತಿಲ್ಲ.
> ■ **ಬಾಲಕೃಷ್ಣ** ಶಾಸಕ

ಸರ್ಕಾರದ ಕನಸು ಶೀಘ್ರದಲ್ಲೇ ನನಸು: ಸಚಿವ ಶರಣಪ್ರಕಾಶ



ಮೈಸೂರು: ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಕ್ಯಾನ್ಸರ್ ಆಸ್ಪತ್ರೆ ನಿರ್ಮಿಸುವ ಸರ್ಕಾರದ ಕನಸು ಶೀಘ್ರದಲ್ಲೇ ನನಸಾಗಲಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ ತಿಳಿಸಿದರು.

ಮೈಸೂರಿನ ಮೇಟಗಳ್ಳಿಯಲ್ಲಿರುವ ಜಯದೇವ ಆಸ್ಪತ್ರೆಯಲ್ಲಿ ಸಂಭವಿಸಿದ ಸಾವಿನ ಪ್ರಕರಣಗಳ ಕುರಿತಾದ ವದಂತಿಗಳ ಹಿನ್ನೆಲೆಯಲ್ಲಿ ಅವರು ಬುಧವಾರ ಜಯದೇವ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಆಸ್ಪತ್ರೆ ವೈದ್ಯಾಧಿಕಾರಿಗಳು, ಅಧೀಕ್ಷಕರು, ಜಯಸಂಸ್ಥೆಯ ನಿರ್ದೇಶಕರೊಂದಿಗೆ ಸಭೆ ನಡೆಸಿ, ಮಾಹಿತಿಯನ್ನು ಪಡೆದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನೆನ್ನೆ ಒಂದೇ ದಿನ 10 ಸಾವುಗಳು ಸಂಭವಿಸಿರುವುದು ಅಸಮಾಧಾನ ತಂದಿದ್ದರೂ, ದಾಖಲಾದ ರೋಗಿಗಳು ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದ ಕಾರಣ ಹೀಗಾಗಿದೆ. ಈ ಬಗ್ಗೆ ತನಿಖೆ ನಡೆಸಿ ಥರ್ಡ್ ಪಾರ್ಟಿ ಇವ್ಯಾಲ್ಯೂಯೇಷನ್' ವರದಿ ನೀಡುವಂತೆ ವೈದ್ಯರ ಸಮಿತಿಗೆ ಸೂಚಿಸಲಾಗಿದೆ ಎಂದರು.

> ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆ ನೀಗಿಸಲು ಈಗಾಗಲೇ ಬೆಂಗಳೂರು-ಮೈಸೂರಿಗೆ 10 ಮತ್ತು ಕಲ್ಬುರ್ಗಿಗೆ 6 ಕಾರ್ಡಿಯಾಲಜಿಸ್ಟ್ ಸೇರಿದಂತೆ ಹಲವು ಹುದ್ದೆಗಳ ಭರ್ತಿಗೆ ಕರೆ ನೀಡಲಾಗಿದೆ. ಇಡೀ ರಾಜ್ಯದಲ್ಲಿ 56,000 ಹುದ್ದೆಗಳ ಭರ್ತಿಗೆ ಕಾಲಮಿತಿ ನಿಗದಿಪಡಿಸಲಾಗಿದೆ.
> ■ **ಡಾ. ಶರಣಪ್ರಕಾಶ ಆರ್. ಪಾಟೀಲ,** ಸಚಿವ

ಜಯದೇವ ಆಸ್ಪತ್ರೆ ಇಡೀ ದೇಶಕ್ಕೆ ಮಾದರಿಯಾಗಿದೆ. ಇಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ 2 ರಿಂದ 3 ಲಕ್ಷ ವೆಚ್ಚವಾಗುವ ಸ್ಟಂಟ್ ಚಿಕಿತ್ಸೆಯನ್ನು ಇಲ್ಲಿ ಕೇವಲ 60 ಸಾವಿರಕ್ಕೆ ನೀಡಲಾಗುತ್ತಿದೆ. ಇಂತಹ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ನಕಾರಾತ್ಮಕ ಸುದ್ದಿ ಹರಡಿದರೆ ಬಡ ಜನರಿಗೆ ಅನ್ಯಾಯವಾಗುತ್ತದೆ, ಖಾಸಗಿ ಆಸ್ಪತ್ರೆಗಳಿಗೆ ಲಾಭವಾಗುತ್ತದೆ ಎಂದರು.

ಜಯದೇವ ಆಸ್ಪತ್ರೆಗಳಲ್ಲಿ ಈ ಪ್ರಮಾಣ ಕೇವಲ 4% ರಿಂದ 6% ರಷ್ಟಿದೆ ಇದು ರಾಷ್ಟ್ರೀಯ ಸರಾಸರಿಗಿಂತಲೂ ಅತ್ಯಂತ ಉತ್ತಮವಾಗಿದೆ ಎಂದರು.

ಕರ್ತವ್ಯ ಆ್ಯಪ್‌ಗೆ ನೋಂದಣಿಯಾಗದ 2 ಲಕ್ಷ ನೌಕರರು

ಬೆಂಗಳೂರು: ರಾಜ್ಯ ಸರ್ಕಾರ ಪರಿಚಯಿಸಿರುವ ಕರ್ತವ್ಯ ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆಗೆ ರಾಜ್ಯದಲ್ಲಿ ಇದುವರೆಗೂ 2,13,925 ಅಧಿಕಾರಿ, ನೌಕರರು ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಾಯಿಸಿಕೊಂಡಿರುವುದಿಲ್ಲ.

ಈ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಸಿಇಒಗಳು, ತಮ್ಮ ಜಿಲ್ಲೆಯಲ್ಲಿ ಇದುವರೆಗೂ ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಾಯಿಸದ ಅಧಿಕಾರಿ,ನೌಕರರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವಂತೆ ಹಾಗೂ ಈ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು 7 ದಿನಗಳೊಳಗಾಗಿ ಸಲ್ಲಿಸುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೂಚಿಸಿದ್ದಾರೆ.

ಜೂ.4 ರಂದು ವಿಧಾನಸೌಧದಲ್ಲಿ ನಡೆದ ಎಲ್ಲಾ ಕಾರ್ಯದರ್ಶಿಗಳ ಸಭೆಯಲ್ಲಿ ಸಿಎಂ ಡಿ.ಕೆ ಶಿವಕುಮಾರ್ ಅವರು, ಎಲ್ಲಾ ಸರ್ಕಾರಿ ಅಧಿಕಾರಿ, ನೌಕರರು ಕಡ್ಡಾಯವಾಗಿ ಸಮಯಕ್ಕೆ ಸರಿಯಾಗಿ ಕಛೇರಿಯಲ್ಲಿ ಹಾಜರಿರುವಂತೆ ಸೂಚಿಸಿದ್ದು, ಅದರಂತೆ ಎಲ್ಲಾ ಅಧಿಕಾರಿ,ನೌಕರರು ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಣಿ ಮಾಡಿಕೊಂಡು ಪ್ರತಿದಿನ ತಮ್ಮ ಹಾಜರಾತಿಯನ್ನು ದಾಖಲಿಸುವುದು ಕಡ್ಡಾಯ ಮಾಡಲಾಗಿದೆ.

ದೇಶಭಕ್ತಿಗೆ ನೋಂದಣಿ ಅವಶ್ಯಕತೆಯಿಲ್ಲ: ಶೆಟ್ಟರ್

ಹುಬ್ಬಳ್ಳಿ: ನೂರು ವರ್ಷ ಇತಿಹಾಸವಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ದೇಶ ಭಕ್ತಿಗೆ ನಿಮ್ಮ ನೋಂದಣಿ ಅವಶ್ಯಕತೆ ಇಲ್ಲ ಎಂದು ಸಂಸದ ಶೆಟ್ಟರ್ ತಿಳಿಸಿದರು.

ದಿನ ಬೆಳಗಾದರೆ ಆರ್‌ಎಸ್‌ಎಸ್ ಜಪ ಮಾಡುವ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಇತಿಹಾಸ, ಪ್ರಸ್ತುತ ವಿದ್ಯಮಾನಗಳ ಜ್ಞಾನ ಸ್ವಲ್ಪ ಕಮ್ಮಿ ಇದ್ದ ಹಾಗಿದೆ. ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕತ್ತು ಹಿಸುಕಿದ ಕಾಂಗ್ರೆಸ್ ಪಕ್ಷ, ಇಂದು ದೇಶದ ಅತಿ ದೊಡ್ಡ ಸ್ವಯಂ ಸೇವಾ ಸಂಸ್ಥೆಯನ್ನು ಪ್ರಶ್ನಿಸಲು ಹೊರಟಿದೆ ಎಂದು ಕಿಡಿಕಾರಿದ್ದಾರೆ. ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವಾಗ, ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡ ಪ್ರಿಯಾಂಕ ಅವರು ಜನರ ಸುರಕ್ಷತೆಗೆ ಕೆಲಸ ಮಾಡುವುದನ್ನು ಬಿಟ್ಟು, ಆರ್‌ಎಸ್‌ಎಸ್ ನಿಂದನೆಯಲ್ಲಿ ತೊಡಗಿ ತಮ್ಮ ಅಸಮರ್ಥತೆ ಪ್ರದರ್ಶಿಸುತ್ತಿದ್ದಾರೆ ಎಂದರು.

ಪಿಎಸ್‌ಐ ಆತ್ಮಹತ್ಯೆ

ಕಲಬುರಗಿ: ನಗರದ ಗಂಗಾನಗರ ಪ್ರದೇಶದಲ್ಲಿರುವ ತಮ್ಮ ನಿವಾಸದಲ್ಲಿ ಪಿಎಸ್‌ಐ ಬಸವರಾಜ್ ಹೆರೂರ್ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ಮೃತ ಬಸವರಾಜ್ ಅವರು 2014ನೇ ಬ್ಯಾಚ್‌ನ ಪೊಲೀಸ್ ಸಬ್ ಇನ್‌



ಸ್ಪೆಕ್ಟರ್ ಆಗಿದ್ದು, ಕಳೆದ 2 ವರ್ಷಗಳಿಂದ ಜಿಲ್ಲಾ ಅಪರಾಧ ದಾಖಲೆ ಬ್ಯೂರೋ (ಡಿಸಿಆರ್‌ಬಿ) ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಿನ್ನೆ ತಡರಾತ್ರಿ ಸ್ನೇಹಿತರಿಗೆ ಕರೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವ ಕುರಿತು ಮಾಹಿತಿ ನೀಡಿದ್ದರು ಎನ್ನಲಾಗಿದೆ.

ವಿಷಯ ತಿಳಿದ ಸ್ನೇಹಿತರು ಕೂಡಲೇ ಬಸವರಾಜ್ ತಂದೆಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಬಳಿಕ ತಂದೆ ಮನೆಗೆ ತೆರಳಿ ಬಾಗಿಲು ಒಡೆದು ಒಳ ಪ್ರವೇಶಿಸಿದಾಗ, ಬಸವರಾಜ್ ಸೀರೆಯನ್ನು ಫ್ಯಾನ್‌ಗೆ ಕಟ್ಟಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ ಎಂದು ತಿಳಿದು ಬಂದಿದೆ.

ಕ್ಷಮೆಗೆ ನಿರಾಕರಿಸಿದ ಪ್ರಕಾಶ್ ರಾಜ್: ಸುದೀರ್ಘ ವಾಗ್ವಾದ

ಬೆಂಗಳೂರು: ಚಿನ್ನಯ್ಯ ನೀಡಿರುವ ಹೇಳಿಕೆ ಬಗ್ಗೆ ನಟ ಪ್ರಕಾಶ್‌ರಾಜ್ ಕರೆದಿದ್ದ ಸುದ್ದಿಗೋಷ್ಠಿಗೆ ಸಾಮಾಜಿಕ ಜಾಲತಾಣದಲ್ಲಿ ಆಹ್ವಾನಿಸುವಾಗ ಮಾರಿಕೊಂಡ ಮಾಧ್ಯಮದವರಿಗೆ ವಿಶೇಷ ಆಹ್ವಾನ ಎಂದು ಹೇಳಿರುವುದು ಸುದೀರ್ಘ ವಾಗ್ವಾದಕ್ಕೆ ಕಾರಣವಾಯಿತು. ಕೊನೆಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲಾಗದೇ ಮುಜುಗರ ಅನುಭವಿಸಬೇಕಾಯಿತು.



ಮಾರಿಕೊಂಡವರು ಯಾರು ಎಂಬುದನ್ನು ಹೇಳಬೇಕು. ಇಲ್ಲದೇ ಇದ್ದರೆ ಕ್ಷಮೆ ಕೇಳಬೇಕು ಎಂದು ಮಾಧ್ಯಮದ ಹಲವರು ಪಟ್ಟು ಹಿಡಿದರು. ನಿಮಗಲ್ಲ ಹೇಳಿದ್ದು ಮಾರಿಕೊಂಡವರಿಗೆ ಹೇಳಿದ್ದು ಎಂದು ಪ್ರಕಾಶ್ ರಾಜ್ ಕೂಡ ಕ್ಷಮೆ ಕೇಳಲು ನಿರಾಕರಿಸಿದ್ದರಿಂದ ಸುದ್ದಿಗೋಷ್ಠಿಯಲ್ಲಿ ಒಂದೂವರೆ ತಾಸಿಗೂ ಅಧಿಕ ಸಮಯ ಈ ಚರ್ಚೆಯಲ್ಲೇ ಕಳೆದು ಹೋಯಿತು.

ಬುಧವಾರ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ಆರಂಭವಾಗುತ್ತಿದ್ದಂತೆ ಮಾರಿಕೊಂಡವರು ಯಾರು ಎಂದು ಮಾಧ್ಯಮದವರು ಪ್ರಶ್ನಿಸಿದರು. ಮಾಧ್ಯಮ ಅಂದರೆ ಎಲ್ಲ ಮಾಧ್ಯಮಗಳು ಬರುತ್ತವೆ. ಇಂಥವರೆಲ್ಲ ಮಾರಿಕೊಂಡವರು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ಪತ್ರಕರ್ತರು ಒತ್ತಾಯಿಸಿದರು. ಅವರಿಗೂ ಹೆಂಡತಿ ಮಕ್ಕಳಿದ್ದಾರೆ. ಅವರು ಬದುಕಿಕೊಳ್ಳಲಿ ಎಂಬ ಕಾಳಜಿಯಿಂದ ಹೇಳುವುದಿಲ್ಲ. ಭಾರತ ಪತ್ರಿಕೋದ್ಯಮದಲ್ಲಿ ಮಾರಿಕೊಂಡ ಮಾಧ್ಯಮಗಳೂ ಇವೆ. ಮಾರಿಕೊಳ್ಳದವರೂ ಇದ್ದಾರೆ ಎಂಬುದು ಜನರಿಗೆ ಗೊತ್ತು ಎಂದು ಪ್ರಕಾಶ್ ರಾಜ್ ಉತ್ತರಿಸಿದರು.

ಜಯದೇವ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ, ಅಧೀಕ್ಷಕರ ಸ್ಪಷ್ಟನೆ

ವದಂತಿಗಳಿಗೆ ಕಿವಿಗೊಡದಿರಿ

ಮೈಸೂರು: ನಗರದ ಮೇಟಗಹಳ್ಳಿಯಲ್ಲಿ ಇರುವ ಜಯದೇವ ಆಸ್ಪತ್ರೆಯಲ್ಲಿ ಕಳೆದ 24 ಗಂಟೆಗಳಲ್ಲಿ 11 ಜನ ರೋಗಿಗಳು ಸಾವನ್ನಪ್ಪಿದ್ದಾರೆ. ಮಂಗಳವಾರ ಬೆಳಗ್ಗೆ 8 ಗಂಟೆಯಿಂದ ಬುಧವಾರ ಬೆಳಗ್ಗೆ 8 ಗಂಟೆಯವರೆಗೆ 11 ಮಂದಿ ಮೃತಪಟ್ಟಿದ್ದಾರೆ.

ಇದು ಸಾಮಾನ್ಯಕ್ಕಿಂತ ಹೆಚ್ಚು ಸಂಖ್ಯೆಯಾಗಿದ್ದರೂ, ಮೃತಪಟ್ಟವರಲ್ಲಿ ಬಹುತೇಕರು ತೀವ್ರ ಹೃದಯಾಘಾತ, ಹೃದಯ ವೈಫಲ್ಯ ಹಾಗೂ ವಯೋಸಹಜ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಕೆಲವರು ಆಸ್ಪತ್ರೆಗೆ ದಾಖಲಾಗುವ ವೇಳೆಯೇ ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದರು ಎಂದು ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಸದಾನಂದ ತಿಳಿಸಿದರು.

ಮಂಗಳವಾರ ಬೆಳಗ್ಗೆ 8 ಗಂಟೆಯಿಂದ ಬುಧವಾರ ಬೆಳಗ್ಗೆ 8 ಗಂಟೆಯವರೆಗೆ ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ



ದಾಖಲಾದ 11 ಮಂದಿ ಸಾವನ್ನಪ್ಪಿದ ಬಗ್ಗೆ ರೋಗಿಗಳ ಸಂಬಂಧಿಕರು ವೀಡಿಯೊ ಮಾಡಿ ಆಸ್ಪತ್ರೆಯಲ್ಲಿ ವೈದ್ಯರು, ವ್ಯವಸ್ಥೆ ಸರಿ ಇಲ್ಲ ಎಂದು ಆರೋಪ ಮಾಡಿದ್ದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇರುವುದಿಲ್ಲ, ವೈದ್ಯರ ಕೊರತೆ ಸುಳ್ಳು ಆರೋಪ, ನಮ್ಮ ಆಸ್ಪತ್ರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಕೆಲವು ಕಡೆ ತಪ್ಪು ಸುದ್ದಿ ಹರಡಲಾಗಿದೆ. ಆಸ್ಪತ್ರೆಯಲ್ಲಿ 40 ಜನ ವೈದ್ಯರು ಇದ್ದಾರೆ. 24 ಜನ ಕಾರ್ಡಿಯೋಲಾಜಿಸ್ಟ್ ಇದ್ದಾರೆ. 10 ಅನಸ್ಥಾಸಿಯೇಸ್ಟ್, 1 ಸರ್ಜನ್ ಇದ್ದಾರೆ. ಪೋಸ್ಟ್ ಗ್ರ್ಯಾಜುಯೇಟ್ಸ್ 10 ಜನ ವೈದ್ಯರು ಇದ್ದಾರೆ ಎಂದು ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ದಿನೇಶ್ ತಿಳಿಸಿದರು.

> 11 ಜನರು ಹಾರ್ಟ್ ಅಟ್ಯಾಕ್ ಆಗಿ ಬಂದವರು. ತೀವ್ರ ನಿಗಾ ಘಟಕದಲ್ಲಿ ಇಟ್ಟು ಔಷಧೋಪಚಾರ ಮಾಡಲಾಗುತ್ತಿತ್ತು. ಎಲ್ಲರೂ ಒಂದೇ ದಿನ ಅಡ್ಮಿಟ್ ಆಗಿಲ್ಲ. 11 ಜನವೂ ವಯಸ್ಸಾದವರು, ತೀವ್ರ ಅಸ್ವಸ್ಥರು ಅವರು ಇಲ್ಲಿಗೆ ಬರುವವರೆಗೂ ಜೀವನ್ಮರಣದಿಂದ ಹೋರಾಟ ನಡೆಸಿದ್ದಾರೆ. ಇಂತಹ ಸನ್ನಿವೇಶದಲ್ಲಿ 9% ರೋಗಿಗಳು ಮಾತ್ರ ಬದುಕುವ ಸಾಧ್ಯತೆ ಇದೆ.
> ■ **ಡಾ.ದಿನೇಶ್,** ಹೃದ್ರೋಗ ಆಸ್ಪತ್ರೆ ನಿರ್ದೇಶಕ

ಗುಣಮಟ್ಟದ ಶಿಕ್ಷಣ ಬಲಗೊಳಿಸಲು ಕೆಪಿಎಸ್ ಶಿಕ್ಷಕರಿಗೆ 10 ವರ್ಷ ಸೇವಾವಧಿ ನಿಗದಿ

ಶಾಲೆಗಳಲ್ಲಿ ಶಿಕ್ಷಕರ ಸ್ಥಿರತೆ ಕಾಪಾಡುವ ಉದ್ದೇಶ

ನಂದಿನಿ ಎನ್.

ದಿಗಂತ ವಿಶೇಷ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ, ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಕನಿಷ್ಠ 10 ವರ್ಷಗಳ ಸೇವಾವಧಿಯನ್ನು ನಿಗದಿಪಡಿಸಿದೆ. ಶಿಕ್ಷಕರ ನಿಯೋಜನೆ ಮತ್ತು ವರ್ಗಾವಣೆ ನಿಯಮಗಳಲ್ಲಿ ತರಲಾಗಿರುವ ಈ ಬದಲಾವಣೆಯು ಶಾಲೆಗಳಲ್ಲಿ ಶಿಕ್ಷಕರಿಗೆ ಸ್ಥಿರತೆಯನ್ನು ಕಾಪಾಡುವ ಉದ್ದೇಶವನ್ನು ಹೊಂದಿದೆ.

ಶಿಕ್ಷಕರು ಪದೇ-ಪದೇ ವರ್ಗಾವಣೆಯಾಗುವುದರಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. ಅಲ್ಲದೇ ಶಾಲೆಯ ಸ್ಥಳೀಯ ಪರಿಸರ, ವಿದ್ಯಾರ್ಥಿಗಳ ಹಿನ್ನೆಲೆ ಹಾಗೂ ಸಮುದಾಯದ ಅಗತ್ಯಗಳ ಬಗ್ಗೆ ಶಿಕ್ಷಕರು ಆಳವಾದ ಅರಿವು ಹೊಂದಲು ಸಮಯ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಪಿಎಸ್ ಶಾಲೆಗಳಲ್ಲಿ ಶಿಕ್ಷಕರನ್ನು ದೀರ್ಘಾವಧಿಗೆ ನಿಯೋಜಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ಮುಂದಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, 2023–24ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆಗಳಲ್ಲಿ 42.96 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದರೆ, 2024–25ನೇ ಸಾಲಿನಲ್ಲಿ ಈ ಸಂಖ್ಯೆ 40.74 ಲಕ್ಷಕ್ಕೆ ಇಳಿಕೆಯಾಗಿದೆ. ಅಂದರೆ, ಅಲ್ಪಾವಧಿಯಲ್ಲೇ ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳ ದಾಖಲಾತಿ ಕುಸಿತ ಕಂಡಿದೆ.

ಶಿಕ್ಷಣವು ಕೇವಲ ಬೋಧನೆ ಮತ್ತು ಕಲಿಕೆಗೆ ಸೀಮಿತವಾಗದೇ, ವಿದ್ಯಾರ್ಥಿಗಳೊಂದಿಗೆ ಭಾವನಾತ್ಮಕ ಬಾಂಧವ್ಯ ಬೆಳೆಸುವ ಪ್ರಕ್ರಿಯೆಯಾಗಿದೆ. ಆದರೆ, ಪ್ರಸ್ತುತ ವ್ಯವಸ್ಥೆಯಲ್ಲಿ ಅನೇಕ ಶಿಕ್ಷಕರು 3, 4 ವರ್ಷಗಳಿಗೊಮ್ಮೆ ವರ್ಗಾವಣೆಯಾಗುತ್ತಿರುವುದರಿಂದ ಅವರು ಆರಂಭಿಸಿದ ಶೈಕ್ಷಣಿಕ ಯೋಜನೆಗಳು ಮತ್ತು ಕಾರ್ಯಕ್ರಮಗಳು ಮಧ್ಯದಲ್ಲೇ ಸ್ಥಗಿತಗೊಳ್ಳುತ್ತಿವೆ. ಇದರ ಪರಿಣಾಮ ಮಕ್ಕಳ ಕಲಿಕೆಯ ಮೇಲೂ ಬೀಳುತ್ತಿದೆ.

ಶಿಕ್ಷಕರ ಸ್ಥಿರತೆ ಇರುವ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಧನೆಯಲ್ಲಿ ಸರಾಸರಿ ಶೇ.15ರಷ್ಟು ಸುಧಾರಣೆ ಕಂಡುಬರುತ್ತದೆ. ಒಂದೇ ಶಾಲೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸುವ ಶಿಕ್ಷಕರು ವಿದ್ಯಾರ್ಥಿಗಳ ಅಗತ್ಯಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಅವರಿಗೆ ಅಗತ್ಯಕ್ಕೆ ತಕ್ಕ ಶೈಕ್ಷಣಿಕ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ. ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾ ಸೌಲಭ್ಯಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಮುದಾಯದ ಸಹಭಾಗಿತ್ವ ಹೆಚ್ಚಿಸಲು ಶಿಕ್ಷಕರ ಸ್ಥಿರತೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.


ಶಾಲೆ-ಸಮುದಾಯ ಸಂಬಂಧ ಮತ್ತಷ್ಟು ಬಲ

ದೀರ್ಘಾವಧಿಯ ಸೇವಾವಧಿಯು ಶಿಕ್ಷಕರಿಗೆ ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಸದಸ್ಯರು, ಪೋಷಕರು ಹಾಗೂ ಸ್ಥಳೀಯ ದಾನಿಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಲು ಸಹಕಾರಿಯಾಗಲಿದೆ. ಈ ಬಾಂಧವ್ಯವು ಶಾಲೆಗಳ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ನೆರವು ಮತ್ತು ಸಾಮಾಜಿಕ ಸಹಕಾರವನ್ನು ಸ್ಥಳೀಯ ಮಟ್ಟದಲ್ಲಿಯೇ ಕ್ರೋಢೀಕರಿಸಲು ನೆರವಾಗಲಿದೆ.

ಸಂಪಾದಕೀಯ

ಪ್ರಬಲ ಕಾಯ್ದೆ ಜಾರಿಯಾಗಬೇಕಿದೆ

ಮಹಾರಾಷ್ಟ್ರದ ನಾಗಪುರದಲ್ಲಿ ವಾಯುಪಡೆಯ ಅಧಿಕಾರಿಯೊರ್ವರ ಪತ್ನಿಗೆ ಮತ್ತು ಬಗಿಸಿ, ಅತ್ಯಾಚಾರ ಎಸಗಿ ಬಲವಂತದ ಮತಾಂತರ ಪ್ರಕರಣ ಗಂಭೀರವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಬಲವಂತದ ಮತಾಂತರ ಕೂಡದು ಎಂಬ ಭಾವನೆ ಜಾಗೃತವಾಗಿರುವ ಸಂದರ್ಭದಲ್ಲಿ ಮತ್ತು ಮತಾಂತರ ವಿರೋಧಿ ಪ್ರಬಲ ಕಾಯ್ದೆಯನ್ನು ಜಾರಿಗೆ ತರಬೇಕೆಂಬ ಕೂಗಿನ ನಡುವೆಯೂ ಇಂಥ ಪ್ರಕರಣಗಳು ಸಂಭವಿಸುತಿರುವುದು ಮತಾಂಧತೆಯ ಪರಾಕಾಷ್ಠೆ ಮತ್ತು ಕಾನೂನಿನ ಭಯ ಇಲ್ಲದಿರುವುದರ ಸಂಕೇತ. ಅದರಲ್ಲೂ ವಾಯುಪಡೆಯ ಅಧಿಕಾರಿಯೊರ್ವರ ಪತ್ನಿ ಕೂಡ ಸುರಕ್ಷಿತವಲ್ಲ ಎಂಬುದು ಇನ್ನೂ ಗಂಭೀರವಾಗಿ ಚಿಂತಿಸಬೇಕಾದ ವಿಷಯ.



ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲ್ಪಟ್ಟ ಆರೋಪಿಗಳು ಸಮಾಜಘಾತುಕ ಕೃತ್ಯಕ್ಕೆ ಇಳಿದವರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಈ ಪ್ರಕರಣ ದೇಶಕ್ಕೆ ಅತ್ಯಂತ ಪ್ರಬಲವಾದ ಮತಾಂತರ ವಿರೋಧಿ ಕಾನೂನಿನ ಅವಶ್ಯಕತೆಯನ್ನು ಎತ್ತಿತೋರಿಸುತ್ತದೆ.

ಮತಾಂಧತೆಯ ತೀವ್ರತೆ ನಾನಾ ಆಕಾರಗಳನ್ನು ಹೊತ್ತು ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ ಎನ್ನುವುದಕ್ಕೆ ಇದು ಉದಾಹರಣೆ. ಅತ್ಯಾಚಾರ, ಮಾದಕವಸ್ತುಗಳ ಬಳಕೆಗಳಿಂದ ಕಾನೂನು-ಸುವ್ಯವಸ್ಥೆಯ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತವೆ. ಇವೆಲ್ಲದರ ತರುವಾಯ ಕೂಡ ಮತಾಂತರ ವಿರೋಧಿ ಕಾಯ್ದೆ ಜಾರಿಗೆ ವಿರೋಧಗಳು ವ್ಯಕ್ತವಾಗುತ್ತಿರುವುದು ದುರಂತ. ರಾಜಕೀಯ ಪಕ್ಷಗಳು ಸೆಕ್ಯುಲರ್ ಭ್ರಮೆಯಿಂದ ಕಾಯ್ದೆಗೆ ವಿರೋಧವನ್ನು ವ್ಯಕ್ತಪಡಿಸುತ್ತಾರೆಯೇ ವಿನಾ ಅಪರಾಧ ಪ್ರಕರಣಗಳಿಗೆ ಕೊನೆ ಹಾಡುವ ಮನಸು ಮಾಡುತ್ತಿಲ್ಲ. ತನ್ನ ಇಚ್ಛೆಗೆ ವಿರುದ್ಧವಾಗಿ ಮಾಡುವ ಮತಾಂತರ ಸಮಾಜದ ಶಾಂತಿಗೆ ಭಂಗ ತರುವುದಷ್ಟೇ ಅಲ್ಲದೆ, ಸೌಹಾರ್ದದ ಹಾದಿಗಳನ್ನು ಮುಚ್ಚುತ್ತಾ ಬರುತ್ತದೆ. ಪರಸ್ಪರ ಸಂಶಯ, ಅಸಹನೆಗಳು ಉಂಟಾಗುತ್ತದೆ. ಇವೆಲ್ಲದರ ಪರಿಹಾರಕ್ಕೆ ಯೋಗ್ಯ ಕಾನೂನೊಂದೇ ಪರಿಹಾರ. ಕಾನೂನಿನ ಭಯವೊಂದೇ ವ್ಯವಸ್ಥಿತ ಮತ್ತು ಸೌಹಾರ್ದ ಸಮಾಜವನ್ನು ನಿರ್ಮಿಸಬಲ್ಲದು. ಈ ಕಾಲಘಟ್ಟದಲ್ಲೂ ಇಂಥ ಪ್ರಕರಣಗಳು ನಡೆಯುತ್ತವೆ ಎಂದರೆ ಆದಷ್ಟು ಶೀಘ್ರವಾಗಿ ಕಾನೂನು ಜಾರಿಗೆ ಬರಲೇ ಬೇಕಿದೆ.

ಬಲವಂತದ ಮತಾಂತರ ಕಾಯ್ದೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಆಯ್ಕೆಗೆ ಅಡ್ಡಿಯಾಗದು. ಯಾವ ರೀತಿಯಲ್ಲೂ ಅದು ಸಂವಿಧಾನಬಾಹಿರವಲ್ಲ. ಬಲವಂತದ ಅಥವಾ ಮೋಸದ ಮತಾಂತರಗಳನ್ನು ತಡೆಯಲು ಕೆಲವು ರಾಜ್ಯಗಳು ಜಾರಿಗೆ ತಂದ ಕಾಯ್ದೆಗಳು ಈಗಾಗಲೇ ಯಶಸ್ವಿಯಾಗಿವೆ. ಬಲವಂತ, ಒತ್ತಾಯ ಮತ್ತು ಆಮಿಷದ ಮೂಲಕ ಮಾಡುವ ಮತಾಂತರಗಳನ್ನು ಮಾತ್ರ ಕಾಯ್ದೆ ನಿಷೇಧಿಸುತ್ತದೆ. ಕಾಯ್ದೆ ದುರ್ಬಲ ವರ್ಗ, ಅಪ್ರಾಪ್ತರು ಮತ್ತು ಸಾಮಾಜಿಕವಾಗಿ ಅಸುರಕ್ಷಿತರನ್ನು ರಕ್ಷಿಸಲು ಬಳಕೆಯಾಗುತ್ತಿದೆ. ಹೆಚ್ಚುವರಿ ಶಿಕ್ಷೆಯನ್ನೂ ಕಾನೂನಿನಲ್ಲಿ ಅಳವಡಿಸಬೇಕಿದೆ. ಇದುವರೆಗೆ ರಾಜ್ಯಗಳು ಜಾರಿಗೆ ತಂದ ಕಾಯ್ದೆಗಳಿಂದ ಯಾವ ರಾಜ್ಯಗಳಲ್ಲೂ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಂದ ಉದಾಹರಣೆಗಳಿಲ್ಲ. ಜೊತೆಗೆ ಮತಾಂತರ ಮತ್ತು ಸ್ವ ಇಚ್ಛೆಯ ಧಾರ್ಮಿಕ ಆಯ್ಕೆ ನಡುವಿನ ಗೊಂದಲಗಳು ಉಂಟಾಗಲಿಲ್ಲ ಎಂಬುದು ಇಲ್ಲಿ ಉಲ್ಲೇಖನೀಯ. ಕೆಲವು ವಿಮರ್ಶಕರು ಈಗಿರುವ ದಂಡಸಂಹಿತೆ ಸಾಕಾಗಬಹುದು ಎನ್ನುತ್ತಾರೆ. ಆದರೆ ಅದರ ಕಣ್ಣಮುಂದೆಯೇ ನಾಗಪುರದ ಘಟನೆ ನಡೆಯಿತು ಎಂಬುದನ್ನು ನೋಡಬೇಕಿದೆ.

ಸುಸ್ಥಿರವಾದ ಸಂಪತ್ತನ್ನು ಸಂಗ್ರಹಿಸು

ಅತಸ್ಕರ ಕರಗ್ರಾಹ್ಯಂ ಅರಾಜಕ ವಶಂ ವದಮ್ ।
ಅದಾಯಾದ ವಿಭಾಗಾರ್ಹಂ ಧನಮಾರ್ಜಯ ಸುಸ್ಥಿರಮ್ ॥ -ಸುಭಾಷಿತ ಸುಧಾನಿಧಿ

ಕಳ್ಳರ ಕರಗತವಾಗದ, ರಾಜರು ವಶಪಡಿಸಿಕೊಳ್ಳಲಾಗದ, ದಾಯಾದಿಗಳು ಹಂಚಿಕೊಳ್ಳಲಾಗದ ಸುಸ್ಥಿರವಾದ ಐಶ್ವರ್ಯವನ್ನು ಸಂಪಾದಿಸು – ಎಂಬುದು ಶ್ಲೋಕಾರ್ಥ.

ಎಲ್ಲರ ಅಪೇಕ್ಷೆಯಿರುವುದು ಸಂಪತ್ತನ್ನು ಸಂಪಾದಿಸಬೇಕು ಎಂಬುದಾಗಿ. ಯಾರು ತಾನೇ ಸಂಪತ್ತನ್ನು ಬಯಸುವುದಿಲ್ಲ. ಪ್ರತಿಯೊಬ್ಬರ ಬಯಕೆಯೂ ಇದೇ ಆಗಿದೆ. ಯಾವ ಮಾರ್ಗವಾದರೂ ಸರಿ. ಹೇಗಾದರೂ ಸರಿ, ಸಂಪತ್ತು ಬರಬೇಕು. ಇಂದಿನ



ದಿನಗಳಲ್ಲಿ ಸಂಪತ್ತಿಲ್ಲದೇ ಬದುಕನ್ನು ನಿರ್ವಹಿಸಲು ಸಾಧ್ಯವಿಲ್ಲ. ಏನೇ ಮಾಡುವುದಿದ್ದರೂ ಸಂಪತ್ತು ಬೇಕು. ಸಂಪತ್ತು ಎಂದರೆ ಕೇವಲ ಹಣವಲ್ಲ. ಆರೋಗ್ಯವೂ ಸಂಪತ್ತು, ಜ್ಞಾನವೂ ಸಂಪತ್ತು, ವಿದ್ಯೆಯೂ ಸಂಪತ್ತು, ಸಂಸ್ಕಾರವೂ ಸಂಪತ್ತು. ಹೀಗಿದ್ದರೂ ಹೆಚ್ಚಿನವರಾದ ನಾವು ಹಣವನ್ನೇ ಸಂಪತ್ತು ಎಂದುಕೊಂಡಿದ್ದೇವೆ. ಎಲ್ಲ ಬಗೆಯ ಸಂಪತ್ತಿರಬೇಕಾದುದು ಸಹಜವಾದರೂ ಪ್ರಕೃತ ಶ್ಲೋಕದಲ್ಲಿ ಇವೆಲ್ಲವನ್ನೂ ಮೀರಿದ ಸುಸ್ಥಿರವಾದ ಐಶ್ವರ್ಯವನ್ನು ಸಂಪಾದಿಸುವಂತೆ ಆಗ್ರಹಪಡಿಸುತ್ತಾನೆ.

ಸುಸ್ಥಿರವಾದ ಸಂಪತ್ತೆಂದರೆ ವಿದ್ಯೆ ಮಾತ್ರ. ಅಂತಹ ವಿಶೇಷತೆ ವಿದ್ಯೆಗಿದೆ. ವಿದ್ಯೆಗೆ ತನ್ನದೇ ಆದ ವಿಶೇಷತೆಯಿದೆ. ತನ್ನದೇ ಆದ ಮಹತ್ವವಿದೆ. ಮೂರು ವಿಶೇಷಣಗಳೊಂದಿಗೆ ವಿದ್ಯಾಧನದ ಹಿರಿಮೆಯನ್ನು ಹೇಳಲಾಗಿದೆ. ಮೊದಲನೆಯದು 'ಅತಸ್ಕರ ಕರಗ್ರಾಹ್ಯಮ್' ಅಂದರೆ ಕಳ್ಳರ ಕರಗತವಾಗದ ಸಂಪತ್ತು ಎಂದರ್ಥ. ಭೌತಿಕ ಸಂಪತ್ತಾದ ಹಣ, ಒಡವೆ, ಭೂಮಿ... ಇತ್ಯಾದಿಗಳನ್ನು ಗಳಿಸಿದರೆ ಒಂದು ದಿನ ಕಳ್ಳಕಾಕರ ವಶವಾಗುತ್ತದೆ. ಕಳ್ಳರು ಹಣ, ಒಡವೆಗಳನ್ನು ಕದ್ದರೆ, ಗೂಂಡಾಗಿರಿಯಲ್ಲಿ ತೊಡಗಿಕೊಳ್ಳುವ ಖದೀಮರು ಹೆದರಿಸಿ, ಬೆದರಿಸಿ ಆಸ್ತಿಯನ್ನು ತಮದನ್ನಾಗಿಸಿಕೊಳ್ಳುತ್ತಾರೆ. ಆದ್ದರಿಂದ ಇಂತಹ ಸಂಪತ್ತು ಶಾಶ್ವತವಲ್ಲ. ಕಳ್ಳರು ಕದಿಯಲಾರದ ಸಂಪತ್ತೆಂದರೆ ಜ್ಞಾನ ಮಾತ್ರ. ಯಾರೊಬ್ಬರಿಂದಲೂ ಇದು ಅಪಹರಿಸಲ್ಪಡದು.

ಜ್ಞಾನದ ಇನ್ನೊಂದು ವಿಶೇಷತೆಯೆಂದರೆ 'ಅರಾಜಕ ವಶಂವದಮ್'. ಅಂದರೆ ರಾಜರಿಂದಲೂ ವಶಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು. ಉಳಿದ ಭೌತಿಕ ಸಂಪತ್ತುಗಳನ್ನು ರಾಜನು ವಶಪಡಿಸಿಕೊಳ್ಳಲು ಸಾಧ್ಯ. ಆದರೆ ಗಳಿಸಿದ ಜ್ಞಾನವನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ.

ಉಳಿದ ಸಂಪತ್ತುಗಳಲ್ಲಿ ಭಾಗವನ್ನು ದಾಯಾದಿಗಳು ಕೇಳಬಹುದು. ಒಡಹುಟ್ಟಿದವರು ಸಮಪಾಲನ್ನು ಕೇಳಬಹುದು. ಗಳಿಸಿದ ಜ್ಞಾನದಲ್ಲಿ ಪಾಲು ಕೇಳಲಾದೀತೆ? ಅಥವಾ ಪಾಲು ಮಾಡಿ ಕೊಡಲಾದೀತೆ? ಸರ್ವಥಾ ಸಾಧ್ಯವಿಲ್ಲ. ಆದ್ದರಿಂದಲೇ ವಿದ್ಯೆಯು ಸಂಪತ್ತುಗಳಲ್ಲಿ ಪ್ರಧಾನವಾದ ಸಂಪತ್ತು ಎನಿಸಿಕೊಂಡಿದೆ. ಪರಿಶ್ರಮದಿಂದ ಗಳಿಸಿಕೊಂಡವರಿಗೆ ಇದು ಪೂರ್ಣ ಸಲ್ಲುತ್ತದೆ. ಆದ್ದರಿಂದ ಸ್ಥಿರವಾಗಿ ನಮ್ಮಲ್ಲಿಯೇ ಉಳಿಯಬಲ್ಲ ವಿದ್ಯಾ ಸಂಪತ್ತನ್ನು ಗಳಿಸಬೇಕು ಎಂಬುದು ಕಥನದ ಆಶಯ.

ಪರಿಶ್ರಮಪಟ್ಟು ವಿದ್ಯೆ ಗಳಿಸಬೇಕು ಎಂಬುದು ತಾತ್ಪರ್ಯ. ಇದು ವಿದ್ಯೆಯ ಮಹತ್ವವನ್ನು ಸಾರುತ್ತದೆ. ವಿದ್ಯೆಯ ಹಿರಿಮೆಯನ್ನು ಸಾರುವ ಹತ್ತಾರು ಶ್ಲೋಕಗಳಿವೆ. 'ನ ಚೋರಹಾರ್ಯ' ಎಂಬ ಸುಭಾಷಿತ ವಿದ್ಯೆಯ ಮಹತ್ವವನ್ನು ಸಾರಿ ಹೇಳಿ, 'ವಿದ್ಯಾಧನಂ ಸರ್ವ ಧನಾತ್ ಪ್ರಧಾನಮ್' ಎಂದಿದೆ. ಆದ್ದರಿಂದ ವಿದ್ಯಾವಂತರಾಗೋಣ, ಜ್ಞಾನಿಗಳಾಗೋಣ. ಎಲ್ಲರೂ ಜ್ಞಾನಿಗಳಾಗಲು ಸಹಕರಿಸೋಣ.

ಟ್ರಂಪ್ ಭೇಟಿ: ಮೋದಿ ಸಂವೇದನಾಶೀಲ ನಡೆ

ಪತ್ರ ಮಿತ್ರ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರು ಭಾರತೀಯ ನಾವಿಕರ ದುರಂತ ಸಾವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಘಟನೆ ಹೊಸ ಭಾರತದ ವಿದೇಶಾಂಗ ನೀತಿಗೆ ಒಂದು ಉತ್ತಮ ಉದಾಹರಣೆ. ವಿದೇಶಾಂಗ ನೀತಿ ಸಂಬಂಧಗಳಲ್ಲಿ ಆರ್ಥಿಕ ಸಹಕಾರ ಮತ್ತು ಭದ್ರತೆಯ ಮಾತುಕತೆಗಳು ಮುಖ್ಯವಾದರೂ, ಮಾನವೀಯತೆ ಮತ್ತು ಜೀವಹಾನಿ ಸಂಬಂಧಿತ ಪ್ರಶ್ನೆಗಳು ಯಾವತ್ತೂ ಅಗ್ರಸ್ಥಾನದಲ್ಲಿರಬೇಕು ಎಂದು ಪ್ರಧಾನಿ ಸ್ಪಷ್ಟಪಡಿಸಿದ್ದಾರೆ. ನಿಜಕ್ಕೂ ಅದು ಭಾರತದ ಪರಂಪರೆ ಪ್ರತಿಪಾದಿಸುವ ಮೌಲ್ಯಗಳು. ಭಾರತೀಯ ಸಮುದ್ರಯಾನ ಸಿಬ್ಬಂದಿಯ ಸುರಕ್ಷತೆ ಕುರಿತು ಭಾರತ ಸದಾ ದೃಢ ಮತ್ತು ಸ್ಪಷ್ಟ ನಿಲುವು ಹೊಂದಿದೆ ಎಂಬುದನ್ನು ಈ ಭೇಟಿ ಮತ್ತೊಮ್ಮೆ ನೆನಪಿಸಿತು. ತಮ್ಮ ಹಿಂದೆ ನಾಡ ಪ್ರಭುಗಳು ಇದ್ದಾರೆ ಎನ್ನುವ ಧೈರ್ಯವನ್ನು ಇದು ಹೆಚ್ಚಿಸುತ್ತದೆ. ಭಾರತೀಯ ನಾವಿಕರ ಕುಟುಂಬಗಳಿಗೆ ನ್ಯಾಯ, ಸಾಂತ್ವನ ಮತ್ತು ಮತ್ತು ಹೊಣೆಗಾರಿಕೆ ಖಚಿತಪಡಿಸುವುದು ಸರ್ಕಾರದ ನೈತಿಕ ಜವಾಬ್ದಾರಿ ಎಂಬ ಸಂದೇಶವೂ ಈ ಆಕ್ಷೇಪದಲ್ಲಿ ಅಡಗಿದೆ. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತ ತನ್ನ ನಾಗರಿಕರ ಹಕ್ಕು ಮತ್ತು ಸುರಕ್ಷತೆಗಾಗಿ ಎತ್ತುವ ಧ್ವನಿ, ದೇಶದ ವಿದೇಶಾಂಗ ನೀತಿಯ ಬಲವನ್ನು ತೋರಿಸುತ್ತದೆ. ಈ ರಾಜತಾಂತ್ರಿಕ ಭೇಟಿ ಕೇವಲ ಕಾರ್ಯಕಾರಿ ಸಂಭಾಷಣೆಯಾಗದೆ, ಮಾನವೀಯ ಸಂವೇದನೆಗೂ ವೇದಿಕೆಯಾಯಿತು.

-ಶ್ರೀನಿವಾಸ್ ಹಳಗತ್ತಿ, ಮುದೋಳ

ನೋಂದಣಿ ಮಾಡಿಕೊಳ್ಳದಿರುವುದು ಅಪರಾಧವಲ್ಲ

ಅನೂಪ್ ದೇಶಪಾಂಡೆ, ಹೈಕೋರ್ಟ್ ವಕೀಲರು



ಆರ್‌ಎಸ್‌ಎಸ್ ನೋಂದಣಿ ಮಾಡಿಕೊಳ್ಳದಿರುವುದರ ಕುರಿತು ಪ್ರಿಯಾಂಕ್ ಖರ್ಗೆ ಅವರ ವಾಗ್ದಾಳಿ ರಾಜಕೀಯ ಚರ್ಚೆಯಲ್ಲಿ ಪ್ರಬಲವಾಗಿ ಧ್ವನಿಸಬಹುದಾದರೂ, ಕಾನೂನಿನ ದೃಷ್ಟಿಯಲ್ಲಿ ಅದು ಅತ್ಯಂತ ದುರ್ಬಲವಾದದ್ದು. ಪ್ರತಿಯೊಂದು ಸಂಸ್ಥೆಯು ಅಸ್ತಿತ್ವಕ್ಕೆ ಬರುವ ಮೊದಲು ನೋಂದಾಯಿಸಿಕೊಳ್ಳಲೇಬೇಕು ಎಂದು ಸಂವಿಧಾನ ಎಲ್ಲೂ ಹೇಳುವುದಿಲ್ಲ. ಭಾರತದ ಸುಪ್ರೀಂ ಕೋರ್ಟ್ ಈಗಾಗಲೇ ಹಲವು ಬಾರಿ ಈ ವಿಷಯವನ್ನು ಸ್ಪಷ್ಟಪಡಿಸಿದೆ. ಆದ್ದರಿಂದ, ಆರ್‌ಎಸ್‌ಎಸ್ ನೋಂದಾಯಿತವಾಗಿಲ್ಲ ಎಂಬ ಒಂದೇ ಕಾರಣಕ್ಕೆ ಅದು ಸಂಶಯಾಸ್ಪದ ಅಥವಾ ಕಾನೂನುಬಾಹಿರ ಸಂಸ್ಥೆ ಎಂದು ಬಿಂಬಿಸುವುದು ಕಾನೂನಾತ್ಮಕ ವಾದವಲ್ಲ. ಆದ್ದರಿಂದ ಇದನ್ನು ಕಾನೂನಿನ ಮುಖವಾಡ ಧರಿಸಿದ ಕೇವಲ ರಾಜಕೀಯ ದಾಳಿ ಎನ್ನಬಹುದು.

ಸಂವಿಧಾನದ ವಿಧಿ 19(1)(ಸಿ) ನಾಗರಿಕರಿಗೆ ಸಂಘ-ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕನ್ನು ನೀಡುತ್ತದೆ. ಇದು ಮೂಲಭೂತ ಹಕ್ಕಾಗಿದೆ. ಅಂದರೆ ಜನರು ಸಂಘಟನೆಗಳನ್ನು ರಚಿಸಲು ಸರ್ಕಾರದ ಅನುಮತಿಯನ್ನು ಪಡೆಯದೆ ಸಂಸ್ಥೆಗಳನ್ನು ನಿರ್ವಹಿಸಲು ಸ್ವತಂತ್ರರಾಗಿದ್ದಾರೆ. ಈ ಹಕ್ಕು ನಾಗರಿಕರಿಗೆ ಸೇರಿದ್ದೇ ಹೊರತು ಸರ್ಕಾರಕ್ಕಲ್ಲ. ನೋಂದಾಯಿತ ಸಂಸ್ಥೆಗಳು ಮಾತ್ರ ಮಾನ್ಯ, ನೋಂದಣಿಯಾಗದ ಸಂಸ್ಥೆಗಳು ಅಮಾನ್ಯ ಎಂದು ನಿರ್ಧರಿಸುವ ಅಧಿಕಾರ ಸರ್ಕಾರಕ್ಕಿಲ್ಲ. ಕಾನೂನು ಅದನ್ನು ಬೆಂಬಲಿಸುವುದಿಲ್ಲ. ಸುಪ್ರೀಂಕೋರ್ಟ್ ಈ ವಿಷಯವನ್ನು 'ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ವರ್ಸಸ್ ಇಂಡಸ್ಟ್ರಿಯಲ್ ಟ್ರಿಬ್ಯೂನಲ್' (AIR 1962 SC 171) ಪ್ರಕರಣದಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಿದೆ. ಸಂಘಟನೆಯನ್ನು ಸ್ಥಾಪಿಸುವ ಹಕ್ಕು ಪರಿಪೂರ್ಣ ಮೂಲಭೂತ ಹಕ್ಕು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಆದರೆ, ಸರ್ಕಾರದ ಕಡೆಯಿಂದ ಮಾನ್ಯತೆ ಪಡೆಯುವುದು ಮೂಲಭೂತ ಹಕ್ಕಲ್ಲ ಎಂದೂ ಅದು ಹೇಳಿದೆ. ಸರಳವಾಗಿ ಹೇಳುವುದಾದರೆ, ಸರ್ಕಾರಕ್ಕೆ ಇಷ್ಟವಿರಲಿ ಅಥವಾ ಇಲ್ಲದಿರಲಿ ನಾಗರಿಕರು ಸಂಘಟನೆಯನ್ನು ಕಟ್ಟಬಹುದು. ಸರ್ಕಾರ ಆ ಮೂಲಭೂತ ಸ್ವಾತಂತ್ರ್ಯವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಅದು ಸರ್ಕಾರದ ಅಧಿಕೃತ ಮಾನ್ಯತೆ ಅಥವಾ ವಿಶೇಷ ಸವಲತ್ತು ಮಾತ್ರವೇ ಹೊರತು, ಅನುಮತಿಯೆಂದಲ್ಲ. ನ್ಯಾಯಾಲಯವು ಇದೇ ತತ್ವವನ್ನು 'ಬೋರ್ಡ್ ಆಫ್ ಟ್ರಸ್ಟೀಸ್, ಆಯುರ್ವೇದಿಕ್ ಅಂಡ್ ಯುನಾನಿ ಟಿಬಿಯಾ ಕಾಲೇಜ್ ವರ್ಸಸ್ ಸ್ಟೇಟ್ ಆಫ್ ಡೆಹಲಿ' (AIR 1962 SC 458) ಪ್ರಕರಣದಲ್ಲೂ ಪುನರುಚ್ಚರಿಸಿದೆ. ಯಾವುದೇ ಒಂದು ನೋಂದಾಯಿತವಲ್ಲದ ಸಂಸ್ಥೆಯು ಕೇವಲ ನೋಂದಣಿಯಾಗಿಲ್ಲ ಎಂಬ ಕಾರಣಕ್ಕಾಗಿ ಕಾನೂನುಬಾಹಿರವಾಗುವುದಿಲ್ಲ ಎಂದು ಅದು ತೀರ್ಪು ನೀಡಿದೆ. ಅದು ಒಂದು ಕಂಪನಿ ಅಥವಾ ನೋಂದಾಯಿತ ಸಂಸ್ಥೆಯಂತೆ ಕಾನೂನಾತ್ಮಕ ಅಧಿಕಾರಗಳನ್ನು ಹೊಂದಿಲ್ಲದಿರಬಹುದು, ಆದರೆ ಅದು ಬೇರೆ ವಿಷಯ. ಆದಾಗ್ಯೂ, ಅದು ಕಾನೂನುಬದ್ಧ ಜನರ ಗುಂಪಾಗಿಯೇ ಇರುತ್ತದೆ. ನ್ಯಾಯಾಲಯದ ತಾರ್ಕಿಕತೆಯು ಮುಖ್ಯವಾಗಿದೆ. ಏಕೆಂದರೆ ಇದು ಸಾರ್ವಜನಿಕ ಚರ್ಚೆಯಲ್ಲಿ ಹೆಚ್ಚಾಗಿ ಗೊಂದಲಕ್ಕೀಡಾಗುವ ಎರಡು ವಿಷಯಗಳನ್ನು ಪ್ರತ್ಯೇಕಿಸುತ್ತದೆ. ಒಂದು ಗುಂಪಾಗಿ ಅಸ್ತಿತ್ವದಲ್ಲಿರುವ ಹಕ್ಕು ಮತ್ತು ನೋಂದಣಿಯಿಂದ ಸಿಗುವ ಕಾನೂನು ಪ್ರಯೋಜನಗಳನ್ನು ಆನಂದಿಸುವ ಹಕ್ಕು.

'ಸಿದ್ಧಾರ್ಥ್ ಧೀರೇಂದ್ರ ಭಟ್ ವರ್ಸಸ್ ಸ್ಟೇಟ್ ಆಫ್ ಗುಜರಾತ್' (AIR 1999 SC 2244) ಪ್ರಕರಣದಲ್ಲಿ ಈ ನಿಲುವು ಇನ್ನಷ್ಟು ಸ್ಪಷ್ಟವಾಗುತ್ತದೆ. ಸ್ವಯಂಪ್ರೇರಿತವಾಗಿ ಸಂಘಟನೆಯನ್ನು ಕಟ್ಟುವ ನಾಗರಿಕರಿಗೆ ಕೇವಲ ಒಟ್ಟಿಗೆ ಸೇರಲು ಸರ್ಕಾರದ ಪೂರ್ವ ಅನುಮತಿಯಾಗಲಿ ಅಥವಾ ಕಡ್ಡಾಯ ನೋಂದಣಿಯಾಗಲಿ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದು ಕಾನೂನು. ಸಚಿವರ ವೈಯಕ್ತಿಕ ಅಭಿಪ್ರಾಯವಲ್ಲ ಅಥವಾ ಉತ್ತರದಾಯಿತ್ವದ ಬಗೆಗಿನ ಸಾರ್ವಜನಿಕ ಘೋಷಣೆಯೂ ಅಲ್ಲ. ಒಂದು ಗುಂಪಿನ ಮೂಲ ಅಸ್ತಿತ್ವಕ್ಕೆ ಕಡ್ಡಾಯ ನೋಂದಣಿ ಅಗತ್ಯವಿಲ್ಲ ಎಂದು ಕಾನೂನು ಹೇಳುತ್ತದೆ. ಒಂದು ವೇಳೆ ಆ ಗುಂಪು ನಂತರ ಕೆಲವು ಕಾನೂನಾತ್ಮಕ ಪ್ರಯೋಜನಗಳನ್ನು ಬಯಸಿದರೆ, ಅದು ಬೇರೆ ವಿಷಯ. ಇದೇ ವಿಷಯದಲ್ಲಿ ಖರ್ಗೆ ಅವರ ಹೇಳಿಕೆಯು ಮಿತಿ ಮೀರಿದಂತಿದೆ. ಅವರು ಕೇವಲ ಪಾರದರ್ಶಕತೆಯನ್ನು ಕೇಳುತ್ತಿಲ್ಲ. ಅವರು ನೋಂದಣಿಯ ಕೊರತೆಯನ್ನು ಕಾನೂನುಬಾಹಿರ ಎಂದು ರಾಜಕೀಯ ಆರೋಪವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಸಂವಿಧಾನ ಅದಕ್ಕೆ ಅವಕಾಶ ನೀಡುವುದಿಲ್ಲ. ಒಂದು ಸಂಸ್ಥೆಯು ನೋಂದಣಿ ಇಲ್ಲದೆಯೂ ಅಸ್ತಿತ್ವದಲ್ಲಿರಬಹುದು. ಅದು ನೋಂದಣಿ ಇಲ್ಲದೆಯೂ ಕಾರ್ಯನಿರ್ವಹಿಸಬಹುದು. ನೋಂದಣಿ ಇಲ್ಲದೆಯೂ ಅದು ಕಾನೂನುಬದ್ಧವಾಗಿರಬಹುದು. ಸರ್ಕಾರವು ಒಂದು ಸಂಸ್ಥೆಯನ್ನು ಅಥವಾ ಅದರ ಸಿದ್ಧಾಂತವನ್ನು ದ್ವೇಷಿಸುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಕಾನೂನುಬಾಹಿರ ಎನ್ನಲು ಸಾಧ್ಯವಿಲ್ಲ.

'ಸ್ಟೇಟ್ ಆಫ್ ಮಧ್ಯಪ್ರದೇಶ ವರ್ಸಸ್ ರಮಾಶಂಕರ್ ರಘುವಂಶಿ' (1983 AIR 374) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಇಲ್ಲಿ ವಿಶೇಷವಾಗಿ ಮಹತ್ವದ್ದಾಗಿದೆ. ಆ ಪ್ರಕರಣದಲ್ಲಿ ಮುನ್ಸಿಪಲ್ ಶಾಲಾ ಶಿಕ್ಷಕರೊಬ್ಬರು ಆರ್‌ಎಸ್‌ಎಸ್ ಮತ್ತು ಜನಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು ಎಂಬ ಕಾರಣಕ್ಕಾಗಿ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ಸುಪ್ರೀಂ ಕೋರ್ಟ್ ಸರ್ಕಾರದ ಈ ಕ್ರಮವನ್ನು ರದ್ದುಗೊಳಿಸಿತು. ಕೇವಲ ಸೈದ್ಧಾಂತಿಕ ಅಥವಾ ರಾಜಕೀಯ ಒಡನಾಟದ ಕಾರಣಕ್ಕಾಗಿ ಸರ್ಕಾರಿ ಉದ್ಯೋಗವನ್ನು ನಿರಾಕರಿಸುವುದು ಸಂವಿಧಾನದ ವಿಧಿ 14 ಮತ್ತು 16 ರ ಉಲ್ಲಂಘನೆಯಾಗುತ್ತದೆ ಎಂದು ಅದು ತೀರ್ಪು ನೀಡಿತು. ಆರ್‌ಎಸ್‌ಎಸ್ ಒಡನಾಟವು ತನ್ನದೇ ಆದ ರೀತಿಯಲ್ಲಿ ಯಾವುದೇ ಕಾನೂನಾತ್ಮಕ ಕಪ್ಪು ಚುಕ್ಕೆಯಲ್ಲ ಎಂಬುದನ್ನು ನ್ಯಾಯಾಲಯ ಸ್ಪಷ್ಟಪಡಿಸಿದೆ. ಈ ಪ್ರಕರಣದಲ್ಲಿ ನ್ಯಾಯಾಲಯದ ತಾರ್ಕಿಕತೆಯು ಕೇವಲ ಒಬ್ಬ ಶಿಕ್ಷಕನ ಕೆಲಸದ ಮಿತಿಯನ್ನು ಮೀರಿ ಬೆಳೆದಿತ್ತು. ರಾಜಕೀಯ ಅಥವಾ ಸೈದ್ಧಾಂತಿಕ ಸಹಾನುಭೂತಿಯನ್ನು ಶಿಕ್ಷೆಗೆ ಕಾರಣವಾಗಿ ನೋಡುವ ಸರ್ಕಾರದ ಮನಸ್ಥಿತಿಯ ವಿರುದ್ಧ ಅದು ಎಚ್ಚರಿಕೆ ನೀಡಿತ್ತು. ಪ್ರಜಾಪ್ರಭುತ್ವದಲ್ಲಿ ಸರ್ಕಾರಕ್ಕೆ ಇಷ್ಟವಿಲ್ಲದಿದ್ದ ತಕ್ಷಣವೇ ಆಲೋಚನೆ, ನಂಬಿಕೆ ಮತ್ತು ಸಂಘಟನೆಯನ್ನು ಅಪರಾಧದ ನಡವಳಿಕೆಯಂತೆ ನೋಡಲು ಸಾಧ್ಯವಿಲ್ಲ ಎಂದು ಆ ತೀರ್ಪಿನ ಸಾರವಾಗಿತ್ತು.

ಭಾರತೀಯ ತೆರಿಗೆ ಕಾನೂನು ಕೂಡ ಬಾಡಿ ಆಫ್ ಇಂಡಿವಿಜುವಲ್ಸ್ (BOI) ಅಥವಾ ವ್ಯಕ್ತಿಗಳ ಒಕ್ಕೂಟ ಎಂಬ ವರ್ಗವನ್ನು ಗುರುತಿಸುತ್ತದೆ. ಆದಾಯ ತೆರಿಗೆ ಕಾಯ್ದೆಯಡಿ ಒಂದು ಒಕ್ಕೂಟವು ನೋಂದಾಯಿತವಾಗಿರಲಿ ಅಥವಾ ಇಲ್ಲದಿರಲಿ, ತೆರಿಗೆ ಉದ್ದೇಶಗಳಿಗಾಗಿ ಅದನ್ನು ಒಂದು 'ವ್ಯಕ್ತಿ' (Person) ಎಂದೇ ಪರಿಗಣಿಸಲಾಗುತ್ತದೆ. ಇದರರ್ಥ formal ಆದ ನೋಂದಣಿ ಇಲ್ಲದೆಯೂ ಜನರ ಗುಂಪುಗಳು ಅಸ್ತಿತ್ವದಲ್ಲಿರಬಹುದು ಮತ್ತು ನಿರ್ದಿಷ್ಟ ಉದ್ದೇಶಗಳಿಗಾಗಿ ಅವುಗಳನ್ನು ಗುರುತಿಸಬಹುದು ಎಂಬುದನ್ನು ಕಾನೂನು ಈಗಾಗಲೇ ಒಪ್ಪಿಕೊಂಡಿದೆ. ಇಲ್ಲಿ ವಿಷಯ ಸರಳವಾಗಿದೆ. ನೋಂದಣಿ ಮಾಡಿಕೊಳ್ಳದಿರುವುದು ಕಾನೂನುಬಾಹಿರತೆಯಲ್ಲ. ಅದು ಕೇವಲ ನೋಂದಣಿಯಾಗದಿರುವಿಕೆ ಅಷ್ಟೆ. ಒಂದು BOI ನೋಂದಾಯಿತ ಸಂಸ್ಥೆಯ ಎಲ್ಲಾ ಅಧಿಕಾರಗಳನ್ನು ಹೊಂದಿಲ್ಲದಿರಬಹುದು, ಆದರೆ ಕಾನೂನಿಗೆ ಅದನ್ನು ಹೇಗೆ ನಿರ್ವಹಿಸಬೇಕೆಂದು ತಿಳಿದಿದೆ. ನ್ಯಾಯಾಲಯಗಳು ಆರ್‌ಎಸ್‌ಎಸ್ ಅನ್ನು ವ್ಯಕ್ತಿಗಳ ಒಂದು ನಿರ್ದಿಷ್ಟ ಮತ್ತು ಗುರುತಿಸಬಹುದಾದ ಸಂಸ್ಥೆ ಎಂದೂ ಬಣ್ಣಿಸಿವೆ. 'ಟೇಕ್ ಚಂದ್ ಗುಪ್ತಾ ವರ್ಸಸ್ ಆರ್.ಕೆ. ಕರಂಜಿಯಾ' ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ಇದೇ ಭಾಷೆಯನ್ನು ಬಳಸಿದೆ. ಇದರರ್ಥ ಆರ್‌ಎಸ್‌ಎಸ್ ಅನ್ನು ಕಾನೂನಿನಲ್ಲಿ ಒಂದು ಸ್ಪಷ್ಟ ಮತ್ತು ಗುರುತಿಸಬಹುದಾದ ಸಂಸ್ಥೆಯಾಗಿ ಪರಿಗಣಿಸಲಾಗಿದೆಯೇ ಹೊರತು, ಕಾನೂನಿನ ತಿಳುವಳಿಕೆಗೆ ಹೊರತಾದ ಯಾವುದೋ ಒಂದು ನೆರಳಾಗಿ ಅಲ್ಲ. ನಂತರದ ಮಾನನಷ್ಟ ಪ್ರಕರಣಗಳಲ್ಲಿನ ನ್ಯಾಯಾಲಯದ ತಾರ್ಕಿಕತೆಯು ಇದೇ ಮೂಲಭೂತ ಕಲ್ಪನೆಯನ್ನು ಅವಲಂಬಿಸಿದೆ. ಒಂದು ನಿರ್ದಿಷ್ಟ ಗುಂಪು ಸಾಮಾನ್ಯ ಅರ್ಥದಲ್ಲಿ ನೋಂದಾಯಿಸಲ್ಪಡದಿದ್ದರೂ ಸಹ ಅದನ್ನು ಕಾನೂನು ಉದ್ದೇಶಗಳಿಗಾಗಿ ಗುರುತಿಸಬಹುದು. ಸಂಘ-ಸಂಸ್ಥೆಗಳ ಮೇಲೆ ಸರ್ಕಾರಕ್ಕೆ ಅನಿಯಮಿತ ಅಧಿಕಾರವಿದೆ ಎಂಬಂತೆ ವರ್ತಿಸಲು ಸಾಧ್ಯವಿಲ್ಲ ಎಂಬುದನ್ನು ತೋರಿಸುವ ಮತ್ತೊಂದು ಪ್ರಮುಖ ಪ್ರಕರಣವಿದೆ. 'ಸ್ಟೇಟ್ ಆಫ್ ಮದ್ರಾಸ್ ವರ್ಸಸ್ ವಿ.ಜಿ. ರಾವ್' ಪ್ರಕರಣದಲ್ಲಿ ಸಾಕಷ್ಟು ರಕ್ಷಣೆಗಳಿಲ್ಲದೆ ಕೇವಲ ಅಧಿಸೂಚನೆಯ ಮೂಲಕ ಸಂಘಟನೆಗಳನ್ನು ಕಾನೂನುಬಾಹಿರ ಎಂದು ಘೋಷಿಸಲು ಸರ್ಕಾರಕ್ಕೆ ಅವಕಾಶ ನೀಡುವ ಕಾನೂನನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು. ಸಂಘಟನೆಯ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳು ತರ್ಕಬದ್ಧವಾಗಿರಬೇಕು, ಅನಿಯಂತ್ರಿತವಾಗಿರಬಾರದು ಮತ್ತು ಸರಿಯಾದ ಪರಿಶೀಲನೆಗೆ ಒಳಪಟ್ಟಿರಬೇಕು ಎಂದು ನ್ಯಾಯಾಲಯ ಹೇಳಿದೆ. ಇದು ಮೂಲಭೂತ ಸಾಂವಿಧಾನಿಕ ಎಚ್ಚರಿಕೆಯಾಗಿದೆ. ಸರ್ಕಾರವು ತನ್ನ ಕಾರ್ಯಾಂಗದ ಅಧಿಕಾರವನ್ನು ಬಳಸಿ ಸಂಘಟನೆಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ.

ಅದಕ್ಕಾಗಿಯೇ ಖರ್ಗೆ ಅವರ ವಾದವು ತುಂಬಾ ದುರ್ಬಲವಾಗಿದೆ. ಉತ್ತರದಾಯಿತ್ವದ ಬಗ್ಗೆ ಮಾತನಾಡುವುದು ಒಂದು ವಿಷಯವಾದರೆ, ಒಂದು ಸಂಸ್ಥೆಯನ್ನು ದ್ವೇಷಿಸಲಾಗುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಬಲವಂತವಾಗಿ ನೋಂದಣಿಗೆ ಒಳಪಡಿಸಬೇಕು ಎಂದು ಸೂಚಿಸುವುದು ಇನ್ನೊಂದು ವಿಷಯ. ಮೊದಲನೆಯದು ರಾಜಕೀಯ ವಾಕ್ಚಾತುರ್ಯ. ಎರಡನೆಯದಕ್ಕೆ ಸಾಂವಿಧಾನಿಕ ಸಮರ್ಥನೆಯ ಅಗತ್ಯವಿರುತ್ತದೆ. ನೋಂದಾಯಿತವಲ್ಲದ ಪ್ರತಿಯೊಂದು ಸಂಸ್ಥೆಯೂ ಸಂಶಯಾಸ್ಪದ ಎಂದು ಸರ್ಕಾರ ಊಹಿಸಲು ಸಾಧ್ಯವಿಲ್ಲ, ಅಥವಾ ನೋಂದಣಿಯ ಕೊರತೆಯನ್ನು ಕಾನೂನು ಖಂಡನೆಗೆ ಆಧಾರವಾಗಿ ಬಳಸಲು ಸಾಧ್ಯವಿಲ್ಲ. ನಿರ್ದಿಷ್ಟ ಪ್ರಾಯೋಗಿಕ ಉದ್ದೇಶಗಳಿಗಾಗಿ ನೋಂದಣಿ ಮುಖ್ಯವಾಗಬಹುದು ಎಂಬುದನ್ನು ಕಾನೂನು ಕೂಡ ಒಪ್ಪಿಕೊಳ್ಳುತ್ತದೆ. ಒಂದು ಗುಂಪು ಬ್ಯಾಂಕ್ ಖಾತೆಯನ್ನು ತೆರೆಯಲು, ಆಸ್ತಿ ಖರೀದಿಸಲು, ವಿದೇಶಿ ದೇಣಿಗೆಗಳನ್ನು ಪಡೆಯಲು, ಪತ್ರಿಕೆಗಳನ್ನು ಪ್ರಕಟಿಸಲು ಅಥವಾ ಯಾವುದಾದರೂ ವಿಶೇಷ ಕಾನೂನಿನ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ಬಯಸಿದರೆ, ಆ ನಿರ್ದಿಷ್ಟ ಉದ್ದೇಶಕ್ಕಾಗಿ ನೋಂದಣಿ ಅಗತ್ಯವಾಗಬಹುದು. ಅದು ಸಹಜ. ಆದರೆ ಅದರರ್ಥ ನೋಂದಣಿಯೇ ಆ ಗುಂಪಿನ ಮೂಲ ಅಸ್ತಿತ್ವಕ್ಕೆ ಒಂದು ಷರತ್ತು ಎಂದಲ್ಲ. ಒಂದು ಗುಂಪು ನೋಂದಣಿ ಇಲ್ಲದೆಯೇ ರಾಜಕೀಯವಾಗಿ, ಸಾಮಾಜಿಕವಾಗಿ ಅಥವಾ ಸೈದ್ಧಾಂತಿಕವಾಗಿ ಸಕ್ರಿಯವಾಗಿರಬಹುದು ಮತ್ತು ಸಂವಿಧಾನವು ಆ ಮುಕ್ತ ಅವಕಾಶವನ್ನು ರಕ್ಷಿಸುತ್ತದೆ. ಸಚಿವರ ವಾದದಲ್ಲಿರುವ ದೊಡ್ಡ ಕಾನೂನುಬದ್ಧ ತಪ್ಪೆಂದರೆ, ಅವರು ನಿರ್ದಿಷ್ಟ ಕಾರ್ಯಗಳಿಗಾಗಿ ಇರುವ ಒಂದು ಗುಂಪಿನ ಕಾನೂನು ಸ್ಥಿತಿಯನ್ನು (Legal Status) ಆ ಗುಂಪಿನ ಅಸ್ತಿತ್ವದ ಹಕ್ಕಿನೊಂದಿಗೆ ಗೊಂದಲಗೊಳಿಸುತ್ತಿದ್ದಾರೆ. ವ್ಯಕ್ತಿಗಳ ಒಂದು ಒಕ್ಕೂಟವು ನೋಂದಣಿ ಇಲ್ಲದೆ ತಾನು ಮಾಡಬಹುದಾದ ಕೆಲಸಗಳಲ್ಲಿ ಸೀಮಿತವಾಗಿರಬಹುದು, ಆದರೆ ಅದು ಆ ಗುಂಪು ಕಾನೂನುಬಾಹಿರ ಎಂದು ಹೇಳುವುದಕ್ಕೆ ಸಮನಲ್ಲ. ಭಾರತೀಯ ಕಾನೂನು ಇಂತಹ ವ್ಯತ್ಯಾಸಗಳಿಂದ ತುಂಬಿದೆ. ಪ್ರತಿಯೊಂದು ಕಾನೂನಾತ್ಮಕ ಮಿತಿಯೂ ನಿಷೇಧವಲ್ಲ ಮತ್ತು ಪ್ರತಿಯೊಂದು ನೋಂದಾಯಿತವಲ್ಲದ ಸಂಸ್ಥೆಯೂ ಕಾನೂನುಬಾಹಿರವಲ್ಲ.

ಅಂತಿಮ ನಿಲುವು ಸ್ಪಷ್ಟವಾಗಿದೆ. ನೋಂದಣಿ ಮಾಡಿಕೊಳ್ಳದಿರುವುದು ಅಪರಾಧವಲ್ಲ. ಸರ್ಕಾರ ಅದನ್ನು ಅಪರಾಧವಾಗಿ ಪರಿಗಣಿಸಲು ಸಾಧ್ಯವಿಲ್ಲ. ಆರ್‌ಎಸ್‌ಎಸ್ ಅನ್ನು ಕೀಳಾಗಿ ಚಿತ್ರಿಸಲು, ಅದರ ಕಾನೂನಾತ್ಮಕ ಅಸ್ತಿತ್ವವನ್ನು ನಿರಾಕರಿಸಲು ಅಥವಾ ಅದರ ಸದಸ್ಯರು ಕಾನೂನಿನ ಹೊರಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಬಿಂಬಿಸಲು ಸರ್ಕಾರವು ಕೇವಲ ನೋಂದಣಿಯನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ. ಸುಪ್ರೀಂ ಕೋರ್ಟ್ ಈಗಾಗಲೇ ಮೂಲಭೂತ ತತ್ವವನ್ನು ಇತ್ಯರ್ಥಪಡಿಸಿದೆ. ನಾಗರಿಕರಿಗೆ ಸಂಘಟಿತರಾಗುವ ಹಕ್ಕಿದೆ ಮತ್ತು ನೋಂದಣಿಯ ಕೊರತೆಯಿಂದಾಗಿ ಆ ಹಕ್ಕು ರದ್ದಾಗುವುದಿಲ್ಲ. ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಯು ರಾಜಕೀಯ ಲಾಭವನ್ನು ಗಳಿಸಿಕೊಡಬಹುದು, ಆದರೆ ಕಾನೂನಿನಲ್ಲಿ ಅದು ನಿಲ್ಲುವುದಿಲ್ಲ. ಸಂವಿಧಾನವು ಏನನ್ನು ರಕ್ಷಿಸುತ್ತದೆಯೋ, ಅದನ್ನು ರಾಜಕೀಯವು ಅಳಿಸಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಈಗಾಗಲೇ ಏನನ್ನು ಮಾನ್ಯ ಮಾಡಿದೆಯೋ, ಅದನ್ನು ಒಬ್ಬ ಸಚಿವರು ಅಷ್ಟು ಸುಲಭವಾಗಿ ನಿರಾಕರಿಸಲು ಸಾಧ್ಯವಿಲ್ಲ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಜನರ ಬಂಡಾಯ

ರಾಜಾ ಮುನೀಬ್



ಪಾಕ್ ಆಕ್ರಮಿತ ಕಾಶ್ಮೀರ ನಿಜಕ್ಕೂ 'ಆಜಾದ್' ಆಗಿದ್ದರೆ ಜನರನ್ನೇಕೆ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಂಧನದಲ್ಲಿಡಲಾಗಿದೆ?

ಕೆಲವಾರು ದಶಕಗಳಿಂದ ಪಾಕಿಸ್ತಾನವು ತನ್ನ ವಶದಲ್ಲಿರುವ ಪಾಕಿಸ್ತಾನದ ಭಾಗವು (ಪಾಕ್ ಆಕ್ರಮಿತ ಕಾಶ್ಮೀರ) 'ಕಾಶ್ಮೀರಿಗರ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಒಂದು ಮಾದರಿ' ಎಂದು ಹೇಳಿಕೊಂಡು ಬರುತ್ತಿತ್ತು. ಈ ಪ್ರದೇಶವು ಭಾರತದ ಜಮ್ಮು-ಕಾಶ್ಮೀರದ ಜನರ ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ ಎಂಬುದಾಗಿಯೂ ಅದು ಅಂತಾರಾಷ್ಟ್ರೀಯ ಹೇಳಿಕೆಗಳಲ್ಲಿ ಹೇಳಿಕೊಂಡು ಬರುತ್ತಿತ್ತು. ಪಾಕಿಸ್ತಾನವು ಅದನ್ನು 'ಆಜಾದ್ ಕಾಶ್ಮೀರ್' ಎಂಬುದಾಗಿಯೂ ಕರೆಯುತ್ತದೆ. ಆದರೆ ಈಗ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಬೇರೆಯೇ ಕತೆ ಹೇಳುತ್ತಿವೆ. ಅಲ್ಲಿನ ಜನರು ಪಾಕಿಸ್ತಾನ ಆಡಳಿತ ಕಪಿಮುಷ್ಟಿಯಲ್ಲಿ ಹೇಗೆ ನರಳುತ್ತಿದ್ದಾರೆ ಎಂಬುದು ಈಗ ಹೆಚ್ಚೆಚ್ಚು ಬೆಳಕಿಗೆ ಬರುತ್ತಿದೆ. ತಮ್ಮ ಆರ್ಥಿಕ ಮತ್ತು ಸಾಮಾಜಿಕ ದುಸ್ಥಿತಿಯ ವಿರುದ್ಧವಾಗಿ ಅಲ್ಲಿನ ಜನರು ಇತ್ತೀಚೆಗೆ ನಡೆಸಿದ ಪ್ರತಿಭಟನೆಯು ಇದೀಗ ಭಾರೀ ದೊಡ್ಡ ರಾಜಕೀಯ ಆಯಾಮವನ್ನು ಪಡೆದಿದ್ದು, ಪಾಕಿಸ್ತಾನದ ಸೇನೆಯ ಕ್ರೂರತೆಯನ್ನೂ ಬಹಿರಂಗಪಡಿಸಿದೆ. ಹೆಚ್ಚುತ್ತಿರುವ ವಿದ್ಯುತ್ ಬೆಲೆ, ಹಣದುಬ್ಬರ ಹಾಗೂ ಇನ್ನಿತರ ಕೆಲವು ಸಂಕಷ್ಟಗಳನ್ನು ಆಡಳಿತದ ಗಮನಕ್ಕೆ ತರಲು ಪ್ರತಿಭಟನೆಗೆ ಇಳಿದ ಜನರ ಮೇಲೆ ಪಾಕ್ ಆಡಳಿತ ಹಾಗೂ ಸೇನೆಯು ನಡೆಸಿದ ದೌರ್ಜನ್ಯವು ಇಡೀ ವಿಶ್ವದ ಗಮನ ಸೆಳೆದಿದೆ.

ಇತ್ತೀಚೆಗೆ ನಡೆದ ಪ್ರತಿಭಟನೆಯು ಅಲ್ಲಿನ ಜನರು ಕೇವಲ ಆರ್ಥಿಕ ಸಂಕಷ್ಟ ಹೊಂದಿರುವುದಲ್ಲ, ಅದಕ್ಕಿಂತಲೂ ದೊಡ್ಡ ಹಾಗೂ ಗಂಭೀರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎಂಬುದನ್ನು ತೋರ್ಪಡಿಸಿದೆ. ತಮ್ಮ ಮೇಲೆ ಹೇರಲಾಗಿರುವ ರಾಜಕೀಯ ವ್ಯವಸ್ಥೆಯನ್ನು ಕೂಡಾ ಜನರು ವಿರೋಧಿಸುತ್ತಿದ್ದಾರೆ. ಸ್ಥಳೀಯ ಜನರಿಗೆ ಈ ರಾಜಕೀಯ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯವಿಲ್ಲವಾಗಿದೆ. ಎಲ್ಲವೂ ಇಸ್ಲಾಮಾಬಾದಿನಿಂದ ಹೇರಲ್ಪಡುತ್ತಿವೆ. ಇದೀಗ ಅಲ್ಲಿಯ ಜನರು ಪಾಕ್ ಆಕ್ರಮಿತ ಕಾಶ್ಮೀರದ ಮೇಲೆ ಪಾಕಿಸ್ತಾನ ಆಡಳಿತದ ಅಧಿಕಾರವನ್ನು ನ್ನೇ ಹಾಗೂ ಆಜಾದ್‌ನ ಅರ್ಥವನ್ನು ಪ್ರಶ್ನಿಸಲಾರಂಭಿಸಿದ್ದಾರೆ. ಪಾಕಿಸ್ತಾನವು ಈ ಪ್ರದೇಶ ಸ್ವಾಯತ್ತ ಎಂದು ಹೇಳಿಕೊಳ್ಳುತ್ತದೆಯಾದರೂ ವಾಸ್ತವದಲ್ಲಿ ಅಲ್ಲಿಗೆ ಸಂಬಂಧಿಸಿದ ನಿರ್ಧಾರಗಳನ್ನೆಲ್ಲಾ ಪಾಕಿಸ್ತಾನ ಸರಕಾರವೇ ತೆಗೆದುಕೊಳ್ಳುತ್ತದೆ. ಪ್ರತಿಯೊಂದೂ ಪಾಕ್ ಸರಕಾರ ಮತ್ತು ಸೇನೆಯ ಆದೇಶದಂತೆಯೇ ನಡೆಯುತ್ತದೆ. ಸ್ಥಳೀಯ ರಾಜಕೀಯ ಮುಖಂಡರು ಹೆಸರಿಗಷ್ಟೇ ಇರುವುದು ಹೊರತು ಅವರಿಗೆ ನಿಜವಾದ ಅಧಿಕಾರವೇ ಇಲ್ಲ.

ತಮ್ಮ ದೂರು ದುಮ್ಮಾನಗಳನ್ನು ಪಾಕ್ ಆಡಳಿತದ ಗಮನಕ್ಕೆ ತರಲೆಂದು ಪಾಕ್ ಆಕ್ರಮಿಸಿದ ಕಾಶ್ಮೀರದ ಜನರೆಲ್ಲರೂ ಸೇರಿಕೊಂಡು 'ಜಂಟಿ ಅವಾಮಿ ಕ್ರಿಯಾ ಸಮಿತಿ' (ಜೆಎಎಸಿ) ರಚಿಸಿದರು. ಇತ್ತೀಚೆಗೆ ಜೆಎಎಸಿ ಸರಕಾರದ ವಿರುದ್ಧ ಪ್ರತಿಭಟನೆಗೆ ಕರೆ ನೀಡುವುದರೊಂದಿಗೆ ಬಿಕ್ಕಟ್ಟು ಬಿಗಡಾಯಿಸಿತು. ಇದು ನಾಗರಿಕ ಸಮಾಜದ ಪ್ರತಿಭಟನೆಯಾಗಿತ್ತು. ಆದರೆ ಪಾಕ್ ಸರಕಾರವು ಈ ಜೆಎಎಸಿ ಸಂಘಟನೆಯನ್ನು ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿ ಅದರ ಮುಖಂಡರನ್ನೆಲ್ಲಾ ಬಂಧಿಸಿತು. ಇದನ್ನು ಪ್ರತಿರೋಧಿಸಿ ಸಾವಿರಾರು ಜನರು ರಾವಲ್‌ಕೋಟ್‌ನಲ್ಲಿ ನೆರೆದು ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರ ಮೇಲೆ ಪಾಕಿಸ್ತಾನಿ ಸೈನಿಕರು ಗುಂಡಿನ ದಾಳಿ ನಡೆಸಿದ್ದರಿಂದ 30ಕ್ಕೂ ಅಧಿಕ ಮಂದಿ ಸಾವಿಗೀಡಾಗಿ 200ಕ್ಕೂ ಅಧಿಕ ಮಂದಿ ಗಾಯಗೊಂಡರು. ಪ್ರಸಕ್ತ ಅಶಾಂತಿ, ಪ್ರತಿಭಟನೆಯು ಪ್ರಮುಖವಾಗಿರುವುದೇಕೆಂದರೆ ಕಳೆದ ಕೆಲವು ವರ್ಷಗಳಿಂದ ಇಂತಹುದೇ ವಿದ್ಯಮಾನಗಳು ಪದೇಪದೇ ಸಂಭವಿಸುತ್ತಿರುವುದು. 2026ರ ಜೂನ್‌ನಲ್ಲಿ ನಡೆದ ಘಟನೆಯು ಪ್ರತ್ಯೇಕ ಘಟನೆಯಲ್ಲ. ಅದು ಪದೇಪದೇ ಸಂಭವಿಸುತ್ತಿರುವ ವಿದ್ಯಮಾನದ ಒಂದು ಭಾಗವಷ್ಟೆ.

2024ರ ಮೇ ತಿಂಗಳಲ್ಲಿ ಕೂಡಾ ಗೋಧಿ ಹಿಟ್ಟು ಮತ್ತು ವಿದ್ಯುತ್ ಬೆಲೆ ಹೆಚ್ಚಳದ ವಿರುದ್ಧವಾಗಿ ಪಾಕ್ ಆಕ್ರಮಿತ ಕಾಶ್ಮೀರದ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಆಗಲೂ ಜನರು ಮತ್ತು ಭದ್ರತಾ ಪಡೆಗಳ ಮಧ್ಯೆ ಸಂಘರ್ಷ ನಡೆದಿತ್ತು. ಹಲವಾರು ಪ್ರತಿಭಟನೆಕಾರರನ್ನು ಭದ್ರತಾ ಪಡೆಗಳು ಹತ್ಯೆಗೈದಿದ್ದವು. ಪಾಕ್ ಸರಕಾರವು ತಾತ್ಕಾಲಿಕವಾಗಿ ಪ್ರತಿಭಟನೆಕಾರರ ಬೇಡಿಕೆಗಳಿಗೆ ಒಪ್ಪಿತ್ತು. ಇದರಿಂದ ಪ್ರತಿಭಟನೆಯು ಶಮನವಾಗಿತ್ತಾದರೂ ಜನರ ಸಂಕಷ್ಟಗಳು ಪರಿಹಾರವಾಗಲಿಲ್ಲ.

2025ರ ಸೆಪ್ಟೆಂಬರ್‌ನಲ್ಲಿ ಮತ್ತೆ ಇದೇ ರೀತಿಯ ಬೆಳವಣಿಗೆ ಸಂಭವಿಸಿತು. ಮುಜಾಫರ್‌ಬಾದ್‌ನಲ್ಲಿ ಜನರು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದರು. ಅಲ್ಲೂ ಭದ್ರತಾ ಪಡೆಗಳೊಂದಿಗೆ ಸಂಘರ್ಷ ನಡೆಯಿತು. ಆಗಲೂ ಕೆಲವಾರು ಜನರು ಭದ್ರತಾ ಪಡೆಗಳ ಗುಂಡಿಗೆ ಬಲಿಯಾದರು. ಜನರ ಸಂಚಾರದ ಮೇಲೆ ಮತ್ತು ಫೋನ್ ಬಳಕೆಯ ಮೇಲೆ ನಿರ್ಬಂಧ ಹೇರಲಾಯಿತು. ಭದ್ರತಾ ಪಡೆಗಳ ಸಂಖ್ಯೆ ಹೆಚ್ಚಿಸಲಾಯಿತು. ಬಳಿಕ ಸರಕಾರವು ಜನರ ಬೇಡಿಕೆ ಈಡೇರಿಸುವುದಾಗಿ ಆಶ್ವಾಸನೆ ನೀಡಿತು. ಪ್ರತಿಭಟನೆ ನಿಂತಿತಾದರೂ ಜನರ ಬೇಡಿಕೆ ಈಡೇರಲಿಲ್ಲ. ಮೂಲಭೂತ ಸಮಸ್ಯೆಗಳು ಹಾಗೇ ಉಳಿದುಕೊಂಡವು.

ಪದೇಪದೇ ಇಂತಹ ಪ್ರಸಂಗ ಸಂಭವಿಸುತ್ತಿರುವುದು ಈ ಬಿಕ್ಕಟ್ಟಿನ ಗಂಭೀರತೆಯನ್ನು ತೋರಿಸುತ್ತದೆ. ಆರ್ಥಿಕ ಸಂಕಷ್ಟವು ಜನರು ಪ್ರತಿಭಟನೆಗೆ ಇಳಿಯಲು ಪ್ರೇರೇಪಿಸುತ್ತಿದೆ. ಭದ್ರತಾ ಪಡೆಗಳು ಬಲಪ್ರಯೋಗದಿಂದ ಅದನ್ನು ದಮನಿಸಲು ಯತ್ನಿಸುತ್ತಾರೆ. ಸಂಪರ್ಕ ವ್ಯವಸ್ಥೆ ಕಡಿದುಹಾಕಲಾಗುತ್ತದೆ. ಒತ್ತಡ ಹೇರಿ ಜನರು ಸಂಧಾನಕ್ಕೆ ಬರುವಂತೆ ಮಾಡಲಾಗುತ್ತದೆ. ಸಂಧಾನದಲ್ಲಿ ನೀಡಲಾದ ಆಶ್ವಾಸನೆಗಳಲ್ಲಿ ಕೆಲವನ್ನು ಮಾತ್ರ ಈಡೇರಿಸಲಾಗುತ್ತದೆ. ಜನರ ಆಕ್ರೋಶ ಮತ್ತೆ ಹೆಚ್ಚುತ್ತದೆ. ಹೊಸದಾಗಿ ಪ್ರತಿಭಟನೆ ಶುರುವಾಗುತ್ತದೆ. ಈ ಪ್ರಕ್ರಿಯೆಗಳು ಪುನರಪಿ ನಡೆಯುತ್ತವೆ. ಪ್ರತಿಯೊಂದು ಪ್ರತಿಭಟನೆ ಕೂಡಾ ಪಾಕಿಸ್ತಾನಿ ಆಡಳಿತ ಮತ್ತು ಜನರ ನಡುವಿನ ವಿಶ್ವಾಸವನ್ನು ಕುಂದಿಸುತ್ತಾ ಬರುತ್ತದೆ. ಜತೆಗೇ ಪಾಕಿಸ್ತಾನಿ ಆಡಳಿತವು ಪಾಕ್ ಆಕ್ರಮಿತ ಕಾಶ್ಮೀರದ ಜನರಿಗೆ ಅಲ್ಲಿನ ರಾಜಕೀಯದಲ್ಲಿ ಕಾರ್ಯ ನಿರ್ವಹಿಸಲು ಪ್ರಾಮಾಣಿಕವಾಗಿ ಅವಕಾಶ ನೀಡುವುದಿಲ್ಲವೆಂಬುದು ಸಾಬೀತಾಗುತ್ತದೆ. ಮೊಬೈಲ್ ಹಾಗೂ ಇಂಟರ್ನೆಟ್ ಸಂಪರ್ಕ ಕಡಿದುಹಾಕುವುದು ಆಡಳಿತದ ಕಡೆಯಿಂದ ನಡೆಯುತ್ತಿರುವ ಅತ್ಯಂತ ಕೆಟ್ಟ ಕ್ರಮವಾಗಿದೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಅಶಾಂತಿಯು ಈಗ ಅಂತಾರಾಷ್ಟ್ರೀಯವಾಗಿಯೂ ಗಮನ ಸೆಳೆದಿದೆ. ಹಲವಾರು ದೇಶಗಳು ಈ ಪ್ರದೇಶಕ್ಕೆ ಭೇಟಿ ನೀಡದಂತೆ ತನ್ನ ದೇಶದ ಪ್ರವಾಸಿಗರಿಗೆ ಎಚ್ಚರಿಕೆ ನೀಡಿವೆ. ಈ ಎಚ್ಚರಿಕೆ ನೀಡಿರುವುದು, ಪಾಕ್ ಆಕ್ರಮಿತ ಕಾಶ್ಮೀರವು ಸ್ಥಿರತೆ ಮತ್ತು ಶಾಂತಿಯನ್ನು ಹೊಂದಿದೆ ಎಂಬ ಪಾಕ್ ಸರಕಾರದ ಹೇಳಿಕೆಯನ್ನು ಅಲ್ಲಗಳೆಯುತ್ತದೆ. ವಿದೇಶಿ ರಾಷ್ಟ್ರಗಳು ತಮ್ಮ ಪ್ರಜೆಗಳು ಒಂದು ಪ್ರದೇಶಕ್ಕೆ ಹೋಗಬಾರದೆಂದು ತನ್ನ ಪ್ರಜೆಗಳಿಗೆ ಎಚ್ಚರಿಕೆ ನೀಡಿದವೆಂದರೆ ಅದರ ಅರ್ಥ ಆ ಪ್ರದೇಶವು ಪ್ರಕ್ಷುಬ್ಧವಾಗಿದೆಯೆಂದರ್ಥ.

ಪಾಕಿಸ್ತಾನವು ಜಮ್ಮು ಕಾಶ್ಮೀರವು ತನಗೆ ಸೇರಬೇಕೆಂದು ದಶಕಗಳಿಂದ ಆಗ್ರಹಿಸುತ್ತಲೇ ಬಂದಿದೆ. ಆದರೆ ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಭಾರತದ ಕಾಶ್ಮೀರದ ನಡುವಿನ ಪ್ರಗತಿಯ ವ್ಯತ್ಯಾಸ ಗಮನಿಸಿದರೆ ದಂಗಾಗುವುದು. ಕಾಶ್ಮೀರವು ಎಲ್ಲಾ ವಿಧಗಳಿಂದ ಪ್ರಗತಿ ಸಾಧಿಸುತ್ತಿದ್ದರೆ ಪಾಕ್ ಆಕ್ರಮಿತ ಕಾಶ್ಮೀರವು ಇನ್ನೂ ಬಹಳಷ್ಟು ಹಿಂದುಳಿದಿದೆ. ಪಾಕ್ ಆಕ್ರಮಿತ ಕಾಶ್ಮೀರದ ಜನರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಪ್ರದೇಶವನ್ನು ಭಾರತದ ಕಾಶ್ಮೀರದೊಂದಿಗೆ ತುಲನೆ ಮಾಡುತ್ತಾ ತಾವು ಬಹಳಷ್ಟು ಹಿಂದುಳಿದಿರುವ ಬಗ್ಗೆ ಖೇದಿಸುತ್ತಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರದ ಜನರು ಮೂಲಭೂತ ಸೌಕರ್ಯಗಳಿಗಾಗಿಯೂ ಹೋರಾಟ ನಡೆಸಬೇಕಾಗಿ ಬಂದಿದೆ.

ಪಾಕ್ ಆಕ್ರಮಿತ ಕಾಶ್ಮೀರದ ಜನರು ಈಗ ಕೇವಲ ವಿದ್ಯುತ್ ಪೂರೈಕೆ, ಆರ್ಥಿಕ ಪ್ರಗತಿಗಾಗಿ ಒತ್ತಾಯಿಸಿ ಪ್ರತಿಭಟಿಸುತ್ತಿರುವುದಲ್ಲ. ಪಾಕ್ ಸರಕಾರವು ಈ ಪ್ರಾಂತ್ಯದೆಡೆಗೆ ತೋರುತ್ತಿರುವ ಮಲತಾಯಿ ಧೋರಣೆಯನ್ನೂ ಪ್ರತಿಭಟಿಸುತ್ತಿದ್ದಾರೆ. ಇಡೀ ರಾಜಕೀಯ ವ್ಯವಸ್ಥೆಯ ವಿರುದ್ಧವೇ ಸಿಡಿದೇಳುತ್ತಿದ್ದಾರೆ. ರಾಜಕೀಯ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ. ಇದು ಮಹತ್ವದ ಬೆಳವಣಿಗೆ.

'ಆಜಾದ್ ಕಾಶ್ಮೀರ'ದಲ್ಲಿನ ಪ್ರತಿಭಟನೆಗಳು ನಿಲ್ಲುವ ಸಂಕೇತ ತೋರುತ್ತಿಲ್ಲ. ಇನ್ನಷ್ಟು ತೀವ್ರಗೊಳ್ಳುವುದು ಖಂಡಿತವಾಗಿದೆ. ಇದು ಪಾಕಿಸ್ತಾನಕ್ಕೆ ಸಂಬಂಧಿಸಿ ಗುರುತರ ಪ್ರಶ್ನೆಯೊಂದನ್ನು ಎತ್ತುತ್ತದೆ. ಈ ಪ್ರಾಂತವು ನಿಜಕ್ಕೂ 'ಆಜಾದ್' ಆಗಿದ್ದರೆ ಜನರನ್ನೇಕೆ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಂಧನದಲ್ಲಿಡಲಾಗಿದೆ?

ಕಿರುಸುದ್ದಿ

ಅಂಬೇಡ್ಕರ್ ಭವನ ನಿರ್ವಹಣಾ ಸಮಿತಿಗೆ ಅನಧಿಕೃತ ಮೂವರ ಆಯ್ಕೆ: ಆರೋಪ

ಕಾರ್ಕಳ: ಕಾರ್ಕಳದ ಅಂಬೇಡ್ಕರ್ ಭವನ ನಿರ್ವಹಣಾ ಸಮಿತಿಗೆ ನಾಮನಿರ್ದೇಶನ ಮಾಡುವ ವೇಳೆ ದಲಿತ ಸಂಘಟನೆಗಳನ್ನು ಕಡೆಗಣಿಸಿ ಮೂವರ ನೇಮಕ ನಡೆದಿದೆ ಎಂದು ದಲಿತ ಮುಖಂಡ ಸುಧಾಕರ ದಾನಶಾಲೆ ಆರೋಪಿಸಿದರು. ಅವರು ಕಾರ್ಕಳ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಕಳೆದ ಮೇ 4ರಂದು ಸಭೆ ನಡೆಸಲು ನಿರ್ಧರಿಸಿ, ನಮ್ಮನ್ನು ಆಹ್ವಾನಿಸಿದ್ದರು. ಆದರೆ ಮೇ 3ರಂದು ಸಭೆಯನ್ನು ರದ್ದುಪಡಿಸಿದ್ದರು. ಬಳಿಕ ತಾಲೂಕಿನ ಏಳು ಸಂಘಟನೆಗಳ ಗಮನಕ್ಕೆ ತಾರದೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮೂವರನ್ನು ಅನಧೀಕೃತವಾಗಿ ಆಯ್ಕೆ ಗೊಳಿಸಿದ್ದರು. ಈ ಬಗ್ಗೆ ನಮ್ಮ ಆಕ್ಷೇಪವಿದ್ದು, ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿ ಆಯ್ಕೆ ಪ್ರಕ್ರಿಯೆಯನ್ನು ರದ್ದುಗೊಳಿಸಿ ಹೊಸ ಮೂವರ ನೇಮಕ ಮಾಡುವಂತೆ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸುನೀತಾ ಅಂಡಾರು, ಗೋವರ್ಧನ ಕಾರ್ಕಳ, ಹರೀಶ್ ಬಜಗೋಳಿ ಮತ್ತು ಶ್ರೀನಿವಾಸ್ ಕಾರ್ಲ ಉಪಸ್ಥಿತರಿದ್ದರು.

ಇಂದು ನೂತನ ಕೊಡಿಮರ ಸುಮುಹೂರ್ತ

ಬಡಗನ್ನೂರು: ಪಡುಮಲೆ ಶ್ರೀ ಪೂಮಾಣಿ ಕಿನ್ನಿಮಾಣಿ, ಶ್ರೀ ವ್ಯಾಘ್ರ ಚಾಮುಂಡಿ (ರಾಜನ್ ದೈವ) ದೈವಸ್ಥಾನಕ್ಕೆ ನೂತನ ಕೊಡಿಮರಕ್ಕೆ ಮರ ಕಡಿಯುವ ಕಾರ್ಯಕ್ರಮವು ಜೂ.18ರಂದು ಚೆಂದುಕೂಡ್ಲು ಶ್ರೀನಿವಾಸ ಭಟ್ ಅವರ ಪರಿಸರದಲ್ಲಿ ಕ್ಷೇತ್ರ ತಂತ್ರಿವರ್ಯರಾದ ಬ್ರಹ್ಮಶ್ರೀ ವೇಧಮೂರ್ತಿ ಕುಂಟಾರು ವಾಸುದೇವ ತಂತ್ರಿಗಳ ನೇತೃತ್ವದಲ್ಲಿ ನಡೆಯಲಿದೆ. ಜೂ.18ರಂದು ಬೆಳಗ್ಗೆ 7.30ಕ್ಕೆ ತಂತ್ರಿಗಳ ವಿಶೇಷ ಪ್ರಾರ್ಥನೆ ನಡೆಯಲಿದೆ. ವೇದಮೂರ್ತಿ ಬನ್ನೂರು ಗಣೇಶ ಭಟ್ ಅವರ ನೇತೃತ್ವದಲ್ಲಿ ಭೂಮಿಪೂಜೆ ಮತ್ತು ವೃಕ್ಷ ಪೂಜೆ ನಡೆದು ಮರ ಕಡಿಯುವ ಮುಹೂರ್ತ ನೆರವೇರಲಿದೆ. ಬಳಿಕ ಲಾರಿ ಮೂಲಕ ಶಂಖ ಜಾಗಟೆ ಘೋಷಗಳೊಂದಿಗೆ ಮೆರವಣಿಗೆಯಲ್ಲಿ ಪಡುಮಲೆ ಬದಿನಾರು ಶ್ರೀ ಪೂಮಾಣಿ–ಕಿನ್ನಿಮಾಣಿ ಹಾಗೂ ಶ್ರೀ ವ್ಯಾಘ್ರ ಚಾಮುಂಡಿ ದೈವಸ್ಥಾನಕ್ಕೆ ಸಾಗಿ ಬರಲಿದೆ. ಈ ಪುಣ್ಯ ಕಾರ್ಯದಲ್ಲಿ ತಾವೆಲ್ಲರೂ ಭಕ್ತಿ ಶ್ರದ್ದೆಯಲ್ಲಿ ಆಗಮಿಸಿ ಶ್ರೀ ದೈವಗಳ ಕೃಪೆಗೆ ಪಾತ್ರರಾಗುವಂತೆ ಪಡುಮಲೆ ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಶ್ರೀನಿವಾಸ್ ಭಟ್ ಸಿ.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.19-21: ಟೀಮ್ ಉಬಾರ್‌ನಿಂದ ಹಲಸು -ಮಾವು ಮೇಳ

ಪುತ್ತೂರು: ಟೀಮ್ ಉಬಾರ್ ವತಿಯಿಂದ ಎರಡನೇ ವರ್ಷದ ಹಲಸುಮತ್ತು ಮಾವು ಮೇಳವು ಜೂ.19ರಿಂದ 21ರವರೆಗೆ ಉಪ್ಪಿನಂಗಡಿ ಎಚ್.ಎಂ. ಆಡಿಟೋರಿಯಂನಲ್ಲಿ ನಡೆಯಲಿದೆ ಎಂದು ಬಿ. ರಂಗಯ್ಯ ಬಳ್ಳಾಲ್ ಕೆದಂಬಾಡಿಬೀಡು ತಿಳಿಸಿದರು. ಅವರು ಬುಧವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇಳವನ್ನು ಜೂ.19ರಂದು ಬೆಳಗ್ಗೆ 9 ಗಂಟೆಗೆ ಪುತ್ತೂರು ಶಾಸಕ ಅಶೋಕ್ ರೈ ಉದ್ಘಾಟಿಸಲಿದ್ದಾರೆ. ಹಣ್ಣುಗಳ ಪ್ರದರ್ಶನ, ಮೌಲ್ಯವರ್ಧಿತ ಉತ್ಪನ್ನಗಳು, ವಿವಿಧ ತಳಿಗಳ ಗಿಡಗಳು ಸೇರಿದಂತೆ ಹಲವು ವೈವಿಧ್ಯಗಳೊಂದಿಗೆ ಮೇಳ ಆಯೋಜನೆಗೊಂಡಿದೆ ಎಂದರು. ಮೇಳದ ಜತೆಗೆ ಶಾಲಾ ಮಕ್ಕಳಿಗೆ ಪುಸ್ತಕ ಮತ್ತು ಬ್ಯಾಗ್ ವಿತರಣೆ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಕಿಟ್ ವಿತರಣೆ, ಹಿಂದುಳಿದ ಬಡ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮನದ ಪ್ರಯುಕ್ತ ಜೂ.21 ರಂದು ಸಂಜೆ 5 ಗಂಟೆಗೆ ಯಾನೊರಿ ಬರೋಲಿಯಾ ತುಳು ನಾಟಕ ಪ್ರದರ್ಶನ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಟೀಮ್ ಉಬಾರ್ ತಂಡದ ರಾಜೇಶ್ ಪ್ರಭು, ರಾಕೇಶ್ ಪ್ರಭು ಉಪಸ್ಥಿತರಿದ್ದರು.


ಜೂ.23ರಂದು ಕುಶಾಲನಗರದಲ್ಲಿ ಶರಣ ಸಾಹಿತ್ಯ ಸಮ್ಮೇಳನ

ಮಡಿಕೇರಿ: ಕೊಡಗಿನಲ್ಲಿ ಇದೇ ಮೊದಲ ಬಾರಿಗೆ ನಡೆಯುತ್ತಿರುವ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನಕ್ಕೆ ಸಕಲ ಸಿದ್ಧತೆ ನಡೆದಿದ್ದು, ಜೂ. 23ರಂದು ಕುಶಾಲನಗರ ಈ ಸಮ್ಮೇಳನಕ್ಕೆ ಸಾಕ್ಷಿಯಾಗಲಿದೆ ಎಂದು ಶರಣ ಸಾಹಿತ್ಯ ಪರಿಷತ್ತಿನ ಕೊಡಗು ಜಿಲ್ಲಾಧ್ಯಕ್ಷ ಕೆ.ಎಸ್.ಮೂರ್ತಿ ತಿಳಿಸಿದರು. ಅಂದು ಬೆಳಗ್ಗೆ 9 ಗಂಟೆಗೆ ಗಾಯತ್ರಿ ಕಲ್ಯಾಣ ಮಂಟಪದಿಂದ ಹೊರಡುವ ಭವ್ಯ ಮೆರವಣಿಗೆಯಲ್ಲಿ ಕಲಾತಂಡಗಳು, ಪೂರ್ಣಕುಂಭ ಹೊತ್ತ ಮಹಿಳೆಯರು, ಶರಣರ ವೇಷದ ವಿದ್ಯಾರ್ಥಿಗಳು, ಮಾಜಿ ಯೋಧರು ಭಾಗವಹಿಸಲಿದ್ದಾರೆ. ಅಪರ ಜಿಲ್ಲಾಧಿಕಾರಿ ಡಾ. ಸಹನಾ ಹಾದಿಮನಿ, ಉಪವಿಭಾಗಾಧಿಕಾರಿ ನಿತಿನ್ ಚಕ್ಕಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಅರಮೇರಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಮಧ್ಯಾಹ್ನ ವಿಚಾರಗೋಷ್ಠಿ, ವಚನ ಗಾಯನ, ಸಂಜೆ ಸಾಧಕರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ನಟರಾಜು, ಪ್ರಮುಖರಾದ ಶಾಂಭಶಿವಯ್ಯ, ಮೋಹನ್, ವಿಜಯಲಕ್ಷ್ಮಿ, ಹೆಚ್.ವಿ.ಶಿವಪ್ಪ ಇದ್ದರು.

ಮನೆಗೆಲಸ ಮಾಡುತ್ತಿದ್ದ ಜಾರ್ಖಂಡ್ ಮೂಲದ ಮಹಿಳೆ ನಾಪತ್ತೆ

ಮಂಗಳೂರು: ಜಾರ್ಖಂಡ್ ಮೂಲದ ಕರ್ಮಿಲಿಯ ಸೊರೆನ್ (48) ಎಂಬವರು ಮೂಡುಬಿದಿರೆಯಲ್ಲಿ ಮನೆ ಕೆಲಸ ಮಾಡಿಕೊಂಡಿದ್ದು, ಜೂನ್ 9 ರಂದು ಮನೆಯಿಂದ ಹೋದವರು ಕಾಣೆಯಾಗಿದ್ದು, ಈ ಬಗ್ಗೆ ಮೂಡಬಿದ್ರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದವರ ಚಹರೆ: ಎತ್ತರ 5 ಅಡಿ, ಕಪ್ಪು ಮೈಬಣ್ಣ, ಬಿಳಿ ಮಿಶ್ರಿತ ಕಪ್ಪು ಮಿಶ್ರಿತ ತಲೆ ಕೂದಲು, ಸಾಧಾರಣ ಮೈಕಟ್ಟು ಹೊಂದಿರುತ್ತಾರೆ. ಕಾಣೆಯಾದ ದಿನ ಪಿಂಕ್ ಬಣ್ಣದ ನೈಟಿ ಧರಿಸಿದ್ದರು. ಕಾಣೆಯಾದವರ ಬಗ್ಗೆ ಮಾಹಿತಿ ಪತ್ತೆಯಾದಲ್ಲಿ ಮೂಡಬಿದಿರೆ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಇಸ್ಟ್ಯಾಂಪ್‌ಗೆ ಬುಧವಾರ ಚಾಲನೆ ನೀಡಲಾಯಿತು. ಸಿಎಸ್‌ಸಿ ಕೇಂದ್ರದ ಜಿಲ್ಲಾ ನಿರ್ವಹಣಾಧಿಕಾರಿ ಗೋವರ್ಧನ್ ಉದ್ಘಾಟಿಸಿದರು. ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರಿ, ಉಪಾಧ್ಯಕ್ಷ ಸದಾನಂದ ಕಾರ್ಜ, ನಿರ್ದೇಶಕ ಸುಬ್ರಹ್ಮಣ್ಯ ಕುಳ, ಲಿಗೋಧರ ಆಚಾರ್ಯ, ಚೆನ್ನಪ್ಪ ಗೌಡ ಚೊಟ್ಟೆಮಜಲು, ವಾಚಣ್ಣ ಕೆರೆಮೂಲೆ, ವಾಸುದೇವ ಕೆರೆಕ್ಕೋಡಿ, ತಿಮ್ಮಪ್ಪ ಕೂತ್ಕುಂಜ, ಅರುಣ್ ರೈ ಗೆಜ್ಜೆ, ಮುದರ ಐವತೊಕ್ಕು, ವನಿತಾ ಅತ್ಯಡ್ಕ, ಬೇಬಿ ಕಟ್ಟ, ದೀಪಕ್ ದೊಡ್ಡಮನೆ ಉಪಸ್ಥಿತರಿದ್ದರು.

ಆರೆಸ್ಸೆಸ್‌ನ ಪ್ರಶ್ನಿಸುವ ಪ್ರಿಯಾಂಕ್‌ಗೆ ಇಸ್ಲಾಮಿಕ್ ಸಂಘಟನೆ ಪ್ರಶ್ನಿಸುವ ಧೈರ್ಯ ಇದೆಯೇ: ಯಶ್ಪಾಲ್

ಉಡುಪಿ: ಭಾರತ ಸ್ವಾತಂತ್ರ್ಯ ರಾಷ್ಟ್ರವಾಗಿ ಗುರುತಿಸಿ ಕೊಳ್ಳುವ ಮುನ್ನವೇ ರಾಷ್ಟ್ರೀಯತೆಯ ಚಿಂತನೆಯ ತಳಹದಿಯಲ್ಲಿ ಸ್ಥಾಪನೆಗೊಂಡ ಆರೆಸ್ಸೆಸ್ ನೋಂದಣಿ ಬಗ್ಗೆ ಪ್ರಶ್ನೆ ಮಾಡುವ ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಇಸ್ಲಾಮಿಕ್ ಮತೀಯವಾದಿ ಉದ್ದೇಶದಿಂದ ಸಮಾಜದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುವ ಸಂಘಟನೆಗಳನ್ನು ಪ್ರಶ್ನಿಸುವ ಧೈರ್ಯ ಇದೆಯೇ ಎಂದು ಶಾಸಕ ಯಶ್‌ಪಾಲ್ ಸುವರ್ಣ ಪ್ರಶ್ನಿಸಿದ್ದಾರೆ.



ಆರೆಸ್ಸೆಸ್ ಸ್ಥಾಪನೆಯಾಗಿ ಕಳೆದ 100 ವರ್ಷಗಳಲ್ಲಿ ಸ್ವಾತಂತ್ರ್ಯ ಹೋರಾಟದಿಂದ ಹಿಡಿದು, ತುರ್ತು ಪರಿಸ್ಥಿತಿ ಸಂದರ್ಭ, ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಜೀವದ ಹಂಗು ತೊರೆದು ರಾಷ್ಟ್ರ ರಕ್ಷಣೆಯಲ್ಲಿ ತೊಡಗಿಸಿಕೊಂಡಿದೆ. ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಮಹಾ ಸಂಕಲ್ಪದೊಂದಿಗೆ ಸಾಗುತ್ತಿರುವ ದೇಶಭಕ್ತ ಸಂಘಟನೆಯಾಗಿದ್ದು, ಇಂತಹ ಸಂಘಟನೆಯ ಘನತೆಗೆ ಧಕ್ಕೆ ತರುವ ಮೂಲಕ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯತೆ ವಿರೋಧಿ ನಿಲುವನ್ನು ಪ್ರಿಯಾಂಕ್ ಖರ್ಗೆ ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ರಾಷ್ಟ್ರೀಯತೆ ಹಾಗೂ ದೇಶ ಭಕ್ತ ಸಂಘಟನೆಗಳ ಬಗ್ಗೆ ಸದಾ ಕೆಂಗಣ್ಣಿನಿಂದ ನೋಡುವ ಕಾಂಗ್ರೆಸ್ ಪಕ್ಷದ ಹಿಂದು ವಿರೋಧಿ ನಿಲುವನ್ನು ಪ್ರಿಯಾಂಕ್ ಖರ್ಗೆ ಮುಂದುವರೆಸಿಕೊಂಡು ಬರುತ್ತಿದ್ದು, ಭಯೋತ್ಪಾದನೆ, ಸಮಾಜದಲ್ಲಿ ಅಶಾಂತಿ, ರಾಷ್ಟ್ರೀಯ ಆಂತರಿಕ ಭದ್ರತೆಗೆ ಸವಾಲು ಹಾಕಿರುವ ಇಸ್ಲಾಮಿಕ್ ಮತೀಯ ಶಕ್ತಿಗಳು ಹಲವಾರು ಪ್ರಕರಣಗಳಲ್ಲಿ ಭಾಗಿಯಾದ ಬಗ್ಗೆ ಪುರಾವೆಗಳಿದ್ದರೂ ಈವರೆಗೆ ಪ್ರಿಯಾಂಕ್ ಖರ್ಗೆ ಚಕಾರ ಎತ್ತುವ ಧೈರ್ಯ ಮಾಡಿಲ್ಲ. ರಾಜ್ಯದ ಮೂಲೆ ಮೂಲೆಗಳಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೂರಾರು ಮಸೀದಿ, ಮದರಸಗಳು ಕಾನೂನು ನಿಯಮಗಳನ್ನು ಗಾಳಿಗೆ ತೂರಿ ನಿರ್ಮಾಣವಾಗುತ್ತಿದ್ದರೂ ಸರ್ಕಾರ ಕೈಕಟ್ಟಿ ಕುಳಿತಿದೆ. ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ರಾಜ್ಯ ಸರಕಾರ ಹಿಂದೂ ವಿರೋಧಿ ಹೇಳಿಕೆಗಳ ಮೂಲಕ ಹಿಂದೂ ಸಮಾಜದ ನೈತಿಕ ಸ್ಥೈರ್ಯ ಕುಗ್ಗಿಸಲು ಪ್ರಯತಿಸುತ್ತಿದ್ದು, ಇಂತಹ ಬೇಜವಾಬ್ದಾರಿ ಹೇಳಿಕೆಗಳ ಮೂಲಕ ರಾಜ್ಯದ ಜನತೆಯ ದಿಕ್ಕು ತಪ್ಪಿಸಲು ವಿಫಲ ಪ್ರಯತ್ನ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಸರ್ಕಾರಿ ಅಕ್ಷರ ದೇಗುಲದ ಸ್ವಚ್ಛತೆ, ಸೌಕರ್ಯ, ಅಚ್ಚುಕಟ್ಟಿಗೆ ಒಲಿಯಿತು ಸ್ವಚ್ಛ ವಿದ್ಯಾಲಯ ಪುರಸ್ಕಾರ

ಮುಳ್ಕಾಡು ಶಾಲೆ ಮುಡಿಗೆ ರಾಷ್ಟ್ರಮಟ್ಟದ ಗರಿ

ಕಾರ್ಕಳ: ಉಡುಪಿ ಜಿಲ್ಲೆಯ ಮುಳ್ಕಾಡು ಎಳ್ಳಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ರಾಷ್ಟ್ರ ಮಟ್ಟದ ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ಕೇಂದ್ರ ಸರಕಾರವು ಅಂತಿಮಪಟ್ಟಿ ಬಿಡುಗಡೆ ಮಾಡಿದ್ದು, ಗ್ರಾಮೀಣ ಪ್ರದೇಶದಲ್ಲಿದ್ದರೂ ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಚಟುವಟಿಕೆ ಮೂಲಕ ಗಮನ ಸೆಳೆದಿದೆ.

ಸ್ವಚ್ಛ ವಿದ್ಯಾಲಯ ಪುರಸ್ಕಾರ ಯೋಜನೆಯಡಿ ದೇಶದಾದ್ಯಂತ ಒಟ್ಟು 11,54,898 ಶಾಲೆಗಳು ನೋಂದಾಯಿಸಿಕೊಂಡಿದ್ದವು. ಕರ್ನಾಟಕದಿಂದ 71,369 ಶಾಲೆಗಳು ಹಾಗೂ ಉಡುಪಿ ಜಿಲ್ಲೆಯಿಂದ 1,072 ಶಾಲೆಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಉಡುಪಿ ಜಿಲ್ಲೆಯ ಎಂಟು ಶಾಲೆಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದು, ರಾಜ್ಯದಿಂದ 20 ಶಾಲೆಗಳು ರಾಷ್ಟ್ರಮಟ್ಟಕ್ಕೆ ಶಿಫಾರಸಾಗಿದ್ದವು. ಅಂತಿಮವಾಗಿ ದೇಶದಾದ್ಯಂತ 191 ಶಾಲೆಗಳು ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾಗಿದ್ದು, ಅವುಗಳಲ್ಲಿ ಮುಳ್ಕಾಡು ಎಳ್ಳಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯೂ ಸ್ಥಾನ ಪಡೆದಿದೆ.

ಕರ್ನಾಟಕದಲ್ಲೇ ಪ್ರಥಮ ಸ್ಥಾನ ಗಳಿಸಿತ್ತು

ರಾಷ್ಟ್ರೀಯ ಮಟ್ಟದ ಮೌಲ್ಯಮಾಪನದಲ್ಲಿ ಮುಳ್ಕಾಡು ಸರಕಾರಿ ಪ್ರಾಥಮಿಕ ಶಾಲೆ ಕರ್ನಾಟಕದಲ್ಲೇ ಪ್ರಥಮ ಸ್ಥಾನ ಗಳಿಸಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನ್ನಮಂಗಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದ್ವಿತೀಯ ಹಾಗೂ ಮೈಸೂರಿನ ಅಟ್ಟಿಗೋಡು ಸರ್ಕಾರಿ ಪ್ರಾಥಮಿಕ ಶಾಲೆ ತೃತೀಯ ಸ್ಥಾನ ಪಡೆದಿವೆ.



ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು

ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಕಚೇರಿ ತಂಡ ಶಾಲೆಗಳಿಗೆ ಭೇಟಿ ನೀಡಿ ಸ್ವಚ್ಛತೆ, ಮೂಲಸೌಕರ್ಯ, ಪರಿಸರ ಸ್ನೇಹಿ ಚಟುವಟಿಕೆಗಳು ಹಾಗೂ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಕ್ರಮಗಳನ್ನು ಪರಿಶೀಲಿಸಿತ್ತು. ಬಳಿಕ ಎನ್‌ಸಿಇಆರ್‌ಟಿ ಮತ್ತು ಯುನಿಸೆಫ್ ಮಾರ್ಗದರ್ಶನದಲ್ಲಿ ನಡೆದ ರಾಷ್ಟ್ರಮಟ್ಟದ ಮೌಲ್ಯಮಾಪನದಲ್ಲಿ ಶಾಲೆಯು ಆಯ್ಕೆಯಾಗಿದೆ.

ಶಿಕ್ಷಣ ಕೇಂದ್ರವಾಗಿ ರೂಪುಗೊಂಡಿದೆ

1959ರಲ್ಲಿ ಸ್ಥಾಪನೆಯಾದ ಈ ಶಾಲೆ ಬಸ್ ಸೌಲಭ್ಯವಿಲ್ಲದ ಗ್ರಾಮೀಣ ಪ್ರದೇಶದಲ್ಲಿದ್ದರೂ ಶಿಕ್ಷಣ ಮತ್ತು ಸ್ವಚ್ಛತೆಯಲ್ಲಿ ಮಾದರಿಯಾಗಿ ಬೆಳೆಯುತ್ತಿದೆ. ಪ್ರಸ್ತುತ 55 ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮುಖ್ಯೋಪಾಧ್ಯಾಯ ಜನಾರ್ದನ ಬೆಳ್ಳಿರಾಯ ಅವರ ನೇತೃತ್ವದಲ್ಲಿ ಶಾಲೆ ಪಠ್ಯ ಶಿಕ್ಷಣದ ಜೊತೆಗೆ ಜೀವನ ಕೌಶಲ್ಯಗಳನ್ನು ಬೆಳೆಸುವ ಶಿಕ್ಷಣ ಕೇಂದ್ರವಾಗಿ ರೂಪುಗೊಂಡಿದೆ. ಕಂಪ್ಯೂಟರ್ ತರಬೇತಿ, ಸ್ಪೋಕನ್ ಇಂಗ್ಲಿಷ್, ಯೋಗ, ಕರಾಟೆ, ಬ್ಯಾಂಡ್ ಸೆಟ್, ಆರೋಗ್ಯ ಶಿಕ್ಷಣ, ವಿಜ್ಞಾನ ಪ್ರಯೋಗಾಲಯ, ಔಷಧೀಯ ಸಸ್ಯ ತೋಟ, ಆಟದ ಬಾಳವನ, ಡೈನಿಂಗ್ ಹಾಲ್, ಸ್ವಚ್ಛ ಶೌಚಾಲಯ ಗಳು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಶಾಲೆಯ ವಿಶೇಷತೆಗಳಾಗಿವೆ. ಪೋಷಕರು, ಹಳೆ ವಿದ್ಯಾರ್ಥಿಗಳು, ಗ್ರಾಮಸ್ಥರು, ದಾನಿಗಳು ಹಾಗೂ ವಿವಿಧ ಸಂಸ್ಥೆಗಳ ಸಹಕಾರದಿಂದ ಶಾಲೆ ನಿರಂತರವಾಗಿ ಅಭಿವೃದ್ಧಿಯ ಹಾದಿಯಲ್ಲಿ ಹಿಂದಿರುಗಿ ನೋಡದೆ ಸಾಗುತ್ತಿದೆ.

ಉತ್ತಮ ಶಾಲೆ ಎಂಬ ಗೌರವ ಪಡೆದಿದೆ

ಈ ಶಾಲೆ ಈಗಾಗಲೇ ಉಡುಪಿ ಜಿಲ್ಲಾಮಟ್ಟದ ಪರಿಸರ ಮಿತ್ರ ಪ್ರಶಸ್ತಿಗೆ ನಾಲ್ಕು ವರ್ಷಗಳ ಕಾಲ ನಿರಂತರ ಆಯ್ಕೆಯಾಗಿದ್ದು, ರಜತ ನೈರ್ಮಲ್ಯ ಪ್ರಶಸ್ತಿ, ಬೆಸ್ಟ್ ಎಸ್‌ಡಿಎಂಸಿ ಪ್ರಶಸ್ತಿ ಹಾಗೂ ತಾಲೂಕು ಮಟ್ಟದ ಉತ್ತಮ ಶಾಲೆ ಎಂಬ ಗೌರವಗಳನ್ನು ಪಡೆದಿದೆ. ರಾಷ್ಟ್ರಮಟ್ಟದ ಸ್ವಚ್ಛ ವಿದ್ಯಾಲಯ ಪುರಸ್ಕಾರದ ಭಾಗವಾಗಿ ಶಾಲೆಗೆ 1 ಲಕ್ಷ ನಗದು ಬಹುಮಾನ, ಪ್ರಮಾಣಪತ್ರ ಹಾಗೂ ರಾಷ್ಟ್ರ ಪ್ರಶಸ್ತಿ ಪ್ರದಾನವಾಗಲಿದ್ದು, ಗ್ರಾಮೀಣ ಶಾಲೆಯೊಂದು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ.

ಮೌಲ್ಯಮಾಪಕರ ಮೆಚ್ಚುಗೆಗೆ ಪಾತ್ರ

ಪ್ರಶಸ್ತಿಗಾಗಿ ಶೌಚಾಲಯ ವ್ಯವಸ್ಥೆ, ಕೈತೊಳೆಯುವ ಸೌಲಭ್ಯ, ಕಾರ್ಯಾಚರಣೆ ಮತ್ತು ನಿರ್ವಹಣೆ, ನಡವಳಿಕೆ ಬದಲಾವಣೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮಿಷನ್ ಲೈಫ್ ಚಟುವಟಿಕೆಗಳು ಸೇರಿದಂತೆ ಆರು ಪ್ರಮುಖ ವಿಭಾಗಗಳನ್ನು ಪರಿಗಣಿಸಲಾಗಿದೆ. ಶಾಲೆಯಲ್ಲಿನ ಸ್ವಚ್ಛತಾ ವ್ಯವಸ್ಥೆ, ಡ್ರೈನೇಜ್, ಪರಿಸರ ಸಂರಕ್ಷಣೆ, ತ್ಯಾಜ್ಯ ನಿರ್ವಹಣೆ ಹಾಗೂ ಪರಿಸರ ಆಧಾರಿತ ಕಾರ್ಯಕ್ರಮಗಳು ಮೌಲ್ಯಮಾಪಕರ ಮೆಚ್ಚುಗೆಗೆ ಪಾತ್ರವಾಗಿವೆ.

> ಶಾಲೆ ಕೇವಲ ಪಾಠ ಕಲಿಸುವ ಕೇಂದ್ರವಾಗಿರದೆ, ಉತ್ತಮ ನಾಗರಿಕರನ್ನು ರೂಪಿಸುವ ತಾಣವಾಗಬೇಕು ಎಂಬ ಉದ್ದೇಶದಿಂದ ಹಲವು ವಿನೂತನ ಚಟುವಟಿಕೆಗಳನ್ನು ನಡೆಸಿದ್ದೇವೆ. ಅದರ ಫಲವೇ ಈ ರಾಷ್ಟ್ರಮಟ್ಟದ ಗೌರವ
> ■ ಜನಾರ್ದನ ಬೆಳ್ಳಿರಾಯ, ಮುಖ್ಯೋಪಾಧ್ಯಾಯರು

ತಂಬಾಕು, ಧೂಮಪಾನ ಸಾವಿಗೆ ಮುಕ್ತ ಆಹ್ವಾನ: ಡಾ. ಮಾಧವ ಪೈ ಕಿವಿಮಾತು

ಕೋಟ: ತಂಬಾಕು ಮತ್ತು ನಿಕೋಟಿನ್ ಸೇವನೆಯು ನೇರವಾಗಿ ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತಿದ್ದು, ಸಾರ್ವಜನಿಕರು ಅದರಲ್ಲೂ ಮುಖ್ಯವಾಗಿ ಯುವ ಪೀಳಿಗೆ ಈಮಾರಕಹವ್ಯಾಸದಿಂದದೂರವಿರಬೇಕು ಎಂದು ಕೋಟ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಮಾಧವ ಪೈ ಕರೆ ನೀಡಿದ್ದಾರೆ.

ಕೋಟದ ವಿವೇಕ ಬಾಲಕಿಯರ ಪ್ರೌಢಶಾಲೆ ಆರೋಗ್ಯ ಸಂಘ ಹಾಗೂ ಮಕ್ಕಳ ಹಕ್ಕುಗಳ ಸಂಘ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಶೇ. 29 ರಷ್ಟು ಜನರು ವಿವಿಧ ರೀತಿಯ ಕ್ಯಾನ್ಸರ್ ರೋಗದಿಂದ ನರಳುತ್ತಿರುವುದು ಅತ್ಯಂತ ದಿಗಿಲುಗೊಳಿಸುವ ವಿಷಯವಾಗಿದೆ. ನಶ್ಯ, ಸಿಗರೇಟು, ಗುಟ್ಕಾದಂತಹ ತಂಬಾಕು ಉತ್ಪನ್ನಗಳು ನೇರವಾಗಿ ಸಾವಿಗೆ ಆಹ್ವಾನ ನೀಡುತ್ತಿವೆ ಎಂದು ಎಚ್ಚರಿಸಿದರು.

ಶಾಲಾಮಟ್ಟದಲ್ಲೇ ಮೌಲ್ಯ ಶಿಕ್ಷಣ

ಹದಿಹರೆಯದ ವಯಸ್ಸಿನಲ್ಲಿ ವಿದ್ಯಾರ್ಥಿಗಳು ಆಕರ್ಷಣೆಗಳಿಗೆ ಒಳಗಾಗಿ ಶಿಕ್ಷಣದ ಗುರಿಯನ್ನು ಬಿಟ್ಟು ದಾರಿ ತಪ್ಪುವ ಸಂಭವ ಹೆಚ್ಚು ಇರುತ್ತದೆ. ಆದ್ದರಿಂದ, ಶಾಲೆಗಳಲ್ಲಿ ಈ ಹಂತದಲ್ಲೇ ತಂಬಾಕು ವಿರೋಧಿ ಮೌಲ್ಯ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಮಕ್ಕಳಲ್ಲಿ ಮೈಗೂಡಿಸಬೇಕು. ಈ ನಿಟ್ಟಿನಲ್ಲಿ ಕೇವಲ ವಿದ್ಯಾರ್ಥಿಗಳಷ್ಟೇ ಅಲ್ಲದೆ ಪೋಷಕರು ಹಾಗೂ ಶಿಕ್ಷಕರು ಹೆಚ್ಚಿನ ಜಾಗೃತಿ ವಹಿಸಬೇಕಾದ ಅಗತ್ಯವಿದೆ ಎಂದು ಡಾ. ಪೈ ಪ್ರತಿಪಾದಿಸಿದರು. ಮುಖ್ಯ ಶಿಕ್ಷಕರಾದ ವೆಂಕಟೇಶ ಉಡುಪ ಸ್ವಾಗತಿಸಿದರು. ಆರೋಗ್ಯ ಸಂಘದ ಸಂಚಾಲಕಿ ಮಮತಾ ಹಾಗೂ ಕಾರ್ಯದರ್ಶಿ ಕುಮಾರಿ ಸಾನ್ವಿ ಮತ್ತು ಮಕ್ಕಳ ಹಕ್ಕುಗಳ ಸಂಘದ ಸಂಚಾಲಕಿ ವಿಜಯಲಕ್ಷ್ಮಿ ಹಾಗೂ ಕಾರ್ಯದರ್ಶಿ ಕುಮಾರಿ ಅವನಿ ಹೊಳ್ಳ ವೇದಿಕೆಯಲ್ಲಿದ್ದರು. ಕುಮಾರಿ ಅನಘ ಹೊಳ್ಳ ನಿರೂಪಿಸಿದರು.



ಹೆಚ್ಚುತ್ತಿರುವ ಸ್ತ್ರೀಯರ ಧೂಮಪಾನ ಪ್ರಮಾಣ

ಇತ್ತೀಚಿನ ದಿನಗಳಲ್ಲಿ ಧೂಮಪಾನ ಮಾಡುವವರಲ್ಲಿ ಸ್ತ್ರೀಯರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತಿರುವುದು ಅತ್ಯಂತ ಕಳವಳಕಾರಿ ವಿಷಯವಾಗಿದೆ. ಮಹಿಳೆಯರು ತಂಬಾಕು ಸೇವನೆ ಮತ್ತು ಧೂಮಪಾನ ಮಾಡುವುದರಿಂದ ಗರ್ಭಕೋಶದ ಕ್ಯಾನ್ಸರ್ ಬರುವ ಪ್ರಮಾಣ ತೀವ್ರವಾಗಿ ಜಾಸ್ತಿಯಾಗುತ್ತಿದೆ ಎಂದು ಅವರು ವೈದ್ಯಕೀಯ ಅಂಕಿ-ಅಂಶಗಳ ಸಮೇತ ಕಳವಳ ವ್ಯಕ್ತಪಡಿಸಿದರು.

- ಸಮಾಜದಲ್ಲಿ ಶೇ.29ರಷ್ಟು ಜನರು ವಿವಿಧ ರೀತಿಯ ಕ್ಯಾನ್ಸರ್ ರೋಗದಿಂದ ನರಳುತ್ತಿರುವುದು ಅತ್ಯಂತ ಖೇದಕರ ಸಂಗತಿ
- ನಶ್ಯ, ಸಿಗರೇಟು, ಗುಟ್ಕಾದಂತಹ ತಂಬಾಕು ಉತ್ಪನ್ನಗಳೇ ನೇರ ಸಾವಿಗೆ ಆಹ್ವಾನ

ಪಿಎಂ-ವಿಬಿಆರ್‌ವೈ: ನಾಳೆ ಮಂಗಳೂರಿನಲ್ಲಿ ಜಾಗೃತಿ, ವಿಶೇಷ ಕಾರ್ಯಕ್ರಮ ಆಯೋಜನೆ

ಮಂಗಳೂರು: ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆಯ (ಪಿಎಂ-ವಿಬಿಆರ್‌ವೈ) ಬಗ್ಗೆ ದೇಶವ್ಯಾಪಿ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಮಂಗಳೂರು ಇಪಿಎಫ್‌ಒ ಪ್ರಾದೇಶಿಕ ಕಚೇರಿ ವತಿಯಿಂದ ಜೂ.19ರಂದು ಸಂಜೆ 4 ಗಂಟೆಗೆ ಮಂಗಳೂರಿನ ಬಂದರ್‌ನಲ್ಲಿರುವ ಕೆನರಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಸಭಾಂಗಣದಲ್ಲಿ ಜಾಗೃತಿ ಹಾಗೂ ವಿಶೇಷ ಕಾರ್ಯಕ್ರಮ ನಡೆಯಲಿದೆ

ಸೌಲಭ್ಯ ಬಿಡುಗಡೆ

ಈ ಕಾರ್ಯಕ್ರಮ ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಪಿಎಂ-ವಿಬಿಆರ್‌ವೈ ಕಾರ್ಯಕ್ರಮದೊಂದಿಗೆ ಸಂಯೋಜಿತವಾಗಿದ್ದು, ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಯೋಜನೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಬಿಡುಗಡೆ ಮಾಡಲಿದ್ದಾರೆ. ದೇಶದ ವಿವಿಧ ರಾಜ್ಯಗಳು ಹಾಗೂ ಪ್ರಮುಖ ಕೇಂದ್ರಗಳಲ್ಲಿಯೂ ಇದೇ ವೇಳೆ ಕಾರ್ಯಕ್ರಮಗಳು ನಡೆಯಲಿದೆ. ಅದರಂತೆ ಮಂಗಳೂರಿನಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ದಕ್ಷಿಣ ಕನ್ನಡ ಇಪಿಎಫ್‌ಒ ಪ್ರಾದೇಶಿಕ ಆಯುಕ್ತ ಸಂದೀಪ್ ಬಿಸ್ವಾಸ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಜಾಗೃತಿ

ಯೋಜನೆಯ ಪ್ರಯೋಜನಗಳು, ಸಾಮಾಜಿಕ ಭದ್ರತೆ ಮಹತ್ವ, ಕಾರ್ಮಿಕ ಕಲ್ಯಾಣ ಯೋಜನೆಗಳು ಹಾಗೂ ಸರ್ಕಾರ ಕೈಗೊಂಡಿರುವ ಇತ್ತೀಚಿನ ಸುಧಾರಣೆಗಳ ಕುರಿತು ಜಾಗೃತಿ ಮೂಡಿಸಲಾಗುವುದು.

ಪ್ರೋತ್ಸಾಹ ಧನ ವಿತರಣೆ

ಇಪಿಎಫ್‌ಒ ಮಂಗಳೂರು ಪ್ರಾದೇಶಿಕ ಕಚೇರಿ ವ್ಯಾಪ್ತಿಯಲ್ಲಿ, ಯೋಜನೆಯ ಭಾಗ-ಎ ಅಡಿಯಲ್ಲಿ ಅರ್ಹ ಉದ್ಯೋಗಿಗಳಿಗೆ ಸುಮಾರು 47 ಲಕ್ಷ ರೂ. ಮೊತ್ತದ ಪ್ರಯೋಜನಗಳನ್ನು ಹಾಗೂ ಭಾಗ-ಬಿ. ಅಡಿಯಲ್ಲಿ ಅರ್ಹ ಉದ್ಯೋಗದಾತರಿಗೆ ಸುಮಾರು 5.3 ಕೋಟಿ ರೂ. ಪ್ರೋತ್ಸಾಹ ಧನವನ್ನು ವಿತರಿಸಲು ಉದ್ದೇಶಿಸಲಾಗಿದೆ. ಇದೇ ವೇಳೆ ಹೊಸದಾಗಿ ನೇಮಕಗೊಂಡ ಉದ್ಯೋಗಿಗಳಿಗೆ ನೇಮಕಾತಿ ಪತ್ರಗಳನ್ನೂ ಸಾಂಕೇತಿಕವಾಗಿ ವಿತರಿಸಲಾಗುವುದು.

ಉದ್ಯೋಗಾವಕಾಶ ಸೃಷ್ಟಿ

ಕಾರ್ಯಕ್ರಮದಲ್ಲಿ ಗಣ್ಯರು ಭಾಗವಹಿಸಲಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2025ರ ಆ.15ರಂದು ಆರಂಭಿಸಿದ 'ಪ್ರಧಾನಮಂತ್ರಿ ವಿಕಸಿತ ಭಾರತ್ ರೋಜ್‌ಗಾರ್ ಯೋಜನೆ ದೇಶದಲ್ಲಿ ಬೃಹತ್ ಪ್ರಮಾಣದ ಉದ್ಯೋಗ ಸೃಷ್ಟಿ ಹಾಗೂ ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶ ಹೊಂದಿರುವ ಪ್ರಮುಖ ಉದ್ಯೋಗ-ಸಂಬಂಧಿತ ಪ್ರೋತ್ಸಾಹ ಯೋಜನೆಯಾಗಿದೆ. ಎರಡು ವರ್ಷಗಳ ಅವಧಿಯಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ವಿವರಿಸಿದರು.

ಇಪಿಎಫ್‌ಒ ಮಂಗಳೂರು ಪ್ರಾದೇಶಿಕ ಸಹಾಯಕ ಆಯುಕ್ತ ಅಂಕಿತ್ ಸಿಂಗ್, ಅಧಿಕಾರಿಗಳಾದ ಅನಿತಾ, ಸುಶೀಲಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕೊಡಗಿನಲ್ಲಿ ನೀಟ್ ಯುಜಿ ಮರು ಪರೀಕ್ಷೆ ಸಿದ್ಧತೆ | ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದ ಜಿಲ್ಲಾಧಿಕಾರಿ ಸೋಮಶೇಖರ್

ಪರೀಕ್ಷಾ ಪ್ರಾಧಿಕಾರ ನಿಯಮ ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆ

ಮಡಿಕೇರಿ: ಇದೇ ಜೂನ್ 21ರಂದು ನಡೆಯುವ ನೀಟ್ ಯುಜಿ- 2026 ಮರುಪರೀಕ್ಷೆ ಸಿದ್ಧತೆ ಬಗ್ಗೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಮಾಹಿತಿ ಪಡೆದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನೀಟ್ ಮರುಪರೀಕ್ಷೆ ನೋಡಲ್ ಅಧಿಕಾರಿ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಭಾಗ್ಯನಂದನ್, ಪರೀಕ್ಷಾ ಕೇಂದ್ರದ ಮೇಲ್ವಿಚಾರಕ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವಿಜಯ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಸವರಾಜು ಅವರಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿಯವರು, ನೀಟ್ (ಯುಜಿ) ಮರು ಪರೀಕ್ಷೆಯನ್ನು ಯಾವುದೇ ಗೊಂದಲಕ್ಕೆ ಅವಕಾಶ ಮಾಡದೆ ಸುಗಮ ಹಾಗೂ ಸುಲಲಿತ ನಡೆಸುವಂತೆ ಸೂಚನೆ ನೀಡಿದರು.

ಎಲ್ಲಾ ನಿಯಮ ಕಡ್ಡಾಯವಾಗಿ ಪಾಲಿಸಿ

ಪರೀಕ್ಷಾ ಕೇಂದ್ರದ ಎಲ್ಲಾ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸುವುದು, ಪರೀಕ್ಷೆ ಬರೆಯುವ ಕೇಂದ್ರದಲ್ಲಿ ವಿದ್ಯಾರ್ಥಿಗಳು ನೋಂದಣಿ ಸಂಖ್ಯೆ ನೋಡಿ ಕೊಂಡು ಪರೀಕ್ಷೆ ಕೊಠಡಿಗೆ ತೆರಳುವಂತಾಗಲು ನೋಂದಣಿ ಸಂಖ್ಯೆ ಬೋರ್ಡ್‌ಗಳನ್ನು ಅಳವಡಿಸುವುದು, ಶುದ್ಧ ಕುಡಿಯುವ ನೀರು ವ್ಯವಸ್ಥೆ ಮಾಡುವುದು, ಪ್ರಶ್ನೆ ಪತ್ರಿಕೆ ತರಿಸಿಕೊಳ್ಳುವುದು, ಉತ್ತರ ಪತ್ರಿಕೆ ರವಾನಿಸುವುದು ಸೇರಿದಂತೆ ಪರೀಕ್ಷಾ ಪ್ರಾಧಿಕಾರದ ನಿಯಮಗಳನ್ನು ಚಾಚುತಪ್ಪದೆ ಪಾಲಿಸಬೇಕು ಎಂದು ಜಿಲ್ಲಾಧಿಕಾರಿಯವರು ಸೂಚಿಸಿದರು.



ಪರೀಕ್ಷಾ ಕೇಂದ್ರ ಸುತ್ತ ಅಗತ್ಯ ನಿಯಮ ಪಾಲಿಸುವುದು, ವಿದ್ಯುತ್ ಪೂರೈಕೆ, ಅಗತ್ಯ ವಾಹನ ಒದಗಿಸುವುದು, ಪೊಲೀಸರ ನಿಯೋಜನೆ ಮತ್ತಿತರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಗಮನಹರಿಸಬೇಕು ಎಂದರು.

ನೀಟ್ ಮರುಪರೀಕ್ಷೆ ಸಂಬಂಧ ನಿಯೋಜಿಸಿರುವ ಎಲ್ಲಾ ಹಂತದ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಯಾವುದೇ ಅಕ್ರಮ ಚಟುವಟಿಕೆಗಳಿಗೆ ಅವಕಾಶ ಮಾಡಬಾರದು. ಯಾವುದೇ ರೀತಿಯ ಸಮಸ್ಯೆ ಹಾಗೂ ಗೊಂದಲಕ್ಕೆ ಅವಕಾಶ ಮಾಡದೆ ಮರು ಪರೀಕ್ಷೆಯನ್ನು ಸುಲಲಿತವಾಗಿ ನಡೆಸುವಂತೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ತಾಕೀತು ಮಾಡಿದರು.

ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿ ಹಾಗೂ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ವಿಜಯ್ ಅವರು ಮಾಹಿತಿ ನೀಡಿ ನೀಟ್ (ಯುಜಿ) ಮರುಪರೀಕ್ಷೆಯು ಜಿಲ್ಲಾ ಕೇಂದ್ರ ಮಡಿಕೇರಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಲಿದ್ದು, 516 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಮಾಹಿತಿ ನೀಡಿದರು. ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು 22 ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಒಂದು ಕೊಠಡಿಯಲ್ಲಿ ಇಬ್ಬರು ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ವಿಜಯ್ ಅವರು ವಿವರಿಸಿದರು.

ನೀಟ್(ಯುಜಿ) ಮರು ಪರೀಕ್ಷೆ ಸಂಬಂಧ ಅಗತ್ಯ ತಯಾರಿ ಮಾಡಿಕೊಳ್ಳಲಾಗಿದ್ದು, ನೀಟ್ ಮರುಪರೀಕ್ಷೆಯನ್ನು ವ್ಯವಸ್ಥಿತವಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ನೀಟ್ ನೋಡಲ್ ಅಧಿಕಾರಿ ಹಾಗೂ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಭಾಗ್ಯನಂದನ್ ಅವರು ಮಾತನಾಡಿ, ನೀಟ್ ಮರುಪರೀಕ್ಷೆ ಸಂಬಂಧ ಪರೀಕ್ಷಾ ಪ್ರಾಧಿಕಾರದ ನಿಯಮದಂತೆ ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

- ಪರೀಕ್ಷೆ ಬರೆಯಲಿದ್ದಾರೆ ಒಟ್ಟು 516 ವಿದ್ಯಾರ್ಥಿಗಳು
- ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು 22 ಕೊಠಡಿ ವ್ಯವಸ್ಥೆ
- ಒಂದು ಕೊಠಡಿಯಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ ಇಬ್ಬರು ಮೇಲ್ವಿಚಾರಕರು

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮಿ (ನಂ.DL-57) ಡ್ರಾ ಜೂನ್ 17ರಂದು ತಿರುವನಂತಪುರದ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DG 557857 (MALAPPURAM)

Consolation Prize Rs.5,000/-
DA 557857 DB 557857 DC 557857 DD 557857
DE 557857 DF 557857 DH 557857 DJ 557857
DK 557857 DL 557857 DM 557857

2nd Prize Rs.30,00,000/- [30 Lakhs]
DG 240525 (PALAKKAD)

3rd Prize Rs.5,00,000/- [5 Lakhs]
DE 319667 (PAYYANUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0273 1145 1371 1490 1562 1745 1921 2378 3965 4353
4373 6804 6867 7399 7850 8171 8453 8550 9869

5th Prize Rs.2,000/-
0752 1295 3815 7400 7561 9734

6th Prize Rs.1,000/-
0063 1267 1274 1981 2428 3254 3482 3641 4119 4358
4435 4513 4677 4774 5219 5242 5319 5677 5749 5899
7061 7447 7630 8016 9633

7th Prize Rs.500/-
0044 0230 0425 0502 0736 0802 0904 0976 1019 1090
1471 1532 1592 1638 1640 1906 2093 2099 2357 2475
2526 2768 2958 3009 3414 3431 3461 3554 3855 4117
4186 4290 4343 4521 4777 5044 5078 5098 5868 5871
5907 5927 5956 6005 6369 6431 6518 6629 6682 6743
6790 6800 6997 7098 7262 7353 7354 7639 8197 8219
8359 8537 8625 8768 8853 8906 8914 9089 9167 9225
9252 9304 9666 9742 9785 9865

8th Prize Rs.200/-
0077 0088 0119 0300 0427 0493 0550 0696 0727 0898
1001 1645 1825 1877 1998 2013 2113 2123 2306 2330
2396 2407 2427 2464 2534 2589 2621 2754 2843 2949
3137 3159 3596 4012 4184 4259 4295 4337 4413 4416
4453 4482 4540 4663 4727 4793 4889 4897 4913 4961
5132 5270 5362 5625 5767 5789 5872 6136 6161 6162
6226 6244 6327 6375 6538 6589 6650 6788 6835 6959
7395 7468 7511 7615 7780 7887 7998 8130 8162 8183
8185 8216 8225 8425 8476 8623 8712 8718 8826 9097
9114 9377 9425 9635 9679 9786

9th Prize Rs.100/-
0025 0034 0136 0160 0179 0185 0274 0301 0339 0365
0389 0521 0611 0620 0666 0689 0691 0714 0740 0830
0923 0924 0995 1053 1137 1224 1514 1518 1652 1660
1811 1830 2000 2003 2025 2060 2110 2289 2363 2546
2639 2682 2703 2798 2812 2893 2915 2922 3029 3138
3184 3201 3314 3373 3379 3383 3406 3444 3450 3503
3580 3747 3781 3818 3942 4009 4065 4071 4141 4281
4339 4463 4464 4762 4788 4811 5014 5048 5057 5152
5170 5374 5481 5524 5576 5595 5615 5803 5939 6144
6278 6361 6371 6392 6444 6451 6731 6746 6868 7075
7122 7321 7385 7443 7471 7486 7495 7588 7683 7709
7756 7880 7886 7938 8005 8043 8154 8243 8348 8389
8426 8926 8949 8971 9043 9085 9088 9103 9172 9210
9363 9472 9510 9746 9797 9804 9900 9906

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು ಮಂಗಳೂರು ವಿಭಾಗ,

ಕದ್ರಿ ಉದ್ಯಾನವನ ರಸ್ತೆ, ಮಂಗಳೂರು–575004

ಸಂಖ್ಯೆ: ಸ.ಅ.ಸಂ:ಟೆಂ(ಮಂ.ವಿ)ವಿವ–/2026–27 ದಿನಾಂಕ: 16–06–2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ಮಂಗಳೂರು ಉಪ ವಿಭಾಗದ ವ್ಯಾಪ್ತಿಗೊಳಪಡುವ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02–07–2026 ಅಪರಾಹ್ನ 5.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 04–07–2026 ರಂದು ಪೂರ್ವಾಹ್ನ 11.00 ಗಂಟೆಗೆ. ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ–ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 13–07–2026 ರಂದು ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 15–07–2026 ರಂದು ಪೂರ್ವಾಹ್ನ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು

DIPR/DK/KSMCA/387/26-27dt.17.06.2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಹಾಸನ

ಜಿಲ್ಲಾ ಪಂಚಾಯತ್, ಬಿ.ಎಂ.ರಸ್ತೆ, ಹಾಸನ–573201
ದೂರವಾಣಿ ಸಂಖ್ಯೆ: 08172–268794 ಜಾಲ ತಾಣ:
https://zphassan.karnataka.gov.in Mail ID:
admsection95@gmail.com

ಸಂ:ಜಿಪಂಹಾ/ಅಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026–27
ದಿನಾಂಕ:10.06.2026

ಇ–ಟೆಂಡರ್ ಅಧಿಸೂಚನೆ

ಹಾಸನ ಜಿಲ್ಲಾ ಪಂಚಾಯತ ಕಛೇರಿಯಲ್ಲಿ ವಿವಿಧ ಶಾಖೆಗಳ ದೈನಂದಿನ ಕೆಲಸಗಳಿಗೆ ಅಗತ್ಯವಿರುವ ಲೇಖನ ಮತ್ತು ಸ್ವಚ್ಛತಾ ಸಾಮಗ್ರಿಗಳ ಸರಬರಾಜಿಗಾಗಿ Fಇ–ಟೆಂಡರ್ ಪ್ರಕಟಣೆ. ಇ–ಟೆಂಡರ್ ಪ್ರಕಟಣೆ ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಜಿಪಂಹಾ/ಅಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026–27 ದಿನಾಂಕ: 10/06/2026 ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ 15/06/2026 ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ 15.00.000/– ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 30/06/2026 KPPP ಪೋರ್ಟಲ್ ನಲ್ಲಿ ಸಂಜೆ 5.00 ರವರೆಗೆ ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ, ದಿನಾಂಕ: 02/07/2026 ಬೆಳಗ್ಗೆ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: ದಿನಾಂಕ: 10/07/2026 ಮದ್ಯಾಹ್ನ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ. (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ 37,500/– ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಉಪ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯತ್, ಹಾಸನ ದೂರವಾಣಿ ಸಂಖ್ಯೆ: 08172–268824 ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು KPPP ಪೋರ್ಟಲ್‌ನಲ್ಲಿ ಪಡೆಯಬಹುದು.

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾಸನ.

ವಾಸಾಸಂಇ/ಹಿಸನಿ/ಹಾಸನ/242/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಮಂಗಳೂರು

2ನೇ ಮಹಡಿ, ಜಿಲ್ಲಾ ಪಂಚಾಯತ್ ಕಟ್ಟಡ, ಕೊಟ್ಟಾರ, ಮಂಗಳೂರು–575006
ಫೋನ್: 0824–2951583 ಇ–ಮೇಲ್: eerdwsd.dk@gmail.com
ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ನಿ.ಇ.ಗ್ರಾ.ಕು.ನೀ.ಸ&ನೈ.ವಿ:ಮಂ:ಟೆಂಡರ್:ಎಇ–1:2026–27/526
ದಿ: 17–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕಾಮಗಾರಿಗಳಿಗೆ Tender document ಆಧಾರದ ಮೇಲೆ ಕೆ.ಪಿ.ಪಿ. ವೇದಿಕೆಯ ಮೂಲಕ ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಸ್ವೀಕರಿಸಲಾಗುವುದು. ವಿವರವು ಈ ಕೆಳಗಿನಂತಿದೆ:

ಬಂಟ್ವಾಳ ತಾಲೂಕು ಕಾಮಗಾರಿ –1 ಒಟ್ಟು ಟೆಂಡರ್‌ಗಿಟ್ಟ ಮೊತ್ತ ರೂ. 124.00 ಲಕ್ಷ

KPP Portal ನಲ್ಲಿ ಟೆಂಡರ್ ದಾಖಲೆಗಳನ್ನು Download ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: 17–06–2026 ರಿಂದ 25–06–2026ರ ಸಂಜೆ 5.00 ಗಂಟೆಯವರೆಗೆ.

ವಿಚಾರಣಾ/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 23–06–2026ರ ಸಂಜೆ 4.00 ಗಂಟೆಗೆ, ಟೆಂಡರನ್ನು ತೆರೆಯುವ ದಿನಾಂಕ: 29–06–2026

ಹೆಚ್ಚಿನ ವಿವರಗಳಿಗೆ ಈ ಕಛೇರಿ ದೂರವಾಣಿ ಸಂಖ್ಯೆ: 0824–2951583ಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/–. ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ದಕ್ಷಿಣ ಕನ್ನಡ ವಿಭಾಗ, ಮಂಗಳೂರು.

DIPR/DK/KSMCA/388/26-27 dt. 17.06.2026

ಮಾನ್ಯ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಶಿವಮೊಗ್ಗ

ಮಿಸ್.ನಂ : 22/2025

ಅರ್ಜಿದಾರರು : ರವಿ ವೆಂಕಟರಮಣ ಹೆಗ್ಡೆ ಮತ್ತು ಒಬ್ಬರು.

ವಿರುದ್ಧ

ಎದುರುದಾರರು : ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಕೂಡಲಿ ಶೃಂಗೇರಿ ಮಹಾಸಂಸ್ಥಾನ ದಕ್ಷಿಣ ಮಾನ್ಯ ಶ್ರೀ ಶಾರದಾ ಪೀಠಂ ಮತ್ತು ಇತರರು.

5 ಮತ್ತು 13ನೇ ಎದುರುದಾರರಿಗೆ ನೋಟೀಸು

ಎದುರುದಾರ 5 : ಶ್ರೀ ಕೇಶವ ಪ್ರಸಾದ್ ಹೆಚ್.ಎಸ್. ಬಿನ್ ಸುಬ್ಬರಾವ್ ಹೆಚ್.ಎಲ್. ಸುಮಾರು 44 ವರ್ಷ, ವಕೀಲರು. ವಾಸ: 407, ಶ್ರೀಮಾತಾ ಎನ್‌ಕ್ಲೇವ್, ಗೋಪಾಲಕೃಷ್ಣ ಲೇಔಟ್, ಸೂರ್ಪುರ, ಉತ್ತರಹಳ್ಳಿ, ಬೆಂಗಳೂರು–560061.

ಎದುರುದಾರ 13 : ಶ್ರೀಮತಿ ರಮ್ಯ ಅನಿಲ್‌ಕುಮಾರ್, ಕೋಂ ಅನಿಲ್‌ಕುಮಾರ್, ಸುಮಾರು 45 ವರ್ಷ, 4ನೇ ತಿರುವು, 7ನೇ ಮೈನ್, ಅಟ್ಟೂರು ಲೇಔಟ್, ಯಲಹಂಕ, ಬೆಂಗಳೂರು–560064.

★★★

ಎದುರುದಾರರಾದ ಮೇಲ್ಕಾಣಿಸಿದ 5 ಮತ್ತು 13ರವರಿಗೆ ಈ ಮೂಲಕ ತಿಳಿಸುವುದೇನೆಂದರೆ ಅರ್ಜಿದಾರರಾದ ರವಿ ವೆಂಕಟರಮಣ ಹೆಗ್ಡೆ ಮತ್ತು ಒಬ್ಬರು ಎದುರುದಾರರಾದ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಕೂಡಲಿ ಶೃಂಗೇರಿ ಮಹಾಸಂಸ್ಥಾನಂ ದಕ್ಷಿಣ ಮಾನ್ಯ ಶ್ರೀ ಶಾರದಾ ಪೀಠಂ ಕೂಡ್ಲಿ, ಶಿವಮೊಗ್ಗ ತಾಲ್ಲೂಕು, ಇದರ ವಹಿವಾಟು ಮತ್ತು ಆಡಳಿತಕ್ಕೆ ಸಂಬಂಧಪಟ್ಟಂತೆ ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಲು ಅನುಮತಿ ಕೋರಿ ಮತ್ತು ಪರಿಹಾರ ಕೋರಿ ಸಿವಿಲ್ ಪ್ರಕ್ರಿಯಾ ಸಮಿತಿ ಕಲಂ 95ರ ಮೇರೆಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯು ತಮ್ಮ ಹಾಜರಾತಿಗೆಂದು ದಿನಾಂಕ:08-07-2026 ರಂದು ನಿಗದಿಯಾಗಿರುತ್ತದೆ. ಸದರಿ ದಿನಾಂಕದಂದು ತಾವಾಗಲಿ ಅಥವಾ ತಮ್ಮಿಂದ ನೇಮಿಸಲ್ಪಟ್ಟ ವಕೀಲರ ಮುಖಾಂತರವಾಗಲಿ ಮೇಲ್ಕಾಣಿಸಿದ ನ್ಯಾಯಾಲಯದ ಆವರಣದಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಿದ್ದು, ತಮ್ಮ ತಕರಾರುಗಳೇನಾದರೂ ಇದ್ದಲ್ಲಿ ಸಲ್ಲಿಸಲು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ವೆಂಕಟರಾಮು ಎನ್.
ಅರ್ಜಿದಾರರ ಪರ ವಕೀಲರು
ಶಿವಮೊಗ್ಗ
ದಿನಾಂಕ:17-06-2026

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಮಾನ್ಯ ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ

ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–15/2026–27
ದಿನಾಂಕ : 11–06–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27ನೇ ಸಾಲಿನ ಸಾಮಾನ್ಯ ನಿಧಿ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act -1999 & 2000ರಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW–1ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ: 29.06.2026 ಅಪರಾಹ್ನ4.30 ಗಂಟೆಯೊಳಗೆ ಸಲ್ಲಿಸುವುದು. ಟೆಂಡರ್ ಪ್ರಕಟಣೆ ವಿವರವನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.

ಕ್ರ ಸಂ : 01. ಇಂಡೆಂಟ್ ಸಂಖ್ಯೆ : DMA/2026-27/RD/WORK_INDENT59243. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 19.97. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 16.69. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 50,000/-.

ಕ್ರ ಸಂ : 02. ಇಂಡೆಂಟ್ ಸಂಖ್ಯೆ : DMA/2026-27/RD/WORK_INDENT59244. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 19.71. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 16.92. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 50,000/-.

ಸಹಿ/–ಪೌರಾಯುಕ್ತರು, ನಗರಸಭೆ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿಎ/206/2025–26

ಪುತ್ತೂರು ಮಾರುಕಟ್ಟೆ ಧಾರಣೆ

17-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	335 - 385
ಹಳೆ ಪಟೋರ	335 - 385
ಹೊಸ ಉಳ್ಳಿ	140 - 285
ಹಳೆ ಉಳ್ಳಿ	130 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	272.00
ಆರ್‌ಎಸ್‌ಎಸ್ 2	224.00
ಸ್ಕ್ರಾಪ್ 1	157.00
ಸ್ಕ್ರಾಪ್ 2	145.00

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂ: ಕೆಆರ್‌ಐಡಿಎಲ್/ಎಡಿಎಂ/ಟಿಎನ್‌ಡಿ/ಇನ್ಸುರೆನ್ಸ್/2026–27 ದಿನಾಂಕ: 16.06.2026

ಸಮೂಹ ಆರೋಗ್ಯ ವಿಮೆ ಮತ್ತು ಸಮೂಹ ವೈಯಕ್ತಿಕ ಅಪಘಾತ ವಿಮೆ ಒದಗಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕೆಆರ್‌ಐಡಿಎಲ್, ಈ ಕೆಳಗಿನ ವಿಷಯಗಳಲ್ಲಿ ಸಾಕಷ್ಟು ಅನುಭವ ಹೊಂದಿರುವ ಆಸಕ್ತ ಬಿಡ್‌ದಾರರು/ವೈದ್ಯಕೀಯ ವಿಮೆ ಒದಗಿಸುವವರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಿದೆ.

1. ಕೆಆರ್‌ಐಡಿಎಲ್‌ನ ಎಲ್ಲಾ ಖಾಯಂ ನೌಕರರು/ಅಧಿಕಾರಿಗಳು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಸಮೂಹ ಆರೋಗ್ಯ ವಿಮಾ ಪಾಲಿಸಿ.
2. ಕೆಆರ್‌ಐಡಿಎಲ್‌ನ ಎಲ್ಲಾ ಖಾಯಂ ನೌಕರರು/ಅಧಿಕಾರಿಗಳಿಗೆ ಸಮೂಹ ವೈಯಕ್ತಿಕ ಅಪಘಾತ ವಿಮಾ ಪಾಲಿಸಿ.

ಟೆಂಡರ್‌ಗೆ ಇಡಲಾದ ಇಎಂಡಿ: ರೂ. 65,000/–

ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ದಯವಿಟ್ಟು ಕೆಪಿಪಿ ಪೋರ್ಟಲ್: www.kppp.karnataka.gov.in ನಲ್ಲಿ ಪರಿವೀಕ್ಷಿಸಬಹುದು. ಸಹಾಯವಾಣಿ ಸಂಖ್ಯೆ: +91 92402 10000, +91 92402 14001.

- ➢ ವಿಚಾರಣೆಗೆ ಕೊನೆಯ ದಿನಾಂಕ:24.06.2026, ಮಧ್ಯಾಹ್ನ 3.30 ಗಂಟೆ
- ➢ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.06.2026 ಸಂಜೆ 4.30 ಗಂಟೆವರೆಗೆ.
- ➢ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:29.06.2026 ಸಂಜೆ 4.30 ಗಂಟೆಗೆ.
- ➢ ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.06.2026 ಸಂಜೆ 4.30 ಗಂಟೆಗೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ :
ಮುಖ್ಯ ಆಡಳಿತಾಧಿಕಾರಿ,
ಕೆಆರ್‌ಐಡಿಎಲ್, ಬೆಂಗಳೂರು–09. ದೂ.ಸಂಖ್ಯೆ: 080–28015607/9900531002

ಸಹಿ/– ಮುಖ್ಯ ಅಭಿಯಂತರರು (ಬೆಂಗಳೂರು)

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ)

Ph : 08375-249097 Fax : 08375-249088
e-mail : dc_haveri@yahoo.co.in
ನಂ:ಮುಸ(04)/ವಹಿ– /2026–27 ದಿನಾಂಕ : 15–06–2026

ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

Providing clothing and equipment needed for the rainy season and winter For P servants at CMC Haveri, TMC Byadagi, TMC Savanur TMC Hangal and TP Rattihalli ಕಾಮಗಾರಿಯ ಬಗ್ಗೆ ಈ ಕೆಳಗಿನ ಇಂಡೆಂಟ್ ನಂಬರನ್ ಕಾಮಗಾರಿಗೆ ಐಟಂವಾರು ಟೆಂಡರನ್ನು ದ್ವಿ–ಲಕೋಟೆ ಪದ್ಧತಿ (Double Cover System) KG-3 ರ ನಿಬಂಧನೆಗಳೊಂದಿಗೆ ಕೆಪಿಪಿಪಿ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್‌ಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	DMA/2026-27/IND6234	**64.50**	**1.36**

(1) ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 26–06–2026, Time 5.30 PM (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30–06–2026 Time 10.30 AM (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 02–07–2026 Time 10.30 AM

ಟಿಪ್ಪಣಿ : (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಸದರಿ ಟೆಂಡರಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು.

ಸಹಿ/– ಕಾರ್ಯಾಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃಧ್ಧಿಕೋಶ ಹಾವೇರಿ.

ವಾಸಾಸಂಇ/ಹಾವೇರಿ/163/ಕೆಎಸ್‌ಎಂಸಿಎ/2026–27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು

ಮೈಸೂರು–ನಂಜನಗೂಡು ರಸ್ತೆ, ಬಂಡಿಪಾಳ್ಯ, ಮೈಸೂರು–570 025
ಇ–ಮೇಲ್: apmcmysore@rediffmail.com
ದೂ: 2482725, 2482389, ಫ್ಯಾಕ್ಸ್:(0821)2482389
apmcmys@gmail.com
ಸಂ.ಕೃಉಮಾಸ(ಮೈ)/ಲೆವಿ/292/2026–27 ದಿನಾಂಕ: 10.06.2026

ಇ–ಟೆಂಡರ್ ಪ್ರಕಟಣೆ

ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ಹಣ ರೂ.1.00 ಕೋಟಿ ಒಂದು ವರ್ಷ, ರೂ.2.00 ಕೋಟಿ ಒಂದು ವರ್ಷ ಹಾಗೂ ರೂ.4.00 ಕೋಟಿ ಒಂದು ವರ್ಷಕ್ಕೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಇ–ಪೋರ್ಟಲ್ ಮೂಲಕ ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರಗಳಿಗಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಇ–ಟೆಂಡರ್ ನಲ್ಲಿ ಭಾಗವಹಿಸಲು ಕೊನೆಯ ದಿ: 03.07.2027 ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

Auction Notice Number : -
APMC/2026-27/AUCTION118
APMC/2026-27/AUCTION119
APMC/2026-27/AUCTION120

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.,ಮೈಸೂರು
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ.,ಮೈಸೂರು

DIPR/DDMYS/339/KSMCA/232/2026-27

ಕರ್ನಾಟಕ ಸರ್ಕಾರ– ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಭದ್ರಾವತಿ ವಿಭಾಗ, ಭದ್ರಾವತಿ, –577301

Phone No.:08282 200723 E mail: dcfbdvt@yahoo.in
ಸಂಖ್ಯೆ:ಬಿ1.ಟಿಂಬರ್‌ಹರಾಜು.ಸಿಆರ್–1/2026–27 ದಿ: 15–06–2026.

ನಾಟಾ/ಸೌದೆ/ಬಿಲ್ಲೆಟ್ಸ್/ಪೋಲ್ಸ್ ಮುಂತಾದ ಅರಣ್ಯ ಉತ್ಪನ್ನಗಳನ್ನು ಇ–ಹರಾಜು ಮೂಲಕ ವಿಲೇ ಮಾಡುವ ಬಗ್ಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಭದ್ರಾವತಿ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ತರೀಕೆರೆ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ನಾಟಾ/ಸೌದೆ/ಬಿಲ್ಲೇಟ್ಸ್/ಪೋಲ್ಸ್/ಬೊಂಬು ಮುಂತಾದ ಅರಣ್ಯ ಉತ್ಪನ್ನಗಳನ್ನು ಇ–ಹರಾಜು ಮೂಲಕ ವಿಲೇಗೊಳಿಸಲು ದಿನಾಂಕ:09–07–2026ಕ್ಕೆ ನಿಗದಿಗೊಳಿಸಿದ್ದು, ಸದರಿ ಇ–ಹರಾಜು ಮಾರಾಟ ಪ್ರಕಟಣೆಯನ್ನು ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:15–06–2026ರಲ್ಲಿ ಪ್ರಕಟಿಸಿದ್ದು, ಸದರಿ ಪ್ರಕಟಣೆಯಲ್ಲಿ ನಮೂದಿಸಿರುವ ಎಲ್ಲಾ ಷರತ್ತಿಗೊಳಪಟ್ಟು ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ ಸಂಖ್ಯೆ: www.aranya.gov.in ಮತ್ತು www.etimber.in ಮೂಲಕ ಪಡೆದು ಕೊಳ್ಳಬಹುದಾಗಿದೆ.

ಸಹಿ/– (ರವೀಂದ್ರಕುಮಾರ್.ಬಿ.ಎಂ. ಭಾಅಸೇ.,)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ,

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಬಿ/26–27/82/06/386

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು. ದೂರವಾಣಿ : 0816 – 2278387,
ಇ–ಮೇಲ್ : dhotumkur@gmail.com
ಸಂಖ್ಯೆ : ಜಿ.ಆ.ತು./ಸಿ(1)/08/2026–27 ದಿನಾಂಕ : 12–06–2026

ನೇಮಕಾತಿ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ : ಅ.ಕು.ಕ. 619 ಹೆಚ್.ಎಸ್.ಹೆಚ್. 2022 ಬೆಂಗಳೂರು, ದಿನಾಂಕ : 17–01–2024 ಹಾಗೂ ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ : HFM/MOS/MIS/05/2026-27 ದಿನಾಂಕ : 08–06–2026 ರ ಆದೇಶನುಸಾರ ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಅಧೀನದಲ್ಲಿನ 18 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿನ 17 ತಜ್ಞ ವೈದ್ಯರುಗಳ (ರೇಡಿಯಾಲಜಿಸ್ಟ್ – 04, ಮಕ್ಕಳ ತಜ್ಞರು – 07, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು – 01, ಚರ್ಮರೋಗ ತಜ್ಞರು – 01, ಅರವಳಿಕೆ – 03, ಜನರಲ್ ಸರ್ಜನ್ – 01), ಎದುರು ಹುದ್ದೆಗೆ ಎಂ.ಬಿ.ಬಿ.ಎಸ್. ವಿದ್ಯಾರ್ಹತೆ ಹೊಂದಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಮಾಸಿಕ ರೂ. 60,000/–, ಹಾಗೂ ಸ್ನಾತಕೋತ್ತರ ಪದವಿ ಹೊಂದಿರುವ ತಜ್ಞ ವೈದ್ಯರುಗಳಿಗೆ ಮಾಸಿಕ ರೂ. 1,10,000/– ರಂತೆ ಸಂಚಿತ ವೇತನದಲ್ಲಿ ಗುತ್ತಿಗೆ ಆಧಾರದ ಮೇಲೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಒಂದು ವರ್ಷದ ಅವಧಿಗೆ Walk in Interview (ನೇರ ಸಂದರ್ಶನದ) ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದಿನಾಂಕ : 22–06–2026 ರ ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣದಲ್ಲಿ ನೇರ ಸಂದರ್ಶನದ ಏರ್ಪಡಿಸಲಾಗಿದ್ದು, ಅರ್ಹ ಅಭ್ಯರ್ಥಿಗಳೂ ಬೆಳಿಗ್ಗೆ 10.00 ಗಂಟೆಗೆ ಹಾಜರಾಗಿ ಹೆಸರನ್ನು ನೊಂದಾಯಿಸಿಕೊಂಡು ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ. ಸಂದರ್ಶನದ ಸಮಯದಲ್ಲಿ ಎಲ್ಲಾ ಮೂಲ ದಾಖಲಾತಿಗಳನ್ನು ಮತ್ತು ದೃಢೀಕೃತ ಜೆರಾಕ್ಸ್ ದಾಖಲಾತಿಗಳನ್ನು ಮೀಸಲಾತಿ ಕೋರುವವರು ಮೀಸಲಾತಿ ಪ್ರಮಾಣ ಪತ್ರವನ್ನು ಸಂದರ್ಶನದ ಸಮಯದಲ್ಲಿ ಕಡ್ಡಾಯವಾಗಿ ಪರಿಶೀಲನೆಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಭ ಕಲ್ಯಾಣಾಧಿಕಾರಿಗಳು, ತುಮಕೂರು ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಮೊಬೈಲ್ ಸಂಖ್ಯೆ : 94498 43064.

ಸಹಿ/–ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

ಡಿಐಪಿಆರ್/ತುಮಕೂರು/38/ಮಣಿಪಾಲ್/2026–27

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ–571401

Autonomous Medical Institution, Government of Karnataka)
Phone No: 08232-231003, 222086,231197, 224040, Fax-08232-231001
E-mail: mimsmandyaoffice@gmail.com, Website: www.mimsmandya@gmail.com

ಸಂಖ್ಯೆ:ಮಿಮ್ಸ್/ಸರಬ–ಡಿ/Biochem+Physio+Microಇ–ಟೆಂ/02/2026–27 ದಿನಾಂಕ:15.06.2026

ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಜೀವರಸಾಯನ ಶಾಸ್ತ್ರ, ಶರೀರ ಕ್ರಿಯಾ ಶಾಸ್ತ್ರ, ಮೈಕ್ರೋಬಯಾಲಜಿ, ವಿಭಾಗಗಳು ಸಾರ್ವಜನಿಕ ರೋಗಿಗಳ ವಿವಿಧ ಚಿಕಿತ್ಸೆಗಳಿಗಾಗಿ ಅವಶ್ಯವಿರುವ Lab Items ಗಳನ್ನು (ಅಂದಾಜು ಮೊತ್ತ ರೂ.75.00 ಲಕ್ಷಗಳು) ಸರಬರಾಜು ಮಾಡಲು ಉತ್ಪಾದಕರವರಿಂದ / ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿಸಾಯಿ/213/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ : ಕಲಬುರಗಿ.

(ಸಂಚಾರ (ವಾಣಿಜ್ಯ) ಇಲಾಖೆ)

ಕಕರಸಾ:ಕೇಕ:ಸಂಚಾರ:ವಾಣಿಜ್ಯ: 1188: 26–27 ದಿನಾಂಕ:17–06–2026

ಟೆಂಡರ್ ಪ್ರಕಟಣೆ ಸಂಖ್ಯೆ:: 02 /2026 (ಇ–ಪೋರ್ಟಲ್ ಮೂಲಕ)

ಕ.ಕ.ರ.ಸಾ. ನಿಗಮದ ವ್ಯಾಪ್ತಿಯಲ್ಲಿನ ಸಾಮಾನ್ಯ, ವೇಗದೂತ ಹಾಗೂ ನಗರ ಸಾರಿಗೆ ವಾಹನಗಳು ಸೇರಿದಂತೆ ಒಟ್ಟು 1500 ಬಸ್ಸುಗಳ ಒಳ ಮತ್ತು ಹೊರ ಭಾಗದಲ್ಲಿ ಜಾಹೀರಾತು ಅಳವಡಿಸಲು ಐದು (5) ವರ್ಷಗಳ ಅವಧಿಗೆ ಪರವಾನಗಿ ಪಡೆಯಲು, ಆಸಕ್ತ ಮತ್ತು ಅರ್ಹ ಬಿಡ್‌ದಾರರಿಂದ ಇ–ಪೋರ್ಟಲ್ ವೆಬ್ ಸೈಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಪ್ರತಿ ಬಸ್ಸಿಗೆ ನಿಗದಿತ ಮಿತವ್ಯಯ ಮಾಸಿಕ ಪರವಾನಗಿ ಶುಲ್ಕ ರೂ. 2044/– (ತೆರಿಗೆ ಹೊರತುಪಡಿಸಿ), 2. ಒಂದು ವರ್ಷದ ಪರವಾನಿಗೆ ಅವಧಿಯ ನಂತರ ಎರಡನೇ ವರ್ಷಕ್ಕೆ ಮಾಸಿಕ ಶುಲ್ಕದ ಮೇಲೆ ಶೇ.5 ರಷ್ಟು ಹೆಚ್ಚುವರಿ ಶುಲ್ಕ ಪಾವತಿಸುವುದು. ತದನಂತರ ಪ್ರತಿ ವರ್ಷ ಶೇ.10 ರಷ್ಟು ಮಾಸಿಕ ಶುಲ್ಕ ಹೆಚ್ಚಿಸುವುದು. 3. ಇ.ಎಂ.ಡಿ. ಮೊತ್ತ ರೂ. 20,00,000/– (ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ), 4. ನಿಗದಿತ ದಿನಾಂಕ ಮತ್ತು ಸಮಯ:

ವಿಷಯ	ದಿನಾಂಕ	ಸಮಯ
ಬಿಡದಾರರು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ	08.07.2026	17:00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ & ಸಮಯ	10.7.2026	11:00
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ & ಸಮಯ	14.7.2026	11:00

5. ತಾಂತ್ರಿಕ ಬಿಡ್‌ನಲ್ಲಿ ಅರ್ಹವಾಗುವ ಬಿಡ್‌ದಾರರುಗಳ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು. 6. ಟೆಂಡರ್ ಸಂಬಂಧಿತ ದಾಖಲಾತಿಗಳು, ಷರತ್ತು & ನಿಬಂಧನೆಗಳು ಮತ್ತು ಇತರೆ ದಾಖಲಾತಿಗಳನ್ನು ಇ.ಪ್ರಕ್ಯೂರ್‌ಮೆಂಟ್‌ನ ವೆಬ್‌ಸೈಟ್ : www.eproc.karnataka.gov.in, ಮುಖೇನ ಪಡೆದುಕೊಳ್ಳಬಹುದಾಗಿರುತ್ತದೆ. 7. ಯಾವುದೇ ಕಾರಣ ನೀಡದೆ ಎಲ್ಲಾ ಟೆಂಡರ್‌ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ. 8. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಉಪ ಮುಖ್ಯ ಸಂಚಾರ ವ್ಯವಸ್ಥಾಪಕರು–7760909013 ವಿಭಾಗೀಯ ಸಂಚಾರ ಅಧಿಕಾರಿಗಳು –7760992024, ಇ–ಮೇಲ್ ವಿಳಾಸ: ctmnekrtcglb@gmail.com

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು
ಕೇಂದ್ರ ಕಛೇರಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/224/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಮ.ನಿ/2026–27 ದಿನಾಂಕ:16–06–2026.

ಮರು ಟೆಂಡರ್ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಮರು ಟೆಂಡರ್ / ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	2024–25 15ನೇ ಹಣಕಾಸು ಎನ್.ಎಂ.ಪಿ.ಸಿ ಅನುದಾನ	Procurement of 01 No Mechanical Street Sweeping Machine that uses Mechanical Conveyor for transfer of dirt tier-4 auxiliary engine, conveyor, dual and 02 side brooms, 01-Rear broom with 3.5 CUM Capacity Dirt Hopper with High raised and side ways dumping feature chassis minimum 11 ton Capacity BS-6 **Estimate Cost Rs.146,08,000/-**	DMA/2026-27/IND6359
2	ಮಹಾನಗರ ಪಾಲಿಕೆ ಅನುದಾನದಲ್ಲಿ	Procurement of Vehicles for Official Use, Field Inspection, Monitoring and Administrative Functions of Various Departments of Raichur City Corporation. **Estimate Cost Rs.72,00,000/-**	DMA/2026-27/IND6334
3	ಮಹಾನಗರ ಪಾಲಿಕೆ ಅನುದಾನದಲ್ಲಿ	Animal Birth Control ABC Surgery for Stray Dogs and ARV Vaccination Animal Birth Control Programme In Various Places Raichur City Corporation Limits **Estimate Cost Rs. 27,50,000/-**	DMA/2025-26/SE7607/CALL-2
4	2024–25, 2025–26 ಎಸ್.ಸಿ.ಪಿ ಕೆ.ಕೆ.ಆರ್.ಡಿ.ಬಿ ಅನುದಾನ.	Request for proposal (RFP) for Selection of an NGO for the Community Engagement and Awareness Campaign to Address The Problem of Synthetic Toddy Consumption in Harijanwada-1, Harijanwada 2, and Devinagar wards in Urban Raichur- 2 year programme **Estimate Cost Rs.1,02,47,600/-**	DMA/2025-26/SE7491/CALL-2

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/128/KSMCA/130/2026-27

ಕಿರುಸುದ್ದಿ

ಉಚಿತ ವೈದ್ಯಕೀಯ ತಪಾಸಣಾ ಶಿಬಿರ

ಮಂಗಳೂರು: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಹಿಂದು ಕುಷ್ಠ ನಿವಾರಣ ಸಂಘ, ವೆನ್‌ಲಾಕ್ ಆಸ್ಪತ್ರೆ ಮಂಗಳೂರು ಹಾಗೂ ಎ.ಜೆ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಇವರ ಸಹಯೋಗದೊಂದಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಬುಧವಾರ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಯಿತು.

ಶಿಬಿರದಲ್ಲಿ ವಿವಿಧ ವಿಭಾಗಗಳ ತಜ್ಞ ವೈದ್ಯರು ಸಿಬ್ಬಂದಿಗಳ ಆರೋಗ್ಯ ತಪಾಸಣೆ ನಡೆಸಿ, ಅಗತ್ಯ ಸಲಹೆ , ಚಿಕಿತ್ಸಾ ಮಾರ್ಗದರ್ಶನ ನೀಡಿದರು. ರಕ್ತದೊತ್ತಡ, ಮಧುಮೇಹ, ಚರ್ಮರೋಗ, ಕಣ್ಣಿನ ತಪಾಸಣೆ ಸೇರಿದಂತೆ ವಿವಿಧ ಆರೋಗ್ಯ ಪರೀಕ್ಷೆಗಳನ್ನು ನಡೆಸಲಾಯಿತು. ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಕೆ. ಶ್ರೀಕಾಂತ್ ರಾವ್, ಎ.ಜೆ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಡಾ.ಅಮಿತ್, ಆಪ್ತ ಸಮಾಲೋಚಕಿ ಗೀತಾ ರೈ, ಟೆಕ್ನಿಶಿಯನ್ ಕಲ್ಲೇಶ್,ಹಿಂದು ಕುಷ್ಠ ನಿವಾರಣ್ ಸಂಘದ ದಿನೇಶ್ , ದೀಕ್ಷಿತಾ ಉಪಸ್ಥಿತರಿದ್ದರು.

ಗ್ರಾಮ ಸಹಾಯಕ ಹುದ್ದೆಗೆ ಅರ್ಜಿ ಆಹ್ವಾನ

ಉಡುಪಿ: ಉಡುಪಿ ತಾಲೂಕು ಆಲೆವೂರು ಗ್ರಾಮದ ಗ್ರಾಮ ಸಹಾಯಕ ತಾತ್ಕಾಲಿಕ ಹುದ್ದೆ ನೇಮಕಾತಿಗೆ, ಷರತ್ತಿಗೊಳಪಟ್ಟು 25 ರಿಂದ 45 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸದ್ರಿ ಗ್ರಾಮದಲ್ಲಿ ವಾಸವಿರುವ, ಓದು, ಬರಹ , ಕಂಪ್ಯೂಟರ್ ಜ್ಞಾನ ಹೊಂದಿರುವ, ಈ ಹಿಂದೆ ಗ್ರಾಮ ಸಹಾಯಕರಾಗಿದ್ದು, ಸೇವೆಯಲ್ಲಿರುವಾಗಲೇ ಮರಣ ಹೊಂದಿದವರ ಕುಟುಂಬದ ಸದಸ್ಯರು, ಸ್ಥಳೀಯ ಕಚೇರಿಗಳಲ್ಲಿ ಕೆಲಸ ನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಜೂ.30 ರೊಳಗಾಗಿ ಉಡುಪಿ ತಾ.ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಕೋಟ ಮಣೂರು: ವಿಶೇಷ ಭಜನಾ ಸಂಕೀರ್ತನೆ

ಕೋಟ: ಇಲ್ಲಿನ ಮಣೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ಕೊನೆಯ ದಿನದ ಅಂಗವಾಗಿ ಶ್ರೀರಾಮ ಮಹಿಳಾ ಭಜನಾ ಮಂಡಳಿ, ಮಣೂರು ಹಾಗೂ ಶ್ರೀ ಮಹಾಲಿಂಗೇಶ್ವರ ಭಜನಾ ಮಂಡಳಿ, ಮಣೂರು ಇವರ ಜಂಟಿ ಆಶ್ರಯದಲ್ಲಿ ವಿಶೇಷ ಭಜನಾ ಸಂಕೀರ್ತನೆ ನೆರವೇರಿತು. ಉಭಯ ಭಜನಾ ಮಂಡಳಿಗಳ ಸದಸ್ಯರು ಒಟ್ಟಾಗಿ 33 ಭಕ್ತಿ ಪ್ರಧಾನ ಭಜನಾ ಪದ್ಯಗಳನ್ನು ಪ್ರಸ್ತುತಪಡಿಸಿದರು. ಶ್ರೀ ರಾಮ ಮಹಿಳಾ ಭಜನಾ ಮಂಡಲಿಯ ಗೌರವಾನ್ವಿತ ಅಧ್ಯಕ್ಷರಿಗೆ ದೇವಳದ ವತಿಯಿಂದ ಶ್ರೀ ದೇವರ ಪವಿತ್ರ ಪ್ರಸಾದವನ್ನು ನೀಡಿ ಗೌರವಿಸಲಾಯಿತು.

ಸಾನಿಧ್ಯದಲ್ಲಿ ಸಂಭ್ರಮದ ಬಕ್ರೀದ್



ಮಂಗಳೂರು: ಜಮಾಯತುಲ್ ಫಲ್ಹಾ ಇದರ ಮಂಗಳೂರು ನಗರಘಟಕದ ಆಶ್ರಯದಲ್ಲಿ ಮಂಗಳೂರಿನ ಶಕ್ತಿನಗರದಲ್ಲಿರುವ ಭಿನ್ನ ಸಾಮರ್ಥ್ಯದ ಮಕ್ಕಳ ವಸತಿಯುತ ಶಾಲೆ ಮತ್ತು ತರಬೇತಿ ಸಂಸ್ಥೆ 'ಸಾನಿಧ್ಯ'ದಲ್ಲಿ ಬಕ್ರೀದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ತ್ಯಾಗ ಹಾಗೂ ಬಲಿದಾನಗಳಸುಂದರ ಕಲಾಕೃತಿಯನ್ನು ಕರ್ನಾಟಕ ಸರಕಾರದಅಧೀನದಲ್ಲಿರುವ ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಂ.ಎ.ಗಫೂರ್‌ರವರು ಅನಾವರಣಗೊಳಿಸಿ ಸಂದೇಶ ನೀಡಿದರು.

ಸರಕಾರದಅಧೀನದಲ್ಲಿರುವ ಕರಾವಳಿ ಅಭಿವೃದ್ಧಿ ಮಂಡಳಿಯ ವತಿಯಿಂದ ಸಾನಿಧ್ಯ ಸಂಸ್ಥೆಗೆ ಸಹಾಯವನ್ನು ಮಾಡಲು ಬಯಸುತ್ತೇನೆ ಎಂದು ಆಶ್ವಾಸನೆ ನೀಡಿದರು. ಸಮಾಜಕ್ಕೆ ಈ ಸಾನಿಧ್ಯ ಸಂಸ್ಥೆ ವಿಶೇಷ ಮಕ್ಕಳಿಗೆ ನೀಡುತ್ತಿರುವ ಸೇವೆ ಬಹುದೊಡ್ಡಕೊಡುಗೆಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಮಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತರುಹಾಗೂ ಮುಖ್ಯ ಲೆಕ್ಕಾಧಿಕಾರಿ ಶ್ರೀಮತಿ ಅಕ್ಷತಾ ಕೆ.-ಕೆ.ಎ.ಎಸ್. ಎಂ.ಎ.ಎಸ್. ಕೆಟರಿಂಗ್ ಸರ್ವೀಸಸ್‌ನ ಆಡಳಿತ ನಿರ್ದೇಶಕರಾದಶ್ರೀ ಮೊಹಮ್ಮದ್ ಇಕ್ಬಾಲ್,ಜಮಾಯತುಲ್ ಫಲ್ಹಾದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲಾಘಟಕದ ಅಧ್ಯಕ್ಷರು ಅಶೋಕ್‌ಅಹಮ್ಮದ್, ಶ್ರೀ ಗಣೇಶಾ ಸೇವಾ ಟ್ರಸ್ಟಿನ ಅಧ್ಯಕ್ಷರಾದ ಮಹಾಬಲ ಮಾರ್ಲ, ನಿರ್ದೇಶಕರಾದ ಮೊಹಮ್ಮದ್ ಬಶೀರ್, ಸಾನಿಧ್ಯದ ಆಡಳಿತಾಧಿಕಾರಿ ಡಾ. ವಸಂತ್‌ಕುಮಾರ್ ಶೆಟ್ಟಿ ಮೊದಲಾದವರು ವೇದಿಕೆಯಲ್ಲಿದ್ದರು.ಸಾನಿಧ್ಯದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.ಎಂ.ಎ.ಎಸ್.ಕೇಟರರ್ಸ್‌ನಿಂದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಮಾಸ್ಟರ್ ಮೊಹಮ್ಮದ್ ಹನೀಫ್ ಕಾರ್ಯಕ್ರಮ ನಿರೂಪಿಸಿದರು.

ಗಂಜಿಮಠ ಪ್ಲಾಸ್ಟಿಕ್ ಪಾರ್ಕ್ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿದ ಸಂಸದ ಕ್ಯಾ. ಬ್ರಿಜೇಶ್ ಚೌಟ

ಮಳೆಗಾಲದ ಬಳಿಕ ಪ್ಲಾಸ್ಟಿಕ್ ಪಾರ್ಕ್ ಲೋಕಾರ್ಪಣೆ

ಕೈಕಂಬ: ಕೇಂದ್ರ ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ರಾಸಾಯನಿಕ ಮತ್ತು ಪೆಟ್ರೋಕೆಮಿಕಲ್ಸ್ ಇಲಾಖೆಯಿಂದ ಮಂಗಳೂರು ತಾಲೂಕಿನ ಗಂಜಿಮಠದಲ್ಲಿ ಸ್ಥಾಪನೆಯಾಗುತ್ತಿರುವ ಪ್ಲಾಸ್ಟಿಕ್ ಪಾರ್ಕ್ ಮಳೆಗಾಲ ಮುಗಿದ ಕೂಡಲೇ ಲೋಕಾರ್ಪಣೆಗೊಳ್ಳಲಿದೆ ಎಂದು ದಕ್ಷಿಣ-ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಪ್ಲಾಸ್ಟಿಕ್ ಪಾರ್ಕ್ ಯೋಜನಾ ಪ್ರದೇಶಕ್ಕೆ ಮಂಗಳೂರು ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಯವರ ಜೊತೆ ಬುಧವಾರ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿ, ಪ್ಲಾಸ್ಟಿಕ್ ಪಾರ್ಕ್ ಯೋಜನೆ ಕಾರ್ಯಗತಗೊಳಿಸುತ್ತಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ) ಬೈಕಂಪಾಡಿಯ ಡೆವಲಪ್‌ಮೆಂಟ್ ಅಧಿಕಾರಿ ಶ್ರೀನಿವಾಸ ಮೂರ್ತಿ, ಕೆನರಾ ಪ್ಲಾಸ್ಟಿಕ್ ಫೋರಂ ನಿರ್ದೇಶಕ ಬಿ. ಎ. ನಝೀರ್, ಕರ್ನಾಟಕ ಸರ್ಕಾರದ ತಾಂತ್ರಿಕ ನಿರ್ದೇಶಕ ಗೋಕುಲದಾಸ್ ನಾಯಕ್ ಹಾಗೂ ಇತರ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಬಳಿಕ ಮಾಧ್ಯಮದ ಜತೆ ಮಾತನಾಡಿದ ಸಂಸದರು, ಒಟ್ಟು 104 ಎಕ್ರೆ ಪ್ರದೇಶದಲ್ಲಿ ಪ್ಲಾಸ್ಟಿಕ್ ಪಾರ್ಕ್ ನಿರ್ಮಾಣಗೊಳ್ಳುತ್ತಿದೆ. 2022ರಲ್ಲಿ ಯೋಜನೆಗೆ



ಹಸಿರು ನಿಶಾನೆ ಸಿಕ್ಕಿದ್ದರೂ, ಜಾಗದ ತಕರಾರು, ವ್ಯಾಜ್ಯ, ಭೂಸ್ವಾಧೀನ ಕಾರಣದಿಂದ ಯೋಜನೆ ಲೋಕಾರ್ಪಣೆ ವಿಳಂಬವಾಗಿದೆ. 2025ರಲ್ಲಿ ವ್ಯಾಜ್ಯಗಳಿಗೆ ಸಂಬಂಧಿಸಿದ 8.8 ಎಕ್ರೆ ಭೂಪ್ರದೇಶ ಹೊರಗಿಟ್ಟು ಯೋಜನೆಗೆ ವೇಗ ನೀಡಲಾಗಿದೆ. ಮಳೆಗಾಲದ ಬಳಿಕ ಪ್ಲಾಸ್ಟಿಕ್ ಪಾರ್ಕ್ ಲೋಕಾರ್ಪಣೆಗೊಳ್ಳಲಿದೆ ಎಂದರು.

ಪಾರ್ಕ್‌ನಲ್ಲಿ ಪ್ಲಾಸ್ಟಿಕ್ ಮತ್ತು ಅದಕ್ಕೆ ಸಂಬಂಧಪಟ್ಟ ಉತ್ಪಾದನೆಗಳಿಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಾಜಿ (ಸಿಪೆಟ್) ಎಂಬ ಸಂಸ್ಥೆ ತರಬೇತಿ ನೀಡುತ್ತಿದೆ. ಪಾರ್ಕ್ ನಲ್ಲಿರುವ 60 ಪ್ಲೋಟ್‌ಗಳಲ್ಲಿ ಕೈಗಾರಿಕೆ ಘಟಕ ತೆರೆಯಲು ಈಗಾಗಲೇ ಕೆಲವು ಕಂಪೆನಿಗಳು

> ▸▸ ಪಾರ್ಕ್‌ನಲ್ಲಿ ಪ್ಲಾಸ್ಟಿಕ್ ಮತ್ತು ಅದಕ್ಕೆ ಸಂಬಂಧಪಟ್ಟ ಉತ್ಪಾದನೆಗಳಿಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಾಜಿ (ಸಿಪೆಟ್) ಎಂಬ ಸಂಸ್ಥೆ ತರಬೇತಿ ನೀಡುತ್ತಿದೆ.
>
> ▸▸ ಪಾರ್ಕ್ ನಲ್ಲಿರುವ 60 ಪ್ಲೋಟ್ ಗಳಲ್ಲಿ ಕೈಗಾರಿಕೆ ಘಟಕ ತೆರೆಯಲು ಈಗಾಗಲೇ ಕೆಲವು ಕಂಪೆನಿಗಳು ಮುಂದೆ ಬಂದಿದ್ದು, ಈ ನಿಟ್ಟಿನಲ್ಲಿ ಕೆನರಾ ಪ್ಲಾಸ್ಟಿಕ್ ಫೋರಂ ಕಾರ್ಯನಿರ್ವಹಿಸುತ್ತಿದೆ.

ಮುಂದೆ ಬಂದಿದ್ದು, ಈ ನಿಟ್ಟಿನಲ್ಲಿ ಕೆನರಾ ಪ್ಲಾಸ್ಟಿಕ್ ಫೋರಂ ಕಾರ್ಯನಿರ್ವಹಿಸುತ್ತಿದೆ. ಕೆಐಎಡಿಬಿ ಮೂಲಕ ಯೋಜನೆ ಕಾರ್ಯಗತಗೊಳ್ಳುತ್ತಿದೆ. ಒಟ್ಟು 62 ಕೋ. ರೂ. ಮೊತ್ತದ ಈ ಯೋಜನೆಯಲ್ಲಿ ಈಗಾಗಲೇ 40 ಕೋ. ರೂ. ಕೆಲಸ ಪೂರ್ಣಗೊಂಡಿದೆ. ಕೇಂದ್ರದ ಹೆಮ್ಮೆಯ ಯೋಜನೆ ಇದಾಗಿದೆ. ಪಾರ್ಕ್ ಲೋಕಾರ್ಪಣೆ ಬಳಿಕ ಜಿಲ್ಲೆಯಲ್ಲಿ ಉದ್ಯೋಗ ಅವಕಾಶ ಹೆಚ್ಚಲಿದೆ ಎಂದು ಹೇಳಿದರು.

ಮಾತುಕತೆ ನಡೆಸುತ್ತಿದ್ದೇನೆ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅಧಿಕಾರದಲ್ಲಿ 12 ವರ್ಷ ಪೂರ್ಣಗೊಳಿಸಿದ ಸುಸಂದರ್ಭದಲ್ಲಿ, ಕೇಂದ್ರದ ನಿರ್ದೇಶನದನ್ವಯ ಪ್ರತಿಯೊಂದು ಸಂಸದೀಯ ಕ್ಷೇತ್ರಗಳಲ್ಲಿ ಕಾರ್ಯಗತಗೊಳ್ಳುತ್ತಿರುವ ಯೋಜನೆಗಳ ಪರಿಶೀಲನೆ ನಡೆಸುತ್ತಿದ್ದೇವೆ. ಗಂಜಿಮಠದ ಪ್ಲಾಸ್ಟಿಕ್ ಪಾರ್ಕ್ ಶೀಘ್ರ ಲೋಕಾರ್ಪಣೆಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವರೊಂದಿಗೆ ನಿರಂತರ ಮಾತುಕತೆ ನಡೆಸುತ್ತಿದ್ದೇನೆ ಎಂದು ಚೌಟ ಹೇಳಿದರು.

ಪ್ಲಾಸ್ಟಿಕ್ ಪಾರ್ಕ್ ಕಾಮಗಾರಿಯ ಪ್ರಗತಿ ಪರಿಶೀಲನೆ ವೇಳೆ ಕ್ಯಾ. ಬ್ರಿಜೇಶ್ ಚೌಟ ಹಾಗೂ ಶಾಸಕ ಡಾ. ಭರತ್ ಶೆಟ್ಟಿ ಅವರ ನಿಯೋಗದಲ್ಲಿ ಬಿಜೆಪಿ ಪ್ರಮುಖರಾದ ರಾಜೇಶ್ ಕೊಟ್ಟಾರಿ, ಸಂದೀಪ್ ಪಚ್ಚನಾಡಿ, ಸೋಹನ್ ಅತಿಕಾರಿ, ಸಚಿನ್ ಅಡಪ, ಪ್ರಸಾದ್ ಎಡಪದವು, ಸುಕೇಶ್ ಮಾಣ್ಯ, ಪ್ರವೀಣ್ ಶೆಟ್ಟಿ, ತಮ್ಮಯ್ಯ ಪೂಜಾರಿ, ಜಯಾನಂದ ಕುಲಾಲ್, ರೇಖಾ ಆರ್, ಮಲ್ಲಿಕಾ ಶೆಟ್ಟಿ ಮತ್ತಿತರರು ಇದ್ದರು.

ಭಾರತೀಯ ಮಹಿಳಾ ಫುಟ್ಬಾಲ್ ತಂಡದ ಸದಸ್ಯೆ ಮಾಳವಿಕಾಗೆ ಜಿಲ್ಲಾಡಳಿತದ ಸನ್ಮಾನ



ಕಾಸರಗೋಡು: ಜಿಲ್ಲೆಯ ಫುಟ್ಬಾಲ್ ತಾರೆ ಪಿ.ಮಾಳವಿಕಾ ಅವರನ್ನು ಜಿಲ್ಲಾಡಳಿತವು ಗೌರವಿಸಿದೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮಾಳವಿಕಾ ಅವರಿಗೆ ಪ್ರಶಂಸಾ ಪತ್ರ ನೀಡಿದರು. ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಈ ಕಾರ್ಯಕ್ರಮ ಜರಗಿತು.

ನೀಲೇಶ್ವರ ಮೂಲದ ಪಿ.ಮಾಳವಿಕಾ ಐತಿಹಾಸಿಕ ಸಾಧನೆಗಳೊಂದಿಗೆ ಮುನ್ನಡೆಯುತ್ತಿರುವ ಭಾರತೀಯ ಮಹಿಳಾ ಫುಟ್ಬಾಲ್ ತಂಡದ ಸದಸ್ಯೆಯಾಗಿದ್ದಾರೆ. ಎರಡು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಹಿರಿಯ ಮಹಿಳಾ ಫುಟ್ಬಾಲ್ ತಂಡದಲ್ಲಿ ಮಾಳವಿಕಾ ವಿಶೇಷ ಸ್ಥಾನ ಪಡೆದಿದ್ದಾರೆ.

ಇತ್ತೀಚೆಗೆ ಥೈಲ್ಯಾಂಡ್‌ನಲ್ಲಿ ನಡೆದ ಏಷ್ಯಾ ಕಪ್ ಗೆಲುವಿನಲ್ಲಿ ಮತ್ತು 2026ರ ಸಾಫ್ ಗೇಮ್ಸ್ ಸೀನಿಯರ್ ಮಹಿಳಾ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡವು ಐತಿಹಾಸಿಕ ಚಿನ್ನದ ಪದಕ ಗೆಲ್ಲುವಲ್ಲಿ ಮಾಳವಿಕಾ ನಿರ್ಣಾಯಕ ಪಾತ್ರ ವಹಿಸಿದ್ದರು. ಫುಟ್ಬಾಲ್ ಆಟಗಾರ್ತಿಯೂ ಆಗಿರುವ ಮಾಳವಿಕಾ ಗೋವಾದಲ್ಲಿ ನಡೆದ ಸಾಫ್ ಕ್ವಾರ್ಟರ್ ಫೈನಲ್‌ನಲ್ಲಿ ಅದ್ಭುತ ಗೋಲು ಮತ್ತು ಗೆಲುವಿನ ಪೆನಾಲ್ಟಿಗಳಿಸುವ ಮೂಲಕ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ತಮ್ಮ ಅಥ್ಲೆಟಿಕ್ ಮತ್ತು ಹೋರಾಟದ ಮನೋಭಾವವನ್ನು ಸಾಬೀತುಪಡಿಸಿದ್ದಾರೆ. ಬಂಗಾಳದ ಮಹಿಳಾ ಫುಟ್ಬಾಲ್ ಕ್ಲಿನಿಕ್‌ನಿಂದ ಮೂಲಭೂತ ಅಂಶಗಳ ಕಲಿಯಲು ಪ್ರಾರಂಭಿಸಿದ ಮಾಳವಿಕಾ ಇಂದು ದೇಶದ ಹೆಮ್ಮೆಯಾಗಿದ್ದಾರೆ. ಪ್ರಸ್ತುತ ಕಾರ್ಮೆಲ್ ಕಾಲೇಜಿನಲ್ಲಿ ತಮ್ಮ ಅಂತಿಮ ವರ್ಷದ ಬಿಕಾಂ ಅಧ್ಯಯನ ಮುಂದುವರಿಸುತ್ತಿದ್ದಾರೆ.

ಸಾಫ್ ಗೇಮ್ಸ್ ಕ್ರೀಡಾಕೂಟದ ಹಿರಿಯ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್ ಗೆದ್ದ ಭಾರತೀಯ ತಂಡ ಮತ್ತು ಕಾಸರಗೋಡಿನ ಹೆಮ್ಮೆಯ ತಾರೆ ಮಾಳವಿಕಾ ಅವರನ್ನು ಜಿಲ್ಲಾಧಿಕಾರಿಗಳು ಅಭಿನಂದಿಸಿದರು.

ಮಾಳವಿಕಾ ಅವರೊಂದಿಗೆ ಅವರ ತಾಯಿ ಪಿ.ಮಿನಿ, ತರಬೇತುದಾರ ನಿಧೀಶ ಬಂಗಲಂ ಮತ್ತಿತರರಿದ್ದರು. ರಾಷ್ಟ್ರೀಯ ತಂಡದಲ್ಲಿ ಸೇರಿಸಲಾದ ಕ್ರೀಡಾಪಟುಗಳಿಗೆ ತರಬೇತಿಗೆ ಉಚಿತ ಸರಕಾರಿ ಸ್ವಾಮ್ಯದ ಕ್ರೀಡಾಂಗಣ , ಮೈದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳು ಹೇಳಿದರು.

ಸೇನೆಗೆ ಆಯ್ಕೆಯಾದ ಯುವಕನಿಗೆ ಅಭಿನಂದನೆ



ಬೆಳ್ತಂಗಡಿ: ಭಾರತೀಯ ಸೇನೆಗೆ ಆಯ್ಕೆಯಾದ ಮಿತ್ತಬಾಗಿಲು ಗ್ರಾಮದ ನಂದಿನಿ ಹಾಗೂ ಗೋಪಾಲಕೃಷ್ಣ ದಂಪತಿಯ ಪುತ್ರ ಪುನೀತ್ ಇವರನ್ನು ಮುಂಡಾಜೆಯ ಸೋಮಂತಡ್ಕದ ಪಂಚಶ್ರೀ ಗ್ರೂಪ್ಸ್ ವತಿಯಿಂದ ಅಭಿನಂದಿಸಲಾಯಿತು.

ಈ ಸಂದರ್ಭ ಮುಂಡಾಜೆ ಕಾರ್ಗಿಲ್ ವನದ ರೂವಾರಿ, ಸಮಾಜ ಸೇವಕ ಸಚಿನ್ ಭಿಡೆ ಅವರನ್ನು ಗೌರವಿಸಲಾಯಿತು.

ಪ್ರಮುಖರಾದ ನಿವೃತ್ತ ಮೇ.ಜ.ಎಂ. ವಿ. ಭಟ್, ಉದ್ಯಮಿಗಳಾದ ನಾರಾಯಣ ಗೌಡ ಕೊಳಂಬೆ, ಅರೆಕಲ್ಲು ರಾಮಚಂದ್ರ ಭಟ್, ಅಬ್ರಹಾಂ ಪಿ.ಜೆ., ಮುಂಡಾಜೆ ಸಿಎ ಬ್ಯಾಂಕ್ ನಿರ್ದೇಶಕರಾದ ಚೆನ್ನಕೇಶವ, ನಾರಾಯಣ ಫಡಕೆ, ಉಜಿರೆ ರಬ್ಬರ್ ಸೊಸೈಟಿ ಉಪಾಧ್ಯಕ್ಷ ಅನಂತ ಭಟ್, ಅಡೂರು ವೆಂಕಟ್ರಾವ್, ಮುಂಡಾಜೆ ಪಂಚಾಯತಿ ಮಾಜಿ ಅಧ್ಯಕ್ಷರಾದ ರಾಮಣ್ಣ ಶೆಟ್ಟಿ, ವಿಶ್ವನಾಥ ಶೆಟ್ಟಿ, ಯಂಗ್ ಚಾಲೆಂಜರ್ಸ್ ಕ್ರೀಡಾ ಸಂಘದ ಸಂಚಾಲಕ ನಾಮದೇವ ರಾವ್, ನಿವೃತ್ತ ಶಿಕ್ಷಕ ಶಂಕರ್ ತಾಮನ್ಕರ್, ನಾರಾಯಣಗೌಡ ದೇವಸ್ಯ, ವಿಠಲ ಸುವರ್ಣ, ಗಣೇಶ ಶೆಟ್ಟಿ, ಶೇಖರ ಮತ್ತಿತರರಿದ್ದರು.

ಬಸ್ರೂರು ಶ್ರೀ ಶಾರದಾ ಕಾಲೇಜಿನಲ್ಲಿ 'ಪರಿಸರ ಜಾಗೃತಿ'



ಕುಂದಾಪುರ: ಇಂದು ನಾವು ನಡೆಸುವ ಪರಿಸರಸ್ನೇಹಿ ಜೀವನ ಮುಂದಿನ ತಲೆಮಾರಿಗೆ ನೀಡುವ ಅಮೂಲ್ಯ ಕೊಡುಗೆಯಾಗುತ್ತದೆ. ನಿತ್ಯ ನಾವು ಪ್ಲಾಸ್ಟಿಕ್ ಬಳಕೆ ಹಂತ ಹಂತವಾಗಿ ಕಡಿಮೆ ಮಾಡುತ್ತಾ ಬಂದಾಗ ಪರಿಸರದ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಪರಿಸರದ ಧನಾತ್ಮಕ ಅಂಶ, ಅದರ ಮೇಲಾಗುವ ಪರಿಣಾಮ, ಬಳಿಕ ಉಂಟಾಗುವ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು ಎಂದು ಕುಂದಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರನ್ ಪಿ. ಹೇಳಿದರು.

ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಅರಣ್ಯ ಇಲಾಖೆ ಕುಂದಾಪುರ ಹಾಗೂ ಬಸ್ರೂರು ಶ್ರೀ ಶಾರದಾ ಕಾಲೇಜು ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬಸ್ರೂರು ಶ್ರೀ ಶಾರದಾ ಕಾಲೇಜಿನಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಜಾನ್ ಡಿಸೋಜಗೆ ಗಿಡವನ್ನು ಹಸ್ತಾಂತರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಆರ್.ಎಫ್. ಓ ರಾಘವೇಂದ್ರ ನಾಯಕ್ ಅವರು, ಪ್ರಕೃತಿಯಲ್ಲಿ ಪ್ರತಿಯೊಂದು ತನ್ನದೆಯಾದ ಮಹತ್ವ ಪಡೆದುಕೊಂಡಿದೆ. ಸಸ್ಯ, ಜೀವಜಂತುಗಳ ಅನುಬಂಧದಿಂದ ಪ್ರಕೃತಿ ಸಮತೋಲನವಿದೆ. ಅರಣ್ಯ ನಾಶದಿಂದಾಗಿಯೇ ಪ್ರಾಕೃತಿಕ ಸಮತೋಲನ ತಪ್ಪುತ್ತಿವೆ. ಹಾಗಾಗಿ ಈ ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಗಳು, ಸಸ್ಯಗಳು ಬಹಳ ಮುಖ್ಯವಾಗುತ್ತದೆ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುತ್ತಾ, ಪರಿಸರ ಸಂರಕ್ಷಣೆಗೆ ಒತ್ತು ನೀಡಬೇಕು ಎಂದರು.

> **ಹಣ್ಣಿನ ಗಿಡ ನಾಟಿ**
>
> ರಾಜ್ಯ, ಜಿಲ್ಲಾ ಸಂಘದ ನಿರ್ದೇಶನದಂತೆ ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಸ್ಥಾಪನೆಗೊಂಡು 33 ವರ್ಷ ಕಳೆದ ಹಿನ್ನೆಲೆ 33 ವಿವಿಧ ಜಾತಿಯಹಣ್ಣಿನ ಗಿಡಗಳನ್ನು ಕಾಲೇಜಿನ ಕ್ರೀಡಾಂಗಣದ ಸುತ್ತ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಅಧ್ಯಕ್ಷತೆಯನ್ನು ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಜ್ ರಾಯಪ್ಪನಮಠ ವಹಿಸಿದ್ದರು. ಶ್ರೀ ಶಾರದಾ ಕಾಲೇಜಿನ ಸಂಚಾಲಕಿ ಅನುಪಮಾ ಎಸ್. ಶೆಟ್ಟಿ, ಕಾಲೇಜು ಆಡಳಿತ ಮಂಡಳಿ ಸದಸ್ಯ ಸುಭಾಷ್ಚಂದ್ರ ಶೆಟ್ಟಿ ಬಾಂಡ್ಯ, ಕಾಲೇಜಿನ ಪ್ರಾಂಶುಪಾಲ ಡಾ. ದಯಾನಂದ ಎನ್, ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ (ಸುಜಿ ಕುರ್ಯ), ಕಾರ್ಯದರ್ಶಿ ಟಿ. ಲೋಕೇಶ್ ಆಚಾರ್ಯ ಉಪಸ್ಥಿತರಿದ್ದರು.

ಗಣೇಶ್ ಬೀಜಾಡಿ ಸ್ವಾಗತಿಸಿದರು. ಕೋಶಾಧಿಕಾರಿ ಶ್ರೀಕಾಂತ ಹೆಮ್ಮಾಡಿ ವಂದಿಸಿದರು. ಉಪನ್ಯಾಸಕ ಅಕ್ಷಯ ಹೆಗ್ಡೆ ಮೊಳಹಳ್ಳಿ ನಿರ್ವಹಿಸಿದರು.

ಲಾರಿಯಲ್ಲಿ 16 ಜಾನುವಾರಗಳ ಅಕ್ರಮ ಸಾಗಾಟ: ಇಬ್ಬರ ಬಂಧನ



ಉಪ್ಪಿನಂಗಡಿ: ಅಕ್ರಮವಾಗಿ ಹಾಗೂ ಹಿಂಸಾತ್ಮಕವಾಗಿ ಈಚರ್ ಲಾರಿಯಲ್ಲಿ 16 ಜಾನುವಾರುಗಳ ತುಂಬಿಕೊಂಡು ಸಾಗಾಟ ಮಾಡುತ್ತಿದ್ದ ಪ್ರಕರಣವನ್ನು ಉಪ್ಪಿನಂಗಡಿ ಪೊಲೀಸರು ರಾ.ಹೆದ್ದಾರಿ-75ರ ನೆಕ್ಕಿಲಾಡಿ ಗ್ರಾಮದ ಆನೆಬೈಲು ಎಂಬಲ್ಲಿ ಜೂ. 17ರಂದು ಪತ್ತೆ ಹಚ್ಚಿ ಇಬ್ಬರನ್ನು ಬಂಧಿಸಿ, ಮೂವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಉಪ್ಪಿನಂಗಡಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸುತೇಶ್ ಕೆ.ಪಿ. ಅವರು ಸಿಬ್ಬಂದಿಗಳೊಂದಿಗೆ ಉಪ್ಪಿನಂಗಡಿ, ಮಠ ಹಾಗೂ ನೆಕ್ಕಿಲಾಡಿ ವ್ಯಾಪ್ತಿಯಲ್ಲಿ ರೌಂಡ್ಸ್ ಕರ್ತವ್ಯದಲ್ಲಿದ್ದ ವೇಳೆ ಆನೆಬೈಲು ಪ್ರದೇಶದಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ಹಾಸನ ಕಡೆಯಿಂದ ಬರುತ್ತಿದ್ದ ಈಚರ್ ಲಾರಿಯನ್ನು ತಡೆದು ಪರಿಶೀಲಿಸಿದಾಗ ಅದರೊಳಗೆ 16 ಜಾನುವಾರುಗಳನ್ನು ಯಾವುದೇ ದಾಖಲಾತಿಗಳಿಲ್ಲದೆ ಸಾಗಾಟ ಮಾಡುತ್ತಿರುವುದು ಬೆಳಕಿಗೆ ಬಂದು ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಲಾರಿ ಚಾಲಕ ಕಡೂರು ನಿವಾಸಿ ಪರ್ದಿನ್ ಖಾನ್, ವಾಹನದಲ್ಲಿದ್ದ ಮತ್ತೋರ್ವ ಆರೋಪಿ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ನಿವಾಸಿ ಜಾವೀದ್ ಪಾಷಾ ಎಂಬಿಬ್ಬರನ್ನು ಬಂಧಿಸಲಾಗಿದೆ.

ಲಾರಿಯಲ್ಲಿದ್ದ ಇನ್ನೊಬ್ಬ ಆರೋಪಿ ರೆಹಮಾನ್ ಹೊಸೂರು ಎಂಬಾತ ಸ್ಥಳದಿಂದ ಪರಾರಿಯಾಗಿದ್ದಾನೆ. ಆರೋಪಿಗಳು ಹಾಸನ ಸಂತೆಯಿಂದ ಜಾನುವಾರುಗಳ ಖರೀದಿಸಿ ಕೇರಳ ರಾಜ್ಯದ ಪಾಲಕ್ಕಾಡ್‌ಗೆ ಸಾಗಿಸುತ್ತಿರುವುದಾಗಿ ವಿಚಾರಣೆ ವೇಳೆ ತಿಳಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಶ್ರೀ ರಾಮಕೃಷ್ಣ ಕ್ರೆಡಿಟ್‌ಕೋ-ಓಪರೇಟಿವ್ ಸೊಸೈಟಿ | ಪ್ರಜಾ ಸೌಧಕ್ಕೆ ಪಡೀಲ್ ಶಾಖೆಯ ಸ್ಥಳಾಂತರ

ಹೆಚ್ಚು ವಹಿವಾಟು, ಇನ್ನಷ್ಟು ಅಭಿವೃದ್ಧಿ: ಡೀಸಿ ದರ್ಶನ್ ಹಾರೈಕೆ

ಮಂಗಳೂರು: ರಾಜ್ಯದ ಮುಂಚೂಣಿಯ ಕ್ರೆಡಿಟ್ ಸಹಕಾರ ಸಂಘವಾದ ಶ್ರೀ ರಾಮಕೃಷ್ಣ ಕ್ರೆಡಿಟ್‌ಕೋ-ಓಪರೇಟಿವ್ ಸೊಸೈಟಿಯ ಪಡೀಲ್ ಶಾಖೆಯನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಾರ್ಯಾಲಯ ಪ್ರಜಾಸೌಧಕ್ಕೆ ಬುಧವಾರ ಸ್ಥಳಾಂತರ ಮಾಡಲಾಗಿದೆ.

ಇನ್ನಷ್ಟು ಅಭಿವೃದ್ಧಿಯನ್ನು ಕಾಣಲಿ

ಶಾಖೆ ಉದ್ಘಾಟಿಸಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್. ವಿ., ನಮ್ಮ ಕಚೇರಿ ಸಂಕೀರ್ಣದಲ್ಲಿ ಬ್ಯಾಂಕುಗಳ ಹಾಗೆಯೇ ಜನಸಾಮಾನ್ಯರಿಗೆ ಆರ್ಥಿಕ ಸವಲತ್ತುಗಳ ನೀಡಿ ಜನರ ಆರ್ಥಿಕ ಅಭ್ಯುದಯಕ್ಕೆ ಕೊಡುಗೆಯನ್ನು ನೀಡುತ್ತಿರುವ ಸಹಕಾರ ಸಂಘಗಳಿಗೆ ಅವಕಾಶ ನೀಡಬೇಕು ಎಂಬ ನಿಟ್ಟಿನಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಶ್ರೀ ರಾಮಕೃಷ್ಣ ಸೊಸೈಟಿಗೆ ಅವಕಾಶ ಕಲ್ಪಿಸಲಾಗಿದೆ. ಶ್ರೀ ರಾಮಕೃಷ್ಣ ಸೊಸೈಟಿಯು ಹೆಚ್ಚು ಹೆಚ್ಚು ವಹಿವಾಟುಗಳನ್ನು ಮಾಡಿ ಇನ್ನಷ್ಟು ಅಭಿವೃದ್ಧಿಯನ್ನು ಕಾಣಲಿ ಎಂದು ಹಾರೈಸಿದರು.

ಸಭೆಯ ಮುಖ್ಯ ಅಭ್ಯಾಗತರಾದ ದಕ್ಷಿಣ ಕನ್ನಡ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ರಾಜು ಕೆ., ಅವರು ಮಾತನಾಡಿ, ರಾಜ್ಯದಲ್ಲಿ ಸಹಕಾರ ಚಳವಳಿಯು ಗದಗದಲ್ಲಿ



ಆರಂಭವಾಗಿದ್ದರೂ, ಅದು ಅತ್ಯುತ್ತಮವಾಗಿ ಪ್ರಗತಿಯನ್ನು ಹೊಂದಿ ಜನರ ವಿಶ್ವಾಸಕ್ಕೆ ಪಾತ್ರವಾಗಿರುವುದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲೆಗಳಲ್ಲಿ. ಇದಕ್ಕೆ ಪೂರಕವಾಗಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು ಒಳ್ಳೆಯ ಕೆಲಸ ಮಾಡುತ್ತಿದ್ದು, ಇನ್ನಷ್ಟು ಯಶಸ್ಸನ್ನು ಕಾಣಲಿ ಎಂದು ಹಾರೈಸಿದರು.

ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ

ಭದ್ರತಾಕೊಠಡಿ ಉದ್ಘಾಟಿಸಿದ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕ ಎಚ್. ಎನ್. ರಮೇಶ್ ಮಾತನಾಡಿ, ಪಡೀಲ್ ಶಾಖೆ ಸ್ಥಾಪನೆಯ ಕಿರು ಅವಧಿಯಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ. ಪ್ರತಿಷ್ಠಿತ ಸಂಕೀರ್ಣಕ್ಕೆ ಸ್ಥಳಾಂತರಗೊಂಡು ವ್ಯವಹಾರ ಇನ್ನಷ್ಟು ವೃದ್ಧಿಪಡಿಸಲಿ ಎಂದು ಹಾರೈಸಿದರು. ಅಧ್ಯಕ್ಷತೆಯನ್ನು ವಹಿಸಿದ ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈ ಸಂಘದ ಕಾರ್ಯವೈಖರಿಯನ್ನು ವಿವರಿಸಿ ಸಂಘದ ಪಡೀಲ್ ಶಾಖೆಗೆ ಸ್ಥಳಾವಕಾಶ ಒದಗಿಸಿಕೊಟ್ಟು ಸಹಕರಿಸಿದ ಜಿಲ್ಲಾಧಿಕಾರಿ ಮತ್ತು ಜಿಲ್ಲಾಡಳಿತಕ್ಕೆ ಧನ್ಯವಾದಗಳನ್ನು ತಿಳಿಸಿದರು.

ಸಂಘದ ನಿರ್ದೇಶಕರಾದ ಪಿ. ಶಿವರಾಮ ಅಡ್ಯಂತಾಯ, ವಿಠಲ ಪಿ. ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಕುಂಬ್ರ ದಯಾಕರ ಆಳ್ವ, ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಅರಿಯಡ್ಕ ಚಿಕ್ಕಪ್ಪ ನ್ಯಾಕ್ ಹಾಗೂ ಡಾ. ಬಿ. ಸಂಜೀವ ರೈ ಮತ್ತು ಮಹಾಪ್ರಬಂಧಕರಾದ ಗಣೇಶ್ ಜಿ. ಕೆ. ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷ ಲಕ್ಷ್ಮಿ ಜಯಪಾಲ ಶೆಟ್ಟಿ ಸಂದೇಶ ವಾಚಿಸಿದರು. ಸಂಘದ ನಿರ್ದೇಶಕ ಕೆ. ಸೀತಾರಾಮ ರೈ ಸವಣೂರು ಸ್ವಾಗತಿಸಿದರು. ಪಡೀಲ್ ಶಾಖಾ ಉಸ್ತುವಾರಿ ನಿರ್ದೇಶಕರಾದ ಎಂ. ರಾಮಯ ಶೆಟ್ಟಿ ವಂದಿಸಿದರು. ಶಾಖಾಧಿಕಾರಿ ಅಶ್ವಿನಿ ಎಸ್. ಶೆಟ್ಟಿ ಪ್ರಾರ್ಥಿಸಿ, ಕೇಂದ್ರ ಕಚೇರಿ ವ್ಯವಸ್ಥಾಪಕ ಶಮಂತ್ ಟಿ. ರೈ ಕಾರ್ಯಕ್ರಮ ನಿರೂಪಿಸಿದರು.

ಕಿರುಸುದ್ದಿ

ವಿವೇಕಾನಂದ ಕಾಲೇಜಿನ ಸ್ನಾತಕೋತ್ತರ ವಿಭಾಗಕ್ಕೆ ಶೇ.100 ಫಲಿತಾಂಶ

ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ(ಸ್ವಾಯತ್ತ) ಸ್ನಾತಕೋತ್ತರ ವಿಭಾಗವು 2026ರ ಮೇ ತಿಂಗಳ ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಶೇ.100 ಉತ್ತೀರ್ಣತೆ ದಾಖಲಿಸಿದೆ. ಕಾಲೇಜಿನ ಎಂ.ಕಾಂ., ಎಂ.ಎ. ಪತ್ರಿಕೋದ್ಯಮ ಹಾಗೂ ಎಂಎಸ್‌ಸಿ ಇಂಡಸ್ಟ್ರಿಯಲ್ ಕೆಮಿಸ್ಟ್ರಿ ವಿಭಾಗಗಳು ಶೇ.100 ಉತ್ತೀರ್ಣತೆ ದಾಖಲಿಸಿದೆ. ಈ ಪರೀಕ್ಷಾ ಫಲಿತಾಂಶವನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಹಾಗೂ ಪರೀಕ್ಷಾಂಗದ ಕುಲಸಚಿವ ಪ್ರೊ. ಪ್ರಕಾಶ್ ಕುಮಾರ್ ಪಿ. ಜಂಟಿಯಾಗಿ ಪ್ರಕಟಿಸಿದ್ದಾರೆ. ವಿದ್ಯಾರ್ಥಿಗಳ ಪರಿಶ್ರಮ, ಉಪನ್ಯಾಸಕರ ಸಮರ್ಪಕ ಮಾರ್ಗದರ್ಶನ ಹಾಗೂ ಕಾಲೇಜಿನ ಗುಣಮಟ್ಟದ ಶಿಕ್ಷಣ ವ್ಯವಸ್ಥೆಯೇ ಈ ಶೇ.100 ಉತ್ತೀರ್ಣತೆ ದಾಖಲಿಸಲು ಕಾರಣವಾಗಿದೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.


ಪುತ್ತೂರು-ಉಪ್ಪಿನಂಗಡಿ ರಸ್ತೆ ಕಾಮಗಾರಿ: ಸಂಚಾರ ಮಾರ್ಗ ಬದಲಾವಣೆ

ಮಂಗಳೂರು: ಪುತ್ತೂರು-ಉಪ್ಪಿನಂಗಡಿ ರಸ್ತೆಯ ಹಾರಾಡಿ ರೈಲ್ವೆ ಸೇತುವೆಯ ಕೆಳಭಾಗದ ರಸ್ತೆಯ ಕಾಂಕ್ರೀಟೀಕರಣ ಕಾಮಗಾರಿ ಸಂಬಂಧ ಜೂ. 18 ರಿಂದ ಜುಲೈ 18 ರವರೆಗೆ ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಿ, ಮಾರ್ಗ ಬದಲಾವಣೆ ಮಾಡಿ ಸಂಚರಿಸಲು ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಆದೇಶ ನೀಡಿದ್ದಾರೆ.

ಬದಲಿ ಮಾರ್ಗಗಳು:
ಪುತ್ತೂರಿನಿಂದ ಉಪ್ಪಿನಂಗಡಿ ಕಡೆಗೆ ಸಂಚರಿಸುವ ವಾಹನಗಳು ಪುತ್ತೂರು ಖಾಸಗಿ ಬಸ್ ನಿಲ್ದಾಣ ಮಾರ್ಗವಾಗಿ ಮಹಾಲಿಂಗೇಶ್ವರ ದೇವಸ್ಥಾನದ ಗದ್ದೆಯ ಮೂಲಕ ಕೋಟೆಚಾ ಹಾಲ್ ಮುಖಾಂತರ ಉಪ್ಪಿನಂಗಡಿ ರಸ್ತೆಯನ್ನು ಸಂಪರ್ಕಿಸಬೇಕು. ಉಪ್ಪಿನಂಗಡಿಯಿಂದ ಪುತ್ತೂರು ಕಡೆಗೆ ಸಂಚರಿಸುವ ವಾಹನಗಳು ಕೋಟೆಚಾ ಹಾಲ್ ಮೂಲಕ ಎ.ಪಿ.ಎಂ.ಸಿ. ರಸ್ತೆಯಾಗಿ ಪುತ್ತೂರು ಮುಖ್ಯ ರಸ್ತೆಯನ್ನು ಸಂಪರ್ಕಿಸಬೇಕು. ಉಪ್ಪಿನಂಗಡಿ ಕಡೆಯಿಂದ ಮಂಗಳೂರು ಕಡೆಗೆ ಸಂಚರಿಸುವ ವಾಹನಗಳು ಪಡೀಲ್ ಜಂಕ್ಷನ್ ಮೂಲಕ ನಗರ ಮಾರ್ಗದಲ್ಲಿ ಸಂಪರ್ಕಿಸಬೇಕು.


ನಿಧನ ಸುದ್ದಿ

ಆನಂತ ಭಟ್ ಸುಜೀರು



ಬಂಟ್ವಾಳ: ಸುಜೀರು ಶ್ರೀ ಮಂಗಳಾದೇವಿ ದೇವಸ್ಥಾನದ ಪ್ರದಾನ ಆರ್ಚಕರು, ಜನ ಸಂಘ, ಬಿಜೆಪಿಯ ಹಿರಿಯ ಕಾರ್ಯಕರ್ತರು,ಧಾರ್ಮಿಕ ಮತ್ತು ಸಾಮಾಜಿಕ ಮುಂದಾಳು ಆನಂತ ಭಟ್ ಸುಜೀರು ನಿಧನರಾಗಿದ್ದಾರೆ. ಮೃತರು ಪತ್ನಿ ,ಇಬ್ಬರು ಪುತ್ರಿಯರು, ಓರ್ವ ಪುತ್ರ ಸಹಿತ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರವೀಂದ್ರ ಕಂಬಳಿ ,ಫರಂಗಿಪೇಟೆ ಸೇವಾಂಜಲಿ ಆಡಳಿತ ಟ್ರಸ್ಟಿ ಕೃಷ್ಣ ಕುಮಾರ್ ಪೂಂಜಾ , ಫರಂಗಿಪೇಟೆ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಪದ್ಮನಾಭ ಶೆಟ್ಟಿ ಪುಂಚಮೆ ಮೊದಲಾದವರು ಮೃತರಿಗೆ ಅಂತಿಮ ನಮನ ಸಲ್ಲಿಸಿದರು.

ಸೀತಾ ನಡುಕಟ್ಟ



ನಿಡ್ಪಳ್ಳಿ: ಪಾಣಾಜೆ ಗ್ರಾಮದ ನಡುಕಟ್ಟ ನಿವಾಸಿ ದಿವಂಗತ ಶೀನಪ್ಪ ಪೂಜಾರಿಯವರ ಪತ್ನಿ ಸೀತಾ ನಡುಕಟ್ಟ(74) ಅವರು ಅಲ್ಪಕಾಲದ ಅನಾರೋಗ್ಯದಿಂದ ಜೂ.17ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಬಂಧು ಬಳಗವನ್ನು ಆಗಲಿದ್ದಾರೆ.

ಮಂಜಳಗಿರಿ ಶಂಕರ ಭಟ್



ಪೆರ್ಲ: ಎಣ್ಮಕಜೆ ಗ್ರಾಮದ ಮಂಜಳಗಿರಿ ನಿವಾಸಿ ಶಂಕರ ಭಟ್ (96) ವಯೋಸಹಜ ಕಾಯಿಲೆಯಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಮುಂಜಾನೆ ನಿಧನ ಹೊಂದಿದರು. ಮೃತರು ಮಕ್ಕಳಾದ ಶ್ರೀಕೃಷ್ಣ ಭಟ್, ಲೀಲಾವತಿ, ಪ್ರೇಮಕುಮಾರಿ, ನಳಿನಿ, ಅನ್ನಪೂರ್ಣ, ಗೀತಾ ಅವರನ್ನು ಅಗಲಿದ್ದಾರೆ.



ಕೇರಳದ ಕಣ್ಣೂರು ಜಿಲ್ಲೆಗೆ ವರ್ಗಾವಣೆಯಾಗುತ್ತಿರುವ ಕಾಸರಗೋಡು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಅವರನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಉಡುಗೊರೆ ನೀಡಿ ಬೀಳ್ಕೊಟ್ಟರು.

ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ

2,000 ಕೋ.ರೂ. ಸೌಲಭ್ಯ ವಿತರಣೆ

ಉಡುಪಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜೂ.19ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಬೃಹತ್ ಸಮಾರಂಭದಲ್ಲಿ 'ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ' ಅಡಿಯಲ್ಲಿ ದೇಶದ ಅರ್ಹ ಫಲಾನುಭವಿಗಳಿಗೆ ಸುಮಾರು 2,000 ಕೋ.ರೂ.ಮೌಲ್ಯದ ಸೌಲಭ್ಯ ವಿತರಿಸಲಿದ್ದಾರೆ ಎಂದು ಉಡುಪಿ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ರೀಜನಲ್ ಪಿಎಫ್ ಕಮಿಷನರ್ ಶಶಿಕಾಂತ್ ಧಯ್ಯಾ ಮಾಹಿತಿ ನೀಡಿದ್ದಾರೆ. ಉಡುಪಿ ಇಪಿಎಫ್ ಕಚೇರಿಯಲ್ಲಿ ನಡೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರವ್ಯಾಪಿ ಹಮ್ಮಿಕೊಳ್ಳಲಾಗಿರುವ ಈ ಯೋಜನೆ ಅಂಗವಾಗಿ, ನವದೆಹಲಿ ಯಲ್ಲಿ ನಡೆಯಲಿರುವ ಪ್ರಧಾನಮಂತ್ರಿ ಅವರ ನೇರಪ್ರಸಾರ, ಫಲಾನುಭವಿಗಳು ಹಾಗೂ ಉದ್ಯೋಗದಾತ ರೊಂದಿಗಿನ ಸಂವಾದದ ಸಮಾಂತರ ಜಿಲ್ಲಾಮಟ್ಟದ ಕಾರ್ಯಕ್ರಮವನ್ನು ಉಡುಪಿ ಇಪಿಎಫ್‌ಓ ಪ್ರಾದೇಶಿಕ ಕಚೇರಿಯಿಂದ ಜೂ.19ರಂದು ಸಂಜೆ 4.30ಕ್ಕೆ ಮಣಿಪಾಲದ ರಜತಾದ್ರಿಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಯೋಜನೆಯ ಭಾಗ-ಎ ಅಡಿಯಲ್ಲಿ, ಇಪಿಎಫ್‌ಓ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಿಗೆ ಹೊಸದಾಗಿ ಸೇರ್ಪಡೆ ಗೊಳ್ಳುವ ಮತ್ತು 15,000 ರೂ.ವರೆಗೆ ಮಾಸಿಕ ವೇತನ ಹೊಂದಿರುವ ಮೊದಲ ಬಾರಿಯ ಉದ್ಯೋಗಿಗಳಿಗೆ ಒಂದು ತಿಂಗಳ ವೇತನಕ್ಕೆ ಸಮಾನವಾದ (ಗರಿಷ್ಠ 15,000 ರೂ.ವರೆಗೆ) ಆರ್ಥಿಕ ಸಹಾಯಧನ ಒದಗಿಸಲಾಗುತ್ತದೆ. ಉಡುಪಿ ಜಿಲ್ಲೆಯೊಂದರಲ್ಲೇ ಈ ಯೋಜನೆ ಯಡಿ ಈಗಾಗಲೇ 700ಕ್ಕೂ ಅಧಿಕ ಫಲಾನುಭವಿಗಳನ್ನೂ ಗುರುತಿಸ ಲಾಗಿದ್ದು, ಅವರೆಲ್ಲರೂ ಪ್ರಯೋಜನ ಪಡೆಯಲಿದ್ದಾರೆ. ಮಣಿಪಾಲದಲ್ಲಿ ನಡೆಯಲಿರುವ ಕಾರ್ಯ ಕ್ರಮದಲ್ಲಿ ಹೊಸದಾಗಿ ನೇಮಕಗೊಂಡ ನೌಕರರಿಗೆ ಉದ್ಯೋಗದಾತರ ಸಮ್ಮುಖದಲ್ಲೇ ಅಧಿಕೃತವಾಗಿ ನೇಮಕಾತಿ ಪತ್ರ ಹಸ್ತಾಂತರಿಸಲಾಗುವುದು ಎಂದರು. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಯಶಪಾಲ್ ಎ. ಸುವರ್ಣ ಪಾಲ್ಗೊಳ್ಳಲಿದ್ದಾರೆ. ಸಿಬ್ಬಂದಿಗಳಾದ ರಾಜೀವ್ ಕುಮಾರ್ ಝಾ ಹಾಗೂ ನರೇಂದ್ರ ಬಾಬು ಗುತ್ತಿ ಗೋಷ್ಠಿಯಲ್ಲಿದ್ದರು.

ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧೆಡೆ ಆವರಿಸಿದೆ ಕಡಲ್ಕೊರೆತ ಭೀತಿ

ಚೆಂದಿ ರಸ್ತೆಗಳ ದುರಸ್ತಿಗೆ ಮೀನಮೇಷ

ಉಪ್ಪಳ: ಈಗಾಗಲೇ ಮಳೆಗಾಲ ಆರಂಭ ಗೊಂಡಿದ್ದು, ಆದರೊಂದಿಗೆ ಕಾಸರಗೋಡು ಜಿಲ್ಲೆಯ ವಿವಿಧೆಡೆ ಕಡಲ್ಕೊರೆತದ ಭೀತಿ ಆವರಿಸಿದೆ. ಸಮುದ್ರ ಕರಾವಳಿ ಪ್ರದೇಶದ ಜನರಲ್ಲಿ ಆತಂಕ ಮನೆ ಮಾಡಿದ್ದು, ಭಯದ ವಾತಾವರಣದಲ್ಲೇ ಈಗ ದಿನ ನಿತ್ಯವೂ ಬದುಕುವಂತಾಗಿದೆ.

ಇದೇ ವೇಳೆ ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಡಲ ಕಿನಾರೆಯಲ್ಲಿ ಕಡಲಬ್ಬರದ ಮುನ್ಸೂಚನೆ ಕಂಡುಬಂದಿದೆ. ಅದರಲ್ಲೂ ಕಳೆದ ವರ್ಷಗಳಲ್ಲಿ ಆಳೆತ್ತರದ ಅಲೆಗಳೆದ್ದ ಭಾಗಗಳಲ್ಲಿ ಈಗಾಗಲೇ ಸಮುದ್ರವು ಘರ್ಜಿಸತೊಡಗಿದೆ. ಮುಂದಿನ ದಿನಗಳಲ್ಲಿ ಗಾಳಿ ಮತ್ತು ಮಳೆ ಬಿರುಸುಗೊಂಡರೆ ಕಡಲ್ಕೊರೆತ ಪ್ರಬಲವಾಗಿ ಮುಂದುವರಿಯುವ ಸಾಧ್ಯತೆಯಿದೆ.

ರಸ್ತೆಗಳು ಸಮುದ್ರ ಪಾಲಾಗಿದ್ದವು

ಈ ಮಧ್ಯೆ ಕಳೆದ ವರ್ಷ ಮಳೆಗಾಲದ ಸಂದರ್ಭದಲ್ಲಿ ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ವ್ಯಾಪಕ ಕಡಲ್ಕೊರೆತ ಉಂಟಾಗಿ ಸಮುದ್ರ ತೀರ ಪ್ರದೇಶದ ರಸ್ತೆಗಳು ಸಮುದ್ರ ಪಾಲಾಗಿ ನಾಶಗೊಂಡಿತ್ತು. ಈ ಹಿನ್ನೆಲೆಯಲ್ಲಿ ವಿವಿಧೆಡೆ ರಸ್ತೆ ಸಂಪರ್ಕ ಕಡಿತಗೊಂಡಿತ್ತು. ಆದರೆ ಇದುವರೆಗೂ ಮರು ರಸ್ತೆ ನಿರ್ಮಿಸದೆ ಇರುವುದರಿಂದ ಸ್ಥಳೀಯರು ತೀರಾ ಸಂಕಷ್ಟಕ್ಕೀಡಾಗಿದ್ದಾರೆ. ಪಂಚಾಯತ್ ವ್ಯಾಪ್ತಿಯ ಹನುಮಾನ್‌ನಗರ, ಶಿವಾಜಿನಗರ, ಕುದುಪುಳು, ಬಂಗ್ಲ, ಪೆರಿಂಗಡಿ, ಬೇರಿಕೆ ಸಹಿತ ವಿವಿಧ ಭಾಗಗಳಲ್ಲಿ ರಸ್ತೆಗಳು ಹಾನಿಗೊಂಡು ಸ್ಥಳೀಯ ಮೀನು ಕಾರ್ಮಿಕರ ಕುಟುಂಬಗಳ ಸಂಚಾರಕ್ಕೆ ಸಮಸ್ಯೆಯಾಗಿರುವುದಾಗಿ ದೂರಲಾಗಿದೆ. ಗ್ಯಾಸ್ ಸಿಲಿಂಡರ್ ಸಹಿತ ರೋಗಿಗಳ ಕೊಂಡೊಯ್ಯಲು, ಇನ್ನಿತರ ಅಗತ್ಯಕ್ಕೆ ವಾಹನ ಸಂಚರಿ ಸಲು ರಸ್ತೆ ಇಲ್ಲದಿರುವುದರಿಂದ ವ್ಯಾಪಕ ಸಂಕಷ್ಟ ತಲೆದೋರಿರುವುದಾಗಿ ಆಕ್ರೋಶ ವ್ಯಕ್ತಗೊಂಡಿದೆ.



ತಕ್ಷಣ ಸೂಕ್ತ ವ್ಯವಸ್ಥೆ ಕೈಗೊಳ್ಳಬೇಕಾಗಿದೆ...

ವ್ಯವಸ್ಥಿತ ರಸ್ತೆ ಹಾಗೂ ಸಮುದ್ರ ಕರಾವಳಿಗೆ ತಡೆಗೋಡೆ ನಿರ್ಮಿಸಲು ಊರವರು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಈಗಾಗಲೇ ಮನವಿ ನೀಡಿದ್ದರೂ ಯಾವುದೇ ಪ್ರಯೋಜನ ವಾಗಿಲ್ಲವೆಂದು ಆರೋಪಿಸಲಾಗಿದೆ. ಮುಂದಿನ ದಿನಗಳಲ್ಲಿ ಮಳೆಗಾಲವು ಪ್ರಬಲಗೊಳ್ಳಲಿದ್ದು, ಈ ನಿಟ್ಟಿನಲ್ಲಿ ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಆತಂಕವಿರುವ ಭಾಗಗಳಲ್ಲಿ ಸೂಕ್ತ ವ್ಯವಸ್ಥೆ ಕೈಗೊಳ್ಳಬೇಕಾಗಿದೆ.

ಇಲ್ಲೆಲ್ಲಾ ಅಪಾಯದಂಚಿನಲ್ಲಿದೆ ಮನೆಗಳು

ಮಣಿಮುಂಡ, ಹನುಮಾನ್‌ನಗರ, ಶಾರದಾ ನಗರ, ಪೆರಿಂಗಡಿ ಸಹಿತ ವಿವಿಧ ಪ್ರದೇಶಗಳಲ್ಲಿ ಕರಾವಳಿ ಭಾಗದ ಹಲವಾರು ಮನೆಗಳು ಅಪಾಯ ದಂಚಿನಲ್ಲಿವೆ. ಸಂಬಂಧಪಟ್ಟ ಅಧಿಕಾರಿಗಳು ಕರಾವಳಿ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಸಮುದ್ರ ತಡೆಗೋಡೆ ಸುವ್ಯವಸ್ಥಿತವಾಗಿ ನಿರ್ಮಿಸಲು ಯೋಜನೆ ರೂಪಿಸಬೇಕೆಂದು ಕರಾವಳಿ ಭಾಗದ ನಿವಾಸಿಗಳು ಒತ್ತಾಯಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ಹಲವೆಡೆ ಕಡಲಬ್ಬರದ ಆತಂಕ

ಕಾಸರಗೋಡು: ನೈಋತ್ಯ ಮಾನ್ಸೂನ್ ಆರಂಭಗೊಂಡಿದ್ದು, ಇದಕ್ಕೆ ಹೊಂದಿಕೊಂಡು ಕಾಸರಗೋಡು ಜಿಲ್ಲೆಯಲ್ಲಿ ಕಡಲಿನಬ್ಬರ ಏರಿಕೆಯಾಗುತ್ತಿದೆ. ಜಿಲ್ಲೆಯ ಮಂಜೇಶ್ವರದಿಂದ ತೊಡಗಿ ವಲಿಯಪರಂಬದ ತನಕ ಸಮುದ್ರವು ವಿವಿಧೆಡೆ ಅಬ್ಬರಿಸುವ ಲಕ್ಷಣಗಳು ಗೋಚರಿಸು ತ್ತಿವೆ. ಅದರಲ್ಲೂ ವಲಿಯಪರಂಬ, ಬೇಕಲ ಕೋಟೆ, ತೃಕ್ಕನ್ನಾಡು, ಚೇರಂಗೈ, ಕಸಬಾ, ಮೊಗ್ರಾಲ್, ಕೊಯಿಪ್ಪಾಡಿ ಕಡಪ್ಪುರಗಳಲ್ಲಿ ಕಡಲಿನ ಭೋರ್ಗರೆತ ಹಂತ ಹಂತ ಹೆಚ್ಚುತ್ತಿದೆ.

ಸಮುದ್ರ ಕರಾವಳಿಯಲ್ಲಿ ಶಾಶ್ವತವಾದ ಕಗ್ಗಲ್ಲಿನ ತಡೆಗೋಡೆ, ಜಿಯೋಬ್ಯಾಗ್ ಅಥವಾ ಟೆಟ್ರೋಪ್ಯಾಡ್ ನಿರ್ಮಿಸಬೇಕೆಂಬ ಕರಾವಳಿ ಭಾಗದ ನಿವಾಸಿಗಳ ಬೇಡಿಕೆಗೆ ಯಾವುದೇ ಮನ್ನಣೆ ಲಭಿಸಿಲ್ಲ. ಕೇರಳ ಸರಕಾರವಾಗಲಿ, ಕಾಸರ ಗೋಡು ಜಿಲ್ಲಾಡಳಿತವಾಗಲಿ ಕಡಲ್ಕೊರೆತದ ವಿಚಾರದಲ್ಲಿ ಸಮಗ್ರ ಯೋಜನೆ ರೂಪಿಸದಿರುವುದು ದುರಂತವಾಗಿದೆ.

ಮೀನುಗಾರಿಕಾ ಇಲಾಖೆ, ಬಂದರು ಇಲಾಖೆ, ಕಂದಾಯ ಇಲಾಖೆ ಮಾತ್ರವಲ್ಲದೆ ಸಂಬಂಧಪಟ್ಟ ಇನ್ನಿತರ ಇಲಾಖೆಗಳು ಕೂಡಾ ಕರಾವಳಿ ಭಾಗದ ಶಾಶ್ವತ ಯೋಜನೆಗಳಿಗೆ ಯಾವುದೇ ರೂಪುರೇಷೆ ಒದಗಿಸುವುದಾಗಲಿ, ಕಾಲ ಕಾಲಕ್ಕೆ ಸ್ಥಳ ಪರಿಶೀಲನೆಯಾಗಲಿ ಕೈಗೊಳ್ಳು ತ್ತಿಲ್ಲವೆಂಬ ಆಕ್ರೋಶಗಳು ವ್ಯಕ್ತಗೊಂಡಿವೆ.

ಕಳೆದ ವರ್ಷ ಜಿಲ್ಲೆಯ ತೃಕ್ಕನ್ನಾಡು ಕಡಪ್ಪುರವೊಂದರಲ್ಲೇ ಕಡಲ್ಕೊರತದಿಂದಾಗಿ ಬಹುದೊಡ್ಡ ಸಮಸ್ಯೆ ಎದುರಾಗಿದ್ದು, ಕಾಸರಗೋಡು - ಕಾಞಂಗಾಡು ರಾಜ್ಯ ಹೆದ್ದಾರಿಯೇ ಸಮುದ್ರಕ್ಕಾಹುತಿಯಾಗಿತ್ತು. ಮಾತ್ರವಲ್ಲದೆ ಕರಾವಳಿ ಭಾಗದ ಅನೇಕ ಮನೆಗಳು ಕುಸಿದು ಬಿದ್ದು ನಿದ್ದೆಯಿಲ್ಲದ ದಿನಗಳನ್ನು ಕಳೆಯುವಂತಾಗಿತ್ತು. ಕರಾವಳಿ ಪ್ರದೇಶದ ನಿವಾಸಿಗಳನ್ನು ಬೇರೆಡೆಗೆ ಸ್ಥಳಾಂತರಿಸುವುದನ್ನು ಬಿಟ್ಟರೆ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಅಗತ್ಯದ ಕ್ರಮ ಜಾರಿಗೊಳಿಸುತ್ತಿಲ್ಲವೆಂದು ಆರೋಪಿಸಲಾಗಿದೆ.

ಕಣ್ವತೀರ್ಥ ಕಡಪ್ಪುರ, ಕಾಸರಗೋಡು ಕಸಬಾ ಕಡಪ್ಪುರ ಮತ್ತು ಕುಂಬಳೆ ಕೊಯಿಪ್ಪಾಡಿ ಕಡಪ್ಪುರ ಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಮಳೆಗಾಲದಲ್ಲಿ ಆಳೆತ್ತರದ ಅಲೆಗಳು ಆಸುಪಾಸಿನ ಮನೆಗಳ ಗೋಡೆಗಳಿಗೆ ಅಪ್ಪಳಿಸುತ್ತಿದ್ದರೂ ಜನಪ್ರತಿನಿಧಿಗಳು ಮತ್ತು ಅಧಿಕಾರಿ ಗಳು ಶಾಶ್ವತ ಯಾವ ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸ ಬೇಕಾಗಿದೆ. ಕರಾವಳಿ ತೀರದ ಸಮಸ್ಯೆ ಬಂದಾಗ ಕೇವಲ ಯಾವಾಗಾದರೊಮ್ಮೆ ಸ್ಥಳ ಸಂದರ್ಶನ ಮಾತ್ರ ನಡೆಸುತ್ತಿರುವ ಜನಪ್ರತಿನಿಧಿ ಗಳು ಮತ್ತು ಅಧಿಕಾರಿಗಳು ಇನ್ನಾದರೂ ಕಡಲ ಮಕ್ಕಳ ಬವಣೆಗೆ ಸೂಕ್ತ ಪರಿಹಾರ ಒದಗಿಸಿ ಭಯವಿಲ್ಲದ ವಾತಾವರಣ ನಿರ್ಮಿಸಬೇಕಾಗಿದೆ.

'ಸಿರಿ' ಸಂಸ್ಥೆಯಿಂದ ಧರ್ಮಸ್ಥಳದ ಎ.ವಿ. ಶೆಟ್ಟಿ ದಂಪತಿಗೆ ಗೌರವಾರ್ಪಣೆ

ಬೆಳ್ತಂಗಡಿ: ಇಲ್ಲಿನ ರೆಂಕೆದ ಗುತ್ತುವಿನಲ್ಲಿ ಕಾರ್ಯಾಚರಿಸುತ್ತಿರುವ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್‌ನಲ್ಲಿ ಪ್ರತಿ ತಿಂಗಳು ಆಚರಿಸುವಂತೆ ಸಿರಿ ಸಿಬ್ಬಂದಿ ಹುಟ್ಟು ಹಬ್ಬ ಆಚರಣೆ ಕಾರ್ಯಕ್ರಮವು ಜರುಗಿತು.

ಈ ಕಾರ್ಯಕ್ರಮದಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ಎ.ವಿ. ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಜೂನ್ ತಿಂಗಳಿನಲ್ಲಿ ಹುಟ್ಟುಹಬ್ಬವನ್ನು ಆಚರಿಸಿ ಕೊಳ್ಳುತ್ತಿರುವ ಸಿರಿ ಸಿಬ್ಬಂದಿಗೆ ಹಾಗೂ ಸಂಸ್ಥೆಗೆ ಹೊಸದಾಗಿ ಸೇರ್ಪಡೆಗೊಂಡ ಸಿಬ್ಬಂದಿಗಳಿಗೆ ಶುಭ ಹಾರೈಸಿದರು. ನಂತರ ಅವರು ಮಾತನಾಡಿ ಪೂಜ್ಯ ಹೆಗ್ಗಡೆಯವರು ಹಾಗೂ ಮಾತೋಶ್ರೀ ಹೇಮಾವತಿ ಅಮ್ಮನವರು ಮಹಿಳಾ ಸಬಲೀಕರಣದ ಧ್ಯೇಯೋದ್ದೇಶದಿಂದ ಪ್ರಾರಂಭಿಸಿರುವ ಸಿರಿ ಸಂಸ್ಥೆಯಲ್ಲಿ ಎಲ್ಲಾ ಸಿರಿ ಸಿಬ್ಬಂದಿಗಳು ಅತ್ಯಂತ ಶ್ರದ್ಧೆ, ಪ್ರಾಮಾಣಿಕತೆಯಿಂದ ದುಡಿಯುವ ಮೂಲಕ ಸಿರಿ ಬ್ರ್ಯಾಂಡನ್ನು ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿಯುವ ಮೂಲಕ ಪೂಜ್ಯ ದಂಪತಿಗಳ ಕನಸನ್ನು ನನಸಾಗಿಸಬೇಕೆಂದು ಪ್ರೇರಣಾತ್ಮಕ ನುಡಿಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಜನಾರ್ದನ ಎ.ವಿ. ಶೆಟ್ಟಿ ಮತ್ತು ಅವರ ಧರ್ಮಪತ್ನಿ ಅರುಣ ವಿ ಶೆಟ್ಟಿ ಅವರನ್ನು ಅತ್ಯಂತ ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿ, ಸಿರಿ ಸಂಸ್ಥೆಯ ಸಮಗ್ರ ಏಳಿಗೆಗಾಗಿ ಶ್ರಮವಹಿಸಿ, ಸಂಪೂರ್ಣ ಸಹಕಾರ ನೀಡುತ್ತಾ ಬಂದಿರುವ ಎ.ವಿ. ಶೆಟ್ಟಿ ದಂಪತಿಗಳಿಗೆ ಎಲ್ಲಾ ಸಿರಿ ಸಿಬ್ಬಂದಿಗಳ ಪರವಾಗಿ ಗೌರವಾರ್ಪಣೆ ಸಲ್ಲಿಸಿದರು.



ಉಜಿರೆ ಎಸ್‌ಡಿಎಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಂ. ಜನಾರ್ಧನ ವಿಶೇಷ ಆಹ್ವಾನಿತರಾಗಿದ್ದರು. ಇದೇ ಸಂದರ್ಭದಲ್ಲಿ ಧರ್ಮಸ್ಥಳದ ಪರಮಪೂಜ್ಯ ಖಾವಂದರು ಲೋಕಕಲ್ಯಾಣಾರ್ಥವಾಗಿ ನಡೆಸುತ್ತಿರುವ ವಿವಿಧ ಕಾರ್ಯಚಟುವಟಿಕೆಗಳ ಕುರಿತು ವಿಡಿಯೋ ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಸಿರಿ ಕ್ಲಬ್ ಅಧ್ಯಕ್ಷೆ ಉಷಾ, ಎಸ್.ಡಿ.ಎಂ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಸಿರಿ ಸಿಬ್ಬಂದಿ ಭಾಗವಹಿಸಿದ್ದರು. ಸಿರಿ ಸಂಸ್ಥೆಯ ಜೀವನ್ ಕುಮಾರ್ ನಿರೂಪಿಸಿ, ಮುಖ್ಯ ನಿರ್ವಹಣಾಧಿಕಾರಿ ಪ್ರಸನ್ನ ವಂದಿಸಿದರು.

ಕಾರ್ಕಳ ಜ್ಞಾನಸುಧಾದ ಸಾಧಕ 5 ವಿದ್ಯಾರ್ಥಿಗಳು ಐಐಟಿಗೆ, 14 ವಿದ್ಯಾರ್ಥಿಗಳು ಎನ್‌ಐಟಿಗೆ ಆಯ್ಕೆ


ಕಾರ್ಕಳ: ಐಐಟಿ, ಎನ್‌ಐಟಿ ಹಾಗೂ ಐಐಐಟಿ ಪ್ರವೇಶಕ್ಕೆ 2026-27ನೇ ಸಾಲಿನ ಕೌನ್ಸಲಿಂಗ್ ಪ್ರಕ್ರಿಯೆಯು ನಡೆಯುತ್ತಿದ್ದು, ಮೊದಲ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶದಲ್ಲಿ ಜ್ಞಾನ ಸುಧಾದ 23 ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಿಸಲು ಆಯ್ಕೆ ಯಾಗಿದ್ದಾರೆ. 5 ವಿದ್ಯಾರ್ಥಿಗಳು ಐಐಟಿಗೆ, 14 ವಿದ್ಯಾರ್ಥಿಗಳು ಎನ್‌ಐಟಿಗೆ, 4 ವಿದ್ಯಾರ್ಥಿಗಳು ಐಐಐಟಿ ಪ್ರವೇಶಕ್ಕೆ ಆಯ್ಕೆಯಾಗಿದ್ದಾರೆ.

ಐ.ಐ.ಟಿ.ಗೆ.ಆಯ್ಕೆಗೊಂಡವರು

ಶಶಾಂಕ್ ವಿ. (ಐಐಟಿ ಬಾಂಬೆ), ತೇಜಸ್ ನಾಯಕ್ (ಐಐಟಿ ಭುಬನೇಶ್ವರ್), ಭರತ್‌ರೆಡ್ಡಿ ವಿ. (ಐಐಟಿ ಛತ್ತಿಸ್‌ಘಡ್), ಸಾಯಿ ರಾಘವೇಂದ್ರ ಬಾಲಾಜಿ ಎಸ್, (ಐಐಟಿ ಧಾರವಾಡ್) ಹಾಗೂ ಈಶಾಂತ್ ಪಾಟೀಲ್ ಜಿ.ಎಂ. (ಐಐಟಿ ಧಾರವಾಡ್) ಆಯ್ಕೆಗೊಂಡವರಾಗಿದ್ದಾರೆ.

ಎನ್.ಐ.ಟಿ. ಆಯ್ಕೆಗೊಂಡವರು

ಸೋಹನ್ ಗಿರಿ ರೆಡ್ಡಿ (ಎನ್‌ಐಟಿ ಸುರತ್ಕಲ್), ನಿಶಾನ್ ಎನ್. ಸಾಲ್ಯಾನ್ (ಎನ್‌ಐಟಿ ಸುರತ್ಕಲ್), ಅನಿಕೇತ್ ರವಿರಾಜ್ ಉಡುಪ (ಎನ್‌ಐಟಿ ಸುರತ್ಕಲ್), ಮಾಧವ ಕಾಮತ್ (ಎನ್‌ಐಟಿ ಸುರತ್ಕಲ್), ಸಹನಾ ಎನ್. (ಎನ್‌ಐಟಿ ಸುರತ್ಕಲ್), ವಿದ್ವತ್ ವಿ. ಕಾಮತ್ (ಎನ್‌ಐಟಿ ಸುರತ್ಕಲ್), ಆಸ್ತಿಕ್ ಆರ್ ಭಾಗವತ್ (ಎನ್‌ಐಟಿ ಸುರತ್ಕಲ್), ತುಷಾರ್ ಎ. ಶೆಟ್ಟಿ ಎನ್. (ಎನ್‌ಐಟಿ ಒರಿಸ್ಸಾ), ಕನಿಷ್ಕ್ ಎಸ್. ಅಮೀನ್ (ಎನ್ ಐಟಿ ವಾರಂಗಲ್), ವರುಣ್ ಜೆ (ಎನ್‌ಐಟಿ ವಾರಂಗಲ್), ಸಿದ್ಧಾಂತ್ ನಾಯ್ಕಬಾ (ಎನ್ ಐಟಿ ಆಂಧ್ರಪ್ರದೇಶ), ಸೌಖ್ಯತಾ ಸಿ.ಎಂ. (ಎನ್‌ಐಟಿ ಕುರುಕ್ಷೇತ್ರ), ಅನಾಮಯ ಯೋಗೇಶ್ ದಿವಾಕರ್ (ಎನ್‌ಐ ಟಿಕ್ಯಾಲಿಕಟ್) ಹಾಗೂ ಎನ್.ಎಸ್. ವಿವೇಕ್ (ಎನ್‌ಐಟಿ ನಾಗಪುರ್) ಆಯ್ಕೆಯಾಗಿದ್ದಾರೆ.







ಐಐಐಟಿಗೆ ಆಯ್ಕೆ ಗೊಂಡವರು ಇವರು

ಬಿ. ಅಮಿತ್ ಕಾಮತ್ (ಐ.ಐ.ಐ.ಟಿ ನಾಗಾಪುರ್), ಸೃಜನ್ ಎನ್. (ಐ.ಐ.ಐ.ಟಿ ಪುಣೆ), ಪ್ರಮಥ್‌ಎಸ್‌ಜಿ (ಐ.ಐ.ಐ.ಟಿ ತ್ರಿಚಿ) , ಅನಿರುದ್ಧ್ ಕಾಮತ್ (ಐ.ಐ.ಐ.ಟಿ ಗುವಾಹಟಿ) ವಿದ್ಯಾರ್ಥಿಗಳಿಗೆ ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟಿನ ಅಧ್ಯಕ್ಷ ಡಾ. ಸುಧಾಕರ್ ಶೆಟ್ಟಿ ಅವರು ಅಭಿನಂದಿಸಿ, ಶುಭ ಹಾರೈಸಿದ್ದಾರೆ.

ಕೆಮ್ಮಾರದ ಹಿರಿಮೆ ಹೆಚ್ಚಿಸಲಿದೆ ದ್ವಾರಕಾ ಕಾರ್ಪೊರೇಶನ್ ಪ್ರೈ. ಲಿಮಿಟೆಡ್‌ನ ಹಿರಿಯ ನಾಗರಿಕರ ಬಡಾವಣೆ | ಇಲ್ಲಿವೆ 200ರಷ್ಟು ಮನೆ ನಿರ್ಮಾಣಕ್ಕೆ ಅವಕಾಶ

20 ಎಕರೆ ವಿಶಾಲ ಜಾಗದಲ್ಲಿ ಜೂ.21ರಂದು 'ಉಜ್ಜೀವನ' ಲೋಕಾರ್ಪಣೆ

ಪುತ್ತೂರು: ಕಳೆದ 20 ವರ್ಷಗಳಿಂದ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ದ್ವಾರಕಾ ಕಾರ್ಪೊರೇಶನ್ ಪ್ರೈವೇಟ್ ಲಿಮಿಟೆಡ್ ಪುತ್ತೂರು ಸಂಸ್ಥೆಯು ವಿನೂತನ ಕಲ್ಪನೆಯೊಂದಿಗೆ ರೂಪಿಸಿರುವ 'ಉಜ್ಜೀವನ' ಎಂಬ ಹೆಸರಿನ ಹಿರಿಯರ ಬಡಾವಣೆಯು ಇದೇ ಜೂ. 21ರಂದು ಉದ್ಘಾಟನೆಗೊಳ್ಳಲಿದೆ.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಗೋಪಾಲಕೃಷ್ಣ ಭಟ್ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ಬಗ್ಗೆ ಮಾಹಿತಿ ನೀಡಿದರು. ಉಪ್ಪಿನಂಗಡಿ- ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯಲ್ಲಿ ಕೆಮ್ಮಾರ ಎಂಬಲ್ಲಿ ಸುಮಾರು 20 ಎಕರೆ ವಿಶಾಲ ಜಾಗದಲ್ಲಿ ಉಜ್ಜೀವನ ಹಿರಿಯ ನಾಗರಿಕರ ಬಡಾವಣೆ ನಿರ್ಮಾಣಗೊಂಡಿದೆ. ಹಿರಿಯ ನಾಗರಿಕರನ್ನು ಗಮನದಲ್ಲಿಟ್ಟುಕೊಂಡು ಈ ಸುಂದರ ಬಡಾವಣೆ ನಿರ್ಮಿಸಲಾಗಿದೆ. ಇದರಲ್ಲಿ ಸುಮಾರು 200ರಷ್ಟು ಮನೆಗಳನ್ನು ನಿರ್ಮಿಸಲು ಅವಕಾಶವಿದೆ. ಈಗಾಗಲೇ ಶೇ.40ರಷ್ಟು ನಿವೇಶನ ಗಳು ಬುಕ್ ಆಗಿವೆ ಎಂದು ಅವರು ಹೇಳಿದರು.



ಜೂ.21ರಂದು ಉದ್ಘಾಟನಾ ಸಮಾರಂಭ

ಜೂ.21ರಂದು ಸಂಜೆ 3.30ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ಸಂಸದ ಕ್ಯಾ. ಬ್ರಿಜೇಶ್ ಚೌಟ ಉಜ್ಜೀವನ ಹಿರಿಯ ನಾಗರಿಕರ ಬಡಾವಣೆ ಉದ್ಘಾಟಿಸಲಿದ್ದಾರೆ. ಶಾಸಕ ಅಶೋಕ್ ರೈ ಅವರು ದ್ವಾರಕಾ ನೆಸ್ಟ್ ಎಂಬ ಹೆಸರಿನ ವಾಣಿಜ್ಯ ಸಮುಚ್ಚಯ ಉದ್ಘಾಟಿಸಲಿದ್ದಾರೆ. ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ದ್ವಾರಕಾ ರಿಫ್ರೆಶ್‌ಮೆಂಟ್ ಲೋಕಾರ್ಪಣೆ ಮಾಡಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ ದ್ವಾರಕಾ ಮಾರ್ಟ್ ಲೋಕಾರ್ಪಣೆ ಮಾಡಲಿದ್ದಾರೆ. ಮಾಜಿ ಶಾಸಕ ಸಂಜೀವ ಮಠಂದೂರು, ಹಿಂದೂ ಮುಖಂಡ ಅರುಣ್ ಕುಮಾರ್ ಪುತ್ತಿಲ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಸಂಜೆ 6ರಿಂದ 8 ಗಂಟೆಯ ವರೆಗೆ ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕ ರಾಹುಲ್ ವೆಲ್ಲಾಲ್ ಅವರಿಂದ ಭಕ್ತಿ ಸಂಗೀತ ಸುಧಾ ನಡೆಯಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ದ್ವಾರಕಾ ಕಾರ್ಪೊರೇಶನ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಅಮೃತ ಕೃಷ್ಣ, ದ್ವಾರಕಾ ಪ್ರತಿಷ್ಠಾನದ ಕಾರ್ಯದರ್ಶಿ ಗಣರಾಜ್ ಕುಂಬಳೆ, ದ್ವಾರಕಾ ಕಾರ್ಪೊರೇಶನ್ ಸಂಸ್ಥೆಯ ಆಪರೇಶನಲ್ ಹೆಡ್ ದುರ್ಗಾ ಗಣೇಶ್, ಸಂಸ್ಥೆಯ ನಿರ್ದೇಶಕಿ ಅಮೃತಾ ಶ್ಯಾನ್‌ಭಾಗ್ ಉಪಸ್ಥಿತರಿದ್ದರು.

ಹೊಸ ಪರಿಕಲ್ಪನೆ

ಬದುಕಿನ ಇಳಿಸಂಜೆಯಲ್ಲಿ ಹಿರಿಯ ನಾಗರಿಕರು ಏಕಾಂಗಿಯಾಗಿ ಬಿಡುವ ವಿದ್ಯಮಾನ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಮಕ್ಕಳು ದೂರದೂರುಗಳಲ್ಲಿ ಉದ್ಯೋಗ ನಿಮಿತ್ತ ಉಳಿದುಕೊಂಡರೆ ಹಳ್ಳಿಗಳಲ್ಲಿ ಹಿರಿಯರೇ ಏಕಾಂಗಿಯಾಗಿ ಬಿಡುತ್ತಾರೆ. ಕೈಯ್ಯಲ್ಲಿ ದುಡ್ಡಿದ್ದರೂ ಕಷ್ಟ ಸುಖ ಹಂಚಿ ಕೊಳ್ಳಲು ತಮ್ಮವರೆಂಬುವವರು ಯಾರೂ ಇಲ್ಲದ ಸ್ಥಿತಿ ನಿರ್ಮಾಣವಾಗುತ್ತದೆ. ಹಿರಿಯ ಜೀವಗಳಿಗೆ ಸಮಾನ ಮನಸ್ಕರಿದ್ದರೆ ನೆಮ್ಮದಿಯಿಂದ ಇರುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಒಂದೇ ವಠಾರದಲ್ಲಿ ಹಿರಿಯ ಜೀವಗಳು ಅಕ್ಕಪಕ್ಕ ದಲ್ಲಿ ಮನೆ ಮಾಡಿಕೊಂಡು ವಾಸವಿರಲು ಅನುಕೂಲವಾಗುವಂತೆ ಈ ಬಡಾವಣೆ ನಿರ್ಮಿಸಲಾಗಿದೆ. ದೊಡ್ಡ ನಗರಗಳಲ್ಲಿ ಇದು ಸಾಮಾನ್ಯವಾದರೂ ಪುತ್ತೂರಿನ ಗ್ರಾಮೀಣ ಪ್ರದೇಶಕ್ಕೆ ಹೊಸ ಕಲ್ಪನೆಯಾಗಿದೆ ಎಂದು ಗೋಪಾಲಕೃಷ್ಣ ಭಟ್ ಹೇಳಿದರು.

ಶೇ.10 ರಿಯಾಯಿತಿ

ಉಜ್ಜೀವನ ಹಿರಿಯ ನಾಗರಿಕರ ಬಡಾವಣೆಯಲ್ಲಿ 1, 2 ಮತ್ತು 3 ಬಿಎಚ್‌ಕೆ ಮನೆಗಳನ್ನು ನಿರ್ಮಿಸಿ ಕೊಡಲಾಗುವುದು. ಈಗ ಬುಕ್ ಮಾಡುವವರಿಗೆ ಶೇ.10 ರಿಯಾಯಿತಿ ಇದೆ. ಉದ್ಘಾಟನೆ ದಿನ ಬುಕ್ ಮಾಡುವವರಿಗೆ ವಿಶೇಷ ಆಫರ್‌ಗಳಿವೆ. ದ್ವಾರಕಾ ಕಾರ್ಪೊರೇಶನ್ ಸಂಸ್ಥೆಯ ಅಡಿಯಲ್ಲಿ 10ಕ್ಕಿಂತಲೂ ಅಧಿಕ ಸಂಸ್ಥೆಗಳಿವೆ. ಮಯೂರ, ಶ್ರೀರಾಮ, ಗೋಕುಲ, ಮಾನಸ, ತುಳಸಿ, ಶೇಷಾದ್ರಿ, ಗೋಮತಿ, ಶಿವೋಹಂ, ನಂದಿಲ, ಹರಿಹರ, ಜಲ ಬಡಾವಣೆಗಳನ್ನು ನಿರ್ಮಿಸಿ ಅಭಿವೃದ್ಧಿಪಡಿಸಲಾಗುತ್ತಿದೆ. ಉಜ್ಜೀವನ ಹಿರಿಯ ನಾಗರಿಕರ ಬಡಾವಣೆ ಇದಕ್ಕೆ ಸೇರ್ಪಡೆಯಾಗಿದೆ.

■ ಗೋಪಾಲಕೃಷ್ಣ ಭಟ್, ವ್ಯವಸ್ಥಾಪಕ ನಿರ್ದೇಶಕರು ದ್ವಾರಕಾ ಕಾರ್ಪೊರೇಶನ್ ಪ್ರೈವೇಟ್ ಲಿಮಿಟೆಡ್



ಕಾಲ್ಚೆಂಡಿನ ಸಮರ

ಫಿಫಾ ವಿಶ್ವಕಪ್ | ಯುಎಸ್‌ಎ, ಮೆಕ್ಸಿಕೋ, ಕೆನಡಾ | ಜೂನ್ 11-ಜುಲೈ 19

FIFA

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಗುರುವಾರ, 18 ಜೂನ್ 2026

ಮಂಗಳೂರು

ಗುರುವಾರದ ಪಂದ್ಯ

- ಉಜ್ಬೇಕಿಸ್ತಾನ-ಕೋಲಂಬಿಯಾ (ಬೆಳಗ್ಗೆ 7:30)
- ಜೆಕ್-ದ.ಆಫ್ರಿಕಾ (ಬೆಳಗ್ಗೆ 9:30)

ಗುರುವಾರ ಮಧ್ಯರಾತ್ರಿ

- ಸ್ವಿಟ್ಜರ್ಲೆಂಡ್-ಬೋಸ್ನಿಯಾ ಮತ್ತು ಹರ್ಜೆಗೋವಿನಾ (12:30)
- ಕೆನಡಾ-ಕತಾರ್ (3:30)

ಕಾನ್ಸಾಸ್ ಸಿಟಿ: ಜಗತ್ತಿನ ಫುಟ್‌ಬಾಲ್ ಅಭಿಮಾನಿಗಳಿಗೆ ಮಂಗಳವಾರದ ರಾತ್ರಿ ಹಬ್ಬ. ಒಂದು ಕಡೆ ಲಿಯೋನಲ್ ಮೆಸ್ಸಿ ಅಬ್ಬರವಾದರೆ ಮತ್ತೊಂದು ಕಡೆ ಎಂಬಾಪ್ಪೆಯ ಜಾದೂ. ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಮನರಂಜನಾ ಅಬ್ಬರವೇ ನಡೆಯಿತು. ಬ್ಲಾಕ್‌ಬಾಸ್ಟರ್ ದಿನದಂದು ಮೊದಲ ಪಂದ್ಯದಲ್ಲಿ ಫ್ರಾನ್ಸ್ ಹಾಗೂ ಸೆನೆಗಲ್ ಎದುರಾಗಿದ್ದವು. ಆದರಲ್ಲಿ ಬಲಿಷ್ಠ ಫ್ರಾನ್ಸ್ ಗೆಲುವು ಸಾಧಿಸಿತು. ಎಂಬಾಪ್ಪೆ 2 ಗೋಲು ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಅಲ್ಜೀರಿಯಾ ಮತ್ತು ಅರ್ಜೆಂಟೀನಾ ಎದುರಾಗಿದ್ದವು. ಆದರಲ್ಲಿ ಗ್ರೇಟೆಸ್ಟ್ ಆಫ್ ಆಲ್ ಟೈಮ್(ಗೋಟ್) ಮೆಸ್ಸಿ ಹ್ಯಾಟ್ರಿಕ್ ಗೋಲು ಬಾರಿಸಿ ದಾಖಲೆಗಳ ಸುರಮಳೆಗೈದರು. ಮೂರನೇ ಪಂದ್ಯದಲ್ಲಿ ಇರಾಕ್ ಮತ್ತು ನಾರ್ವೆ ಎದುರಾಗಿದ್ದವು. ಅಲ್ಲಿ ನಾರ್ವೇ 4-1ರಿಂದ ಗೆಲುವು ಸಾಧಿಸಿದೆ. ಜಾರ್ಡನ್ ತಂಡವನ್ನು ಎದುರಿಸಿದ್ದ ಆಸ್ಟ್ರೀಯಾ 3-1ರಿಂದ ಗೆಲುವು ಸಾಧಿಸಿದ ನಂತರ ಫಿಫಾ ವಿಶ್ವಕಪ್ ರೋಚಕತೆಯಲ್ಲೇ ಮುಳುಗಿತ್ತು.

ಲಿಯೋ ಹ್ಯಾಟ್ರಿಕ್ | ದ್ವೀಗೋಲು ಗಳಿಸಿದ ಫ್ರಾನ್ಸ್ ತಾರೆ
ಅರ್ಜೆಂಟೀನಾ, ಫ್ರಾನ್ಸ್, ನಾರ್ವೆ, ಆಸ್ಟ್ರೀಯಾಗೆ ಗೆಲುವು

ಮೆಸ್ಸಿ ಮ್ಯಾಜಿಕ್, ಎಲೈಟ್ ಎಂಬಾಪ್ಪೆ



ಅಬ್ಬಾ..! ಎಂಬಾಪ್ಪೆ

(ಅಮೆರಿಕಾ): ಸ್ಟಾರ್ ಆಟಗಾರ ಕಿಲಿಯನ್ ಎಂಬಾಪ್ಪೆ ಅವರ ದ್ವಿಗೋಲು ಪ್ರದರ್ಶನದ ನೆರವಿನಿಂದ ಫ್ರಾನ್ಸ್ ತಂಡ ಐ ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಸೆನೆಗಲ್ ವಿರುದ್ಧ 3-1 ಅಂತರದ ಭರ್ಜರಿ ಗೆಲುವು ದಾಖಲಿಸಿತು. ಮೊದಲಾರ್ಧದಲ್ಲಿ ಎರಡೂ ತಂಡಗಳು ಗೋಲು ಗಳಿಸಲು ವಿಫಲವಾದವು. 66ನೇ ನಿಮಿಷದಲ್ಲಿ ಕಿಲಿಯನ್ ಎಂಬಾಪ್ಪೆ ಗೋಲು ಬಾರಿಸಿ ಫ್ರಾನ್ಸ್‌ಗೆ ಮುನ್ನಡೆ ಒದಗಿಸಿದರು. 82ನೇ ನಿಮಿಷದಲ್ಲಿ ಬದಲಿ ಆಟಗಾರ ಬ್ರಾಡ್ಲಿ ಬಾರ್ಕೋಲಾ ಗೋಲು ಗಳಿಸಿ ಮುನ್ನಡೆಯನ್ನು 2-0ಕ್ಕೆ ಏರಿಸಿದರು. ಹೆಚ್ಚುವರಿ ವೇಳೆಯ 5ನೇ ನಿಮಿಷದಲ್ಲಿ ಇಬ್ರಾಹಿಂ ಮ್ಬಾಯೆ ಗೋಲು ಬಾರಿಸಿ ಸೆನೆಗಲ್‌ಗೆ ಆಸರೆಯಾದರು. ಆದರೆ ಒಂದು ನಿಮಿಷದ ಬಳಿಕ ಎಂಬಾಪ್ಪೆ ದೂರದ ಶಾಟ್ ಮೂಲಕ ಮತ್ತೊಂದು ಅದ್ಭುತ ಗೋಲು ದಾಖಲಿಸಿ ಫ್ರಾನ್ಸ್‌ನ ಗೆಲುವು ಖಚಿತಪಡಿಸಿದರು.

ಫ್ರಾನ್ಸ್ ಅಬ್ಬರ

ವಿಶ್ವಕಪ್ ಇತಿಹಾಸದಲ್ಲಿ 14ನೇ ಗೋಲು ದಾಖಲಿಸಿದ ಎಂಬಾಪ್ಪೆ, ಲಿಯೋನೆಲ್ ಮೆಸ್ಸಿ ಮತ್ತು ಪೀಲೆ ಅವರ ಸಾಧನೆಯನ್ನು ಹಿಂದಿಕ್ಕಿದರು.

ಫ್ರಾನ್ಸ್ 3-1 ಸೆನೆಗಲ್

- ಕಿಲಿಯನ್ ಎಂಬಾಪ್ಪೆ (66, 90+6)
- ಬ್ರಾಡ್ಲಿ ಬಾರ್ಕೋಲಾ (82)
- ಇಬ್ರಾಹಿಂ ಮ್ಬಾಯೆ (90+5): ಸೆನೆಗಲ್ ದಾಖಲೆ

- ಜರ್ಮನಿಯ ದಂತಕಥೆ ಗೆರ್ಡ್ ಮುಲ್ಲರ್ ಅವರ ವಿಶ್ವಕಪ್ ಗೋಲುಗಳ ದಾಖಲೆಯನ್ನು ಸರಿಗಟ್ಟಿದರು.
- ಬ್ರೆಜಿಲ್‌ನ ರೊನಾಲ್ಡೊ (15) ಮತ್ತು ಜರ್ಮನಿಯ ಮಿರೋಸ್ಲಾವ್ ಕ್ಲೋಸೆ (16) ಮಾತ್ರ ಈಗ ಎಂಬಾಪ್ಪೆಗಿಂತ ಮುಂದಿದ್ದಾರೆ.
- ಅಂತಾರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ 58ನೇ ಗೋಲು ಬಾರಿಸಿದ ಎಂಬಾಪ್ಪೆ, ಫ್ರಾನ್ಸ್ ಪರ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಹೊಸ ದಾಖಲೆ ಬರೆದರು.

ಹಾಲಿ ಚಾಂಪಿಯನ್ನರ ಶುಭಾರಂಭ

ಕಾನ್ಸಾಸ್ ಸಿಟಿ: ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಮೆಸ್ಸಿ ಅಬ್ಬರ ಶುರುವಾಗಿದ್ದಾಯಿತು. ಮೈದಾನಕ್ಕಿಳಿದ ತಕ್ಷಣವೇ ತಮ್ಮ ಅನುಭವದ ಮೂಲಕ ಚಮತ್ಕಾರಗಳನ್ನು ಮಾಡಲು ಶುರು ಮಾಡಿರುವ ಮೆಸ್ಸಿ ಹ್ಯಾಟ್ರಿಕ್ ಗೋಲು ಬಾರಿಸಿದರು. ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವು ತನ್ನ ವಿಶ್ವಕಪ್ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿದ್ದು, ಅಲ್ಜೀರಿಯಾವನ್ನು 3-0 ಗೋಲುಗಳಿಂದ ಮಣಿಸಿದೆ. ಈ ಪಂದ್ಯದಲ್ಲಿ ನಾಯಕ ಲಿಯೋನೆಲ್ ಮೆಸ್ಸಿ ಹ್ಯಾಟ್ರಿಕ್ ಸಾಧಿಸಿ ಇತಿಹಾಸ ನಿರ್ಮಿಸಿದರು.

ಮೆಸ್ಸಿ ಪಂದ್ಯದ ಆರಂಭದಲ್ಲೇ ಮೊದಲ ಗೋಲು ಬಾರಿಸಿ ಅರ್ಜೆಂಟೀನಾಗೆ ಮುನ್ನಡೆ ತಂದರು. ಎದುರಾಳಿಗೆ ಹೆಚ್ಚಿನ ಅವಕಾಶ ಸಿಗಲೇ ಇಲ್ಲ. ದ್ವಿತೀಯಾರ್ಧದ ಆರಂಭದಲ್ಲಿ ಮತ್ತೊಂದು ಗೋಲು ದಾಖಲಿಸಿ ಅಂತರ ಹೆಚ್ಚಿಸಿದರು. ಪಂದ್ಯ ಅಂತ್ಯದ ಕ್ಷಣಗಳಲ್ಲಿ ಮೂರನೇ ಗೋಲು ಬಾರಿಸಿ ವಿಶ್ವಕಪ್‌ನ ಮೊದಲ ಹ್ಯಾಟ್ರಿಕ್ ಪೂರ್ಣಗೊಳಿಸಿದರು. ಮೆಸ್ಸಿ ಇನ್ನೂ ಎರಡು ಬಾರಿ ಗೋಲು ಬಾರಿಸುವ ಅವಕಾಶ ಸೃಷ್ಟಿಸಿಕೊಂಡಿದ್ದರು. ಒಂದು ಗೋಲು ಆಫ್‌ಸೈಡ್ ಕಾರಣದಿಂದ ರದ್ದಾಯಿತು. ಅಲ್ಜೀರಿಯಾದ ಫಾರೆಸ್ ಚೈಬಿ ಆರಂಭದಲ್ಲೇ ಗೋಲು ಗಳಿಸಿದರೂ, ವೀಡಿಯೊ ಪರಿಶೀಲನೆಯಲ್ಲಿ ಆಫ್ ಸೈಡ್ ಎಂದು ತೀರ್ಪು ಬಂತು. ಮುಂದಿನ ಪಂದ್ಯದಲ್ಲಿ ಯಾವುದೇ ಗೋಲು ದಾಖಲಾಗಲೇ ಇಲ್ಲ. ಪರಿಣಾಮ ಪಂದ್ಯ ಅರ್ಜೆಂಟಿನಾ ಗೆದ್ದುಕೊಂಡಿದೆ.

ಇತಿಹಾಸ ಬರೆದ ಲೆಜೆಂಡ್: ಈ ಹ್ಯಾಟ್ರಿಕ್‌ನೊಂದಿಗೆ ಮೆಸ್ಸಿ ವಿಶ್ವಕಪ್ ಇತಿಹಾಸದಲ್ಲಿ 16 ಗೋಲುಗಳ ಸಾಧನೆ ಮಾಡಿ ಜರ್ಮನಿಯ ದಂತಕಥೆ ಮಿರೋಸ್ಲಾವ್ ಕ್ಲೋಸೆ ಅವರ ದಾಖಲೆಯನ್ನು ಸರಿಗಟ್ಟಿದರು. ಮೆಸ್ಸಿ ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ದಿನದಿಂದ ನಿಖರವಾಗಿ 20 ವರ್ಷಗಳ ನಂತರ ಈ ಸಾಧನೆ ಮಾಡಿದ್ದಾರೆ.

ಯಾರಿಗೆಷ್ಟು?

- ಅರ್ಜೆಂಟೀನಾ 3-0 ಅಲ್ಜೀರಿಯಾ
- ಲಿಯೋನೆಲ್ ಮೆಸ್ಸಿ: 3 ಗೋಲುಗಳು (ಹ್ಯಾಟ್ರಿಕ್)
- 17ನೇ ನಿಮಿಷ
- 60ನೇ ನಿಮಿಷ
- 76ನೇ ನಿಮಿಷ

ನಾರ್ವೆಗೆ ಇರಾಕ್ ವಿರುದ್ಧ 4-1 ಜಯ

ನಾರ್ವೆ 4-1 ಇರಾಕ್



- ಎರ್ಲಿಂಗ್ ಹಾಲಾಂಡ್ (29, 45)
- ಲಿಯೋ ಓಸ್ಟಿಗಾರ್ಡ್ (76)
- ಕ್ರಿಸ್ಟಿಯನ್ ಥೋರ್ಸ್ಟ್‌ವೆಡ್ (90)
- ಐಮೆನ್ ಹುಸೇನ್(38), ಇರಾಕ್

ಫಾಕ್ಸ್‌ಬರೋ (ಅಮೆರಿಕ): ಸ್ಟಾರ್ ಸ್ಟ್ರೈಕರ್ ಎರ್ಲಿಂಗ್ ಹಾಲಾಂಡ್ ಅವರ ದ್ವಿಗೋಲು ಹಾಗೂ ಒಂದು ಅಸಿಸ್ಟ್ ನೆರವಿನಿಂದ ನಾರ್ವೆ ತಂಡ ಐ' ಗುಂಪಿನ ಪಂದ್ಯದಲ್ಲಿ ಇರಾಕ್ ವಿರುದ್ಧ 4-1 ಅಂತರದ ಭರ್ಜರಿ ಗೆಲುವು ದಾಖಲಿಸಿತು. 29ನೇ ನಿಮಿಷದಲ್ಲಿ ಡೇವಿಡ್ ಮೊಲ್ಲರ್ ವೋಲ್ಫ್ ನೀಡಿದ ಕ್ರಾಸ್ ಅನ್ನು ಹಾಲಾಂಡ್ ನಾರ್ವೆಗೆ ಮುನ್ನಡೆ ತಂದರು. 38ನೇ ನಿಮಿಷದಲ್ಲಿ ಐಮೆನ್ ಹುಸೇನ್ ಹೆಡರ್ ಮೂಲಕ ಗೋಲು ಬಾರಿಸಿ ಇರಾಕ್‌ಗೆ ಸಮಬಲ ತಂದುಕೊಟ್ಟರು. ಮೊದಲಾರ್ಧದ ಅಂತ್ಯದ ವೇಳೆಗೆ ಇರಾಕ್ ರಕ್ಷಣಾ ವಿಭಾಗದ ತಪ್ಪನ್ನು ಬಳಸಿಕೊಂಡ ಹಾಲಾಂಡ್ ಮತ್ತೊಂದು ಗೋಲು ದಾಖಲಿಸಿ ನಾರ್ವೆಯನ್ನು ಮತ್ತೆ ಮುನ್ನಡೆಸಿದರು. 76ನೇ ನಿಮಿಷದಲ್ಲಿ ಮಾರ್ಟಿನ್ ಒಡೆಗಾರ್ಡ್ ಕಾರ್ನರ್ ಕಿಕ್‌ನಿಂದ ಲಿಯೋ ಓಸ್ಟಿಗಾರ್ಡ್ ಗೋಲು ಗಳಿಸಿದರು. ಅಂತಿಮ ಕ್ಷಣಗಳಲ್ಲಿ ಹಾಲಾಂಡ್ ನೀಡಿದ ಪಾಸ್ ಅನ್ನು ಕ್ರಿಸ್ಟಿಯನ್ ಥೋರ್ಸ್ಟ್‌ವೆಡ್ ಗೋಲಾಗಿ ಪರಿವರ್ತಿಸಿ ನಾರ್ವೆಯ ಗೆಲುವಿಗೆ ಹಾಕಿದರು.

ಆಸ್ಟ್ರೀಯಾ ಆರ್ಭಟ

- ಆಸ್ಟ್ರೀಯಾ 3-1 ಜಾರ್ಡನ್
- ರೋಮಾನೊ(ಆಸ್ಟ್ರೀಯಾ) 21ನೇ ನಿಮಿಷ
- ಓಲ್ವಾನ್(ಜಾರ್ಡನ್) 50ನೇ ನಿಮಿಷ
- ಮಾರ್ಕೋರ್(ಆಸ್ಟ್ರೀಯಾ) 90+11ನೇ ನಿಮಿಷ

ದಿನದ ಮತ್ತೊಂದು ಪಂದ್ಯದಲ್ಲಿ ಜಾರ್ಡನ್ ತಂಡವನ್ನು ಮಣಿಸಿರುವ ಆಸ್ಟ್ರೀಯಾ ವಿಶ್ವಕಪ್‌ನಲ್ಲಿ ಶುಭಾರಂಭ ಮಾಡಿತು. ಪಂದ್ಯದ 21ನೇ ನಿಮಿಷದ ವೇಳೆ ಆಸ್ಟ್ರೀಯಾದ ರೋಮಾನೊ ಗೋಲಿನೊಂದಿಗೆ ಮುನ್ನಡೆ ತಂದರು. 50ನೇ ನಿಮಿಷದಲ್ಲಿ ಜಾರ್ಡನ್‌ನ ಅಲಿ ಒಲ್ವಾನ್ ಗೋಲು ಗಳಿಸಿ ಸಮಬಲ ತಂದಿತ್ತರು. 76ನೇ ನಿಮಿಷದಲ್ಲಿ ಜಾರ್ಡನ್‌ನ ಯರ್ಘಾನ್ ಅಲ್-ಅರಬ್ ತಮ್ಮದೇ ಗೋಲು ಪೆಟ್ಟಿಗೆಗೆ ಬಾರಿಸಿ ಸೋಲು ಬರೆದರು. ಅಲ್ಲಿಗೆ ಆಸ್ಟ್ರೀಯಾ 2-1ರಿಂದ ಮುನ್ನಡೆ ಸಾಧಿಸಿತು. ಹೆಚ್ಚುವರಿ ಸಮಯದಲ್ಲಿ ಮಾರ್ಕೋರ್ ಮತ್ತೊಂದು ಗೋಲು ಗಳಿಸಿದರು. ಅಲ್ಲಿಗೆ ಆಸ್ಟ್ರೀಯಾ 3-1ರಿಂದ ಪಂದ್ಯ ಗೆದ್ದು ಬೀಗಿತು.

ತನ್ನದೇ ಗೋಲು ಪೆಟ್ಟಿಗೆ ಗೋಲು ಮಾಡಿದ ಜಾರ್ಡನ್!



ಆಫ್ಘನ್ ವಿರುದ್ಧ ಭಾರತಕ್ಕೆ 170ರನ್ ಭರ್ಜರಿ ಜಯ

ಲಖನೌ: ನಾಯಕ ಶುಭಮನ್ ಗಿಲ್ 150 ರನ್ ಮತ್ತು ಇಶಾನ್ ಕಿಶನ್ ಅವರ ಶತಕದ ನೆರವಿಗೆ ಬೌಲರುಗಳ ಕರಾರುವಾಕ್ ದಾಳಿಯ ಸಾಥ್ ಸಿಕ್ಕ ನಂತರ ಭಾರತ ಅಫ್ಘಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ಸರಳ ಗೆಲುವು ದಾಖಲಿಸಿ ಸರಣಿ ವಶಪಡಿಸಿಕೊಂಡಿದೆ.

ಬುಧವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿರುವ ಭಾರತ 49.5 ಓವರ್‌ಗಳಲ್ಲಿ 402 ರನ್‌ಗೆ ಆಲೌಟ್ ಆಯಿತು. ಗಿಲ್ 154, ಕಿಶನ್ 125 ರನ್ ಗಳಿಸಿದರು. ರೋಹಿತ್ ಶರ್ಮ 48 ರನ್ ಗಳಿಸಿದರು. ಅಫ್ಘಾನಿಸ್ತಾನ ಪರ ಕಾರೋಟೆ 4 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ 44.3 ಓವರ್‌ಗಳಲ್ಲಿ 232 ರನ್‌ಗಳಿಗೆ ಆಲೌಟ್ ಆಯಿತು. ರೆಹಮತ್ ಶಾಹ್ 79 ರನ್ ಗಳಿಸಿದರು. ಭಾರತ ಪರ ಅರ್ಷದೀಪ್, ಗುರ್ನೂರ್ 3 ವಿಕೆಟ್ ಪಡೆದರೆ, ಪ್ರಿನ್ಸ್ ಯಾದವ್ 2, ಸುಂದರ್ 1 ವಿಕೆಟ್ ಕಿತ್ತರು.

ಅಫ್ಘಾನ್ ತತ್ತರ: ಗುರಿ ಬೆನ್ನತ್ತುವಾಗ ಅಫ್ಘಾನಿಸ್ತಾನ ತತ್ತರಿಸಿತು. 21 ರನ್‌ಗಳಿಸಿದ ಜಾದ್ರನ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಅತಾಲ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಗುರ್ಬಾಜ್ ಯಥಾಸ್ಥಿತಿ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಅತಾಲ್ 42 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮಧ್ಯಮ ಕ್ರಮಾಂಕ ಕುಸಿಯಿತು. ಭಾರತ ಪಂದ್ಯವನ್ನು ಅಲ್ಲೇ ಗೆದ್ದುಕೊಂಡಿತು. ಆದಾಗ್ಯೂ ರೆಹಮತ್ ಶಾಹ್ ಕೊನೆಯವರೆಗೂ ಉತ್ತಮ ಬ್ಯಾಟಿಂಗ್ ಮಾಡಿದರು. ಒಂದು ಬದಿಯಲ್ಲಿ ವಿಕೆಟ್ ಬಿದ್ದರೂ ಇನ್ನೊಂದು ಬದಿಯಲ್ಲಿ ಗಟ್ಟಿಯಾಗಿ ನಿಂತುಕೊಂಡರು. ಆದರೆ ಕೊನೆಯಲ್ಲಿ ಅಫ್ಘಾನಿಸ್ತಾನ ಗೆಲುವಿನ ಸನಿಹಕ್ಕೂ ಹೋಗಲಾಗಲಿಲ್ಲ.



ಗಿಲ್ ಅಬ್ಬರ: ಮೊದಲನೇ ಎಸೆತದಿಂದಲೂ ಶುಭಮನ್ ಗಿಲ್ ಸಮತೋಲನೆ ಪ್ರದರ್ಶಿಸಿದರು. ರೋಹಿತ್ ಸ್ಫೋಟಕ ಬ್ಯಾಟಿಂಗ್ ಮಾಡುವವರೆಗೂ ಅಷ್ಟೊಂದು ಪರಿಣಾಮಕಾರಿ ಬ್ಯಾಟಿಂಗ್ ಮಾಡದ ಅವರು, ರೋಹಿತ್ ವಿಕೆಟ್ ಬಿದ್ದಿದ್ದೇ ತಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 38 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಶುಭಮನ್ ಮುಂದೆ ಇನ್ನಷ್ಟು ಆಕ್ರಮಣಕಾರಿ ಬ್ಯಾಟಿಂಗ್ ಮಾಡಿ ಶತಕದತ್ತ ಸಾಗಿದರು. 77 ಬಾಲ್‌ಗಳಲ್ಲಿ ಶತಕ ಪೂರೈಸಿಕೊಂಡರು. 150 ರನ್ ಕೂಡ ಬಾರಿಸಿದರು. ಇದು ಅವರ 9ನೇ ಅಂತಾರಾಷ್ಟ್ರೀಯ ಶತಕವಾಗಿದೆ. 154 ರನ್ ಗಳಿಸಿದ್ದಾಗ ಅವರು ವಿಕೆಟ್ ಒಪ್ಪಿಸಿದರು.

ಕಿಶನ್ ಪಾರುಪತ್ಯ: ವಿರಾಟ್ ಕೊಹ್ಲಿ ಇಲ್ಲದ ಪರಿಣಾಮ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿರುವ ಇಶಾನ್ ಕಿಶನ್ ಅಬ್ಬರದ ಶತಕ ಬಾರಿಸಿದರು. ಮೊದಲಿಗೆ ಅಲ್ಪ ನಿಧಾನ ಬ್ಯಾಟಿಂಗ್ ಮಾಡಿದ ಕಿಶನ್ 50 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ಮುಂದೆ ಸಿಕ್ಸರ್, ಬೌಂಡರಿ ಅಬ್ಬರ ಶುರು ಮಾಡಿದರು. ಮುಂದಿನ 21 ಬಾಲ್‌ಗಳಲ್ಲಿ ಮತ್ತೊಮ್ಮೆ 50 ರನ್ ಬಾರಿಸಿ 71 ಎಸೆತದಲ್ಲಿ ಶತಕ ಬಾರಿಸಿದರು. 79 ಎಸೆತ ಎದುರಿಸಿದ ಕಿಶನ್ 125 ರನ್‌ಗಳಿಸಿ ಔಟಾದರು.

42 ರನ್‌ಗೆ 5 ವಿಕೆಟ್: ದೊಡ್ಡ ಸ್ಕೋರ್‌ನತ್ತ ಸಾಗಿದ್ದ ಭಾರತ ದಿಢೀರ್ ಕುಸಿತ ಕಂಡಿತು. ಕೊನೆಯ 42 ರನ್ ಗಳಿಸುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತು. ಒಂದು ಹಂತದಲ್ಲಿ 420 ದಾಟುವಂತೇ ಆಡಿದ ಭಾರತ 402 ರನ್‌ಗೆ ಪತನಗೊಂಡಿತು.

ಸಂಕ್ಷಿಪ್ತ ಸ್ಕೋರ್

- **ಭಾರತ 49.5 ಓವರ್‌ಗಳಲ್ಲಿ 402:** ಗಿಲ್ 154, ಕಿಶನ್ 125, ರೋಹಿತ್ 48; ಕಾರೋಟೆ 76/4
- **ಅಫ್ಘಾನಿಸ್ತಾನ 44.3 ಓವರ್‌ಗಳಲ್ಲಿ 232:** ರೆಹಮತ್ 79, ಅತಾಲ್ 42; ಅರ್ಷದೀಪ್ 45/3

ಭಾರತಕ್ಕೆ ಸತತ ಎರಡನೇ ಗೆಲುವು

ಲೀಡ್ಸ್: ಮಂಧಾನ ಅವರ ಅಬ್ಬರದ ಬ್ಯಾಟಿಂಗ್ ಹಾಗೂ ಶ್ರೀ ಚಾರಣಿ ಅವರ ಕರಾರುವಾಕ್ ಬೌಲಿಂಗ್ ದಾಳಿ ಮತ್ತೆ ಜಾದೂ ಮಾಡಿದ್ದು, ಪ್ರತಿಷ್ಠಿತ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಸತತ ಎರಡನೇ ಗೆಲುವು ಸಾಧಿಸಿದೆ. ನೆದರ್ಲೆಂಡ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಭಾರತ 80 ರನ್‌ಗಳ ದೊಡ್ಡ ಗೆಲುವು ಸಾಧಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಮಂಧಾನ 74, ಶೆಫಾಲಿ 55 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಕಾರೋಲಿನ್ 32 ರನ್‌ಗೆ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 17.3 ಓವರ್‌ಗಳಲ್ಲಿ 114 ರನ್‌ಗಳಿಗೆ ಆಲೌಟ್ ಆಯಿತು. ಲೀಡೆ 28 ರನ್ ಗಳಿಸಿದರು. ಭಾರತ ಪರ ಚಾರಣಿ 4, ಶಫಾಲಿ 3 ಮತ್ತು ನಂದಿನಿ 2 ವಿಕೆಟ್ ಪಡೆದರು.

ಮಿಂಚಿದ ಮಂಧಾನ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ಭಾರತಕ್ಕೆ ಸ್ಫೋಟಕ ಆರಂಭ ಸಿಕ್ಕಿತು. 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಶೆಫಾಲಿ ವರ್ಮಾ 54 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಷ್ಟೊತ್ತಿಗಾಗಲೇ ಸೆಟ್ ಆಗಿದ್ದ ಸ್ಮೃತಿ ಮಂಧಾನ ಬಿರುಸಿನ ಬ್ಯಾಟಿಂಗ್ ಶುರು ಮಾಡಿದರು. 36 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಮೂರನೇ ಕ್ರಮಾಂಕದಲ್ಲಿ ರಾಡ್ರಿಗ್ಸ್ 19 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಮಂಧಾನ 47 ಬಾಲ್‌ಗಳಲ್ಲಿ 11 ಬೌಂಡರಿ, ಸಿಕ್ಸರ್‌ನೊಂದಿಗೆ 74 ರನ್ ಗಳಿಸಿ ಔಟಾದರು. ಯಸ್ತಿಕಾ 3 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ಗಳಲ್ಲಿ ಘೋಷ್ ಮತ್ತೊಮ್ಮೆ ಬಿರುಸಿನ ಬ್ಯಾಟಿಂಗ್ ಮಾಡಿದರು. 8 ಬಾಲ್‌ಗಳಲ್ಲಿ 20 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಕೊನೆಯ 2 ಬಾಲ್‌ನಲ್ಲಿ ಬೌಂಡರಿ ಮತ್ತು ಸಿಕ್ಸರ್ ಬಾರಿಸಿದ ದೀಪ್ತಿ ಶರ್ಮ 10 ರನ್ ಗಳಿಸಿದರು. ಭಾರತ 209 ರನ್ ಗಳಿಸಿತು.



ಕುಸಿದ ನೆದರ್ಲೆಂಡ್ಸ್: ಹೀದರ್ 21, ಫೆಬೆ 15, ಕಾಲಿಸ್ 18 ರನ್‌ಗೆ ವಿಕೆಟ್‌ನೊಂದಿಗೆ ನೆದರ್ಲೆಂಡ್ಸ್ ನಿಧಾನಗತಿ ಆರಂಭ ಪಡೆಯಿತು. ನಾಯಕಿ ಲೀಡೆ ಒಂದು ಬದಿಯಲ್ಲಿ ನಿಂತರೂ ಯಾರೊಬ್ಬರೂ ಸಾಥ್ ಕೊಡಲೇ ಇಲ್ಲ. 28 ರನ್ ಗಳಿಸಿ ಲೀಡೆ ಕೂಡ ವಿಕೆಟ್ ಒಪ್ಪಿಸಿದರು ಮುಂದಿನ ಯಾವುದೇ ಬ್ಯಾಟರ್ ಕೂಡ ಎರಡಂಕಿ ದಾಟಲೇ ಇಲ್ಲ.

ಸಂಕ್ಷಿಪ್ತ ಸ್ಕೋರ್

- **ಭಾರತ 20 ಓವರ್‌ಗಳಲ್ಲಿ 209/5:** ಮಂಧಾನ 74, ಶೆಫಾಲಿ 55; ಕಾರೋಲಿನ್ 32/2
- **ನೆದರ್ಲೆಂಡ್ಸ್ 17.3 ಓವರ್‌ಗಳಲ್ಲಿ 114/10:** ಲೀಡೆ 28; ಚಾರಣಿ 19/4, ಶಫಾಲಿ 20/3

ಆಸೀಸ್‌ಗೆ 9 ವಿಕೆಟ್ ಜಯ

ಲೀಡ್ಸ್: ಸಾಂಘಿಕ ಬೌಲಿಂಗ್ ದಾಳಿ ಸಂಘಟಿಸಿದ ಆಸ್ಟ್ರೇಲಿಯಾ ಮಹಿಳೆಯರ ತಂಡವು ಬಾಂಗ್ಲಾದೇಶದ ಮೇಲೆ ಹರಿಹಾಯ್ದಿದ್ದು, 9 ವಿಕೆಟ್‌ಗಳ ಬೃಹತ್ ಗೆಲುವು ಸಾಧಿಸಿದೆ. ಇದರೊಂದಿಗೆ ಎರಡನೇ ಸತತ ಗೆಲುವು ದಾಖಲಿಸಿರುವ ಆಸ್ಟ್ರೇಲಿಯನ್ನರು ವಿಶ್ವಕಪ್‌ನಲ್ಲಿ ಪಾರುಪತ್ಯ ಮುಂದುವರಿಸಿದ್ದಾರೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾವನ್ನು 77 ರನ್‌ಗೆ ಕಟ್ಟಿ ಹಾಕಿದ ಆಸೀಸ್ 9.3 ಓವರ್‌ಗಳಲ್ಲಿ ಹೊಡೆಯಿತು. ಬಾಂಗ್ಲಾ ಪರ ನಿಗಾ ಸುಲ್ತಾನ್ 47 ಬಾಲ್ ಎದುರಿಸಿ 27 ರನ್ ಮಾತ್ರ ಗಳಿಸಿದರು. ಇದೇ ಅವರ ತಂಡದಲ್ಲಿ ಆಟಗಾರ್ತಿ ಗಳಿಸಿದ್ದ ಅತಿ ಹೆಚ್ಚು ರನ್. ಆಸ್ಟ್ರೇಲಿಯಾ ಪರ ಪೆರ್ರಿ, ಸೋಫಿ ಮತ್ತು ಗ್ರಾತ್ 2 ವಿಕೆಟ್ ಕಿತ್ತರೆ, ಸುದರ್‌ಲೆಂಡ್ ಮತ್ತು ವಾರೇಹಮ್ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 9.3 ಓವರ್‌ಗಳಲ್ಲಿ 78 ರನ್ ಗುರಿ ತಲುಪಿತು. ತಂಡದ ಪರ ಜಾರ್ಜಿಯಾ ವಾಲ್ 45★ ರನ್ ಗಳಿಸಿದರು.

ಮಕಾವು ಓಪನ್: 3 ಭಾರತೀಯರು ಪ್ರಿ ಕ್ವಾರ್ಟರ್‌ಗೆ

ಹೊಸದಿಲ್ಲಿ: ಇಲ್ಲಿ ನಡೆಯುತ್ತಿರು ಮಕಾವು ಓಪನ್ ಬ್ಯಾಡ್ಮಿಂಟನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತೀಯರು ಮಿಂಚುತ್ತಿದ್ದು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಅನ್ಮೋಲ್ ಖಾರ್ಬ್ ಸೇರಿದಂತೆ ಮೂವರು ಪ್ರಿ ಕ್ವಾರ್ಟರ್‌ಫೈನಲ್‌ಗೇರಿದ್ದಾರೆ. ಈ ಮೂಲಕ ಭಾರತದ ಪಾರುಪತ್ಯ ಮಕಾವುದತ್ತ ಸಾಗಿದೆ. ಇಂಡೋನೇಷ್ಯಾದ ಮುಟಿಯಾರಾ ಆಯು ಅವರನ್ನು ಎದುರಿಸಿದ್ದ ಅನ್ಮೋಲ್ 21-13, 21-16 ರಿಂದ ಗೆದ್ದರು. ರಕ್ಷಿತಾ ಶ್ರೀ ರಾಮರಾಜ್ ಮಲೇಷ್ಯಾದ ಕಿಸೋನಾ ಅವರನ್ನು 21-16, 24-22ರಿಂದ ಸೋಲಿಸಿದರು. ಏಳನೇ ಸೀಡ್‌ನ ಶ್ರೀಯಾಂಶಿ ವಾಲಿಶೆಟ್ಟಿ ಸ್ವದೇಶದ ತಸ್ನಿಮ್ ಮಿರ್ ಅವರೊಂದಿಗೆ 21-18, 19-21, 21-15ರಿಂದ ಗೆದ್ದು ಮುನ್ನಡೆದರು. ಇದರೊಂದಿಗೆ ಭಾರತೀಯರು ಪದಕ ನಿರೀಕ್ಷೆ ಹೆಚ್ಚಿಸಿದ್ದಾರೆ.


ಭಾರತ ಎ ಫೈನಲ್‌ಗೆ

ಡಂಬುಲ್ಲಾ: ಸಾಂಘಿಕ ಬ್ಯಾಟಿಂಗ್ ಮತ್ತು ನಿಶಾಂತ್ ಸಂಧು ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ನಲುಗಿದ ಅಫ್ಘಾನಿಸ್ತಾನ ತಂಡವು ಭಾರತ ಎ ವಿರುದ್ಧ 101 ರನ್‌ಗಳ ದೊಡ್ಡ ಸೋಲನುಭವಿಸಿದೆ. ಇದರೊಂದಿಗೆ ತ್ರಿಕೋನ ಸರಣಿ ಫೈನಲ್‌ಗೇರಿದೆ.

ಸತತ ಎರಡು ಸೋಲಿನ ನಂತರ ಕಂಬ್ಯಾಕ್ ಮಾಡಿರುವ ತಿಲಕ್ ವರ್ಮಾ ನೇತೃತ್ವದ ಭಾರತ ಎ ತಂಡವು ದೊಡ್ಡ ಸ್ಕೋರ್ ಮಾಡಿದ್ದಲ್ಲದೆ ಅಫ್ಘಾನಿಸ್ತಾನ ಎ ತಂಡವನ್ನು ಆಲೌಟ್ ಮಾಡಿ ವಿಜಯ ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 319 ರನ್ ಗಳಿಸಿತು. ಪ್ರಿಯಾಂಶ್ 58, ವೈಭವ್ 38, ಗಾಯಕ್ವಾಡ್ 30, ತಿಲಕ್ ವರ್ಮಾ 59, ಕುಮಾರ್ ಕುಶಾಗ್ರ 68 ಮತ್ತು ನಿಶಾಂತ್ ಸಂಧು 30 ರನ್ ಗಳಿಸಿದರು. ಗುರಿ ಬೆನ್ನತ್ತಿದ ಅಫ್ಘಾತನಿಸ್ತಾನ ಎ 36.5 ಓವರ್‌ಗಳಲ್ಲಿ 218 ರನ್‌ಗೆ ಆಲೌಟ್ ಆಯಿತು. ಬಾಹಿರ್ ಶಾಹ್ 57, ಫೈಸಲ್ 46 ರನ್ ಗಳಿಸಿದರು. ಭಾರತ ಪರ ನಿಶಾಂತ್ 4 ವಿಕೆಟ್ ಕಿತ್ತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6018

ಎಡದಿಂದ ಬಲಕ್ಕೆ

1.ಸುರನಿಗೆ ಈ ನಡುವೆ ಕಂಡ ದೂತ (4)
3.ಪರ್ವತವನ್ನು ಹೊತ್ತವನು-ಕೃಷ್ಣ(4)
5.ಕೈ-ಕಾಲಿಗೆ ಹಾಕುವ ಬಳೆ (3)
6.ಅಂತರಂಗವಿಲ್ಲಿ ತಿರುಗಿದೆ (2)
8.ಲೋಹದ ತೆಳುವಾದ ಎಳೆ (2)
9.ರಾಜ-ಯುದ್ಧವೀರರ ವಾಹನವಿದು (2)
12.ಜನರು ಕುಳಿತು ನೋಡಿದ್ದು ಈ ಅಂಗಾರಕನನ್ನು (2)
14.ಒತ್ತಾಗಿರುವಿಕೆ-ನಿಬಿಡತೆಯಿದು (3)
15.ಶಂಕುಸ್ಥಾಪನೆಯ ಸಮಾನಪದ (4)
16.ಕೀಟಲೆ ಮಾಡಿ ರೇಗಿಸು (4)

ಮೇಲಿನಿಂದ ಕೆಳಕ್ಕೆ

1.ವಿಷ್ಣುವಿನ ಕೈಯಲ್ಲಿರುವ ಚಕ್ರಾಯುಧ (4)
2.ವಿಲಾಸಿತನದಿಂದ ಕೂಡಿರುವಿಕೆ (4)
3.ಗಾಳಿಗೆ ತಿರುಗುವ ಆಟದ ಚಕ್ರ (4)
4.ರಾಯರಿಗೆ ಪದ್ಧತಿ ತಿಳಿಸಿದ ಪವನ (4)
7.ಪ್ರೀತಿ-ಸೌಂದರ್ಯದ ದೇವತೆ (3)
8.ಹೊಗೆಸೊಪ್ಪನ್ನು ಹೀಗೂ ಹೇಳುತ್ತೇವೆ (3)
9.ಸೂರ್ಯ-ಚಂದ್ರ ಕೂಡಿ ಕಾಣುತ್ತಿದ್ದಾರೆ (4)
10.ಮುಗುಳುನಗೆಯ ಸಮಾನಪದ (4)
11.ನಮಸ್ಕರಿಸು ಎಂಬರ್ಥದ ನುಡಿಗಟ್ಟು (4)
13.ಎಲ್ಲವನ್ನು ಒಟ್ಟುಗೂಡಿಸುವಿಕೆ (4)

6017 ಉತ್ತರ

ಎಡದಿಂದ ಬಲಕ್ಕೆ:

1.ಸುಗ್ಗಿಕಾಲ 2.ಪ್ರತಿವಾದಿ
4.ಗಟ್ಟಿಗ 6.ನಖಕ್ಷತ
8.ಜಯಶಾಲಿ
10.ರಾಜಸ್ಥಾನ 12.ಅವಿರತ
14.ಗವ್ವಳಿ 15.ಗೆರೆದಾಟು
16.ಪಾರಿಜಾತ

ಮೇಲಿನಿಂದ ಕೆಳಕ್ಕೆ

: 1.ಸುಲೋಚನ
3.ದಿನಗೂಲಿ 4.ಗತ 5.ಗಜ
7.ಖನಿಜ 9.ಶಾರೀರ
10.ರಾಗತೆಗೆ 11.ನಗ
12.ಅಳಿ 13.ತದುಪಾಂತ

ಕಿರುಸುದ್ದಿ

ಅಪ್ರಾಪ್ತ ಬಾಲಕನಿಂದ ಕಾರು ಚಾಲನೆ: ಕಾರು ಮಾಲೀಕನ ವಿರುದ್ಧವೂ ಪ್ರಕರಣ ದಾಖಲು

ಉಡುಪಿ: ಡ್ರೈವಿಂಗ್ ಲೈಸೆನ್ಸ್ ಇಲ್ಲದ ಅಪ್ರಾಪ್ತ ಬಾಲಕನೊಬ್ಬ ಅತಿ ವೇಗವಾಗಿ ಕಾರು ಚಲಾಯಿಸಿಕೊಂಡು ಬಂದು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಸ್ಕೂಟರ್‌ಗೆ ಭೀಕರವಾಗಿ ಢಿಕ್ಕಿ ಹೊಡೆದ ಘಟನೆ ಬಡಗುಬೆಟ್ಟು ಗ್ರಾಮದ ನೇತಾಜಿ ನಗರದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಅಪ್ರಾಪ್ತ ಬಾಲಕ ಹಾಗೂ ಆತನಿಗೆ ಕಾರು ನೀಡಿದ ಮಾಲೀಕನ ವಿರುದ್ಧ ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಡಗುಬೆಟ್ಟು ಗ್ರಾಮದ ನೇತಾಜಿ ನಗರದ 2ನೇ ಅಡ್ಡ ರಸ್ತೆಯ ನಿವಾಸಿ ಚಂದ್ರಕಲಾ ಹರೀಶ್ (36) ಎಂಬುವವರು ಜೂನ್ 16ರಂದು ಸಂಜೆ 6.30ರ ಸುಮಾರಿಗೆ ತಮ್ಮ ಸ್ಕೂಟರ್ ಅನ್ನು ಮನೆಯ ಹೊರಗಡೆ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದರು. ಈ ವೇಳೆ ನೇತಾಜಿ ನಗರ ಕಡೆಯಿಂದ ಪ್ರಗತಿ ನಗರದ ಕಡೆಗೆ ಬಂದ ಕಾರನ್ನು ಅದರ ಚಾಲಕ ಮೊಹಮ್ಮದ್ ಸೈಫ್ (17) ಎಂಬ ಅಪ್ರಾಪ್ತ ಬಾಲಕ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿ ರಸ್ತೆ ಬದಿಯಲ್ಲಿದ್ದ ಸ್ಕೂಟರ್‌ಗೆ ಜೋರಾಗಿ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯ ರಭಸಕ್ಕೆ ಸ್ಕೂಟರ್ ಮನೆಯ ಕಾಂಪೌಂಡ್‌ಗೆ ತಾಗಿ ಬಿದ್ದಿದ್ದು, ಸಂಪೂರ್ಣ ಜಖಂಗೊಂಡಿದೆ. ಅಪ್ರಾಪ್ತ ಬಾಲಕನಿಗೆ ಕಾನೂನು ಬಾಹಿರವಾಗಿ ಕಾರು ಚಲಾಯಿಸಲು ನೀಡಿದ ಅದರ ಮಾಲೀಕ ಸಲೀಂ ಎಂಬುವವರ ಬೇಜವಾಬ್ದಾರಿತನವೇ ಈ ಅಪಘಾತಕ್ಕೆ ಕಾರಣ ಎಂದು ದೂರಿನಲ್ಲಿ ತಿಳಿಸಲಾಗಿದ್ದು, ಮಣಿಪಾಲ ಪೊಲೀಸರು ಇಬ್ಬರ ಮೇಲೂ ಮೋಟಾರು ವಾಹನ ಕಾಯ್ದೆಯಡಿ ಕಠಿಣ ಮೊಕದ್ದಮೆ ಹೂಡಿದ್ದಾರೆ.

ಈಗ ಕಾಡು ಕುರಿ ಪ್ರತ್ಯಕ್ಷ

ನಾಪೋಕ್ಲು: ಸ್ಥಳೀಯ ಮಾರುಕಟ್ಟೆಯ ಅಂಗಡಿಯೊಂದಕ್ಕೆ ನುಗ್ಗಿದ ಕಾಡು ಕುರಿಯನ್ನು ಅರಣ್ಯ ಇಲಾಖೆಯಿಂದ ರಕ್ಷಣೆ ಮಾಡಲಾಯಿತು. ಬುಧವಾರ ಸಂಜೆ ಕಾಡು ಕುರಿ ಒಂದು ಬೀದಿ ನಾಯಿಗಳಿಂದ ತಪ್ಪಿಸಿಕೊಂಡು ಮಾರುಕಟ್ಟೆಯ ಅಂಗಡಿಗೆ ನುಗ್ಗಿದೆ ಈ ಸಂದರ್ಭ ಸುಲೇಮಾನ್ ಎಂಬವರು ಕಾಡು ಕುರಿಯನ್ನು ಹಿಡಿದು ಸ್ಥಳೀಯ ಪೊಲೀಸರಿಗೆ ಒಪ್ಪಿಸಿ ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಲಾಯಿತು.



ಅನಂತರ ಠಾಣಾಧಿಕಾರಿ ರಾಘವೇಂದ್ರ ಅವರಿಂದ ಸುಮಾರು ಎರಡು ವರ್ಷ ಪ್ರಾಯದ ಹೆಣ್ಣು ಕಾಡು ಕುರಿಯನ್ನು ಪಡೆದುಕೊಂಡ ಉಪ ಅರಣ್ಯ ಅಧಿಕಾರಿ ಕಾಳೇಗೌಡ, ಗಸ್ತು ಅರಣ್ಯಪಾಲಕ ಶರತ್ ಕೆ ಎ, ಅರಣ್ಯ ವೀಕ್ಷಕ ಮುತ್ತಪ್ಪ ಮತ್ತು ಹರ್ಷಿತ್ ಸುರಕ್ಷಿತ ಅರಣ್ಯ ಪ್ರದೇಶದಲ್ಲಿ ಕಾಡು ಕುರಿಯನ್ನು ಬಿಡಲಾಯಿತು.

ಕಾಸರಗೋಡು: ಯುವತಿಗೆ ಲೈಂಗಿಕ ಕಿರುಕುಳ; ಆರೋಪಿ ಬಂಧನ

ಕಾಸರಗೋಡು: ವಸತಿ ಗೃಹದಲ್ಲಿ ಕಟ್ಟಿಹಾಕಿ ಲೈಂಗಿಕ ಕಿರುಕುಳ ನೀಡಿದ ಪ್ರಕರಣದ ಆರೋಪಿಯನ್ನು ಕಾಸರಗೋಡು ಪೊಲೀಸರು ಬಂಧಿಸಿದ್ದಾರೆ. ಕಾಸರಗೋಡು ನೆಲ್ಕಳ ನಿವಾಸಿ ವಿಷ್ಣುಪ್ರಸಾದ್ ಅಲಿಯಾಸ್ ವಿಷ್ಣು(26) ಬಂಧಿತ ಆರೋಪಿ. ಜೂ.13ರಂದು ಕಾಸರಗೋಡು ನಗರಕ್ಕೆ ಬಂದಿದ್ದ 19ರ ಹರೆಯದ ಯುವತಿಯಲ್ಲಿ ಕುಟುಂಬದ ವಿಷಯದ ಬಗ್ಗೆ ಮಾತನಾಡಲೆಂದು ತಿಳಿಸಿ ಆರೋಪಿಯು ಆಕೆಯನ್ನು ಆಟೋರಿಕ್ಷಾಕ್ಕೇರಿಸಿ ನಗರದ ವಸತಿ ಗೃಹಕ್ಕೆ ಕರೆದೊಯ್ದು ಅಲ್ಲಿನ ಕೊಠಡಿಯಲ್ಲಿ ಆಕೆಯ ಮೊಬೈಲ್ ಫೋನ್ ಪಡೆದ ಬಳಿಕ ಲೈಂಗಿಕ ಕಿರುಕುಳ ನೀಡಲೆತ್ನಿಸಿದನೆಂದು ಅದಕ್ಕೆ ಆಕೆ ವಿರೋಧ ವ್ಯಕ್ತಪಡಿಸಿದಾಗ ಕಟ್ಟಿ ಹಾಕಿ ಲೈಂಗಿಕ ಕಿರುಕುಳ ನೀಡಿದನೆಂದು ಪೊಲೀಸರಿಗೆ ಸಲ್ಲಿಸಿದ ದೂರಿನಲ್ಲಿ ತಿಳಿಸಲಾಗಿದೆ. ಅದರಂತೆ ಪೊಲೀಸರು ಆರೋಪಿಯ ವಿರುದ್ಧ ಕೇಸು ದಾಖಲಿಸಿ ಆತನನ್ನು ಸೆರೆ ಹಿಡಿದರು.

ಬೆಳ್ತಂಗಡಿ ಸೇತುವೆ ಪುನರ್ ನಿರ್ಮಾಣ: ಸಂಚಾರ ಮಾರ್ಗ ಬದಲಾವಣೆ


ಬೆಳ್ತಂಗಡಿ: ತಾಲ್ಲೂಕಿನ ಉಜಿರೆ–ಇಂದಬೆಟ್ಟು ಜಿಲ್ಲಾ ಮುಖ್ಯ ರಸ್ತೆಯಲ್ಲಿನ ಕಿ.ಮೀ.1.10 ರಲ್ಲಿ ಬರುವ ಅಂಬಡಬೆಟ್ಟು ಎಂಬಲ್ಲಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿಯ ಸಂಬಂಧ ಸೇತುವೆಯಲ್ಲಿ ಜೂ.9 ರಿಂದ 2027ರ ಜ.6 ರವರೆಗೆ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ಮಾರ್ಗ ಬದಲಾವಣೆ ಮಾಡಿ ಸಂಚರಿಸಲು ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಆದೇಶಿಸಿದ್ದಾರೆ.

ಬದಲಿ ಮಾರ್ಗಗಳು ಹೀಗಿವೆ:
ಉಜಿರೆ ಜನಾರ್ದನ ಸ್ವಾಮಿ ದೇವಸ್ಥಾನದ ದ್ವಾರದಿಂದ – ಸೂರ್ಯ ದೇವಸ್ಥಾನ ಮಾರ್ಗವಾಗಿ – ಕೇಳ್ತಜೆ ಮುಖಾಂತರ ಸಂಚರಿಸಬೇಕು. ಬೆಳ್ತಂಗಡಿ – ಕಿಲ್ಲೂರು ಕಾಜೂರು ರಸ್ತೆಯ ಇಂದಬೆಟ್ಟು ಗ್ರಾಮದಿಂದ ನೇತ್ರಾವತಿ ಎಸ್.ಟಿ ಕಾಲೊನಿ ಮಾರ್ಗವಾಗಿ ಬೆಳ್ಳೂರು ಕ್ರಾಸ್ ರಸ್ತೆಯಾಗಿ ರಾಜ್ಯ ಹೆದ್ದಾರಿ 276ರ ರಸ್ತೆಯಾದ ಸುಳ್ಯ ಪೈಚಾರು ಬೆಳ್ಳಾರೆ ಸವಣೂರು ಕುದ್ಮಾರು ಅಲಂಕಾರು ಸುರುಳಿ ಮಾದೇರಿ ಪಟ್ರಮೆ ಧರ್ಮಸ್ಥಳ ಮುಂಡಾಜೆ ದಿಡುಪೆ ರಸ್ತೆಯನ್ನು ಸಂಪರ್ಕಿಸಬೇಕು.

ವರದಾನವಾದ ಪುನೀತ್ ಹೃದಯ ಜ್ಯೋತಿ ಯೋಜನೆ | ರಾಜ್ಯದಲ್ಲಿ 18 ಸಾವಿರ ಮಂದಿಗೆ ಚಿಕಿತ್ಸೆ

ಫಲಾನುಭವಿಗಳು ದ.ಕ.ದಲ್ಲೇ ಅಧಿಕ!

ಮಂಗಳೂರು: ರಾಜ್ಯದ ಜನತೆಗೆ ಪುನೀತ್ ಹೃದಯ ಜ್ಯೋತಿ ಯೋಜನೆ ವರದಾನವಾಗಿದೆ. ಸಾವಿರಾರು ಮಂದಿ ಹೃದ್ರೋಗಿಗಳ ಆಶಾ ಕಿರಣವಾಗಿರುವ ಈ ಯೋಜನೆಯ ಪ್ರಯೋಜನವನ್ನು ಸಾವಿರಾರು ಮಂದಿ ಪಡೆಯುತ್ತಿದ್ದಾರೆ. ರಾಜ್ಯಕ್ಕೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚು ಮಂದಿ ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ.



ಪ್ರಯೋಜನ ಪಡೆದ 11,279 ಮಂದಿ

ಪುನೀತ್ ಹೃದಯ ಜ್ಯೋತಿ ಯೋಜನೆ ಆರಂಭವಾದಾಗಿನಿಂದ ಅಂದರೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಇದರ ರಾಜ್ಯದಲ್ಲಿ ಒಟ್ಟು 18,000 ಮಂದಿಗೆ ಪ್ರಯೋಜನವಾಗಿದೆ. ಈ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯ ಮಂದಿಯೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಜಿಲ್ಲೆಯಲ್ಲಿ 11,279 ಮಂದಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.



ಸ್ಟೆಮಿ (ಎಸ್‌ಇಟಿಎಂಐ) ಎಂಬುದು ತೀವ್ರ ಸ್ವರೂಪದ ಹೃದಯಾಘಾತವಾಗಿದೆ. ಇಂತಹ ಪ್ರಕರಣಗಳಲ್ಲಿ ಹೃದಯ ಸ್ನಾಯುವಿಗೆ ರಕ್ತ ಹರಿವಿನ ಕೊರತೆ ಉಂಟಾಗಿ, ಆಮ್ಲಜನಕವನ್ನು ತಡೆಯುತ್ತದೆ. ದ.ಕ. ಜಿಲ್ಲಾ ಆರೋಗ್ಯ ಇಲಾಖೆಯ ಮಾಹಿತಿಯ ಪ್ರಕಾರ ದ.ಕ. ಜಿಲ್ಲೆಯಲ್ಲಿ 2024ರ ಮಾರ್ಚ್‌ನಿಂದ 2026ರ ಎಪ್ರಿಲ್‌ವರೆಗೆ 3393 ಸ್ಟೆಮಿ ಪ್ರಕರಣಗಳು ದೃಢಗೊಂಡಿದ್ದು, ಚಿಕಿತ್ಸೆ ನೀಡಲಾಗಿದೆ.

ವಿವಿಧ ತಾಲೂಕುಗಳಿಗೆ ವಿಸ್ತರಣೆ

ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಈ ಯೋಜನೆ ಆರಂಭಿಸಲಾಗಿದ್ದು ಬಳಿಕ ಹಂತ ಹಂತವಾಗಿ ವಿವಿಧ ತಾಲೂಕುಗಳಿಗೆ ವಿಸ್ತರಿಸಲಾಗಿದೆ. ಬೆಳ್ತಂಗಡಿ, ಸುಳ್ಯ, ಬಂಟ್ವಾಳ ತಾಲೂಕುಗಳಲ್ಲಿ ಈ ಯೋಜನೆ ಅನುಷ್ಠಾನದಲ್ಲಿದೆ. ಅಲ್ಲದೆ ದ.ಕ. ಮತ್ತು ಉಡುಪಿ ಜಿಲ್ಲೆಗಳಿಗೆ ದೇರಳಕಟ್ಟೆಯ ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆಯನ್ನು ಹಬ್ ಕೇಂದ್ರವಾಗಿ ಮಾಡಲಾಗಿದ್ದು, ಈ ಯೋಜನೆಯಡಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಯಾವ ವರ್ಷ, ಎಷ್ಟು ಮಂದಿಗೆ ಸಿಕ್ಕಿದೆ ಚಿಕಿತ್ಸೆ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ 3278 ಮಂದಿ ಪುನೀತ್ ಹೃದಯ ಜ್ಯೋತಿ ಯೋಜನೆಯಡಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. 2025–26ನೇ ಸಾಲಿನಲ್ಲಿ 7706 ಹಾಗೂ 2026ರರಲ್ಲಿ 295 ಹೃದ್ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಆರಂಭದಲ್ಲಿ ರಾಜ್ಯದ 86 ಸರಕಾರಿ ಆಸ್ಪತ್ರೆಗಳನ್ನು ಸ್ಪೋಕ್ ಕೇಂದ್ರಗಳಾಗಿ ಹಾಗೂ 11 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಹಬ್ ಕೇಂದ್ರಗಳಾಗಿ ಗುರುತಿಸಿ ಈ ಯೋಜನೆ ಜಾರಿಗೊಳಿಸಲಾಗಿತ್ತು. ಇದೀಗ ರಾಜ್ಯದ ಎಲ್ಲಾ ತಾಲೂಕುಗಳಿಗೆ ಈ ಯೋಜನೆ ವಿಸ್ತರಿಸಲು ಒತ್ತು ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯಾಕಾಗಿ ಯೋಜನೆಯ ಆರಂಭ?

ಖ್ಯಾತ ನಟ ಪುನೀತ್ ರಾಜ್ ಕುಮಾರ್ ಅವರು ಹೃದಯಾಘಾತದಿಂದ ನಿಧನರಾದಾಗ ನಾಡಿಗೆ ನಾಡೇ ಕಂಬನಿ ಮಿಡಿದಿತ್ತು. ಅಲ್ಲದೆ ಹೃದಯಾಘಾತಕ್ಕೆ ಒಳಗಾಗುತ್ತಿರುವ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬರುತ್ತಿದ್ದುದರಿಂದ ಈ ಪುನೀತ್ ಹೃದಯ ಜ್ಯೋತಿ ಯೋಜನೆ ರಾಜ್ಯಾದ್ಯಂತ ಜಾರಿಗೆ ತರಲಾಗಿತ್ತು. ಇದು ಹೆಚ್ಚಿನ ಮಹತ್ವ ಪಡೆದಿದ್ದು, ಪ್ರಸ್ತುತ ಗ್ರಾಮೀಣ ಭಾಗದ ಮಂದಿಗೆ ಹೆಚ್ಚು ಅನುಕೂಲವಾಗುತ್ತಿದೆ. ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಈ ಯೋಜನೆಯು ಜಿಲ್ಲಾಸ್ಪತ್ರೆ ಹಾಗೂ ತಾಲೂಕು ಆಸ್ಪತ್ರೆಗಳ ಮೂಲಕ ನಿರ್ವಹಿಸಲ್ಪಡುತ್ತಿದೆ.



62 ರೋಗಿಗಳಿಗೆ ಈವರೆಗೆ ಟೆನೆಕ್ಟೆಪ್ಲೇಸ್ ಇಂಜೆಕ್ಷನ್

ಹಠಾತ್ ಹೃದಯಾಘಾತದ ನಂತರದ ನಿರ್ಣಾಯಕ ಅವಧಿಯಲ್ಲಿ ತ್ವರಿತ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಜಾರಿಗೆ ಬಂದಿರುವ ಈ ಯೋಜನೆಯಡಿ ನೀಡಲಾಗುವ ಟೆನೆಕ್ಟೆಪ್ಲೇಸ್ ಎಂಬ ದುಬಾರಿ ಇಂಜೆಕ್ಷನ್ ಕೂಡಾ ದ.ಕ. ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳಿಂದ ನೀಡಲಾಗುತ್ತಿದ್ದು, ಈವರೆಗೆ 62 ರೋಗಿಗಳು ಇದರ ಪ್ರಯೋಜನ ಪಡೆದಿದ್ದಾರೆ. ಹೃದಯಾಘಾತ ತಡೆಯಲು ನೀಡಲಾಗುವ ದುಬಾರಿ ಟೆನೆಕ್ಟೆಪ್ಲೇಸ್ ಇಂಜೆಕ್ಷನ್ ದುಬಾರಿಯಾಗಿದ್ದು, ಇದು ರಕ್ತ ಹೆಪ್ಪುಗಟ್ಟುವಿಕೆಯನ್ನು ತಡೆಯಲು ಸಹಕರಿಸುತ್ತದೆ. ಸಾಮಾನ್ಯವಾಗಿ 30 ಸಾವಿರದಿಂದ 45 ಸಾವಿರ ರೂ.ವರೆಗಿನ ಈ ಇಂಜೆಕ್ಷನ್ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. 2025–26ನೆ ಸಾಲಿನಲ್ಲಿ ವೆನ್‌ಲಾಕ್ ಆಸ್ಪತ್ರೆಯಲ್ಲಿ 26, ಬಂಟ್ವಾಳ ತಾ.ಆಸ್ಪತ್ರೆಯಲ್ಲಿ 12, ಸುಳ್ಯ ತಾ.ಆಸ್ಪತ್ರೆಯಲ್ಲಿ 16 ಟೆನೆಕ್ಟೆಪ್ಲೇಸ್ ಇಂಜೆಕ್ಷನ್ ಬಳಕೆಯಾಗಿದೆ. 2026ರ ಎಪ್ರಿಲ್‌ನಲ್ಲಿ ವೆನ್‌ಲಾಕ್ ಆಸ್ಪತ್ರೆಯಲ್ಲಿ 8 ಟೆನೆಕ್ಟೆಪ್ಲೇಸ್ ಇಂಜೆಕ್ಷನ್ ಬಳಕೆಯಾಗಿದೆ ಎನ್ನುತ್ತಾರೆ ಆರೋಗ್ಯ ಇಲಾಖೆಯ ಅಧಿಕಾರಿಗಳು.

ನಿಯಮ ಗಾಳಿಗೆ ತೂರಿ ಸ್ಕೂಟರಲ್ಲಿ 4 ಮಂದಿಯ ಸವಾರಿ

ತೊಕ್ಕೊಟ್ಟಿನಲ್ಲಿನ ಯುವತಿಯರ ಹುಚ್ಚಾಟದ ವೀಡಿಯೋ ವೈರಲ್!

ಉಳ್ಳಾಲ: ನಾಲ್ವರು ಮುಸ್ಲಿಂ ಯುವತಿಯರು ಚಲಿಸುತ್ತಿದ್ದ ಸ್ಕೂಟರೊಂದು ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿ ಪಾರ್ಕಿಂಗ್ ಮಾಡಲಾಗಿದ್ದ ದ್ವಿಚಕ್ರ ವಾಹನಗಳಿಗೆ ಢಿಕ್ಕಿ ಹೊಡೆದ ಘಟನೆಯು ಮಂಗಳವಾರ ರಾತ್ರಿ ತೊಕ್ಕೊಟ್ಟು ಒಳಪೇಟೆಯಲ್ಲಿ ನಡೆದಿದೆ. ಸಂಚಾರಿ ನಿಯಮಗಳನ್ನು ಉಲ್ಲಂಘಿಸಿ ಯುವತಿಯರು ಸ್ಕೂಟರಲ್ಲಿ ನಾಲ್ವರು ಸವಾರಿ ಮಾಡಿ ಹುಚ್ಚಾಟ ಮೆರೆದ ವೀಡಿಯೋ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಮಂಗಳವಾರ ರಾತ್ರಿ ಒಂಭತ್ತು ಗಂಟೆ ಸುಮಾರಿಗೆ ತೊಕ್ಕೊಟ್ಟು ಒಳಪೇಟೆಯ ಎಬಿಸಿ ಕ್ಲಬ್ ಬಳಿ ಘಟನೆ ನಡೆದಿದೆ. ಉಳ್ಳಾಲದ ಮೇಲಂಗಡಿಯಿಂದ ಟಿ.ಸಿ ರೋಡ್ ಮಾರ್ಗವಾಗಿ ತೊಕ್ಕೊಟ್ಟು ಒಳಪೇಟೆಗೆ ಸ್ಕೂಟರಲ್ಲಿ ಬರುತ್ತಿದ್ದ ಯುವತಿಯರು, ತೊಕ್ಕೊಟ್ಟು ಚರ್ಚ್ ಬಳಿಯ ರಸ್ತೆ ಹಂಪ್ಸನ್ನು ದಾಟುವಾಗ ನಿಯಂತ್ರಣ ತಪ್ಪಿದ್ದು, ಸ್ಕೂಟರನ್ನ ಎಬಿಸಿ ಕ್ಲಬ್ ಕಡೆಗೆ ನುಗ್ಗಿಸಿ,ಅಲ್ಲಿ ಪಾರ್ಕ್ ಮಾಡಲಾಗಿದ್ದ ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆಸಿ,ಕೆಳಗಡೆ ಬಿದ್ದಿದ್ದಾರೆ.



ಘಟನೆ ನಡೆದ ವೇಳೆ ಎಬಿಸಿ ಕ್ಲಬ್ ಒಳಗಡೆ ಸೇರಿದ್ದ ಯುವಕರು ಹೊರಗೆ ಓಡಿ ಬಂದಿದ್ದು, ಸ್ಕೂಟರಿಂದ ಕೆಳಗಡೆ ಬಿದ್ದಿದ್ದ ಯುವತಿಯರನ್ನ ಮೇಲಕ್ಕೆತ್ತಿ ಉಪಚರಿಸಿದ್ದಾರೆ. ಘಟನೆಯ ವೀಡಿಯೋ ಸಿಸಿ ಕ್ಯಾಮೆರದಲ್ಲಿ ದಾಖಲಾಗಿದ್ದು, ವೈರಲ್ ಆಗಿದೆ.

- ಸ್ಕೂಟರನ್ನ ಎಬಿಸಿ ಕ್ಲಬ್ ಕಡೆಗೆ ನುಗ್ಗಿಸಿ,ಅಲ್ಲಿ ಪಾರ್ಕ್ ಮಾಡಲಾಗಿದ್ದ ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆಸಿ,ಕೆಳಗಡೆ ಬಿದ್ದಿದ್ದಾರೆ.
- ಘಟನೆಯಿಂದ ಎಬಿಸಿ ಕ್ಲಬ್‌ನ ಸದಸ್ಯರ ಎರಡು ದ್ವಿಚಕ್ರ ವಾಹನಗಳಿಗೆ ಹಾನಿ


ಉಳ್ಳಾಲ ಮೇಲಂಗಡಿಯ ಅಪ್ರಾಪ್ತ ಕಾಲೇಜು ಯುವತಿಯರು ಸ್ಕೂಟರಲ್ಲಿ ಸವಾರಿ ನಡೆಸಿರುವುದಾಗಿ ಮಾಹಿತಿ ಲಭಿಸಿದೆ. ಅದೃಷ್ಟವಶಾತ್ ಘಟನೆಯಿಂದ ಸ್ಕೂಟರ್‌ನಲ್ಲಿದ್ದ ಯುವತಿಯರಿಗಾಗಲಿ, ರಸ್ತೆಯಲ್ಲಿತೆರಳುತ್ತಿದ್ದಪಾದಚಾರಿಗಳಿಗಾಗಲಿ ಯಾವುದೇ ಅನಾಹುತ ಸಂಭವಿಸಿಲ್ಲ.

ಘಟನೆಯಿಂದ ಎಬಿಸಿ ಕ್ಲಬ್‌ನ ಸದಸ್ಯರ ಎರಡು ದ್ವಿಚಕ್ರ ವಾಹನಗಳಿಗೆ ಹಾನಿಯುಂಟಾಗಿದೆ. ಸಂಚಾರಿ ನಿಯಮಗಳನ್ನ ಗಾಳಿಗೆ ತೂರಿ ಹುಚ್ಚಾಟ ಮೆರೆಯುವ ಇಂತವರ ವಿರುದ್ಧ ಪರಿಶೀಲನೆ ನಡೆಸಿ ಪೊಲೀಸರು ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಕೇಳಿ ಬಂದಿದೆ.

ನಕ್ಷತ್ರ ಆಮೆ ಮಾರಾಟ ಯತ್ನ: ಕಾಸರಗೋಡಿನ ಇಬ್ಬರ ಬಂಧನ

ಮಡಿಕೇರಿ: ಅಪರೂಪದ ನಕ್ಷತ್ರ ಆಮೆಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪದ ಮೇರೆಗೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಬಂಧಿತರನ್ನು ಕೇರಳದ ಕಾಸರಗೋಡು ಜಿಲ್ಲೆಯ ಮಡಿಕೈ ಗುರುವನಂ ರಸ್ತೆ ನಿವಾಸಿ ಶ್ರೀಧರನ್ ಸಿ.ಕೆ. (70) ಹಾಗೂ ಕಾಸರಗೋಡು ಜಿ.ಕೆ.ನಗರದ ವಿಷ್ಣು ಆಚಾರ್ಯ (68) ಎಂದು ಗುರುತಿಸಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.



ಮಂಗಳವಾರ ಸಂಜೆ 6.30ರ ಸುಮಾರಿಗೆ ಮಡಿಕೇರಿ ನಗರದ ಕನ್ನಂಡ ಪಡುಬೀರ ವೃತ್ತದ ಬಳಿ ಇರುವ ಬಸ್ಸು ತಂಗುದಾಣದಲ್ಲಿ ಇಬ್ಬರು ವ್ಯಕ್ತಿಗಳು ನಕ್ಷತ್ರ ಆಮೆಯನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದಾರೆ ಎಂಬುದಾಗಿ ದೊರೆತ ಮಾಹಿತಿಯನ್ವಯ ಬೆಂಗಳೂರಿನ ಸಿಐಡಿ ಅರಣ್ಯ ಘಟಕದ ಪೊಲೀಸ್ ಉಪ ಮಹಾನಿರೀಕ್ಷಕಿ ಸಂಗೀತಾ ಜಿ. ಮತ್ತು ಮಡಿಕೇರಿ ಸಿಐಡಿ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಪವನ್ ನೆಟ್ಟೂರು ಅವರ ಮಾರ್ಗದರ್ಶನದಲ್ಲಿ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪೊಲೀಸ್ ಉಪನಿರೀಕ್ಷಕ ಶಿವಶಂಕರ್ ಹಾಗೂ ಸಿಬ್ಬಂದಿಗಳಾದ ಉಮೇಶ್ ಎನ್.ಕೆ., ಶನಂತ ಕೆ.ಪಿ, ದಿವ್ಯಶ್ರೀ ಹೆಚ್.ಎಸ್ ಮತ್ತು ಸ್ವಾಮಿ ಎಂ. ಅವರು ಪಾಲ್ಗೊಂಡು ಮಾಲು ಸಹಿತ ಆರೋಪಿಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಅರಣ್ಯ ಕಾಯ್ದೆ ಮತ್ತು ವನ್ಯಜೀವಿಗಳ ಸಂರಕ್ಷಣಾ ಕಾಯ್ದೆ ಸಂಬಂಧಪಟ್ಟ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಮಡಿಕೇರಿ ಸಿಐಡಿ ಅರಣ್ಯ ಘಟಕ ಪೊಲೀಸ್ ಅಧೀಕ್ಷಕರ ದೂರವಾಣಿ ಸಂಖ್ಯೆ 9480800220 ಅಥವಾ ಮಡಿಕೇರಿಯ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ದೂರವಾಣಿ ಸಂಖ್ಯೆ 8277949812 ನ್ನು ಸಂಪರ್ಕಿಸಿ ಮಾಹಿತಿ ನೀಡಬಹುದಾಗಿದೆ.

- ಇಬ್ಬರು ವ್ಯಕ್ತಿಗಳಿಂದ ನಕ್ಷತ್ರ ಆಮೆಗಳನ್ನು ಮಾರಾಟ ಮಾಡಲು ಯತ್ನ
- ಮಾಲು ಸಹಿತ ಆರೋಪಿಗಳನ್ನು ವಶಕ್ಕೆ ಪಡೆದ ಪೊಲೀಸರು

ಅಶ್ಲೀಲ ದೃಶ್ಯ ಕಳುಹಿಸಿದ ಆರೋಪ: ಎಸ್‌ಎಫ್‌ಐ ಮುಖಂಡ ವಿರುದ್ಧ ದೂರು

ಕಾಸರಗೋಡು: ಎಸ್‌ಎಫ್‌ಐ ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ತನ್ನ ಮೊಬೈಲ್ ಫೋನ್‌ಗೆ ನಿರಂತರ ಅಶ್ಲೀಲ ದೃಶ್ಯ, ಸಂದೇಶಗಳನ್ನು ಕಳುಹಿಸುತ್ತಿರುವುದಾಗಿ ಆರೋಪಿಸಿ ಯುವತಿಯೋರ್ವೆ ಸಿಪಿಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿಗೆ ದೂರು ನೀಡಿದ್ದಾರೆ.

ಎಸ್‌ಎಫ್‌ಐ ಏರಿಯಾ ಸಮಿತಿ ಸದಸ್ಯೆಯಾದ ಯುವತಿ ದೂರು ನೀಡಿದ್ದು, ಅದರಂತೆ ಪಕ್ಷವು ಆಂತರಿಕ ತನಿಖೆ ಆರಂಭಿಸಿದೆ. ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಕೆ.ಅನುರಾಗ್ ವಿರುದ್ಧ ಈ ಆರೋಪ ಮಾಡಲಾಗಿದೆ. ಆತ ಯುವತಿಯ ಫೋನ್‌ಗೆ ಹಲವು ಬಾರಿ ಅಶ್ಲೀಲ ದೃಶ್ಯಗಳು ಮತ್ತು ಸಂದೇಶಗಳನ್ನು ಕಳಹಿಸಿರುವುದಾಗಿ ಆರೋಪಿಸಲಾಗಿದೆ.



ಇಂತಹ ದೃಶ್ಯ ಮತ್ತು ಸಂದೇಶಗಳನ್ನು ತನಗೆ ಕಳುಹಿಸಬಾರದು ಎಂದು ಆರಂಭದಲ್ಲೇ ಆತನಿಗೆ ಯುವತಿಯು ತಿಳಿಸಿದ್ದರು. ಆದರೆ ನಂತರವೂ ಆತ ದೃಶ್ಯ, ಸಂದೇಶಗಳನ್ನು ಕಳುಹಿಸಿರುವುದಾಗಿ ಯುವತಿಯು ಪಕ್ಷಕ್ಕೆ ದೂರು ನೀಡಿದ್ದಾರೆ.

ಕಳೆದ ಎರಡು ತಿಂಗಳ ಹಿಂದೆಯೇ ದೂರು ಸಲ್ಲಿಸಲಾಗಿದೆ. ಮೊದಲು ಪಕ್ಷದ ಏರಿಯಾ ಸಮಿತಿಗೆ ದೂರು ನೀಡಿದ್ದು, ಏರಿಯಾ ಸಮಿತಿಯು ಮಾತುಕತೆ ಮೂಲಕ ಇತ್ಯರ್ಥಪಡಿಸಲು ಯತ್ನಿಸಿದೆ. ಆದರೆ ಕೆ.ಅನುರಾಗ್ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಯುವತಿಯು ಸಿಪಿಎಂನ ಜಿಲ್ಲಾ ಕಾರ್ಯದರ್ಶಿಗೆ ಲಿಖಿತ ದೂರು ನೀಡಿದ್ದಾರೆನ್ನಲಾಗಿದೆ. ಅದರಂತೆ ಸಮಗ್ರ ತನಿಖೆ ನಡೆಯುತ್ತಿದ್ದು, ಶೀಘ್ರ ಕ್ರಮ ಕೈಗೊಳ್ಳುವ ಸೂಚನೆಗಳಿವೆ.

ಮೂಡುಬಿದಿರೆ: ತಲೆಭಾಗ ಜಜ್ಜಿದ ಸ್ಥಿತಿಯಲ್ಲಿ ದನದ ಮೃತದೇಹ ಪತ್ತೆ

ಮೂಡುಬಿದಿರೆ: ಪುರಸಭಾ ವ್ಯಾಪ್ತಿಯ ವಿಶಾಲ ನಗರದಲ್ಲಿ ಭೀಕರ ಸ್ಥಿತಿಯಲ್ಲಿ ದನದ ಕಳೇಬರ ಪತ್ತೆಯಾಗಿರುವ ಘಟನೆ ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಪತ್ತೆಯಾದ ದನದ ತಲೆಯ ಭಾಗ ಸಂಪೂರ್ಣ ಜಜ್ಜಿದ ಸ್ಥಿತಿಯಲ್ಲಿದ್ದು, ದೇಹದ ಹಲವು ಭಾಗಗಳಲ್ಲಿ ಗಾಯಗಳ ಗುರುತುಗಳು ಕಂಡುಬಂದಿವೆ. ದನ ಯಾವ ಕಾರಣದಿಂದ ಸಾವಿಗೀಡಾಗಿದೆ ಎಂಬುದು ಇನ್ನೂ ನಿಗೂಢವಾಗಿದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಮೂಡುಬಿದಿರೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಪುರಸಭೆಯ ಸಿಬ್ಬಂದಿಗಳ ಸಹಕಾರದೊಂದಿಗೆ ದನದ ಕಳೇಬರವನ್ನು ತೆರವುಗೊಳಿಸಿ ಮಣ್ಣುಮಾಡಲಾಯಿತು.


ದನದ ಸಾವಿಗೆ ನಿಖರ ಕಾರಣವೇನು ಎಂಬುದು ತನಿಖೆಯ ಬಳಿಕವೇ ಸ್ಪಷ್ಟವಾಗಬೇಕಿದೆ. ಸ್ಥಳೀಯರು ಘಟನೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದು, ಅಧಿಕಾರಿಗಳು ಸೂಕ್ತ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.



ಈಗ ಮತ್ತೆ ಮುನ್ನೆಲೆಗೆ ಬಂದ ಎತ್ತಿನ ಹೊಳೆ ಯೋಜನೆ | ವಾರ್ಷಿಕ 24 ಟಿಎಂಸಿ ನೀರು ಲಭ್ಯ ಎಂದ ಸರ್ಕಾರ | 9.55 ಟಿಎಂಸಿ ಮಾತ್ರ ಎಂದ ವಿಜ್ಞಾನ ಸಂಸ್ಥೆ


ಕರಾವಳಿಯ ಪರಿಸರ ವ್ಯವಸ್ಥೆಗೆ ಆತಂಕ ತಂದಿಟ್ಟಿದೆ ಅಧ್ಯಯನ ಭಿನ್ನಾಭಿಪ್ರಾಯ!

ಮಂಗಳೂರು: ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ನೀರುಣಿಸುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಎತ್ತಿನ ಹೊಳೆ ಯೋಜನೆ ಬಗ್ಗೆ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು. ಕರಾವಳಿಯ ಪರಿಸರ ವ್ಯವಸ್ಥೆ ರಕ್ಷಿಸಲು ಖಚಿತವಾದ ಕ್ರಮ ಕೈಗೊಳ್ಳಬೇಕು ಎಂದು ಆಮ್ ಆದ್ಮಿ ಪಾರ್ಟಿ ಒತ್ತಾಯಿಸಿದೆ.



ಉಡುಪಿಯ ವಾರಾಹಿ ನೀರಾವರಿ ಯೋಜನೆ, ಎಡದಂಡೆ ಕಾಲುವೆ ಅಕ್ವೆಡಕ್ಟ್ ಯೋಜನೆಗೆ ಈಗಾಗಲೇ ಸಾವಿರಾರು ಕೋಟಿ ರೂ. ಖರ್ಚು ಮಾಡಿ ಇಷ್ಟು ವರ್ಷ ಕಳೆದರೂ ಯೋಜನೆಗಳು ಅಪೂರ್ಣವಾಗಿಯೇ ಉಳಿದಿವೆ. ಅದರಂತೆ ಎತ್ತಿನಹೊಳೆ ಯೋಜನೆ ಪೂರ್ಣಗೊಳ್ಳಲು ಇನ್ನೂ 15 ವರ್ಷಗಳು ಬೇಕಾಗಬಹುದು ಎಂದು ಆಪ್ ರಾಜ್ಯ ಉಪಾಧ್ಯಕ್ಷ ವಿವೇಕಾನಂದ ಸಾಲಿನ್ಸ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಆಪಾದಿಸಿದರು.

2012ರಲ್ಲಿ ಆರಂಭಗೊಂಡ ಎತ್ತಿನಹೊಳೆ ಯೋಜನೆಗೆ 9000 ಕೋಟಿ ರೂ. ಬಜೆಟ್ ನಿಗದಿಪಡಿಸಲಾಗಿತ್ತು. ಬಳಿಕ ಅದು 13,000 ಕೋಟಿ ರೂ.ಗಳಿಗೆ ಏರಿಕೆಯಾಗಿ ಇದೀಗ ಯೋಜನೆ ಅಂತಿಮ ವೆಚ್ಚ 23000 ಕೋಟಿ ರೂ.ಗೆ ತಲುಪುವ ನಿರೀಕ್ಷೆ ಇದೆ. ಈಗಾಗೇ 16,000 ಕೋಟಿ ರೂ. ಖರ್ಚು ಮಾಡಲಾಗಿದೆ. ಆದರೆ ಇನ್ನೂ ಪ್ರಥಮ ಹಂತದ ಯೋಜನೆಯೇ ಪೂರ್ಣಗೊಂಡಿಲ್ಲ. ಜನರ ತೆರಿಗೆ ಹಣ ದುರ್ಬಳಕೆಯಾಗುತ್ತಿದೆ ಎಂದು ಆರೋಪಿಸಿದರು.



ಯೋಜನೆಯು ಬೆಂಗಳೂರು ಗ್ರಾಮಾಂತರ ಸೇರಿದಂತೆ ಏಳು ಜಿಲ್ಲೆಗಳಿಗೆ ನೀರನ್ನು ಒದಗಿಸಲಿದ್ದು, ವಾರ್ಷಿಕ 24 ಟಿಎಂಸಿ ನೀರು ಲಭ್ಯವಾಗಲಿದೆ ಎಂದು ಸರಕಾರ ಪ್ರತಿಪಾದಿಸಿದೆ. ಆದರೆ ಭಾರತೀಯ ವಿಜ್ಞಾನ ಸಂಸ್ಥೆ ನಡೆಸಿದ ಅಧ್ಯಯನ ಪ್ರಕಾರ ಲಭ್ಯವಾಗುವ ನಿರೀನ ಪ್ರಮಾಣ 9.55 ಟಿಎಂಸಿ ಮಾತ್ರ ಎಂದು ಹೇಳಲಾಗಿದೆ. ಈ ಭಿನ್ನಾಭಿಪ್ರಾಯವು ಪರಿಸರ ಮತ್ತು ನಿರ್ವಹಣೆ ದೃಷ್ಟಿಯಿಂದ ಆತಂಕ ಸೃಷ್ಟಿಸಿದೆ. ದ.ಕ. ಜಿಲ್ಲೆಯ ಜೀವನದಿ ನೇತ್ರಾವತಿ ನದಿ ಪಾತ್ರದ ಮೇಲೆ ಪ್ರಭಾವ ಬೀರುವ ಕಳವಳ ವ್ಯಕ್ತವಾಗಿದೆ. ಇದು ಈ ಭಾಗದ ಶ್ರೀಮಂತ ಜೀವವೈವಿಧ್ಯಕ್ಕೆ ಹಾನಿ ಉಂಟು ಮಾಡಬಹುದು ಎಂದು ಹೇಳಲಾಗಿದೆ. ಮಂಗಳೂರು ನಗರವು ಕುಡಿಯುವ ನೀರಿಗೆ ತುಂಬೆ ಅಣೆಕಟ್ಟನ್ನು ಆಶ್ರಯಿಸಿದೆ. ಆದರೆ ಮೇಲ್ಭಾಗದಲ್ಲಿ ನೀರನ್ನು ಪಂಪ್ ಮಾಡುವುದರಿಂದ ಅಣೆಕಟ್ಟಿಗೆ ಹರಿದು ಬರುವ ನೀರಿನಲ್ಲಿ ಕೊರತೆಯಾಗಿ ಬೇಸಿಗೆಯಲ್ಲಿ ನೇತ್ರಾವತಿ ನದಿ ಒಣಗಿ ಹೋಗುವ ಭೀತಿ ಇದೆ. ಹಾಗಾಗಿ ಈ ಬಗ್ಗೆ ವೈಜ್ಞಾನಿಕ ಅಧ್ಯಯನದ ಅಗತ್ಯವಿದೆ ಎಂದು ಅವರು ಹೇಳಿದರು.

ಆಪ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಸ್.ಎಲ್. ಪಿಂಟೊ, ಮಹಿಳಾ ಘಟಕ ಅಧ್ಯಕ್ಷೆ ಸೀಮಾ ಮಡಿವಾಳ, ಜಿಲ್ಲಾ ಕಾರ್ಯದರ್ಶಿಗಳಾದ ವಾಸುದೇವ್, ಕಬೀರ್ ಕಾಟಿಪಳ್ಳ, ಪ್ರಮುಖರಾದ ಶಾಲೆಟ್ ಪಿಂಟೊ, ಲೆಸ್ಲಿ ಫೆರ್ನಾಂಡಿಸ್ ಉಪಸ್ಥಿತರಿದ್ದರು.

- ಈಗಾಗಲೇ ಸಾವಿರಾರು ಕೋಟಿ ರೂ. ಖರ್ಚು ಮಾಡಿ 40 ವರ್ಷ ಕಳೆದರೂ ಯೋಜನೆಗಳು ಅಪೂರ್ಣವಾಗಿಯೇ ಉಳಿದಿವೆ.
- ಎತ್ತಿನಹೊಳೆ ಯೋಜನೆ ಪೂರ್ಣಗೊಳ್ಳಲು ಇನ್ನೂ 15 ವರ್ಷಗಳು ಬೇಕಾಗಬಹುದು
- 2012ರಲ್ಲಿ ಆರಂಭಗೊಂಡ ಎತ್ತಿನಹೊಳೆ ಯೋಜನೆಗೆ 9000 ಕೋ. ರೂ. ಬಜೆಟ್ ನಿಗದಿಪಡಿಸಲಾಗಿತ್ತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 30° 26° | ಉಡುಪಿ 31° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 18, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2
ಸಂಚಾರಕ್ಕೆ ಅಡ್ಡಿಯಾದ ರಸ್ತೆ ಹೊಂಡಕ್ಕೆ ಸುರಿದ ದೊಡ್ಡ ಗಾತ್ರದ ಜಲ್ಲಿಕಲ್ಲು



ಪುಟ 3
ಸಿಸಿ ಟಿವಿ ಕಣ್ಗಾವಲಿನಿಂದ ತಪ್ಪಿಸಿಕೊಂಡಿದೆ ಆಲಂಕಾರು ಪೇಟೆ!

ಈಗ ಕುಳಾಯಿ ಮೀನುಗಾರಿಕಾ ಬಂದರು ಯೋಜನೆಯ ಕಿರು ಜೆಟ್ಟಿ ಕಾಮಗಾರಿಗೆ ಸಿಕ್ಕಿದೆ ಮತ್ತಷ್ಟು ವೇಗ





ಮಂಗಳೂರು ನಗರದ ಹೊರವಲಯ ಕುಳಾಯಿ ಮೀನುಗಾರಿಕಾ ಬಂದರು ಯೋಜನೆಯ ಕಿರು ಜೆಟ್ಟಿ ಕಾಮಗಾರಿಯು ನಡೆಯುತ್ತಿದ್ದು, ಬ್ರೇಕ್ ವಾಟರ್ ವಾಕ್ ವೇಗೆ ಕೊನೆಯ ಹಂತದ ಕಾಂಕ್ರಿಟ್ ಕಾರ್ಯ ಬಿರುಸಿನಿಂದ ನಡೆಯುತ್ತಿದೆ. ಈ ಕಾಮಗಾರಿ ವಿವಾದ, ತಾಂತ್ರಿಕ ಪರಿಶೀಲನೆಗಳಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ತಾಂತ್ರಿಕ ಸಮಿತಿಗಳ ವರದಿಯ ಬಳಿಕ ಕಾಮಗಾರಿ ಮರುಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲಿ ಮುಂದುವರಿಯಲಿದೆ ಮಳೆ ಬಿಸಿಲ ವಾತಾವರಣ

ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಜಿಲ್ಲೆಗಳಲ್ಲಿ ಮಳೆ ಸಂಪೂರ್ಣ ಇಳಿಮುಖವಾಗಿದ್ದು, ಮುಂದಿನ ಕೆಲವು ದಿನಗಳ ಕಾಲ ಮಳೆ ಚುರುಕಾಗುವ ಯಾವುದೇ ಲಕ್ಷಣಗಳಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ. ಈ ನಡುವೆ ಕರಾವಳಿ ಭಾಗದಲ್ಲಿ ತಾಪಮಾನ ಕೂಡಾ ಏರಿಕೆಯಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುಧವಾರ ಗರಿಷ್ಠ 32 ಡಿಗ್ರಿ ಸೆಲ್ಸಿಯಸ್, ಉಡುಪಿ ಜಿಲ್ಲೆಯಲ್ಲಿ ಗರಿಷ್ಠ 33 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಸುಳ್ಯ ಪರಿಸರದಲಿ ಈಗ ಮತ್ತೆ ಮುಂದುವರಿದಿದೆ ಕಾಡಾನೆಗಳ ಹಾವಳಿ

ಮಂಗಳೂರು: ಸುಳ್ಯ ತಾಲೂಕಿನ ಅಡ್ಕಬಳೆಯ ಬೊಳ್ಕಾಜೆ ಪರಿಸರದಲ್ಲಿ ಕಾಡಾನೆಗಳ ಹಾವಳಿ ಕಂಡುಬಂದಿದ್ದು, ಇಲ್ಲಿನ ಕೃಷಿ ಭೂಮಿಗೆ ಲಗ್ಗೆಯಿಟ್ಟಿರುವ ಆನೆಗಳ ಹಿಂಡು ಅಪಾರ ಪ್ರಮಾಣದಲ್ಲಿ ಕೃಷಿ ಬೆಳೆಗಳಿಗೆ ಹಾನಿ ಉಂಟುಮಾಡಿದೆ. ಇಲ್ಲಿನ ಆರಂತೋಡು, ಸಂಪಾಜೆ ಭಾಗಗಳಲ್ಲಿ ಕಳೆದ ಹಲವು ದಿನಗಳಿಂದ ಅಡ್ಡಾಡುತ್ತಿರುವ ಆನೆಗಳು ಕೃಷಿ ಭೂಮಿಯಲ್ಲಿ ದಾಂಧಲೆ ನಡೆಸಿ ಮತ್ತೆ ಕಾಡಿನತ್ತ ಹೆಜ್ಜೆಹಾಕುತ್ತಿವೆ.

ಮೀಟರ್ ಬದಲಾವಣೆ ಕಾಮಗಾರಿ : ನೀರು ಸರಬರಾಜಿನಲ್ಲಿ ವ್ಯತ್ಯಯ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯ ಬಜೆ ಕುಡಿಯುವ ನೀರು ಸ್ಥಾವರದ ಆರ್.ಆರ್. ನಂಬರ್ 6 ರ ಕ್ಯುಬಿಕಲ್ ಮೀಟರ್ ಬದಲಾವಣೆ ಕಾಮಗಾರಿ ನಿರ್ವಹಿಸಲಿರುವ ಹಿನ್ನೆಲೆ, ಜೂನ್ 19 ರಂದು ಉಡುಪಿ ನಗರಸಭೆಯ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸುವಂತೆ ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ನಾಗರಿಕರಲ್ಲಿ ಮನವಿ ಮಾಡಿದೆ.

ಮರೆಯಾದ ಮಳೆ: ಮತ್ತೆ ಕ್ಷೀಣಿಸಿದೆ ಜೀವನದಿಗಳ ಮಡಿಲಿನ ನೀರಿನ ಹರಿವು

ಮಂಗಳೂರು: ಕರಾವಳಿ ಹಾಗೂ ಪಶ್ಚಿಮ ಘಟ್ಟ ಭಾಗದಲ್ಲಿ ಮಳೆ ಇಳಿಮುಖವಾಗಿರುವ ಹಿನ್ನೆಲೆಯಲ್ಲಿ ಜೀವನದಿಗಳಲ್ಲಿನ ನೀರಿನ ಹರಿವು ಕೂಡಾ ಇಳಿಮುಖವಾಗಿದೆ. ಕೆಲವು ದಿನಗಳ ಹಿಂದೆ ಇದ್ದ ಚಿತ್ರಣ ಈಗ ಸಂಪೂರ್ಣವಾಗಿ ಬದಲಾಗಿದೆ.

ಕರಾವಳಿ ಜಿಲ್ಲೆಯಲ್ಲಿ ಕಾಣದಾದ ಮುಂಗಾರು

ಬೆವರಿಳಿಸಿದೆ ಬಿಸಿಲು!

ಕೃಷಿ ಭೂಮಿಗಳಲ್ಲಿ ಮಳೆ ನಿರೀಕ್ಷೆ ಪರೀಕ್ಷೆ

ಮಂಗಳೂರು: ಸಾಮಾನ್ಯವಾಗಿ ಜೂನ್ ತಿಂಗಳು ಕರಾವಳಿಯಲ್ಲಿ ಧಾರಾಕಾರ ಮಳೆ, ಮೋಡ ಕವಿದ ವಾತಾವರಣ ಮತ್ತು ಕೃಷಿ ಚಟುವಟಿಕೆಗಳ ಗರಿಗೆದರಿದ ಸಮಯ. ಆದರೆ ಈ ಬಾರಿಯ ಚಿತ್ರಣ ಸಂಪೂರ್ಣ ಭಿನ್ನವಾಗಿದೆ!

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಭಾಗಗಳಲ್ಲಿ ಮುಂಗಾರು ಮಳೆ ಏಕಾಏಕಿ ಕುಂಠಿತ ಗೊಂಡಿದ್ದು, ಬುಧವಾರ ಬೆಳಗ್ಗೆಯಿಂದಲೇ ತೀವ್ರ ಬಿಸಿಲು ಆವರಿಸಿ ಕೃಷಿ ಭೂಮಿಗಳಲ್ಲಿ ಆತಂಕ ಹುಟ್ಟಿಸಿದೆ. ಮಳೆಗಾಲದ ದಿನಗಳಲ್ಲೇ ಬೇಸಿಗೆಯ ವಾತಾವರಣ ಕಂಡುಬಂದಿರುವುದು ಜನರನ್ನು ಕೂಡಾ ಆಚ್ಚರಿಗೆ ದೂಡಿದೆ.

ಮಳೆ ಪ್ರಮಾಣದಲ್ಲಿ ಸತತ ಇಳಿಕೆ

ಕಳೆದ ಕೆಲವು ದಿನಗಳಿಂದ ಮಳೆ ಪ್ರಮಾಣ ಗಣನೀಯ ಕುಸಿದಿದ್ದು, ಮೋಡ ಕವಿದ ವಾತಾವರಣವೂ ಕಡಿಮೆಯಾಗಿದೆ. ಪರಿಣಾಮ ತಾಪಮಾನದಲ್ಲಿ ಏರಿಕೆ ಕಂಡುಬಂದಿದ್ದು, ಮಧ್ಯಾಹ್ನ ವೇಳೆಗೆ ಬಿಸಿಲಿನ ತೀವ್ರತೆ ಹೆಚ್ಚಳವಾಗುತ್ತಿದೆ. ಸಾಮಾನ್ಯವಾಗಿ ಎಲ್ಲೆಡೆ ಈ ಅವಧಿಯಲ್ಲಿ ಮಳೆಯ ನೀರಿನಿಂದ ತುಂಬಿರಬೇಕಾದ ಗದ್ದೆಗಳು ಅಲ್ಲಲ್ಲಿ ಒಣಗಿಕೊಂಡು ನಿಂತ ದೃಶ್ಯಗಳು ಆತಂಕ ಉಂಟುಮಾಡುತ್ತಿವೆ.



ಆಗಸ ದಿಟ್ಟಿಸುತ್ತಾ ಮಳೆಯತ್ತ ಅನ್ನದಾತರ ಚಿತ್ತ

ಪ್ರತಿ ವರ್ಷ ಜೂನ್ ಎರಡನೇ ವಾರಕ್ಕೆ ಕರಾವಳಿ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತವೆ. ಆದರೆ ಈ ಬಾರಿ ಅನ್ನದಾತರು ಕೃಷಿ ಕೆಲಸಕ್ಕಿಂತ ಹೆಚ್ಚಾಗಿ ಆಕಾಶದತ್ತ ದೃಷ್ಟಿ ನೆಟ್ಟಿದ್ದಾರೆ. ಮಳೆ ಸುರಿದರೆ ಮಾತ್ರ ಮುಂದಿನ ಕೃಷಿ ಕಾರ್ಯಗಳಿಗೆ ಚಾಲನೆ ನೀಡಲು ಸಾಧ್ಯವಾಗುವ ಸ್ಥಿತಿ ಈಗ ಈ ಭಾಗದಲ್ಲಿ ಇದೆ.

ಎಲ್ಲೆಲ್ಲೂ ಹವಾಮಾನ ಏರುಪೇರಿನದ್ದೇ ಚರ್ಚೆ

ಮುಂಗಾರು ಕಾಲದಲ್ಲೇ ಬಿಸಿಲಿನ ವಾತಾವರಣ ಕಂಡುಬರುತ್ತಿರುವುದು ಹವಾಮಾನ ವೈಪರೀತ್ಯದ ಕುರಿತು ಎಲ್ಲೆಡೆ ಹೊಸ ಚರ್ಚೆಗೆ ಕಾರಣವಾಗಿದೆ. ಕೆಲವೇ ದಿನಗಳ ಹಿಂದೆ ಧಾರಾಕಾರ ಮಳೆಯಾಗಿದ್ದ ಪ್ರದೇಶಗಳಲ್ಲೇ ಈಗ ಒಣ ವಾತಾವರಣ ಆವರಿಸಿದೆ. ಹವಾಮಾನದ ಈ ಅನಿರೀಕ್ಷಿತ ಬದಲಾವಣೆ ಕೃಷಿ ಕ್ಷೇತ್ರದ ಮೇಲೆ ನೇರ ಪರಿಣಾಮ ಬೀರುತ್ತಿದೆ. ಮಳೆಯನ್ನೇ ನಂಬಿಕೊಂಡು ವಿಶೇಷವಾಗಿ ಭತ್ತದ ಕೃಷಿಯನ್ನು ಅವಲಂಬಿಸಿರುವ ಕರಾವಳಿ ಜಿಲ್ಲೆಯಲ್ಲಿನ ಸಾವಿರಾರು ರೈತರು ಈಗ ಮಳೆಯ ನಿರೀಕ್ಷೆಯಲ್ಲಿದ್ದಾರೆ.

ಟವರ್ ಇದ್ದರೂ ನೆಟ್‌ವರ್ಕ್ ಇಲ್ಲ

ಪೂಮ್ಮಾಜೆ ಪಣಕಜೆ ನಾಟ್ ರೀಚೇಬಲ್!

ಗ್ರಾಹಕರ ಸಂಕಷ್ಟಕ್ಕೆ ಧ್ವನಿಯೇ ಇಲ್ಲ

ಬೆಳ್ತಂಗಡಿ: ದಿನದಿಂದ ದಿನಕ್ಕೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಊರು ತಾಲೂಕಿನ ಸೋಣಂದೂರು ಗ್ರಾಮದ ಪೂಮ್ಮಾಜೆ. ಆದರೆ ಇಲ್ಲಿನ ನಾಗರಿಕರ ಹೆಚ್ಚಿನ ಸಮಸ್ಯೆ ಎಂದರೆ ಮೊಬೈಲ್ ನೆಟ್ವರ್ಕ್ ಸಿಗದಿರುವುದು.

ಪಣಕಜೆಯಲ್ಲಿ ಮೂರೂ ಟವರ್‌ಗಳಿವೆ. ಆದರೂ ಸಿಗ್ನಲ್ ಸಮಸ್ಯೆ. ಉದ್ಯೋಗಿಗಳಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಈ ನೆಟ್ವರ್ಕ್ ಸಮಸ್ಯೆಯಿಂದ ಆಗುವ ತೊಂದರೆ ಅಷ್ಟಿಷ್ಟಲ್ಲ. ಆನ್ಲೈನ್‌ನಲ್ಲಿ ಆರ್ಡರ್ ಮಾಡಿದ ವಸ್ತು ಡೆಲಿವರಿ ಬಾಯ್ ತಗೊಂಡು ಬಂದು ಆರ್ಡರ್ ಮಾಡಿದವರಿಗೆ ತಲುಪಿಸೋಣ ಅಂದ್ರೆ ಮನೆಯ ಮುಂಭಾಗಕ್ಕೆ ಬಂದರೂ ನೆಟ್ವರ್ಕ್ ಇಲ್ಲದ ಸ್ಥಿತಿ ಇಲ್ಲಿದೆ.

ಇನ್ನು ಸಂಬಂಧಪಟ್ಟ ಕಂಪನಿಯ ಅಧಿಕಾರಿಗಳಿಗೆ ದೂರು ಕೊಟ್ಟರೂ ಏನೂ ಪ್ರಯೋಜನವಾಗಿಲ್ಲ. ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ ಆಗಿದೆ ಇಲ್ಲಿನ ಟವರ್ ವ್ಯವಸ್ಥೆ. ಆದ್ದರಿಂದ ಸಂಬಂಧಪಟ್ಟವರು ಪೋಮ್ಮಾಜೆ ಆಸುಪಾಸಿನ ನಾಗರಿಕರಿಗೆ ಆಗುವ ಈ ತೊಂದರೆಯನ್ನು ಆದಷ್ಟು ಬೇಗನೆ ನಿವಾರಿಸಬೇಕಾಗಿದೆ.



ಟವರ್ ಕೆಳಗೆ ನಿಂತರೂ ಇಲ್ಲ ಮೊಬೈಲ್ ನೆಟ್ವರ್ಕ್

ಪೂಮ್ಮಾಜೆ- ಪಣಕಜೆ ಭಾಗದಲ್ಲಿ ಏರ್‌ಟೆಲ್ ಹಾಗೂ ಬಿಎಸ್‌ಎನ್ ಎಲ್ ಮೂರು ಟವರ್ ಗಳಿದ್ದರೂ ಜನತೆಗೆ ಯಾವ ಪ್ರಯೋಜನಕ್ಕೂ ಇಲ್ಲದಂತಾಗಿದೆ. ಗ್ರಾಹಕರು ಈ ಟವರ್‌ಗಳ ಅಡಿಯಲ್ಲಿ ನಿಂತರೂ ನೆಟ್ವರ್ಕ್ ಸಿಗದಿರುವುದು ವಿಶ್ವದ ವಿಚಿತ್ರ ಸಂಗತಿಗಳಲ್ಲಿ ಒಂದು.

ಹಾರಾಡಿ-ಬೊಳುವಾರು ಚತುಷ್ಪಥ ಕಾಮಗಾರಿ | ವಾಹನ ಚಾಲಕರಿಗೆ ಕಿರಿಕಿರಿ

ಅಲ್ಲಿ ಇಲ್ಲಿ ಎಲ್ಲೆಲ್ಲೂ ನಿತ್ಯ ಟ್ರಾಫಿಕ್ ಜಾಂ ಸಮಸ್ಯೆ

ಪುತ್ತೂರು: ಉಪ್ಪಿನಂಗಡಿ ಭಾಗದಿಂದ ಪುತ್ತೂರು ನಗರವನ್ನು ಸಂಪರ್ಕಿಸುವ ರಸ್ತೆಯ ಹಾರಾಡಿಯಿಂದ ಬೊಳುವಾರು ತನಕ ಚತುಷ್ಪಥ ಕಾಮಗಾರಿ ತಿಂಗಳ ಹಿಂದೆ ಆರಂಭಗೊಂಡಿದ್ದು, ದಿನಂಪ್ರತಿ ಸಂಚರಿಸುವ ಸಾವಿರಾರು ವಾಹನಗಳಿಗೆ ಸಂಚಾರ ಸಂಕಟ ನಿತ್ಯ ಎನ್ನುವಂತಾಗಿದೆ.

ತ್ವರಿತ ಕಾಮಗರಿಗೆ ಸೂಚಿಸಿದ್ದರು

ಆರಂಭದಲ್ಲಿ ಈ ರಸ್ತೆ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿತ್ತು. ಬಳಿಕ ಲೋಕೋಪಯೋಗಿ ಇಲಾಖೆ, ಗುತ್ತಿಗೆ ದಾರರಿಗೆ ಶಾಸಕರು ತ್ವರಿತ ಕಾಮಗಾರಿ ನಡೆಸುವಂತೆ ಸೂಚನೆ ನೀಡಿದ್ದರು. ಆ ನಂತರದಲ್ಲಿ ಒಂದು ಭಾಗ ಕಾಮಗಾರಿ ನಡೆಸುತ್ತಲೇ ಇನ್ನೊಂದು ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ. ಪರಿಣಾಮ ಹಾರಾಡಿಯಿಂದ ಬೊಳುವಾರು ತನಕ ನಿತ್ಯ ಟ್ರಾಫಿಕ್ ಜಾಂ ಉಂಟಾಗುತ್ತಿದೆ. ಈಗ ಜೂ.18 ರಿಂದ ಹಾರಾಡಿ ರೈಲ್ವೆ ಸೇತುವೆಯ ಕೆಳಗಡೆಯೂ ಕಾಮಗಾರಿ ಆರಂಭಿಸುತ್ತಿರುವ ಹಿನ್ನೆಲೆಯಲ್ಲಿ ಬದಲಿ ರಸ್ತೆಗಳನ್ನು ಸೂಚಿಸಲಾಗಿದೆ.

ಆದರೆ ಈ ರಸ್ತೆ ಅಗಲ ಕಿರಿದಾಗಿದ್ದು, ಬದಲಿ ರಸ್ತೆಗಳಲ್ಲೂ ವಾಹನ ಚಾಲಕರು ನಿತ್ಯವೂ ಪರದಾಡುವುದು ತಿಂಗಳ ಕಾಲ ಅನಿವಾರ್ಯವಾಗಲಿದೆ. »ಪುಟ 6



ಕಾಮಗಾರಿಗೆ ಇನ್ನಷ್ಟು ವೇಗ

ಕಾಂಕ್ರೀಟ್ ಕಾಮಗಾರಿ ನಡೆದ ಬಳಿಕ ಕ್ಯೂರಿಂಗ್ ಅವಧಿಯೇ 20 ದಿನಗಳು ನೀಡಬೇಕಾಗುತ್ತದೆ. ರೈಲ್ವೆ ಸೇತುವೆಯ ಬಳಿ ಒಂದು ಪಥ ಕಾಮಗಾರಿ ಮುಗಿಸುತ್ತೇವೆ. ರೈಲ್ವೆ ಇಲಾಖೆ ಸೇತುವೆಯ ಕಾಮಗಾರಿ ಆದ ಬಳಿಕ ಚತುಷ್ಪಥ ಮಾಡುತ್ತೇವೆ. ಉಳಿದಂತೆ ಬೊಳುವಾರು ಭಾಗದಲ್ಲಿ ವೇಗವಾಗಿ ಕಾಮಗಾರಿ ನಡೆಸಲಾಗುತ್ತಿದೆ.

● ರಾಜೇಶ್ ರೈ, ಕಾರ್ಯನಿರ್ವಾಹಕ ಇಂಜಿನಿಯರ್, ಪಿಡಬ್ಲ್ಯೂಡಿ

ಗಾಳಿ ಮಳೆಗೆ ಬಂಟ್ವಾಳದಲ್ಲಿ ಮನೆಯ ಗೋಡೆ ಕುಸಿತ



ಮಂಗಳವಾರ ರಾತ್ರಿ ಬಂಟ್ವಾಳ ತಾಲೂಕಿನ ಮೂಡನಡಗೋಡು ಗ್ರಾಮದ ನೆಲ್ಲಿಗುಡ್ಡೆ ಎಂಬಲ್ಲಿ ಸುರಿದ ಗಾಳಿ ಮಳೆಗೆ ನೀಲಮ್ಮ ಸೀನಪ್ಪ ಪೂಜಾರಿ ಎಂಬವರ ಮನೆಯ ಹಿಂಭಾಗದ ಗೋಡೆ ಕುಸಿದು ಬಿದ್ದು ಹಾನಿ ಉಂಟಾಗಿದೆ. ಪುಣಚ ಗ್ರಾಮದ ಕೃಷ್ಣಮೂಲೆ ನಿವಾಸಿ ಬಿ. ಜಗನ್ನಾಥ ಎಂಬವರ ಮನೆಗೂ ಅಲ್ಪ ಪ್ರಮಾಣದಲ್ಲಿ ಹಾನಿಯಾಗಿದೆ.

ರಸ್ತೆ ನಿಯಮ ಉಲ್ಲಂಘಿಸುವವರಿಗೆ ಶಾಕ್ | ಜಾಗೃತಿ ಕಾರ್ಯಕ್ಕೆ ಚಿತ್ರಗುಪ್ತನೂ ಸಾಥ್

ಮಂಗಳೂರಿನ ರಸ್ತೆಗಳಲ್ಲಿ ದಿಢೀರ್ ಯಮರಾಜ ಪ್ರತ್ಯಕ್ಷ!

ಮಂಗಳೂರು: ಹೆಲ್ಮೆಟ್ ಧರಿಸಿಕೊಳ್ಳದೆ ಬೈಕ್, ಸ್ಕೂಟರ್ ಚಲಾಯಿಸುವುದು, ಸೀಟ್ ಬೆಲ್ಟ್ ಧರಿಸದೆ ಕಾರು ಚಲಾಯಿಸುವುದ, ಸಿಗ್ನಲ್ ಪದೇ ಪದೇ ಉಲ್ಲಂಘಿಸುವವರಿಗೆ ನಗರ ಪೊಲೀಸರು ಈ ಬಾರಿ ವಿಭಿನ್ನ ರೀತಿಯಲ್ಲಿ 'ಎಚ್ಚರಿಕೆ'ಯ ಸಂದೇಶ ನೀಡಿದ್ದಾರೆ!

ರಸ್ತೆಗಿಳಿದ ಪೌರಾಣಿಕ ಪಾತ್ರಗಳು...

ಈ ಬಾರಿ ಜಾಗೃತಿ ಕಾರ್ಯಕ್ರಮಕ್ಕೆ ಪುರಾಣ ಪಾತ್ರಗಳಾದ ಯಮಧರ್ಮ, ಚಿತ್ರ ಗುಪ್ತರನ್ನು ಬಳಸಿಕೊಂಡಿರುವ ಪೊಲೀಸ್ ಇಲಾಖೆ ಈ ಮೂಲಕ ಸಿದ್ಧಪಡಿಸಿದ ವಿಡಿಯೊ ಇದೀಗ ಜಾಲತಾಣಗಳಲ್ಲಿ ಗಮನ ಸೆಳೆಯುತ್ತಿದೆ.

ವಿಡಿಯೊದಲ್ಲಿ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರನ್ನು ಯಮಧರ್ಮ ಅಡ್ಡಗಟ್ಟಿ ಪ್ರಶ್ನಿಸುವ ದೃಶ್ಯಗಳ ಮೂಲಕ ರಸ್ತೆ ಸುರಕ್ಷತೆಯ ಮಹತ್ವವನ್ನು ಮನದಟ್ಟು ಮಾಡುವ ಪ್ರಯತ್ನ ಮಾಡಲಾಗಿದೆ. ಹೆಲ್ಮೆಟ್ ಧರಿಸದಿರುವುದು, ಸೀಟ್ ಬೆಲ್ಟ್ ಬಳಸದೇ ಇರುವುದು, ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ, ಅತಿವೇಗದ ಚಾಲನೆ ಮತ್ತು ಸಿಗ್ನಲ್ ಜಂಪ್‌ನಂತಹ ತಪ್ಪುಗಳು ಕೆಲವೇ ಕ್ಷಣಗಳಲ್ಲಿ ಜೀವ ಕಸಿದುಕೊಳ್ಳಬಹುದು ಎಂಬ ಸಂದೇಶವನ್ನು ವಿಡಿಯೋದಲ್ಲಿ ನೀಡಲಾಗಿದೆ. ಜೊತೆಗೆ, ನಗರದಲ್ಲಿ ಅಳವಡಿಸಿರುವ ಎಐ ಕ್ಯಾಮೆರಾಗಳು ಹಗಲು ರಾತ್ರಿ ಸಂಚಾರ ಉಲ್ಲಂಘನೆಗಳ ಮೇಲೆ ನಿಗಾ ಇಡುತ್ತಿವೆ ಎಂಬ ಕಿವಿಮಾತನ್ನೂ ಇಲ್ಲಿ ಹೇಳಲಾಗಿದೆ.



ದಂಡ ತಪ್ಪಿಸಿಕೊಳ್ಳಲು ಅಲ್ಲ, ಜೀವ ಉಳಿಸಲು...

ರಸ್ತೆಯಲ್ಲಿ ಮಾಡುವ ಒಂದು ಕ್ಷಣದ ನಿರ್ಲಕ್ಷ್ಯ ವ್ಯಕ್ತಿಯ ಜೀವನ ಪರ್ಯಂತ ಪಶ್ಚಾತ್ತಾಪಕ್ಕೆ ಕಾರಣವಾಗಬಹುದು. ಇದೇ ಕಾರಣಕ್ಕೆ 'ದಂಡ ತಪ್ಪಿಸಿಕೊಳ್ಳಲು ಅಲ್ಲ, ಜೀವ ಉಳಿಸಿಕೊಳ್ಳಲು ನಿಯಮ ಪಾಲಿಸಿ' ಎಂಬ ಸಂದೇಶವನ್ನು ಮಂಗಳೂರು ಪೊಲೀಸರು ಈ ಜಾಗೃತಿ ಕಾರ್ಯಕ್ರಮದ ಮೂಲಕ ಜನರಿಗೆ ತಲುಪಿಸುತ್ತಿದ್ದಾರೆ. ಇಲಾಖೆಯ ಈ ವಿಡಿಯೋ ಜಾಗೃತಿ ಕಾರ್ಯಕ್ರಮ ಈಗ ನೆಟ್ಟಿಗರ ಪ್ರಶಂಸೆಗೆ ಪಾತ್ರವಾಗಿದೆ.

ಮುಂಗಾರು ಮಳೆಯ ಕಣ್ಣಾಮುಚ್ಚಾಲೆ: ಆತಂಕದಲ್ಲಿ ಮೂಡುಬಿದಿರೆಯ ಕೃಷಿಕರು

ಜೂನ್ ಅರ್ಧ ಮುಗಿದರೂ ಬಿತ್ತನೆಗೆ ಸಜ್ಜಾಗಿಲ್ಲ ಗದ್ದೆಗಳು

ಮೂಡುಬಿದಿರೆ: ಜೂನ್ ಅರ್ಧ ಭಾಗ ಕಳೆದಿದ್ದರೂ ನಿರೀಕ್ಷಿತ ಮುಂಗಾರು ಮಳೆ ಸುರಿಯದ ಹಿನ್ನೆಲೆಯಲ್ಲಿ ಈ ಭಾಗದ ಕೃಷಿಕರು ತೀವ್ರ ಆತಂಕಕ್ಕೊಳಗಾಗಿದ್ದಾರೆ. ಸಾಮಾನ್ಯವಾಗಿ ಈ ವೇಳೆಗೆ ಕೃಷಿ ಚಟುವಟಿಕೆಗಳು ಗರಿಗೆದರಬೇಕಾದರೂ, ಮಳೆಯ ಕೊರತೆಯಿಂದ ಕೃಷಿ ಭೂಮಿಗಳು ಇನ್ನೂ ಕೂಡಾ ಬಿತ್ತನೆಗೆ ಸಜ್ಜಾಗಿಲ್ಲ.

ಭತ್ತದ ಕೃಷಿಕರು ಮಳೆಯ ನಿರೀಕ್ಷೆಯಲ್ಲಿದ್ದು, ಹೊಲಗಳಲ್ಲಿ ಕೇಳಿಬರಬೇಕಾದ 'ಓ ಬೇಲೇ' ಹಾಡು ಹಾಗೂ ಟಿಲ್ಲರ್‌ಗಳು, ಟ್ರಾಕ್ಟರ್‌ಗಳ ಸದ್ದು ಈ ಬಾರಿ ಯಾಕೋ ಕಾಣಸುತ್ತಿಲ್ಲ.



ನೀರಿನಮಟ್ಟ ಇನ್ನೂ ಎಲ್ಲೂ ಏರಿಕೆಯಾಗಿಲ್ಲ

ಮಳೆಯ ಕೊರತೆಯಿಂದ ಬಾವಿಗಳಲ್ಲೂ ನೀರಿನ ಮಟ್ಟ ಏರಿಕೆಯಾಗಿಲ್ಲ, ಮುಂಗಾರು ಶೀಘ್ರ ಆರಂಭವಾಗದಿದ್ದರೆ ಕೃಷಿ ಹಾಗೂ ಕುಡಿವ ನೀರಿನ ಸಮಸ್ಯೆ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಸುತ್ತ ಮುತ್ತ

ಶ್ರೀ ವೆಂಕಟರಮಣ ಸ್ವಾಮಿ ಇಂಗ್ಲಿಷ್ ಶಾಲೆ ಸಂಸತ್ತಿನ ರಚನೆ



ಬಂಟ್ವಾಳ: ವಿದ್ಯಾಗಿರಿ ಶ್ರೀ ವೆಂಕಟರಮಣ ಸ್ವಾಮಿ ಇಂಗ್ಲೀಷ್ ಮೀಡಿಯಂ ಶಾಲೆಯ ವಿದ್ಯಾರ್ಥಿ ಸಂಸತ್ತಿನ ರಚನೆ ಮಾಡಲಾಯಿತು. ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ, ನಾಮಪತ್ರ ಹಿಂತೆಗೆತ ಮತ್ತು ಚುನಾವಣಾ ಪ್ರಚಾರದೊಂದಿಗೆ ಮತದಾನವು ನಡೆಯಿತು. ವಿದ್ಯಾರ್ಥಿ ಸಂಘದ ಸಲಹೆಗಾರರಾದ ಶಿಕ್ಷಕಿ ಗಾಯತ್ರಿ ಮತ್ತು ಸಂಘದ ಎಲ್ಲಾ ಸದಸ್ಯರ ನೇತೃತ್ವದಲ್ಲಿ ಚುನಾವಣಾ ಪ್ರಕ್ರಿಯೆ ನೆರವೇರಿತು. ವಿದ್ಯಾರ್ಥಿ ಸಂಘದ ನಾಯಕರಾಗಿ 10ನೇ ತರಗತಿಯ ಭವಿಷ್ ಎಲ್. ಪೂಜಾರಿ ಆಯ್ಕೆಯಾಗಿದ್ದು, ಉಪನಾಯಕನಾಗಿ ಅನೂಪ್ ರಾಜೇಶ್ 9ನೇ, ಯೋಜನಾಧಿಕಾರಿಯಾಗಿ ಸ್ನೇಹಲ್ ಗಾಣಿಗ 10 ನೇ ತರಗತಿ ಅವರು ಆಯ್ಕೆಯಾದರು. ಪ್ರೌಢಶಾಲಾ ಮುಖ್ಯೋಪಾಧ್ಯಯರಾದ ಹರಿಪ್ರಸಾದ್, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಚೈತ್ರ ಶೆಟ್ಟಿ ಪೂರ್ವಪ್ರಾಥಮಿಕ ವಿಭಾಗದ ಸಂಯೋಜಕಿ ವೀಣಾ ದೇವಾಡಿಗ ಮಾರ್ಗದರ್ಶನದಲ್ಲಿ ನೀಡಿದರು.

ವಿವೇಕಾನಂದ ಕನ್ನಡ ಮಾಧ್ಯಮ ಶಾಲಾ ಚುನಾವಣೆ

ಪುತ್ತೂರು: ನಗರದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ ಚುನಾವಣಾ ಪ್ರಕ್ರಿಯೆ ಸಾಮಾನ್ಯ ಪ್ರಜ್ಞೆಯನ್ನು ಮೂಡಿಸುವ ನೆಲೆಯಲ್ಲಿ ಇ.ವಿ.ಎಂ. ಮತಯಂತ್ರದ ಮೂಲಕ ನಡೆಸಲಾಯಿತು. ಪ್ರೌಢ ಶಾಲಾ ವಿಭಾಗದ ನಾಯಕಿಯಾಗಿ 10ನೇ ತರಗತಿಯ ಸಾಯೀಶ್ವರಿ ಡಿ. ಮತ್ತು ಉಪನಾಯಕಿಯಾಗಿ ಹಿಮಾನಿ ಹಾಗೂ 7ನೇ ತರಗತಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿ ನಾಯಕಿಯಾಗಿ ಶೃತಿ ಎಸ್. ನಾಯಕ್ ಮತ್ತು ಉಪನಾಯಕಿಯಾಗಿ ಸಿಂಚನ ಆಯ್ಕೆಯಾದರು. ಮಂತ್ರಿ ಮಂಡಲದಲ್ಲಿ ಪ್ರತಿಪಕ್ಷದ ನಾಯಕನಾಗಿ



ಪಿ. ದೀಕ್ಷಾ, ಸ್ಪೀಕರ್ ದಿವಿತ್, ಗೃಹಮಂತ್ರಿ ಎನ್. ಶ್ರೇಯಸ್ ರಾವ್, ಶಿಕ್ಷಣ ಮಂತ್ರಿ ಮುಕುಂದ ಎಸ್., ಆರೋಗ್ಯ ಮಂತ್ರಿ ಪ್ರಜನ್, ನೈರ್ಮಲ್ಯ ಮಂತ್ರಿ ವಿಶ್ಮಿತಾ, ಸಾರಿಗೆ ಮಂತ್ರಿ ಕರಣ್ ಗೌಡ, ಕ್ರೀಡಾ ಮಂತ್ರಿ ಶ್ರೇಯಸ್, ನೀರಾವರಿ ಮಂತ್ರಿ ಜಯರಾಜ್, ಆಹಾರ ಮಂತ್ರಿ ವಿಘ್ನೇಶ್ ವಿಶ್ವಕರ್ಮ, ವಾರ್ತಾ ಮಂತ್ರಿ ಮೌಲ್ಯ ಜಿ., ಸಾಂಸ್ಕೃತಿಕ ಮಂತ್ರಿ ಶ್ರೀರಕ್ಷಾ ಎ., ಕಾರ್ಯದರ್ಶಿ ಶಿಶಿರ್ ಆಯ್ಕೆಯಾದರು. ಶಿಕ್ಷಕರಾದ ರಾಮ ನಾಯ್ಕ, ಲೀಲಾವತಿ, ಗೀತಾ, ಸ್ವಾತಿ ಮತ್ತು ಕೃಪಾ ಅವರು ಸಂಯೋಜಕತ್ವದಲ್ಲಿ ಸಹಕರಿಸಿದರು.

ಪಾಣಾಜೆ ಸುಬೋಧ ಪ್ರೌಢ ಶಾಲಾ ರಕ್ಷಕ ಶಿಕ್ಷಕ ಸಂಘ ರಚನೆ



ನಿಡ್ಪಳ್ಳಿ: ಪಾಣಾಜೆ ಸುಬೋಧ ಪ್ರೌಢ ಶಾಲೆಯಲ್ಲಿ ಶಾಲಾ ಸಂಚಾಲಕ ಗಿಳಿಯಾಲು ಮಹಾಬಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಮಕ್ಕಳ ಪೋಷಕರ ಸಭೆ ನಡೆಯಿತು. ಸಭೆಯಲ್ಲಿ ರಕ್ಷಕ ಶಿಕ್ಷಕ ಸಂಘ ಹಾಗೂ ಇತರ ಸಮಿತಿಗಳನ್ನು ರಚಿಸಲಾಯಿತು. ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷರಾಗಿ ಅಬೂಬಕ್ಕರ್ ಸಿದ್ದೀಕ್ ಕಲ್ಲಪದವು, ಉಪಾಧ್ಯಕ್ಷೆಯಾಗಿ ಪುಷ್ಪಲತಾ ಗುವೆಲ್ ಗದ್ದೆ ಹಾಗೂ ಕಾರ್ಯದರ್ಶಿಯಾಗಿ ಮೋನಪ್ಪ ಕೋಡಿ ಕಕ್ಕೂರು ಆಯ್ಕೆಯಾದರು. ಮೂಸೆ ಕುಂಞ ಅಪಿನಿಮೂಲೆ, ಕೃಷ್ಣಪ್ಪ ಉಡ್ಡಂಗಳ, ವೇಣುಗೋಪಾಲ ಕೆದುವಾರು, ವಸಂತಿ ತೂಂಬಡ್ಕ, ಗೀತಾ ಗುವೆಲ್ ಗದ್ದೆ, ಭವಾನಿ ಸೂರಂಬೈಲು, ಶುಭಾಷಿಣಿ ಅಂಬಟೆಮೂಲೆ, ಮಾಲಿಂಗ ಅರ್ಧಮೂಲೆ, ಶಿವರಾಮ ಮಣಿಯಾಣಿ ದೇವಸ್ಯ, ಪುಷ್ಪ ಒಡ್ಯ, ನಳಿನಾಕ್ಷಿ ಕುಂಞ ಮೂಲೆ, ಜಯಶ್ರೀ ಸೂರಂಬೈಲು, ಶಶಿಕಲ ದೇವಸ್ಯ, ವಸಂತ ಪಿದಾರ ಅವರನ್ನು ಸದಸ್ಯರಾಗಿ ಆಯ್ಕೆ ಮಾಡಲಾಯಿತು. ಅಕ್ಷರ ದಾಸೋಹ ತಾಯಂದಿರ ಸಮಿತಿಗೆ ಹೇಮಾವತಿ ಭರಣ್ಯ, ವಸಂತಿ ತೂಂಬಡ್ಕ, ಪ್ರಮೀಳ ತೂಂಬಡ್ಕ, ಲಲಿತ ಕೊಂದಲ್ಕಾನ, ಸವಿತ ಮಿತ್ತಡ್ಕ, ಚಂದ್ರಾವತಿ ಪಾರ್ಪಳ, ಹರಿಣಾಕ್ಷಿ ಆರ್ಲಪದವು, ಶೋಭಾ ಸುಡುಕುಳಿ, ಸುನೀತ ಸೂರಂಬೈಲು, ಚಂಚಲಾಕ್ಷಿ ವಾಣಿನಗರ, ಸಾರ ತಲಪಾಡಿ, ಲಲಿತ ಸೂರಂಬೈಲು, ತೇಜಸ್ವಿನಿ ಗುವೆಲ್ ಗದ್ದೆ, ಆಶಾಲತಾ ಕೀಲಂಪಾಡಿ ಅವರನ್ನು ಆಯ್ಕೆ ಮಾಡಲಾಯಿತು. ಮಕ್ಕಳ ಸುರಕ್ಷತಾ ಸಮಿತಿ ಸದಸ್ಯರಾಗಿ ರಫೀಕ್ ಕಕ್ಕೂರು, ರಜಾಕ್ ಪಾರ್ಪಳ, ಪುರಂದರ ಒಡ್ಯ, ಮಹಾಲಿಂಗ ಅರ್ಧಮೂಲೆ, ಶ್ರೀನಿವಾಸ ಭರಣ್ಯ, ಪಾರ್ವತಿ ಭರಣ್ಯ, ರಜಿಯಾ ತಲಪಾಡಿ, ವೀಣಾ ಕಲ್ಲಪದವು ಅವರನ್ನು ಆಯ್ಕೆ ಮಾಡಲಾಯಿತು. ವಿದ್ಯಾರ್ಥಿನಿಯರಾದ ವೈಶವಿ ಕೆ.ಪಿ. ಹಾಗೂ ದೀಪಿಕಾ ಪಿ.ಎಸ್. ಪ್ರಾರ್ಥಿಸಿದರು. ಮುಖ್ಯ ಶಿಕ್ಷಕಿ ನಿರ್ಮಲ ಕೆ. ಸ್ವಾಗತಿಸಿ, ದೈಹಿಕ ಶಿಕ್ಷಣ ಶಿಕ್ಷಕ ಸುಧೀರ್ ಎಸ್.ಪಿ. ವಂದಿಸಿದರು.

ಬಿಜೆಪಿ ವಿಶೇಷ ಜನಸಂಪರ್ಕ ಅಭಿಯಾನ | ಹಿರಿಯ ಕಾರ್ಯಕರ್ತರನ್ನು ಭೇಟಿಯಾದ ಸಂಸದ, ಶಾಸಕ

ನಿಷ್ಠಾವಂತ ಕಾರ್ಯಕರ್ತರ ಶ್ರಮದಿಂದ ಪಕ್ಷ ಬೆಳೆದಿದೆ: ಚೌಟ

ಬಂಟ್ವಾಳ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 12 ವರ್ಷಗಳ ವಿಶ್ವಾಸ, ವಿಕಾಸ ಮತ್ತು ಜನ ಕಲ್ಯಾಣದ ಪ್ರಯುಕ್ತ ಬಿಜೆಪಿ ಬಂಟ್ವಾಳ ಮಂಡಲದಲ್ಲಿ ಕೈಗೊಂಡಿರುವ ವಿಶೇಷ ಜನಸಂಪರ್ಕ ಅಭಿಯಾನದ ಅಂಗವಾಗಿ ಮಂಗಳವಾರ ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕ ರಾಜೇಶ್ ನ್ಯಾಕ್ ಕ್ಷೇತ್ರದ ವಿವಿಧೆಡೆ ಹಿರಿಯ ಕಾರ್ಯಕರ್ತರನ್ನು ಭೇಟಿ ಮಾಡಿದರು.

ಮೂಡುಪಡುಕೋಡಿಯ ಬೂಬ ಸಪಲ್ಯ ವಿಶ್ವನಾಥ್ ಗೌಡ ರಾಯಿ, ಕರುಣೇಂದ್ರ ಪೂಜಾರಿ ಕೊಂಬ್ರಬೈಲು, ಭಾಸ್ಕರ ಆಜೆಕಲ, ಶಾಂತವೀರ ಪೂಜಾರಿ ನಾವೂರ ಹಾಗೂ ದಾಮೋದರ್ ನಾಯಕ್ ಉಳಿ ಅವರ ಮನೆಗೆ ಭೇಟಿ ನೀಡಿದ ಸಂಸದರು ಹಾಗೂ ಶಾಸಕರು ಅವರ ಯೋಗಕ್ಷೇಮವನ್ನು ವಿಚಾರಿಸಿ, ಪಕ್ಷದ ವತಿಯಿಂದ ಗೌರವಿಸಲಾಯಿತು. ಬಳಿಕ ಕಕ್ಯಬೀಡು ಶ್ರೀ ಪಂಚದುರ್ಗಾ ಪರಮೇಶ್ವರಿ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಪ್ರಸಾದ ಸ್ವೀಕರಿಸಿದರು. ತದನಂತರ ಬಿ.ಸಿ.ರೋಡಿನ ಪುರಸಭಾ ಮಾಜಿ ಸದಸ್ಯ ಗೋಪಾಲ ಸುವರ್ಣ, ಅಜ್ಜಿಬೆಟ್ಟು ನಿವಾಸಿ ಹಿರಿಯ ಕಾರ್ಯಕರ್ತರಾದಪ್ರಮೋದ್ ಕುಮಾರ್, ರಮೇಶ್ ಪೂಜಾರಿ, ಪ್ರಭಾಕರ ಬೋಳಂಗಡಿ,ಶಿವಾನಂದ ಬರಿಮಾರು, ನಾರಾಯಣ ಗೌಡ ಪಿಮಾಜೆ, ಪಿ.ಜಿ. ಕೇಶವ ಭಟ್ ಕರೋಪಾಡಿ,ಪಿ.ಲಿಂಗಪ್ಪ ಕನ್ಯಾನ ಅವರ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕ್ಯಾ. ಬ್ರಿಜೇಶ್ ಚೌಟ ಹಿರಿಯರ ಸೂಚನೆಯಂತೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಹಾಗೂ ಕಾರ್ಯಕರ್ತರ ಜೊತೆ ಹಿರಿಯ ಬಿಜೆಪಿ ಕಾರ್ಯಕರ್ತರ ಮನೆಗೆ ಭೇಟಿ ನೀಡಿ ಗೌರವಿಸುವ ಕಾರ್ಯ ಮಾಡಿದ್ದೇನೆ ಮತ್ತು ಜಿಲ್ಲೆಯ ಸಂಸದನಾಗಿ ಈ ಕಾರ್ಯ ಮಾಡಲು ನನ್ನ ಪಾಲಿಗೆ ಬಂದ ಸುಯೋಗ ಎಂದು ಭಾವಿಸಿದ್ದು, ನಿಷ್ಠಾವಂತ ಕಾರ್ಯಕರ್ತರ ಶ್ರಮದ ಫಲವಾಗಿ ಪಕ್ಷ ಸಂಘಟನಾತ್ಮಕವಾಗಿ ಬೆಳೆದಿದೆ ಎಂದರು.



ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಮಾತನಾಡಿದರು. ಶಾಸಕ ಪದ್ಮನಾಭ ಕೊಟ್ಟಾರಿ, ಬಿಜೆಪಿ ಮಂಡಲದ ಅಧ್ಯಕ್ಷ ಚೆನ್ನಪ್ಪ ಆರ್. ಕೋಟ್ಯಾನ್, ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್ ಶೆಟ್ಟಿ, ಸುದರ್ಶನ ಬಜ, ಬಿಜೆಪಿ ವಕ್ತಾರ ಮಾದವ ಮಾವೆ, ಪಕ್ಷದ ಪ್ರಮುಖರಾದ ಸುಲೋಚನಾ ಜಿ.ಕೆ. ಭಟ್, ಹರಿಕೃಷ್ಣ ಬಂಟ್ವಾಳ, ಸಂದೇಶ್ ಶೆಟ್ಟಿ ಆರೆಬೆಟ್ಟು, ರಾಮ್‌ದಾಸ ಬಂಟ್ವಾಳ, ದೇವದಾಸ್ ಶೆಟ್ಟಿ ದಿನೇಶ್ ಅಮ್ಟೂರು, ಪುಷ್ಪರಾಜ್ ಚೌಟ, ಅಭಿಷೇಕ್ ರೈ, ಯಶೋಧರ ಕರ್ಬೆಟ್ಟು, ಸಂಪತ್ ಕುಮಾರ್, ದಿನೇಶ್ ಶೆಟ್ಟಿ ದಂಬೆದಾರ್, ರತ್ನಾಕರ್ ಚೌಟ, ಕಮಲಾಕ್ಷಿ ಕೆ. ಪೂಜಾರಿ, ಹರ್ಷಿಣಿ ಪುಷ್ಪಾನಂದ, ಲಖಿತಾ ಆರ್. ಶೆಟ್ಟಿ ಸಂಜೀವ ಪೂಜಾರಿ ಪಿಲಿಂಗಾಲು, ಪ್ರಣಾಮ್‌ರಾಜ್, ತನಿಯಪ್ಪ ಗೌಡ, ಹರೀಶ್ ರೈ ಪೆರಾಜೆ, ಸನತ್ ಕುಮಾರ್ ರೈ, ನಾಗೇಶ್ ಭಂಡಾರಿ, ಅಶೋಕ್ ರೈ ನೇರಳಕಟ್ಟೆ, ಸುರೇಶ್ ಟೈಲರ್, ಭಾಸ್ಕರ ಟೈಲರ್, ಹರಿಪ್ರಸಾದ್, ಜನಾರ್ದನ ಬೊಂಡಾಲ, ಹರೀಶ್ ಶೆಟ್ಟಿ ಪಡು, ಸುರೇಶ್ ಕುಲಾಲ್, ಸದಾನಂದ ನಾವೂರ, ಚಿದಾನಂದ ರೈ ಕಕ್ಯ, ಸುರೇಶ್ ಮೈರ, ವಸಂತ ಪೂಜಾರಿ, ರಶ್ಮಿತ್ ಶೆಟ್ಟಿ ವಸಂತ ಅಣ್ಣಳಿಕೆ, ಹರೀಶ್ ಆಚಾರ್ಯ, ಸಂದೇಶ್ ಶೆಟ್ಟಿ ಪೊಡಂಬು, ಸತೀಶ್ ಪೂಜಾರಿ, ವಿಜಯ ಕುಮಾರ್ ಅಮ್ಟಾಡಿ, ಬಬಿತಾ ಕೋಟ್ಯಾನ್, ಜಯಂತ್ ಗೌಡ, ಜಗದೀಶ್ ಭಂಡಾರಿ, ಮೋನಪ್ಪ ದೇವಶ್ಯ, ಜಿನರಾಜ್ ಕೋಟ್ಯಾನ್, ಜಯಶ್ರೀ, ಅಕ್ಷತಾ, ಆನಂದ ಶಂಭೂರು, ಸದಾಶಿವ ಪೂಜಾರಿ, ರವೀಶ್ ಶೆಟ್ಟಿ ಕರ್ಕಳ, ಅರವಿಂದ, ನಾರಾಯಣ ಶೆಟ್ಟಿ ತೋಟ, ಶಕೀಲಾ ಪೂಜಾರಿ, ರಘು ಶೆಟ್ಟಿ ಕನ್ಯಾನ, ಆಶ್ವಥ್ ಶೆಟ್ಟಿ ಕರೋಪಾಡಿ, ನವೀನ್ ಕನ್ಯಾನ, ಮಾಂತೇಶ್ ಇದ್ದರು.

ಎಸ್ಐಆರ್ ಬಗ್ಗೆ ಆಸಕ್ತಿ ವಹಿಸಿ

ಮುಂದಿನ ದಿನಗಳು ಚುನಾವಣಾ ವರ್ಷಗಳಾಗಿದ್ದು, ಕಾರ್ಯಕರ್ತರು ಪಕ್ಷ ಸಂಘಟನೆಯ ಜವಾಬ್ದಾರಿಯ ಜೊತೆಗೆ ಗ್ರಾಮದ ಪ್ರತಿಯೊಂದು ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಎಸ್ಐಆರ್ ಬಗ್ಗೆ ವಿಶೇಷ ಆಸಕ್ತಿ ವಹಿಸಬೇಕು.

● ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು, ಬಂಟ್ವಾಳ ಶಾಸಕ

ಜಪ್ಪಿನಮೊಗರು ಕಡೆಕಾರು ಶ್ರೀ ಮಲ್ಲಿಕಾರ್ಜುನ ದೇವಸ್ಥಾನ

ಪುನರ್‌ನಿರ್ಮಾಣ ಕಾರ್ಯಕ್ಕೆ ಶಿಲಾನ್ಯಾಸ

ಮಂಗಳೂರು: ಜಪ್ಪಿನಮೊಗರು ಕಡೆಕಾರು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದ ಪುನರ್‌ನಿರ್ಮಾಣ ಕಾರ್ಯದ ಶಿಲಾನ್ಯಾಸ ಬ್ರಹ್ಮಶ್ರೀ ವೇದಮೂರ್ತಿ ಉಚ್ಚಿಲತ್ತಾಯ ನೀಲೇಶ್ವರ ಪದ್ಮನಾಭ ತಂತ್ರಿ ಅವರ ನೇತೃತ್ವದಲ್ಲಿ ಬುಧವಾರ ನಡೆಯಿತು.

ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡಿ, ಒಂದು ಕಾಲದಲ್ಲಿ ಕುಗ್ರಾಮವಾಗಿದ್ದ ಇಲ್ಲಿಯ ಕುಟುಂಬಗಳು ಬಹಳ ಕಷ್ಟಪಡುತ್ತಿತ್ತು. ಈಗ ಸಮೃದ್ಧವಾಗಿದ್ದು, ದೇವಸ್ಥಾನದ ಪುನರ್‌ನಿರ್ಮಾಣಕ್ಕೆ ಮಲ್ಲಿಕಾರ್ಜುನ ದೇವರು ಅವಕಾಶ ಮಾಡಿಕೊಟ್ಟಿರುವುದು ನಮ್ಮ ಸುಯೋಗ. ಇಲ್ಲಿ ನಾವು ಶಕಪುರುಷರಾಗಿ ಇತಿಹಾಸ ನಿರ್ಮಿಸುವ ಕಾರ್ಯ ಮಾಡಬೇಕು ಎಂದರು.

ಕಡೆಕಾರು ದೇವಸ್ಥಾನದ ಸೇವೆ ಮಾಡಿದವರೆಲ್ಲ ದೊಡ್ಡ ವ್ಯಕ್ತಿಗಳಾಗಿದ್ದಾರೆ. ನಮಗೆಸಿಕ್ಕಿರುವಸೇವೆಯಸದುಪಯೋಗ ಮಾಡಿಕೊಳ್ಳಬೇಕು. ಮಾಣಿಲ ಕ್ಷೇತ್ರದಿಂದ ದೇವಸ್ಥಾನ ಪುನರ್‌ನಿರ್ಮಾಣಕ್ಕೆ ಒಂದು ಲಕ್ಷ ರೂ. ದೇಣಿಗೆ ಕೊಡುತ್ತೇವೆ. ಕರಸೇವೆಗೆ ಸ್ವಯಂಸೇವಕರನ್ನು ಕಳುಹಿಸಲು ಕೂಡಾ ಸಿದ್ಧರಿದ್ದೇವೆ ಎಂದು ಸ್ವಾಮೀಜಿ ಹೇಳಿದರು.



ಕ್ಷೇತ್ರದ ಅಭಿವೃದ್ಧಿಯ ರೂವಾರಿ, ಮಾಜಿ ಸಚಿವ ಜೆ.ಕೃಷ್ಣ ಪಾಲೆಮಾರ್ ಅಧ್ಯಕ್ಷತೆ ವಹಿಸಿ, ನಾವು ಚಿಕ್ಕವರಿದ್ದಾಗ ಈ ಪ್ರದೇಶಕ್ಕೆ ನಡೆದುಕೊಂಡು ಬರುವುದೇ ಕಷ್ಟವಾಗಿತ್ತು. ಈಗ ಉತ್ತಮ ರಸ್ತೆ ಸಂಪರ್ಕ ಹಾಗೂ ಪ್ರದೇಶ ಅಭಿವೃದ್ಧಿಯಾಗಿದೆ. ದೇವಸ್ಥಾನದ ಪುನರ್‌ನಿರ್ಮಾಣ ಕಾರ್ಯ 10 ತಿಂಗಳಲ್ಲಿ ಮುಗಿಸಿ, ಮುಂದಿನ ಏಪ್ರಿಲ್‌ನಲ್ಲಿ ಬ್ರಹ್ಮಕಲಶೋತ್ಸವ ಮಾಡಲು ನಿಶ್ಚಯಿಸಲಾಗಿದೆ ಎಂದರು.

ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಹರಿಪ್ರಸಾದ್ ಜೆ. ಮಾತನಾಡಿ, ನೇತ್ರಾವತಿ ನದಿ ತೀರದಲ್ಲಿರುವ ಜಪ್ಪಿನಮೊಗರು ಗ್ರಾಮದಕಡೆಕಾರಿನಪ್ರಶಾಂತಪರಿಸರದಲ್ಲಿ ಸುಮಾರು 680 ವರ್ಷ ಹಿಂದೆ ಶ್ರೀ ಗುರು ಶಾಂತಯ್ಯ ಸ್ವಾಮಿಯವರಿಂದ ಪ್ರತಿಷ್ಠಾಪಿತ ಇತಿಹಾಸ ಪ್ರಸಿದ್ಧ ಪುಣ್ಯ ಕ್ಷೇತ್ರ ಕಡೆಕಾರು ಶ್ರೀ ಮಲ್ಲಿಕಾರ್ಜುನ ಕ್ಷೇತ್ರವನ್ನು ಐದು ಅಡಿ ಎತ್ತರಿಸಿ, ನಿರ್ಮಿಸುವ ಸಂಕಲ್ಪ ಮಾಡಲಾಗಿದೆ ಎಂದರು.

ಮಾಜಿ ಕಾರ್ಪೊರೇಟರ್ ವೀಣಾಮಂಗಳ, ಕ್ಷೇತ್ರದ ಆಡಳಿತ ಮೊಕ್ತೇಸರ ಶಿವಾನಂದ ರಾವ್, ಜೆ. ಜಗದೀಶ್ ರಾವ್, ಜೆ. ಕೊರಗಪ್ಪ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಧಾಕೃಷ್ಣ, ಟ್ರಸ್ಟಿಗಳಾದ ನವೀನ್ ಚಂದ್ರ, ಸುಧೀರ್, ಕೋಶಾಧಿಕಾರಿ ಸಂತೋಷ್, ಪ್ರದೀಪ್ ಪಾಲೆಮಾರ್ ಮತ್ತು ಪ್ರಸನ್ನ ಪಾಲೆಮಾರ್ ಇದ್ದರು.

ಯೋಗೀಶ್ ಶೆಟ್ಟಿ ಜೆಪ್ಪು ಸ್ವಾಗತಿಸಿ, ನಿರೂಪಿಸಿದರು. ಕ್ಷೇತ್ರದ ಉಪಾಧ್ಯಕ್ಷ ಜೆ.ಕೆ.ರಾವ್ ವಂದಿಸಿದರು.

ಮಂಗಳೂರು ವಿವಿಯಲ್ಲಿ ಬಿತ್ತಿ ದಿನಾಚರಣೆ | ವಾಸುದೇವ ಉಚ್ಚಿಲ ಬಣ್ಣನೆ

ಜನರನ್ನು ಅರ್ಥೈಸಲು ಸಾಹಿತ್ಯ ಓದು ಪೂರಕ

ಕೊಣಾಜೆ: ಸಾಹಿತ್ಯ ಓದಿದರೆ ಜನರನ್ನು ಅರ್ಥ ಮಾಡಿಕೊಳ್ಳುವುದು ಸುಲಭ. ಕನ್ನಡ ವಿಭಾಗ ಸಾಮಾಜಿಕ ಮೌಲ್ಯಗಳನ್ನು ಬಿತ್ತುವ ಒಂದು ಪ್ರಮುಖ ಸ್ಥಳ. ಸೌಹಾರ್ದ ಕರ್ನಾಟಕವನ್ನು ಕಟ್ಟುವುದಕ್ಕೆ ಬರವಣಿಗೆಗಳು ಪ್ರೇರಣೆಯಾಗಲಿ ಎಂದು ಹಿರಿಯ ಸಾಮಾಜಿಕ ಚಿಂತಕರಾದ ವಾಸುದೇವ ಉಚ್ಚಿಲ್ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಎಸ್ ವಿ ಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬುಧವಾರ 35ನೇ ವರ್ಷದ ಬಿತ್ತಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬಿತ್ತಿ,ಭಿತ್ತಿ ಎರಡು ಅರ್ಥದಲ್ಲೂ ಇಲ್ಲಿ ಒಂದು ಸಾರ್ಥಕ ಕೆಲಸಗಳು ನಡೆದಿದೆ. ಇದನ್ನು ನಾವು ಲಘುವಾಗಿ ಕಾಣುವಂತಿಲ್ಲ, ವಿದ್ಯಾರ್ಥಿಗಳಿಗೆ ಇದೊಂದು ಪ್ರೇರಣೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್ ವಿಪಿ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ.ನಾಗಪ್ಪ ಗೌಡ, ನಮ್ಮ ಕನ್ನಡ ವಿಭಾಗ ಸಮಾಜಕ್ಕೆ ದೊಡ್ಡ ದೊಡ್ಡ ಸಾಹಿತಿಗಳನ್ನು ಕೊಟ್ಟಿದೆ ಎಂದು ನಾವು ನೆನಪುಮಾಡಿಕೊಳ್ಳುವಾಗ ಅಭಿಮಾನವೆನ್ನಿಸುತ್ತದೆಬೆಂದು ಹೇಳಿದ ಅವರು, ಭಿತ್ತಿಯ ಸಂಪಾದಕ ಮಂಡಳಿಯ ಪದಾಧಿಕಾರಿಗಳಾದ ವೃಧ್ವಿ, ಜಗದೀಶ್ ಮತ್ತು ಮಾರ್ಗದರ್ಶಕರಾದ ಯಶುಕುಮಾರ್ ಹಾಗೂ ಯುವ ಬರಹಗಾರರ ಬಳಗವನ್ನು ಅಭಿನಂದಿಸಿದರು.



ಹಿರಿಯ ಪ್ರಾಧ್ಯಾಪಕ ಪ್ರೊ. ಸೋಮಣ್ಣ ಹೊಂಗಳ್ಳಿ ಮಾತನಾಡಿ, ವಿದ್ಯಾರ್ಥಿ ಯಾದವನು ಮೊದಲು ಫಲವತ್ತಾಗಬೇಕು. ಉಚಿತ, ಅನುಚಿತ ಗುರುತಿಸಬೇಕು. ಇದಕ್ಕಾಗಿ ಓದಬೇಕು. ವಯಸ್ಸಿದೆ, ಉತ್ಸಾಹ ಇದೆ ಬಳಸಿಕೊಳ್ಳಿ ಎಂದು ಹೇಳಿದರು.

ವಿಭಾಗದ ಸಹ ಪ್ರಾಧ್ಯಾಪಕ ಪ್ರೊ. ಧನಂಜಯ ಕುಂಬ್ಳೆ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ಜವಾಬ್ದಾರಿಯನ್ನು ಬಹಳ ಚೆನ್ನಾಗಿ ನಿಭಾಯಿಸಿದ್ದಾರೆ. ಇದು ವಿದ್ಯಾರ್ಥಿಗಳ ಆತ್ಮವಿಮರ್ಶೆಯ ಒಂದು ಘಳಿಗೆ, ನಾವು ಬರೆಯುವ ಬರವಣಿಗೆ ಬೇರೆಯವರನ್ನು ಬೆಳೆಸಿದೆಯೇ, ನಮ್ಮನ್ನು ಬೆಳೆಸಿದೆಯೇ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ಮುಖ್ಯವಾಗಿ ಮಾನವೀಯತೆ ಬೆಳೆಸಿಕೊಳ್ಳಿ ಎಂದರು.

ಉಪನ್ಯಾಸಕ ಡಾ. ಯಶುಕುಮಾರ್, ಬಿತ್ತಿಯ ಬರವಣಿಗೆ ಕುರಿತು ವಿಶ್ಲೇಷಣೆ ಮಾಡಿದರು. ಬಿತ್ತಿಯ ಸಂಪಾದಕಿ ವೃಧ್ವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಂದಿನ ಸಾಲಿನ ಸಂಪಾದಕತ್ವವನ್ನು ನಿಶ್ಮಿತಾ ಅವರಿಗೆ ಹಸ್ತಾಂತರಿಸಲಾಯಿತು. ವಿದ್ಯಾರ್ಥಿಗಳಾದ ಸಲೀಂ, ಜಗದೀಶ್, ಮರಿಸಿದ್ದಪ್ಪ, ಪವಿತ್ರ, ಮಹೇಶ್ ಮತ್ತು ಪರಶುರಾಮ್ ಸ್ವರಚಿತ ಕವನಗಳನ್ನು ವಾಚಿಸಿದರು. ಬಿತ್ತಿ ಪತ್ರಿಕೆಯ ಆಯ್ದ ಉತ್ತಮ ಲೇಖಕರಿಗೆ ಬಹುಮಾನ ವಿತರಿಸಲಾಯಿತು. ವಿಜೇತರ ಪಟ್ಟಿಯನ್ನು ದಿವ್ಯಶ್ರೀ ಅವರು ವಾಚಿಸಿದರು. ವಿದ್ಯಾರ್ಥಿನಿ ಆಶ್ರಿತ ಅವರು ಆಶಯಗೀತೆ ಹಾಡಿದರು. ವಿದ್ಯಾರ್ಥಿ ರವಿ ಸ್ವಾಗತಿಸಿದರು. ಅನುಪ್ ವಂದಿಸಿದರು. ರಮ್ಯಾ ಅವರು ಕಾರ್ಯಕ್ರಮ ನಿರೂಪಿಸಿದರು.

ಸಂತ ಫಿಲೋಮಿನಾದಲ್ಲಿ 'ಆರೋಗ್ಯಕರ ಮನಸ್ಸು-ಉಜ್ವಲ ಭವಿಷ್ಯ' ಕಾರ್ಯಾಗಾರ

ಪುತ್ತೂರು: ನಗರದ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನ ಬಾಲ ರಕ್ಷಣಾ ಘಟಕದ ಆಶ್ರಯದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ 'ಆರೋಗ್ಯಕರ ಮನಸ್ಸು ಮತ್ತು ಉಜ್ವಲ ಭವಿಷ್ಯ'ದ ಕುರಿತು ಕಾರ್ಯಾಗಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಪುತ್ತೂರು ಉಪ ವಿಭಾಗದ ಅಬಕಾರಿ ನಿರೀಕ್ಷಕಿ ಜೋಸ್ಲಿನ್ ಫೆರ್ನಾಂಡಿಸ್ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯ ಯಶಸ್ಸಿಗೆ ಕಠಿಣ ಪರಿಶ್ರಮ ಅವಶ್ಯಕವಾಗಿದ್ದು, ಇದಕ್ಕೆ ಆರೋಗ್ಯಕರ ಮನಸು ಅತ್ಯಂತ ಅನಿವಾರ್ಯವಾಗಿದೆ. ಪೌಷ್ಟಿಕಾಂಶ ಉಳ್ಳ ಆಹಾರ ಸೇವನೆ, ಧನಾತ್ಮಕ ಚಿಂತನೆಗಳು, ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸ ಮತ್ತು ಧ್ಯಾನ ಮಾಡುವುದರಿಂದ ಆರೋಗ್ಯಕರ ಮನಸನ್ನು ಬೆಳೆಸಿಕೊಳ್ಳಬಹುದು. ಇಂದಿನ ಸಮಾಜದಲ್ಲಿ ಮಾದಕ ದ್ರವ್ಯಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಿದ್ದು, ವಿದ್ಯಾರ್ಥಿಗಳು ಮಾದಕ ದ್ರವ್ಯದ ವ್ಯಸನಕ್ಕೆ ಒಳಗಾಗದಂತೆ ಎಚ್ಚರಿಕೆ ವಹಿಸಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಶೋಕ್ ರಾಯನ್ ಕ್ರಾಸ್ತಾ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಮಾನಸಿಕ ಕ್ಷಮತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ. ವಿದ್ಯಾರ್ಥಿಗಳು ಹದಿಹರೆಯದಲ್ಲಿ ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳುವತ್ತ ಗಮನ ಹರಿಸಬೇಕು. ಒತ್ತಡ ರಹಿತ ವಾತಾವರಣ ಉತ್ತಮ ವಿದ್ಯಾಭ್ಯಾಸಕ್ಕೆ ಪೂರಕವಾಗಿದ್ದು ದೈಹಿಕ ಮತ್ತು ಮಾನಸಿಕ ಆರೋಗ್ಯದ ಪ್ರಾಮುಖ್ಯತೆಯನ್ನು ತಿಳಿಸಿದರು.



ವೇದಿಕೆಯಲ್ಲಿ ಬಾಲ ರಕ್ಷಣಾ ಘಟಕದ ನಿರ್ದೇಶಕರಾದ ಡಾ. ಆಶಾ ಸಾವಿತ್ರಿ ಹಾಗೂ ರಾಮ್ ನಾಯ್ಕ್ ಉಪಸ್ಥಿತರಿದ್ದರು. ಉಪನ್ಯಾಸಕರಾದ ರಾಮ್ ನಾಯ್ಕ್ ಸ್ವಾಗತಿಸಿ, ವಿದ್ಯಾರ್ಥಿಗಳಾದ ಗೌತಮ್ ವಂದಿಸಿದರು. ಅಮುಲ್ ಕಾರ್ಯಕ್ರಮ ನಿರ್ವಹಿಸಿದರು.

ಯುವ ವಕೀಲರು ಕಲಾಪದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿ: ಚಂದ್ರಶೇಖರ್



ಬಂಟ್ವಾಳ: ಯುವ ವಕೀಲರು ಕೋರ್ಟ್ ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಲ್ಲದೆ ಅಧ್ಯಯನ ಶೀಲರಾದಾಗ ಕಕ್ಷಿದಾರನಿಗೂ ಸಹಾಯವಾಗುತ್ತದೆ. ಜೀವನದಲ್ಲಿ ಉತ್ತಮ ಅವಕಾಶಗಳು ಬಂದಾಗ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕೆಪಿಎಸ್‌ಸಿ ಇಲಾಖೆಯ ಕಾನೂನು ಸಲಹೆಗಾರ, ನಿವೃತ್ತ ಜಿಲ್ಲಾ ನ್ಯಾಯದೀಶ ಯು.ಚಂದ್ರಶೇಖರ್ ಅವರು ಹೇಳಿದರು.

ಬಂಟ್ವಾಳ ನ್ಯಾಯಾಲಯದ ಕಚೇರಿಯಲ್ಲಿ ಬುಧವಾರ ಬಂಟ್ವಾಳ ವಕೀಲರ ಸಂಘದ ಆಶ್ರಯದಲ್ಲಿ ನ್ಯಾಯಾಂಗ ಸೇವೆ ಪರೀಕ್ಷೆ ಸಿದ್ಧತೆ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಬಂಟ್ವಾಳ ಪ್ರಧಾನ ಹಿರಿಯ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಅನಿಲ್ ಪ್ರಕಾಶ್ ಎಂ.ಪಿ. ಮಾತನಾಡಿದರು.

ಇದೇ ವೇಳೆ ಬಂಟ್ವಾಳ ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆಗೊಂಡ ರಾಜೇಂದ್ರಪ್ರಸಾದ್ ಕೆ.ಎಸ್. ಅವರನ್ನು ಸ್ವಾಗತಿಸಲಾಯಿತು. ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶೆಯಾಗಿ ನಿಯುಕ್ತಿಗೊಂಡ ಸೌಂದರ್ಯ ಎಮ್ . ಅವರನ್ನು ಸ್ವಾಗತಿಸಲಾಯಿತು. ಸಭಾಧ್ಯಕ್ಷತೆ ವಹಿಸಿದ್ದ ಬಂಟ್ವಾಳ ವಕೀಲರ ಸಂಘದ ಅಧ್ಯಕ್ಷ ರಿಚರ್ಡ್ ಡಿ.ಕೋಸ್ತ ಮಾತನಾಡಿ, ಬಂಟ್ವಾಳ ವಕೀಲರ ಸಂಘ ನಿರಂತರವಾಗಿ ನ್ಯಾಯಾಲಯದ ಜೊತೆ ಸಮನ್ವಯದ ಸೇವೆ ಸಲ್ಲಿಸುತ್ತಿದೆ ಎಂದು ತಿಳಿಸಿದರು. ಸಂಘದ ಜತೆ ಕಾರ್ಯದರ್ಶಿ ಅಕ್ಷತಾ ಶೆಟ್ಟಿ ನೂತನ ನ್ಯಾಯದೀಶರ ಪರಿಚಯಿದರು. ಕಾರ್ಯದರ್ಶಿ ಕೆ. ನರೇಂದ್ರನಾಥ್ ಭಂಡಾರಿ ಸ್ವಾಗತಿಸಿದರು. ಉಪಾಧ್ಯಕ್ಷ ದಯಾನಂದ ರೈ ವಂದಿಸಿದರು. ಮೆಲ್ವಿಶಾ ಪ್ರೀತಿ ಡಿ.ಸೋಜ ಕಾರ್ಯಕ್ರಮ ನಿರೂಪಿಸಿದರು.

ನರಹರಿ ಪರ್ವತದ ಸಂಧ್ಯಾ ಭಜನೆ



ಬಂಟ್ವಾಳ: ನರಹರಿ ಪರ್ವತದ ಸಂಧ್ಯಾ ಭಜನೆಗೆ ವಾರಿಜಾ, ಮಹಾಬಲ ದಾಸಕೋಡಿ ಚಾಲನೆ ನೀಡಿದರು. ಬಳಿಕ ಶ್ರೀ ರಾಮ ಭಜನಾ ಮಂದಿರ ಪ್ರತಾಪ್ ನಗರ ಕಡೇಶಿವಾಲಯ ತಂಡದಿಂದ ಭಜನೆ ನಡೆಯಿತು. ಹಿರಿಯರಾದ ಭುವನೇಶ್ವರೀ ಬಿ. ಮಾರ್ಲ, ಆಡಳಿತ ಮೊಕ್ತೇಸರ ಡಾ. ಪ್ರಶಾಂತ್ ಮಾರ್ಲ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ. ಆತ್ಮರಂಜನ್ ರೈ, ಡಾ. ಪ್ರಣವ್ ಮಲ್ಯ ನಾರಾಯಣ್, ಪ್ರಶಾಂತ್ ಹೆಗ್ಡೆ ಪ್ರತಿಭಾ ಎ.ರೈ, ಪರಮೇಶ್ವರ ಮಯ್ಯ,ಶಂಕರ್ ಆಚಾರ್ಯ, ಸದಾಶಿವ ಬೊಂಡಾಲ, ಮ್ಯಾನೇಜರ್ ಆನಂದ್, ಗಿರೀಶ್ , ಎಂ.ಎನ್ ಕುಮಾರ್ ಇದ್ದರು.



ಶ್ರೀ ಭದ್ರಕಾಳಿ ದೇವಿ ಸನ್ನಿಧಿ ಟ್ರಸ್ಟ್ ರಾಮನಗರ ಬಂಟ್ವಾಳ ವಾರ್ಷಿಕೋತ್ಸವದಲ್ಲಿ ಉಳಿತಾಯವಾದ ಮೊತ್ತವನ್ನು ಅಶಕ್ತರಿಗೆ ವಿತರಿಸಲಾಯಿತು. ಉಳಿತಾಯವಾದ 70,000 ರೂ. ಮೊತ್ತವನ್ನು ಮನೆ ನಿರ್ಮಾಣ ಹಾಗೂ ನಾಲ್ವರು ಅನಾರೋಗ್ಯ ಪೀಡಿತರಿಗೆ ಸಹಾಯಧನವನ್ನು ಟ್ರಸ್ಟ್ ಅಧ್ಯಕ್ಷ ಸತೀಶ್ ಶೆಟ್ಟಿ ವಿತರಿಸಿದರು.

ಹಲವಾರು ವರ್ಷಗಳಿಂದ ಡಾಮರು ಕಾಣದ ಮುಲ್ಕಿ ಬಳಿಯ ಪಂಜಿನಡ್ಕ- ಮೈಲೊಟ್ಟು ಮಾರ್ಗ| ದುರಸ್ತಿಗೆ ಅಧಿಕಾರಿಗಳ ನಿರ್ಲಕ್ಷ್ಯ

ರಸ್ತೆ ಹೊಂಡಕ್ಕೆ ಸುರಿದ ದೊಡ್ಡ ಗಾತ್ರದ ಜಲ್ಲಿಕಲ್ಲಿನಿಂದ ಸಂಚಾರಕ್ಕೆ ಅಡಚಣೆ

ಮುಲ್ಕಿ: ಅತಿಕಾರಿ ಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ಪಂಜಿನಡ್ಕ- ಮೈಲೊಟ್ಟು ಜಿಲ್ಲಾ ಪಂಚಾಯತ್ ರಸ್ತೆ ಅರ್ಧಭಾಗ ಕಳೆದ ಹಲವಾರು ವರ್ಷಗಳಿಂದ ಕೆಟ್ಟು ಹೋಗಿದ್ದು, ಹೊಂಡಮಯ ರಸ್ತೆಯಿಂದ ಸಂಚಾರ ದುಸ್ತರವಾಗಿ ಪರಿಣಮಿಸಿದೆ.

ಪಂಜಿನಡ್ಕ ಜಂಕ್ಷನ್ ಬಳಿಯಿಂದ ಮೈಲೊಟ್ಟು ಕಡೆಗೆ ಹೋಗುವ ಕೆಟ್ಟು ಹೋದ ರಸ್ತೆಯ ಬೃಹದಾಕಾರದ ಹೊಂಡಕ್ಕೆ ಪಂಚಾಯತ್ ವತಿಯಿಂದ ಭಾರೀ ಗಾತ್ರದ ಜಲ್ಲಿಕಲ್ಲುಗಳನ್ನು ಹಾಕಲಾಗಿದ್ದು, ಪ್ರಯಾಣ ಮತ್ತಷ್ಟು ತೊಂದರೆಯಾಗಿದೆ. ಕಳೆದ ದಿನಗಳ ಹಿಂದೆ ಸುರಿದ ಭಾರೀ ಮಳೆಗೆ ರಸ್ತೆ ಹೊಂಡಕ್ಕೆ ಹಾಕಿರುವ ಜಲ್ಲಿಕಲ್ಲು ಕಿತ್ತು ಹೋಗಿದ್ದು, ವಾಹನ ಸಂಚಾರ ಇನ್ನಷ್ಟು ತ್ರಾಸದಾಯಕವಾಗಿದೆ. ಈ ನಡುವೆ ರಸ್ತೆ ಬದಿಯಲ್ಲಿ ಕಿತ್ತು ಹೋಗಿರುವ ಡಾಮರು ಹಾಗೂ ಮಣ್ಣಿನ ನೆಲದ ನಡುವೆ ಹಾಕಿರುವ ಜಲ್ಲಿಕಲ್ಲು ಅಪಾಯಕಾರಿಯಾಗಿ ಪರಿಣಮಿಸಿದೆ ಎಂದು ಬಸ್ ಚಾಲಕ ರೋನಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಡಾಮರೀಕರಣ ಕಾಣದೆ ಕಂಗಲಾಗಿರುವ ಪಂಜಿನಡ್ಕ- ಮೈಲೊಟ್ಟು ಜಿಲ್ಲಾ ಪಂಚಾಯತ್ ರಸ್ತೆ ಅರ್ಧ ಭಾಗ ಸ್ಥಳೀಯರ ಆಗ್ರಹ, ಗ್ರಾಮ ಸಭೆಯಲ್ಲಿ ನಡೆದ ಪ್ರತಿಭಟನೆಯಿಂದ ಕಾಂಕ್ರೀಟೀಕರಣಗೊಂಡಿತ್ತು. ಆದರೆ ಉಳಿದ ದುರಸ್ತಿಗೆ ಬಾಕಿ ಉಳಿದಿದೆ. ಈ ರಸ್ತೆಯ ಸ್ವಲ್ಪ ಭಾಗ ಮೈಲೊಟ್ಟು ಕೊಂಕಣ ರೈಲ್ವೇ ಗೇಟ್ ಬಳಿ ಬರುತ್ತಿದ್ದು ರೈಲ್ವೇ ಅಧಿ ಕಾರಿಗಳ ನಿರ್ಲಕ್ಷದಿಂದ ಡಾಮರೀಕರಣ ಹಾಗೂ ದುರಸ್ತಿ ಕನಸಿನ ಕೂಸಾಗಿದೆ. ರೈಲ್ವೇ ಗೇಟ್ ಬಳಿಯ ರಸ್ತೆಯಲ್ಲಿ ಭಾರೀ ಗಾತ್ರದ ಹೊಂಡಗಳು ಉಂಟಾಗಿದ್ದರೂ ರೈಲ್ವೆ ಮೌನವಾಗಿದೆ. ಈ ಬಗ್ಗೆ ಸ್ಥಳೀಯರು ಸಂಬಂಧಪಟ್ಟ ಇಲಾಖೆಯ ವಿರುದ್ಧ ಪ್ರತಿ ಗ್ರಾಮಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ.





- ರಸ್ತೆ ಡಾಮರೀಕರಣ ಹಾಗೂ ದುರಸ್ತಿಗೆ ರೈಲ್ವೇ ಅಧಿ ಕಾರಿಗಳ ನಿರ್ಲಕ್ಷ್ಯ
- ರಸ್ತೆಯಲ್ಲಿ ಭಾರೀ ಗಾತ್ರದ ಹೊಂಡಗಳು ಉಂಟಾಗಿದ್ದರೂ ಇಲಾಖೆ ಮೌನ

ಚರಂಡಿ ವ್ಯವಸ್ಥೆ ಇಲ್ಲ

ಗ್ರಾಮೀಣ ಭಾಗದ ರಸ್ತೆಗಳು ಪ್ರತಿ ಮಳೆಗಾಲದಲ್ಲಿ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಅಧೋಗತಿಗೆ ತಲುಪುತ್ತಿವೆ. ಸಂಬಂಧಪಟ್ಟ ಗ್ರಾ.ಪಂ.ಅಧಿ ಕಾರಿಗಳು ಎಚ್ಚೆತ್ತು ದುರಸ್ತಿಗೆ ಮುಂದಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೇರಳ ರಾಜ್ಯದ ಗಡಿ ಪ್ರದೇಶ, ಪುತ್ತೂರು, ಕಡಬ, ಉಪ್ಪಿನಂಗಡಿ ಪಟ್ಟಣವನ್ನು ಸಂಪರ್ಕಿಸುವ ಸ್ಥಳಕ್ಕಿಲ್ಲ ಭದ್ರತೆ

ಸಿಸಿಟಿವಿ ಕಣ್ಗಾವಲಿನಿಂದ ತಪ್ಪಿಸಿಕೊಂಡಿದೆ ಆಲಂಕಾರು ಪೇಟೆ!

■ ಸಾಕ್ಷಿ ಆಲಂಕಾರು

ಆಲಂಕಾರು: ಕಡಬ ತಾಲೂಕಿನ ಪ್ರಮುಖ ಪಟ್ಟಣವಾಗಿರುವ ಆಲಂಕಾರು ಪೇಟೆ ಸಿ.ಸಿ. ಟಿವಿ ಕ್ಯಾಮರಾ ಕಣ್ಗಾವಲಿನಿಂದ ವಂಚಿತವಾಗಿದ್ದು, ಹಲವು ಅಹಿತಕರ ಘಟನೆಗಳಿಗೆ ಪೂರಕ ವಾತಾವರಣ ನಿರ್ಮಿಸಿ ಕೊಟ್ಟಿದೆ.

ಕಡಬ ತಾಲೂಕಿನ ನೆಲ್ಯಾಡಿ, ಕೊಕ್ಕಡ, ಕಡಬ ಪಟ್ಟಣ ಸಹಿತ ಧರ್ಮಸ್ಥಳ, ಉಪ್ಪಿನಂಗಡಿ, ಪುತ್ತೂರು ಮುಂತಾದ ಪ್ರಮುಖ ಪೇಟೆಗಳ ಜೊತೆಗೆ ಕೇರಳ ರಾಜ್ಯ (ಕಾಸರಗೋಡು ಜಿಲ್ಲೆ ಸಹಿತ)ವನ್ನು ಸಂಪರ್ಕಿಸು ರಸ್ತೆಯ ಪ್ರಮುಖ ಕೇಂದ್ರವಾಗಿ ಆಲಂಕಾರು ಪೇಟೆ ಮಾರ್ಪಾಡಾಗಿದೆ. ಕೆಲವು ವರ್ಷಗಳ ಹಿಂದೆ ಶಾಂತಿಮೊಗರು ಕುಮಾರಧಾರಾ ನದಿಗೆನಿರ್ಮಿಸಿರುವಸೇತುವೆಸಂಚಾರಕ್ಕೆಮುಕ್ತವಾದ ಬಳಿಕ ಆಲಂಕಾರು ಪ್ರಮುಖ ಪೇಟೆಗಳನ್ನು ಸಂಪರ್ಕಿಸುವ ಕೇಂದ್ರವಾಗಿ ಬದಲಾಯಿತು. ಆರು ವರ್ಷಗಳ ಹಿಂದೆ ಪೊಲೀಸ್ ಇಲಾಖೆ ಆಲಂಕಾರಿನಲ್ಲಿ 4 ಕ್ಯಾಮರಾಗಳ ಸಿಸಿ ಅಳವಡಿಸಿ ಪೇಟೆಯನ್ನು ಸಿಸಿ



ಕಣ್ಗಾವಲಿನಲ್ಲಿ ಇರಿಸಿತ್ತು. ಆದರೆ ಇದೀಗ ಸಿಸಿ ಟಿವಿ ಕ್ಯಾಮರಾ ಕಾರ್ಯನಿರ್ವಹಿಸುತ್ತಿಲ್ಲ.

ಬೀದಿ ದೀಪಗಳೂ ಸಮರ್ಪಕವಾಗಿಲ್ಲ

ಆಲಂಕಾರು ಪೇಟೆಯಲ್ಲಿ ಸಿ.ಸಿ. ಟಿವಿ ಕ್ಯಾಮರಾ ಅಳವಡಿಕೆಯಾಗಿನಿಂದ ಕೆಟ್ಟು ಹೋಗುವವರೆಗೆ ಆಲಂಕಾರು ಪೇಟೆಯಲ್ಲಿ ಯಾವುದೇ ಅಹಿತಕರ ಘಟನೆಯಾಗಲಿ ಕಳವಿನ ಪ್ರಕರಣವಾಗಲಿ ನಡೆದಿರಲಿಲ್ಲ. ಯಾವಾಗ ಸಿ.ಸಿ. ಕ್ಯಾಮರಾ ಕೆಟ್ಟು ಹೋಗಿದೆ ಎಂಬ ವಿಚಾರ ತಿಳಿಯುತ್ತಿದ್ದಂತೆ ಆಲಂಕಾರು ಪೇಟೆ ಕಳ್ಳರ ಪಾಲಿಗೆ ಸ್ವರ್ಗದಂತಾಗಿದೆ. ಜೊತೆಗೆ ಆಲಂಕಾರು ಪೇಟೆಯಲ್ಲಿ ಅಳವಡಿಸಿರುವ ದಾರಿ ದೀಪಗಳು ಸಮರ್ಪಕವಾಗಿ ಬೆಳಗದಿರುವುದು ಇದಕ್ಕೆ ಪೂರಕ ವಾತಾವರಣ ನಿರ್ಮಿಸಿ ಕೊಟ್ಟಿದೆ.

ಖಾಸಗಿ ಸಿ.ಸಿ.ಗೆ ಪೊಲೀಸರ ದುಂಬಾಲು

ಆಲಂಕಾರು ಪೇಟೆಯಲ್ಲಿ ಯಾವುದಾದರು ಕಳವು ಪ್ರಕರಣ ಅಥವಾ ಅಹಿತಕರ ಘಟನೆ ನಡೆದಾಗ ಖಾಸಗಿ ಕಟ್ಟಡ ಅಥವಾ ಅಂಗಡಿಗಳ ಸಿ.ಸಿ. ಟಿವಿ ಕ್ಯಾಮರಾ ವಿಡಿಯೋಗಾಗಿ ಪೊಲೀಸರು ದುಂಬಾಲು ಬೀಳುತ್ತಿದ್ದಾರೆ. ಇದಕ್ಕಾಗಿ ತಮ್ಮ ಕಟ್ಟಡ, ಅಂಗಡಿ ಒಳಗೆ ಮಾತ್ರ ಅಳವಡಿಸುತ್ತಿದ್ದಾರೆ.

ಮಾದಕವಸ್ತು ವ್ಯವಹಾರಕ್ಕೆ ಪೂರಕ

ಸದಾ ವಾಹನ ಸಂಚಾರದಿಂದ ಕೂಡಿರುವ ಶಾಂತಿಮೊಗರು ಸೇತುವೆ ಮೇಲೆ ಫೋಟೋ, ವೀಡಿಯೋ ಶೂಟಿಂಗ್‌ನ ಜೊತೆಗೆ ಬೈಕ್ ವೀಲಿಂಗ್ ಎಗ್ಗಿಲ್ಲದೆ ನಡೆಯುತ್ತಿದೆ. ತಡ ರಾತ್ರಿಯವರೆಗೆ ಸೇತುವೆ ಫುಟ್‌ಪಾತ್‌ನಲ್ಲಿ ಯುವಕರ ತಂಡ ಕುಳಿತು ಬೀಡಿ ಸಿಗರೇಟ್ ಸೇದುತ್ತಾ ಮೋಜು ಮಸ್ತಿಯಲ್ಲಿರುತ್ತಾರೆ.

ಗಾಂಜಾ, ಮಾದಕ ವಸ್ತುಗಳ ವಹಿವಾಟು

ರಾತ್ರಿಯಾಗುತ್ತಿದ್ದಂತೆ ಇಲ್ಲಿ ಗಾಂಜಾ ಮುಂತಾದ ಮಾದಕ ವಸ್ತುಗಳ ವ್ಯಾಪಾರ ವಹಿವಾಟುಗಳು ನಿರ್ಭೀತಿಯಿಂದ ನಡೆಯುತ್ತಿದೆ. ಇಷ್ಟು ಜನನಿಬಿಡ ಸೇತುವೆಗೆ ಸಿ.ಸಿ. ಟಿವಿ ಕ್ಯಾಮರಾ ಅಳವಡಿಸದೆ ಇರುವುದು ಈ ಎಲ್ಲಾ ವ್ಯವಹಾರಗಳಿಗೆ ಪೂರಕವಾಗಿದೆ ಎಂಬ ಆರೋಪ ಕೇಳಿ ಬರುತ್ತಿದೆ.

ಶೀಘ್ರದಲ್ಲೆ ಅಳವಡಿಕೆ

ಸಿಡಿಲಿನ ಆಘಾತದಿಂದಾಗಿ ಆಲಂಕಾರಿನಲ್ಲಿ ಇಲಾಖೆ ಅಳವಡಿಸಿದ ಸಿಸಿ ಟಿವಿ ಕ್ಯಾಮರಾ ಕೆಟ್ಟು ಹೋಗಿದೆ. ಇದನ್ನು ದುರಸ್ತಿಗೆ ಅಸಾಧ್ಯ. ಇಲಾಖೆ ಜಿಲ್ಲೆಯ ಪ್ರಮುಖ ಪೇಟೆಗಳಿಗೆ ಸಿಸಿ ಕ್ಯಾಮರಾ ಅಳವಡಿಕೆ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದೆ. ಈಗಾಗಲೇ ಕೆಟ್ಟು ಹೋಗಿರುವ ಸಿಸಿಗಳ ಜಾಗಕ್ಕೆ ನೂತನ ಸಿಸಿ ಕ್ಯಾಮರಾ ಅಳವಡಿಕೆಗೆ ಇಲಾಖೆ ಕ್ರಮ ಕೈಗೊಂಡಿದೆ. ಮುಂದಿನ ಕೆಲವೇ ದಿನಗಳಲ್ಲಿ ಆಲಂಕಾರು ಪೇಟೆಯಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸಲಾಗುವುದು ಎಂದು ಕಡಬ ಠಾಣಾಧಿಕಾರಿ ಜಂಬೂರಾಜ್ ಪ್ರತಿಕ್ರಿಯಿಸಿದ್ದಾರೆ.

ಫಲಿತಾಂಶ ಶೂನ್ಯ

"ಸಿ.ಸಿ. ಟಿವಿ ಕ್ಯಾಮರಾ ಕೆಟ್ಟು ಹೋಗಿರುವುದರಿಂದ ಪೇಟೆಯ ವರ್ತಕರಿಗೆ ಸಾಕಷ್ಟು ಸಮಸ್ಯೆಗಳಾಗಿದೆ. ಕಳವಿನ ಪ್ರಕರಣ ನಡೆದಾಗ ಕಳ್ಳರು ಯಾವ ದಾರಿಯಾಗಿ ಬಂದಿದ್ದಾರೆ ಯಾವ ದಾರಿಯಿಂದ ಹೋಗಿದ್ದಾರೆ ಎಂಬ ಮಾಹಿತಿ ಲಭ್ಯವಾಗುವುದಿಲ್ಲ. ಈಗಾಗಲೇ ಹಲವು ಪ್ರಕರಣಗಳು ನಡೆದಿದೆ. ಯಾವುದು ಪತ್ತೆಯಾಗಿಲ್ಲ. ಸಿ.ಸಿ. ಟಿವಿ ಕ್ಯಾಮರಾ ಬಗ್ಗೆ ಪೊಲೀಸರ ಗಮನಕ್ಕೆ ತಂದಿದ್ದೇವೆ. ಆದರೆ, ಫಲಿತಾಂಶ ಮಾತ್ರ ಶೂನ್ಯ.

● ಲಕ್ಷ್ಮೀನಾರಾಯಣ ಪ್ರಭು, ಆಲಂಕಾರು ವರ್ತಕರ ಸಂಘದ ಅಧ್ಯಕ್ಷ

ಕಕ್ಕೂರು ಶಾಲಾ ಮಂತ್ರಿ ಮಂಡಲ ರಚನೆ

ಸುತ್ತಮುತ್ತ

ನಿಡ್ಪಳ್ಳಿ: ಕಕ್ಕೂರು ಬೆಟ್ಟಂಪಾಡಿಯ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಮಂತ್ರಿ ಮಂಡಲವನ್ನು ರಚಿಸಲಾಯಿತು.

ಮುಖ್ಯ ಮಂತ್ರಿಯಾಗಿ ಆಯಿಷತ್ ತಶ್ರೀಫಾ ಎ.ಬಿ., ಉಪ ಮುಖ್ಯ ಮಂತ್ರಿಯಾಗಿ ಆಶ್ವಿತ್ ಎನ್. ಆಯ್ಕೆಯಾದರು. ವಿರೋಧ ಪಕ್ಷದ ನಾಯಕ ಮೊಹಮ್ಮದ್ ಆದೀಬ್, ವಿರೋಧ ಪಕ್ಷದ ನಾಯಕಿ ಫಾತಿಮತ್ ಅರಬ್ ಮಿಯಾ, ಶಿಕ್ಷಣ ಮಂತ್ರಿಯಾಗಿ ಯಕ್ಷಿತಾ ಎ., ಉಪ ಶಿಕ್ಷಣ ಮಂತ್ರಿಯಾಗಿ ಆಯಿಷತ್ ತಶ್ರೀಫಾ ಎ.ಬಿ., ಆರೋಗ್ಯ ಮಂತ್ರಿಯಾಗಿ ಫಾತಿಮತ್





ಶೆಬೀಬಾ, ಉಪ ಆರೋಗ್ಯ ಮಂತ್ರಿಯಾಗಿ ಹೃತಿಕಾ ಕೆ., ಸ್ವಚ್ಛತಾ ಮಂತ್ರಿಯಾಗಿ ದೀಪಶ್ರೀ, ಉಪ ಸ್ವಚ್ಛತಾ ಮಂತ್ರಿಯಾಗಿ ಮೊಹಮ್ಮದ್ ಶಾಫಿ, ಮೊಹಮ್ಮದ್ ಅಜ್ಮಲ್, ಕೃಷಿ ಮಂತ್ರಿಯಾಗಿ ಮುಹಮ್ಮದ್, ಉಪ ಕೃಷಿ ಮಂತ್ರಿಯಾಗಿ ಅದ್ವೈತ್, ಸಾಂಸ್ಕೃತಿಕ ಮಂತ್ರಿಯಾಗಿ ಈಶ, ಉಪ ಸಾಂಸ್ಕೃತಿಕ ಮಂತ್ರಿಯಾಗಿ ಹಿತಾಶ್ರೀ ಪಿ.ಎಸ್., ಕ್ರೀಡಾ ಮಂತ್ರಿಯಾಗಿ ಮಹಮ್ಮದ್ ತನ್ವೀರ್, ಉಪ ಅಬ್ದುಲ್ ಘನಿ ಅಹ್ಮದ್, ನೀರಾವರಿ ಮಂತ್ರಿಯಾಗಿ ಮಹಮ್ಮದ್ ಸಮ್ಮಾಸ, ಉಪ ಮಹಮ್ಮದ್ ಶಾರಿಫಿಮ್, ಗೃಹ ಮಂತ್ರಿಯಾಗಿ ಫಾತಿಮಾ ಸನಾ, ಉಪ ಗೃಹ ಮಂತ್ರಿಯಾಗಿ ನೆಫೀಸತ್ ರಿಫ, ಆಹಾರ ಮಂತ್ರಿಯಾಗಿ ಫಾತಿಮತ್ ಸನಾ, ಉಪ ಆಹಾರ ಮಂತ್ರಿಯಾಗಿ ಬಿಂದಿಯಾ ರೈ, ಶಮೀಮಾ ಅವರನ್ನು ಆರಿಸಲಾಯಿತು. ಮುಖ್ಯ ಶಿಕ್ಷಕಿ ಪಾರ್ವತಿ ಕಜೆ ಅವರ ನೇತೃತ್ವದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಸಹ ಶಿಕ್ಷಕಿಯರಾದ ಸುನೀತಾ, ಸೌಮ್ಯ, ಅತಿಥಿ ಶಿಕ್ಷಕಿ ರವಿಕಲಾ, ಗೌರವ ಶಿಕ್ಷಕಿ ಮಮತಾ ಸಹಕರಿಸಿದರು.

ಅಜ್ಜಿಕಲ್ಲು ಮುಂಡೋದ ಮೂಲೆ ಅಂಗನವಾಡಿಗೆ ಇನ್ವರ್ಟರ್ ಕೊಡುಗೆ

ನಿಡ್ಪಳ್ಳಿ: ಅಜ್ಜಿಕಲ್ಲು ಮುಂಡೋದ ಮೂಲೆ ಅಂಗನವಾಡಿ ಕೇಂದ್ರಕ್ಕೆ ಮಕ್ಕಳ ವತಿಯಿಂದ ಇನ್ವರ್ಟರನ್ನು ಕೊಡುಗೆಯಾಗಿ ನೀಡಲಾಯಿತು. ಶೈಕ್ಷಣಿಕ ವರ್ಷದಲ್ಲಿ ಅಂಗನವಾಡಿಯಿಂದ ಬೀಳ್ಕೊಟ್ಟ ಮಕ್ಕಳಾದ ಸಾನ್ವಿಕ, ಕವನಶ್ರೀ, ಆಧ್ಯ, ಹಾರ್ದಿಕ, ವಿಹಾನಿ, ಮನ್ವಿತ್ ಎಂ.ಎಸ್., ಆಥರ್ವ ರೈ, ವಿಜಿತ್, ಯಶಸ್ವಿನಿ, ಲಿಶಾನ್ ಡಿ. ರೈ, ವಿಹಾನ್ ಕುಲಾಲ್, ಮನ್ವಿತ್ ಎಚ್. ಎನ್. ಅವರ ಪೋಷಕರು ಅಂಗನವಾಡಿ ಕೇಂದ್ರಕ್ಕೆ ಅತ್ಯವಶ್ಯಕವಾಗಿದ್ದ ಇನ್ವರ್ಟರ್ ಕೊಡುಗೆಯಾಗಿ ನೀಡಿದರು. ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಗೀತಾ ಡಿ. ಹಾಗೂ ಸಹಾಯಕಿ ರತಿ ಮತ್ತಿತರರು ಕೊಡುಗೆಯನ್ನು ಸ್ವೀಕರಿಸಿದರು.

ಇಂದು ಸಂಸದರ ಪುತ್ತೂರು ಭೇಟಿ

ಪುತ್ತೂರು: ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಜೂ.18ರಂದು ಪುತ್ತೂರು ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಿಲಾನ್ಯಾಸ, ಪ್ರಗತಿಯಲ್ಲಿ ಇರುವ ರೈಲ್ವೇ ಕಾಮಗಾರಿಗಳ ವೀಕ್ಷಣೆ ಮತ್ತು ಕಾರ್ಯಕರ್ತರ ಭೇಟಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 9.30ಕ್ಕೆ ಕಬಕ ಪುತ್ತೂರು ರೈಲ್ವೇ ನಿಲ್ದಾಣದಲ್ಲಿ ಅಂದಾಜು ಸುಮಾರು ರೂ.4.5 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳ್ಳಲಿರುವ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸುವರು ಎಂದು ಪ್ರಕಟಣೆ ತಿಳಿಸಿದೆ.

ಎನ್‌ಎಂಎಂಎಸ್ ವಿದ್ಯಾರ್ಥಿವೇತನಕ್ಕೆ ಆಯ್ಕೆ

ಸುಬ್ರಹ್ಮಣ್ಯ: ಭಾರತ ಸರ್ಕಾರದ ಶಿಕ್ಷಣ





ಮಂತ್ರಾಲಯದ ಎನ್‌ಸಿಆರ್ ಇಟಿನಿಂದ ನಡೆಸಲ್ಪಡುವ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದ್ಯಾರ್ಥಿ ವೇತನ ಪಡೆಯಲು ಸುಬ್ರಹ್ಮಣ್ಯದ ಎಸ್‌ಎಸ್‌ಪಿಯು ಕಾಲೇಜಿನ ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿನಿಯರಾದ ಹವ್ಯಶ್ರೀ ಮತ್ತು ಯೋಕ್ಷ ಆಯ್ಕೆ ಆಗಿದ್ದಾರೆ.

ಕೊಯಿಲ ಬಡಗನ್ನೂರು ಶಾಲಾ ಮಂತ್ರಿಮಂಡಲ ರಚನೆ

ಬಡಗನ್ನೂರು: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಾಲಾ ಮಂತ್ರಿ ಮಂಡಲವನ್ನು ಚುನಾವಣೆ ಮೂಲಕ ಆರಿಸಲಾಯಿತು. ಶಾಲಾ ಮುಖ್ಯಮಂತ್ರಿಯಾಗಿ ದಿವಿತ್ ರೈ, ಉಪಮುಖ್ಯಮಂತ್ರಿಯಾಗಿ





ಖದೀಜತ್ ಅರ್ಫೀಮಾ ಆಯ್ಕೆ ಮಾಡಲಾಯಿತು. ಶಿಕ್ಷಣ ಮಂತ್ರಿಯಾಗಿ ಶಬ್ನ ಫಾತಿಮಾ, ಮತ್ತು ಗಾನವಿ ಕೆ., ಕ್ರೀಡಾ ಮಂತ್ರಿಯಾಗಿ ಪವನ್ ಕುಮಾರ್ ಮತ್ತು ವೇದ್ಯ ಯು.ಆರ್., ಗೃಹ ಮಂತ್ರಿಯಾಗಿ ಧನುಷ್ ರೈ ಮತ್ತು ಪೂರ್ವಿಕ್ ರೈ, ಸಾಂಸ್ಕೃತಿಕ ಮಂತ್ರಿಯಾಗಿ, ಶ್ರಾವಣಿ ಮತ್ತು ಮರಿಯಮ್ ನಝ್ಮಿಯ, ವಾರ್ತಾ ಮಂತ್ರಿಯಾಗಿ ಶೃತಿಕಾ ಪಿ. ಮತ್ತು ಮುಹಮ್ಮದ್ ಮುಹಸಿನ್, ಸ್ವಚ್ಛತಾ ಮಂತ್ರಿಯಾಗಿ, ಆಯಿಷತ್ ಸನ್ನ ಮತ್ತು ಸೃಜನ್ ಎನ್., ಆರೋಗ್ಯ ಮಂತ್ರಿಯಾಗಿ ಮಹಮದ್ ರೈಝ್ ಮತ್ತು ರಿತೀಷ ಕೆ.ಪಿ. ರೈ, ನೀರಾವರಿ ಮಂತ್ರಿಯಾಗಿ ಅಭಿಲಾಶ್ ಓ.ಎಸ್. ಮತ್ತು ಶ್ರಾವಣ ಅವರು ಆಯ್ಕೆಯಾದರು. ಮುಖ್ಯೋಪಾಧ್ಯಾಯ ಗಿರೀಶ ಡಿ. ಪ್ರಮಾಣ ವಚನ ಬೋಧಿಸಿದರು. ಪದವೀಧರ ಶಿಕ್ಷಕಿ ಸೌಮ್ಯ ಬಿ. ಚುನಾವಣಾ ಮಹತ್ವ ಹಾಗೂ ಗೌಪ್ಯತೆ ಬಗ್ಗೆ ತಿಳಿಸಿದರು. ಅತಿಥಿ ಶಿಕ್ಷಕಿ ಸರಳಾ ಡಿ. ಸಹಕರಿಸಿದರು.

ಪುತ್ತೂರು, ವಿಟ್ಲ ವ್ಯಾಪ್ತಿಯ ಜ್ಞಾನ ವಿಕಾಸ ಸಂಯೋಜಕಿಯರ ಕ್ರಿಯಾ ಯೋಜನೆ ಸಭೆ



ಪುತ್ತೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪುತ್ತೂರು ತಾಲೂಕು ಹಾಗೂ ವಿಟ್ಲ ವ್ಯಾಪ್ತಿಯ ಜ್ಞಾನ ವಿಕಾಸ ಸಂಯೋಜಕಿಯರ ಕ್ರಿಯಾ ಯೋಜನೆ ಸಭೆಯನ್ನು ಪುತ್ತೂರು ಕಚೇರಿ ಸಭಾಂಗಣದಲ್ಲಿ ನಡೆಸಲಾಯಿತು.

ದಕ್ಷಿಣ ಕನ್ನಡ-2 ಜಿಲ್ಲೆಯ ನಿರ್ದೇಶಕ ಬಾಬು ನಾಯ್ಕ ಸಭೆಯನ್ನು ಉದ್ಘಾಟಿಸಿ ಜ್ಞಾನ ವಿಕಾಸ ಕೇಂದ್ರದ ಹುಟ್ಟು ಹಾಗೂ ಅದರ ಹಿನ್ನೆಲೆಯನ್ನು ತಿಳಿಸಿದರು. ಕೇಂದ್ರ ಕಚೇರಿಯ ಜ್ಞಾನ ವಿಕಾಸ ವಿಭಾಗದ ನಿರ್ದೇಶಕ ದಿನೇಶ್ ಪೂಜಾರಿ ಮಾತನಾಡಿ, ಪುತ್ತೂರು ಹಾಗೂ ವಿಟ್ಲ ತಾಲೂಕಿನಲ್ಲಿ ಜ್ಞಾನ ವಿಕಾಸ ಕೇಂದ್ರಗಳ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಮಹಿಳೆಯರಲ್ಲಿ ಸ್ವಉದ್ಯೋಗವನ್ನು ಮಾಡುವ ಬಗ್ಗೆ ಹೆಚ್ಚಿನ ಪ್ರೇರಣೆಯನ್ನು ನೀಡಬೇಕು. ಸ್ವಉದ್ಯೋಗದಿಂದ ಬದುಕನ್ನು ಬದಲಿಸಬಹುದು. ಸ್ವಉದ್ಯೋಗದಿಂದ ಕುಟುಂಬದ ಆರ್ಥಿಕ ಮಟ್ಟವೇ ಬದಲಾಗುತ್ತದೆ ಎಂದು ತಿಳಿಸಿದರು.

ಉಡುಪಿ ಪ್ರಾದೇಶಿಕ ವಿಭಾಗದ ಜ್ಞಾನ ವಿಕಾಸ ಯೋಜನಾಧಿಕಾರಿ ಅಮೃತ ಮಾತನಾಡಿ, ಮುಂಬರುವ ಜ್ಞಾನ ವಿಕಾಸ ಕ್ರಿಯಾ ಯೋಜನೆಗಳ ಸಮರ್ಪಕ ಅನುಷ್ಠಾನ, ವಾತ್ಸಲ್ಯ ಕಾರ್ಯಕ್ರಮಗಳ ಕುರಿತು ಮಾರ್ಗದರ್ಶನ ನೀಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಸೇವಾ ಪ್ರತಿನಿಧಿಗಳು ತಮ್ಮ ಅನಿಸಿಕೆ, ಅನುಭವಗಳನ್ನು ಹಂಚಿಕೊಂಡರು. ಸಭೆಯಲ್ಲಿ ಪುತ್ತೂರು ತಾಲೂಕಿನ ಯೋಜನಾಧಿಕಾರಿ ಶಶಿಧರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿಗಳಾದ ಕಾವ್ಯಶ್ರೀ ಹಾಗೂ ದೀಪ, ಎರಡು ತಾಲೂಕಿನ ಜ್ಞಾನವಿಕಾಸ ಕೇಂದ್ರಗಳ ಸಂಯೋಜಕೀಯರು ಉಪಸ್ಥಿತರಿದ್ದರು.

ಹರೇಕಳ ಶ್ರೀ ರಾಮಕೃಷ್ಣ ಪ್ರೌಢಶಾಲೆ ಪೋಷಕರ ಸಭೆ, ಅಭಿನಂದನಾ ಸಭೆ



ಕೊಣಾಜೆ: ಹರೇಕಳ ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆಯಲ್ಲಿ ನಡೆದ ಪೋಷಕರ ಸಭೆ ಮತ್ತು ಅಭಿನಂದನಾ ಕಾರ್ಯಕ್ರಮ ನಡೆಯಿತು.

ಮಂಗಳೂರಿನ ಪಿಎ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಸರ್ಫ್ರಾಜ್ ಜೆ. ಹಾಸಿಮ್ ಮಾತನಾಡಿದರು. ಅಧ್ಯಕ್ಷತೆಯನ್ನು ಶಾಲಾ ಸಂಚಾಲಕರಾದ ಕಡೆಂಜ ಶ್ರೀ ಸೋಮಶೇಖರ ಚೌಟ ವಹಿಸಿ ವಿದ್ಯಾ ಶ್ರೀ ಶೈಕ್ಷಣಿಕ ದತ್ತು ಯೋಜನೆಗೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಾದ ದರ್ಶಿನಿ, ಫಾತಿಮರಫೀದ, ಮಹಮ್ಮದ್ ಮುಂಝಿರ್ ಅವರನ್ನು ಸನ್ಮಾನಿಸಲಾಯಿತು. ರಕ್ಷಕ ಶಿಕ್ಷಕ ಸಂಘದ ಪದಾಧಿಕಾರಿಗಳ ಆಯ್ಕೆಯನ್ನು ಮಾಡಲಾಯಿತು. ಅಧ್ಯಕ್ಷರಾಗಿ ಉಷಾ ಫಜೀರು ಉಪಾಧ್ಯಕ್ಷರಾಗಿ ಪ್ರಿಯಾಂಕ ಗ್ರಾಮ ಚಾವಾಡಿ, ಅಶ್ರಫ್ ಬಾವಲಿಗುರಿ, ವಿಜಯ್ ಗ್ರಾಮ ಚಾವಡಿ, ವಿಶ್ವನಾಥ್ ಗ್ರಾಮ ಚಾವಡಿ , ಲತಾ ಫಜೀರು ಪ್ರಧಾನ ಕಾರ್ಯದರ್ಶಿಯಾಗಿ ಅಬ್ದುಲ್ ಮಜೀದ್ ಆಲಡ್ಕ ಕೋಶಾಧಿಕಾರಿಯಾಗಿ ಅಂಕಿತ, ಜೊತೆ ಕಾರ್ಯದರ್ಶಿಯಾಗಿ ಅಬ್ದುಲ್ ಸಲೀಮ್, ಕ್ರೀಡಾ ಕಾರ್ಯದರ್ಶಿಯಾಗಿ ಅಶ್ವಿನಿ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಲತಾ, ಸಂಘಟನಾ ಕಾರ್ಯದರ್ಶಿಯಾಗಿ ಆಯಿಷಾ ಮುಂತಾದವರು ಅವಿರೋಧವಾಗಿ ಆಯ್ಕೆಯಾದರು.

ಮುಖ್ಯ ಶಿಕ್ಷಕಿ ಮೋಹಿನಿ ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ತ್ಯಾಗಮ್ ಹರೇಕಳ ಶಾಲಾ ಶಿಸ್ತು, ಪಠ್ಯ ಹಾಗು ಪಠ್ಯೇತರ ಚಟುವಟಿಕೆಗಳ ಮಾಹಿತಿಯನ್ನು ನೀಡಿದರು. ಶಿಕ್ಷಕ ಶಿವಕುಮಾರ್ ಅಭಿನಂದನಾ ಭಾಷಣ ಮಾಡಿದರು. ಶಿಕ್ಷಕರಾದ ಕೃಷ್ಣಶಾಸ್ತ್ರಿ ವಂದಿಸಿದರು. ಸ್ಮಿತಾ, ಯಶಸ್ವಿನಿ, ಭವ್ಯ ಮುಂತಾದವರು ಸಹಕರಿಸಿದರು.

ಬಂಟ್ವಾಳ ಪತ್ರಕರ್ತರ ಸಂಘದಿಂದ ದಿ.ಪ್ರೊ.ಬಾಲಕೃಷ್ಣ ಗಟ್ಟಿಗೆ ನುಡಿನಮನ



ಬಂಟ್ವಾಳ: ಈಚೆಗೆ ನಿಧನರಾದ ಬಂಟ್ವಾಳ ತಾಲೂಕು ಪತ್ರಕರ್ತರ ಸಂಘದ ಸ್ಥಾಪಕಾಧ್ಯಕ್ಷರು, ಹಿರಿಯ ಪತ್ರಕರ್ತರಾದ ದಿ. ಪ್ರೊ. ಬಾಲಕೃಷ್ಣಶೆಟ್ಟಿ ಅವರಿಗೆ ನುಡಿನಮನ ಕಾರ್ಯಕ್ರಮ ಬಂಟ್ವಾಳ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಮಂಗಳವಾರ ಬಿ.ಸಿ.ರೋಡಿನ ಪ್ರೆಸ್ ಕ್ಲಬ್ ನಲ್ಲಿ ನಡೆಯಿತು.

ಸಂಘದ ಅಧ್ಯಕ್ಷ ಪ್ರಶಾಂತ್ ಪುಂಜಾಲಕಟ್ಟೆ ಅವರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತರಾದ ಗಣೇಶ್ ಪ್ರಸಾದ್ ಪಾಂಡೇಲು, ವೆಂಕಟೇಶ್ ಬಂಟ್ವಾಳ, ಹರೀಶ್ ಮಾಂಬಾಡಿ ಅವರು ದಿವಂಗತ ಪ್ರೊ. ಬಾಲಕೃಷ್ಣ ಅವರು ಪತ್ರಕರ್ತರಾಗಿ, ಸಾಹಿತಿಯಾಗಿ, ಉಪನ್ಯಾಸಕರಾಗಿ, ವಿವಿಧ ಶಿಕ್ಷಣ ಸಂಸ್ಥೆಯಲ್ಲಿ ಆಡಳಿತಾಧಿಕಾರಿಯಾಗಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರಲ್ಲದೆಗುಣಗಾನಮಾಡಿದರು. ಬಳಿಕ ಮೌನಪ್ರಾರ್ಥನೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಸಂದೀಪ್ ಸಾಲ್ಯಾನ್, ಸಂಘದ ಕಾರ್ಯದರ್ಶಿ ರಹಿಮಾನ್ ತಲಪಾಡಿ, ಉಪಾಧ್ಯಕ್ಷ ವಿಷ್ಣುಗುಪ್ತ ಪುಣಚ, ಸದಸ್ಯರಾದ ಮೌನೇಶ್ ವಿಶ್ವಕರ್ಮ, ರತ್ನದೇವಪುಂಜಾಲಕಟ್ಟೆ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಆಲಿ ವಿಟ್ಲ ಸ್ವಾಗತಿಸಿ,ವಂದಿಸಿದರು.

ಪಚ್ಚನಾಡಿ: ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯಿಂದ ಮಾಹಿತಿ ಕಾರ್ಯಕ್ರಮ



ಮಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆದರ್ಶ ವಾಮಂಜೂರು ಒಕ್ಕೂಟ ಹಾಗೂ ಶ್ರೀ ಕಟೀಲೇಶ್ವರಿ ಜ್ಞಾನವಿಕಾಸ ಕೇಂದ್ರದ ವತಿಯಿಂದ ಮಾದಕ ವ್ಯಸನಮುಕ್ತ ಸಮಾಜವನ್ನು ನಿರ್ಮಿಸಲು ತಾಯಂದಿರ ಪಾತ್ರ, ಹಾಗೂ ಮಳೆಗಾಲದಲ್ಲಿ ಹರಡುವ ಸಾಂಕ್ರಾಮಿಕ ರೋಗ ಹಾಗೂ ಅದನ್ನು ತಡೆಯುವ ಬಗ್ಗೆ ಮಾಹಿತಿ ಕಾರ್ಯಕ್ರಮ ಪಚ್ಚನಾಡಿ ಶಿವಾಜಿನಗರದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ವಠಾರದಲ್ಲಿ ನೆರವೇರಿತು.

ಚಾಮುಂಡೇಶ್ವರಿ ಕ್ಷೇತ್ರದ ಅರ್ಚಕ ರಾಜಾರಾಮ್ ಭಟ್ ಈ ಕಾರ್ಯಕ್ರಮ ಉದ್ಘಾಟಿಸಿದರು. ದುಶ್ಚಟ ಮುಕ್ತ ಸ್ವಸ್ಥ ಸಮಾಜ ನಿರ್ಮಾಣ ಹಾಗೂ ಹಾನಿಕಾರಕ ತಂಬಾಕು ಉತ್ಪನ್ನಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ವಿಜಯ್ ಕೋಟ್ಯಾನ್ ಮಾಹಿತಿ ನೀಡಿದರು. ಸಾಂಕ್ರಾಮಿಕ ಕಾಯಿಲೆಗಳ ಬಗ್ಗೆ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಆಶಾ ಮಾಹಿತಿ ನೀಡಿದರು. ಸುಷ್ಮಾ ಶೆಟ್ಟಿಗಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಲಯದ ಮೇಲ್ವಿಚಾರಕಿ ಸುಜಾತ, ಒಕ್ಕೂಟ ಪದಾಧಿಕಾರಿಗಳು, ಜ್ಞಾನ ವಿಕಾಸದ ಸದಸ್ಯರು, ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು. ಸೇವಾ ಪ್ರತಿನಿಧಿ ಸೆಲ್ವಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಸಮನ್ವಯಾಧಿಕಾರಿ ಪ್ರಮೀಳಾ ವಂದಿಸಿದರು.

■ ಮಾದಕ ವ್ಯಸನಮುಕ್ತ ಸಮಾಜವನ್ನು ನಿರ್ಮಿಸಲು ತಾಯಂದಿರ ಪಾತ್ರ,

■ ಮಳೆಗಾಲದಲ್ಲಿ ಹರಡುವ ಸಾಂಕ್ರಾಮಿಕ ರೋಗ ಹಾಗೂ ಅದನ್ನು ತಡೆಯುವ ಬಗ್ಗೆ ಮಾಹಿತಿ

ತೋಕೂರು ಯುವಕ ಸಂಘ, ಮಹಿಳಾ ಮಂಡಲದಿಂದ ಶೈಕಣಿಕ ಸೌಲಭ್ಯ ವಿತರಣೆ



ಮುಲ್ಕಿ: ತೋಕೂರು ಯುವಕ ಸಂಘ ಹಾಗೂ ಮಹಿಳಾ ಮಂಡಲದ ಆಶ್ರಯದಲ್ಲಿ ಗ್ರಾಮದ ಅಂಗನವಾಡಿ, ಶಾಲೆ ಹಾಗೂ ಆರ್ಥಿಕವಾಗಿ ಹಿಂದುಳಿದ ಗ್ರಾಮದ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸವಲತ್ತುಗಳ ವಿತರಣಾ ಸಮಾರಂಭ ನಡೆಯಿತು.

ಅಧ್ಯಕ್ಷತೆ ವಹಿಸಿ ಎಂಆರ್‌ಪಿಎಲ್‌ನ ಪ್ರಬಂಧಕ ರಿತೇಶ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಸವಲತ್ತುಗಳನ್ನು ಪಡೆದು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಜೊತೆಗೆ ದೇಶದ ಸುಸಂಸ್ಕೃತ ನಾಗರಿಕರಾಗಿ ಬೆಳೆಯಬೇಕು, ಕಲಿತ ಶಾಲೆ, ಸಹಕರಿಸಿದ ಸಂಸ್ಥೆಗಳ ಬೆನ್ನೆಲುಬಾಗಿ ನಿಲ್ಲುವಂತಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಜಪಾ ಮುಲ್ಕಿ ಮೂಡುಬಿದಿರೆ ಮಂಡಲದ ಅಧ್ಯಕ್ಷ ದಿನೇಶ್ ಪುತ್ರನ್ ಮಾತನಾಡಿ, ಗ್ರಾಮದ ಅಭಿವೃದ್ಧಿಯಲ್ಲಿ ಸಂಘ ಸಂಸ್ಥೆಗಳು ಮಹತ್ವದ ಜವಾಬ್ದಾರಿ ವಹಿಸುತ್ತಿದ್ದು ತೋಕೂರು ಪರಿಸರದ ವಿದ್ಯಾರ್ಥಿಗಳು, ಜನತೆ ಅದೃಷ್ಟವಂತರು ಎಂದರು

ಮುಲ್ಕಿ ಮಾನಂಪಾಡಿ ಶಾಲೆಯ ಸಹ ಶಿಕ್ಷಕಿ ವಸಂತಿ ಕುಮಾರಿ ಮಾತನಾಡಿ ವಿದ್ಯಾರ್ಥಿಗಳು ಪಾಠದ ಜೊತೆಗೆ ಕ್ರೀಡೆಯಲ್ಲಿಯೂ ತೊಡಗಿಸಿಕೊಂಡು ಉತ್ತಮ ಕ್ರೀಡಾಪಟುಗಳಾಗಿ ಬೆಳೆಯಬೇಕು ಎಂದರು.

ಯುವಕ ಸಂಘದ ಅಧ್ಯಕ್ಷರಾದ ವಾಮನ ಎಸ್ ದೇವಾಡಿಗ ಸ್ವಾಗತಿಸಿದರು ಮಹಿಳಾ ಮಂಡಲದ ಅಧ್ಯಕ್ಷೆ ಮೇಘನ ಅಡಿಗ ಧನ್ಯವಾದ ಅರ್ಪಿಸಿದರು. ಯುವಕ ಸಂಘದ ಜೊತೆ ಕಾರ್ಯದರ್ಶಿ ಭೂಷಣ್ ಹಾಗೂ ಮಹಿಳಾ ಮಂಡಲದ ಕಾರ್ಯದರ್ಶಿ ಮೋಹಿನಿ ವಿದ್ಯಾರ್ಥಿಗಳ ಪಟ್ಟಿಯನ್ನು ಓದಿದರು. ಯುವಕ ಸಂಘದ ಉಪಾಧ್ಯಕ್ಷ ಹರಿದಾಸ್ ಭಟ್ ನಿರೂಪಿಸಿದರು.

ಕಂಬ್ಳ ವಾರ್ಡಿನ ವೇರ್‌ಹೌಸ್ ರಸ್ತೆಯ ಸಮಗ್ರ ಅಭಿವೃದ್ಧಿಗೆ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 29ನೇ ಕಂಬ್ಳ ವಾರ್ಡಿನ ವೇರ್ ಹೌಸ್ ರಸ್ತೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಾಗಿಯು 40ಲಕ್ಷ ರೂ. ವಿಶೇಷ ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು. ಪಾಲಿಕೆ ನಿಕಟಪೂರ್ವ ಸದಸ್ಯೆ ಲೀಲಾವತಿ ಪ್ರಕಾಶ್, ಪ್ರಮುಖರಾದ ರಕ್ಷಿತ್ ಕೊಟ್ಟಾರಿ, ಜಯರಾಜ್ ಕೊಟ್ಟಾರಿ, ರಿತೇಶ್ ಶೆಟ್ಟಿ ಪ್ರಕಾಶ್ ಕೊಡಿಯಾಲ್ ಬೈಲ್, ಪ್ರವೀಣ್ ನಿಡ್ಡೆಲ್, ವಿಮಲಾ ಟೀಚರ್, ರೇಖಾ ಶೆಟ್ಟಿ ಗಣೇಶ್ ಪೈ, ಸಂತೋಷ್ ಶೇಟ್, ನಾಗರಾಜ್ ಭಟ್, ಎಂ.ವಿಠಲದಾಸ್ ಭಟ್, ಮೋಹನ್ ಶೆಟ್ಟಿ ಸುಮೀತ್ ಶೆಟ್ಟಿ ವಿಕ್ರಮ್ ಕೊಟ್ಟಾರಿ ಉಪಸ್ಥಿತರಿದ್ದರು.



ಬಂಟ್ವಾಳ ನರಿಕೊಂಬು ಗ್ರಾಮ ಏರಮಲೆ ಶ್ರೀ ಕ್ಷೇತ್ರ ಕಾಡೆದಿ ಭದ್ರಕಾಳಿ ದೇವಸ್ಥಾನದಲ್ಲಿ ಕ್ಷೇತ್ರ ಅಭಿವೃದ್ಧಿ ಕುರಿತ ತಾಂಬೂಲ ಪ್ರಶ್ನೆಯು ಪಯ್ಯನೂರು ಜ್ಯೋತಿಷಿ ಸಿ.ಪಿ. ಗೋಪಾಲಕೃಷ್ಣ ಪಣಿಕರ್ ಮೂಲಕ ನಡೆಯಿತು. ಕ್ಷೇತ್ರ ತಂತ್ರಿ ಕೇಶವ ಶಾಂತಿ, ಕ್ಷೇತ್ರ ಸೇವಾ ಸಮಿತಿ ಅಧ್ಯಕ್ಷ ರಾಜ್ ಬಂಟ್ವಾಳ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮುನಿಯಾಲು ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ 8 ವಿದ್ಯಾರ್ಥಿಗಳ ಅಭಿನಂದನೆ

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಸಾಧಕ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ

ಹೆಬ್ರಿ: ಮುನಿಯಾಲು ಕರ್ನಾಟಕ ಪಬ್ಲಿಕ್ ಸ್ಕೂಲ್ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಯಲ್ಲಿ ವಿಶಿಷ್ಟ ಸಾಧನೆಗೈದ ಹಾಗೂ ಸಂಸ್ಥೆಯಲ್ಲಿ ಗರಿಷ್ಠ ಅಂಕಗಳಿಸಿದ ಸುಮಾರು 60 ವಿದ್ಯಾರ್ಥಿಗಳ ಮತ್ತು ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ 8 ವಿದ್ಯಾರ್ಥಿಗಳ ಅಭಿನಂದನಾ ಕಾರ್ಯಕ್ರಮವು ಮುನಿಯಾಲಿನ ಶ್ರೀ ಪದ್ಮಾವತಿ ಕಲ್ಯಾಣ ಮಂದಿರದಲ್ಲಿ ನಡೆಯಿತು.

ವಿವಿಧ ವಿಷಯಗಳಲ್ಲಿ ಪೂರ್ಣ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಇದೇ ಸಂದರ್ಭದಲ್ಲಿ ಶಾಲಾ ಕ್ರೀಡಾ ಹಾಗೂ ಸಾಂಸ್ಕೃತಿಕ ವೇದಿಕೆಯ ಉದ್ಘಾಟನೆಯನ್ನು ಸಹ ನೆರವೇರಿಸಲಾಯಿತು.

ಸಂಸ್ಥೆಯಿಂದ ವರ್ಗಾವಣೆಗೊಂಡ ಪ್ರೌಢಶಾಲಾ



ಶಿಕ್ಷಕರಾದ ಮಂಜುನಾಥ್ ಹಾಗೂ ಸುಧೀಂದ್ರ ಅವರಿಗೆ ಗೌರವಾರ್ಪಣೆ ಮಾಡಲಾಯಿತು. ಇದೇ ನಿವೃತ್ತಿಗೊಳ್ಳಲಿರುವ ಉಡುಪಿ ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ ಅವರಿಗೂ ಅಭಿನಂದನೆ ಸಲ್ಲಿಸಲಾಯಿತು.

ಪ್ರಾಂಶುಪಾಲರಾದ ಬೇಬಿ ಶೆಟ್ಟಿ ಕೆ. ಅತಿಥಿಗಳನ್ನು ಸ್ವಾಗತಿಸಿ ಪ್ರಸ್ತಾವನೆಗೈದರು. ವಿದ್ಯಾರ್ಥಿ ಕ್ರೀಡಾ ಹಾಗೂ ಸಾಂಸ್ಕೃತಿಕ ವೇದಿಕೆಯನ್ನು ಉದ್ಘಾಟಿಸಿದ ಶೃಂಗೇರಿ ಶಾರದಾ ದೇವಾಲಯದ ಆಡಳಿತ ಮಂಡಳಿಯ ಅಧಿಕಾರಿ ಸತೀಶ್ ಭಟ್ ವಿದ್ಯಾರ್ಥಿ ಸಾಧಕರನ್ನು ಹಾಗೂ ಅವರಿಗೆ ಮಾರ್ಗದರ್ಶನ ನೀಡಿದ ಗುರುವೃಂದವನ್ನು ಪ್ರಶಂಸಿಸಿ, ಶಿಕ್ಷಣ ಪ್ರಸಾರದಲ್ಲಿ ಶೃಂಗೇರಿ ಶಾರದಾ ಪೀಠವು ನಡೆಸುತ್ತಿರುವ ಸೇವಾ ಕಾರ್ಯಗಳ ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಂಸಿಎಫ್ ಮಂಗಳೂರಿನ ಮಾರ್ಕೆಟಿಂಗ್ ವಿಭಾಗದ ಅಧಿಕಾರಿ ಕೀರ್ತನ್ ಕುಮಾರ್ ಅವರು ಕರ್ನಾಟಕ ಪಬ್ಲಿಕ್ ಸ್ಕೂಲ್ ಮುನಿಯಾಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಅತೀವ ಸಂತೋಷ ವ್ಯಕ್ತಪಡಿಸಿ ತಮ್ಮ ಸಂಸ್ಥೆಯ ವತಿಯಿಂದ ವಿದ್ಯಾಸಂಸ್ಥೆಗೆ ಸಾಧ್ಯವಿರುವ ಎಲ್ಲಾ ನೆರವನ್ನು ನೀಡುವ ಭರವಸೆ ನೀಡಿದರು.

ಉದಯ ಕೃಷ್ಣ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಹಾಗೂ ವಿದ್ಯಾಭಿಮಾನಿ ಉದಯ ಕುಮಾರ್ ಶೆಟ್ಟಿ ಮುನಿಯಾಲು ಮಾತನಾಡಿದರು.

ಮುಂಬೈನ ಯುವ ಉದ್ಯಮಿ ಹಾಗೂ ಸಂಸ್ಥೆಯ ಹಳೆ ವಿದ್ಯಾರ್ಥಿ ಗಿರೀಶ್ ಶೆಟ್ಟಿ ತೆಳ್ಳಾರು, ನಿವೃತ್ತ ಯೋಧ ಆನಂದ ಕಬ್ಬಿನಾಲೆ, ಸ್ಥಳೀಯ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಸುಧಾಕರ್, ಕೆಪಿಎಸ್ ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ಉಷಾ ಶೆಟ್ಟಿ, ಪದವಿಪೂರ್ವ ವಿಭಾಗದ ವಿದ್ಯಾರ್ಥಿ ನಾಯಕ ಪ್ರಣೀತ್ ಶೆಟ್ಟಿಗಾರ್, ಪ್ರೌಢಶಾಲಾ ವಿದ್ಯಾರ್ಥಿ ನಾಯಕ ಸಾಗರ್ ಶೆಟ್ಟಿ, ಪ್ರಾಥಮಿಕ ವಿಭಾಗದ ವಿದ್ಯಾರ್ಥಿ ನಾಯಕಿ ಸ್ತುತಿ ಆಚಾರ್ಯ ಮುಂತಾದವರು ಉಪಸ್ಥಿತರಿದ್ದರು.

ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಉಪಾಧ್ಯಕ್ಷ ಹರೀಶ್ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ರವೀಂದ್ರ ರಾವ್ ಧನ್ಯವಾದ ಅರ್ಪಣೆ ಮಾಡಿ ಶಿಕ್ಷಕ ಪ್ರಕಾಶ್ ಪೂಜಾರಿ ಕಾರ್ಯಕ್ರಮ ನಿರೂಪಣೆ ಮಾಡಿದರು.

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮುಲ್ಕಿ ಕಾರ್ನಾಡು, ಚಿತ್ರಾಪು, ಬಪ್ಪನಾಡು, ಕೊಳಚಿಕಂಬ್ಳ, ಗೇರುಕಟ್ಟೆ, ಕೆ.ಎಸ್.ರಾವ್ ನಗರ, ಲಿಂಗಪ್ಪಯ್ಯ ಕಾಡು, ಹಳೆಯಂಗಡಿ, ಪಾವಂಜೆ ಕಾರ್ನಾಡ್ ಇಂಡಸ್ಟ್ರಿಯಲ್ ಏರಿಯಾ, ಮಾನಂಪಾಡಿ, ಕವತ್ತಾರು, ಬಳ್ಕುಂಜೆ, ಶಿಮಂತೂರು, ಕಿನ್ನಿಗೋಳಿ, ಏಳಳ, ಎಳತ್ತೂರು, ಗುತ್ತಕಾಡು, ಬಲವಿನಗುಡ್ಡೆ, ಪದ್ಮನೂರು, ಏಲಿಂಜೆ, ಮೆನ್ನಬೆಟ್ಟು ಮೂರು ಕಾವೇರಿ, ಗೋಳಿಜೋರ, ಕಿನ್ನಿಗೋಳಿ, ಹಳೆಯಂಗಡಿ, ತೋಕೂರು, ಪಡುಪಣಂಬೂರು, ಲಿಂಗಪ್ಪಯ್ಯಕಾಡು, ಕೆರೆಕಾಡು, ಎಸ್ಕೋಡಿ, ಪುನರೂರು, ಬೆಳ್ಳಾರು ಎಂ.ಆರ್.ಪಿ.ಎಲ್ ಕಾಲನಿ, ಮುಕ್ಕ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಜೂ.18ರಂದು ಬೆಳಗ್ಗೆ 9.300ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ನಿಡ್ಡೋಡಿ, ತೋಡಾರ್ ಪರಿಸರ

ನಿಡ್ಡೋಡಿ, ಸಂಪಿಗೆ, ಕಲ್ಲಮುಂಡ್ಕೂರು, ಕುದ್ರಿಪದವು, ಬೋಂಟ್ರಪ್ಪೆ, ಅಶ್ವತ್ಥಪುರ, ಮಂಗೆಬೆಟ್ಟು ನೀರ್ಕೆರೆ, ಕಾಯರ್ಮುಗೇರು, ಚಿಕ್ಕಪಾದೆ, ಕೊಪ್ಪಲ, ಕಲಕಟ್ಟೆ, ನೆಲ್ಲಿಗುಡ್ಡೆ ಪುತ್ತಿಗೆಪದವು, ಹಂಡೇಲು, ತೋಡಾರುಪಡೀಲು, ಪುದ್ದರಕೋಡಿ, ತೋಡಾರ್ಪಲ್ಕೆ, ಮಿಜಾರ್, ಮೈಟ್, ಕೊಪ್ಪದಕುಮೇರು, ತೋಡಾರ್‌ಗುಡ್ಡೆ, ಪಡ್ಡೋಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.18ರಂದು ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪೆರ್ನಾಜೆಯ ಸ್ವರೂಪ ಶಿಕ್ಷಣ ಸಂಸ್ಥೆಯ ವಿರುದ್ಧ ಕ್ರಮಕ್ಕೆ ಆಗ್ರಹ

ಪುತ್ತೂರು: ಸುಮಾರು 60 ವರ್ಷಗಳಿಂದ ಕಾರ್ಯಾಚರಿಸುತ್ತಿದ್ದ ಪೆರ್ನಾಜೆಯ ಶ್ರೀ ಸೀತಾರಾಘವ ಅನುದಾನಿತ ಶಾಲೆಯು ಕಳೆದ 3 ವರ್ಷಗಳ ಹಿಂದೆ ಮುಚ್ಚಲ್ಪಟ್ಟಿದ್ದು ಪ್ರಸ್ತುತ ವರ್ಷದಿಂದ ಅದೇ ಕಟ್ಟಡದಲ್ಲಿ ಯಾವುದೇ ಅನುಮತಿ ಇಲ್ಲದೆ ನಡೆಯುತ್ತಿರುವ ಸ್ವರೂಪ ಎಂಬ ಶಿಕ್ಷಣ ಸಂಸ್ಥೆಯ ವಿರುದ್ಧ ಶಿಕ್ಷಣ ಇಲಾಖೆ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಮುಂದಾಳು ಹೇಮನಾಥ ಶೆಟ್ಟಿ ಕಾವು ಆಗ್ರಹಿಸಿದ್ದಾರೆ.

ಅವರು ಬುಧವಾರ ಪುತ್ತೂರಿನ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಚ್ಚಲ್ಪಟ್ಟಿರುವ ಅನುದಾನಿತ ಶಾಲೆಯ ಜಾಗವು ರಕ್ಷಿತಾರಣ್ಯಕ್ಕೆ ಸೇರಿದ್ದಾಗಿದ್ದು ಅಲ್ಲಿ ಬೇರೆ ಶಾಲೆ ನಡೆಸುವಂತಿಲ್ಲ, ಜತೆಗೆ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಇಲ್ಲವಾಗಿದ್ದು ಸ್ಥಾಪ್ಯಗೆ ಒಳಪಡದ ಶಾಲೆಗೆ ಡೈಸ್ ಕೋಡ್ ಕೂಡ ಇಲ್ಲವಾಗಿದೆ. ಈ ವಿಚಾರದ ಕುರಿತು ಡಿಡಿಪಿಐಯವರಿಗೆ ದೂರು ಕೂಡ ನೀಡಲಾಗಿದ್ದು ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಆದರೆ ಇನ್ನೂ ಕೂಡ ಕ್ರಮ ಆಗದೇ ಇದ್ದು ಜತೆಗೆ ಪುತ್ತೂರು ಶಾಸಕರ ಗಮನಕ್ಕೂ ತಂದಿದ್ದೇನೆ. ಹೀಗಾಗಿ ಸಂಬಂಧಪಟ್ಟ ಶಿಕ್ಷಣ ಇಲಾಖೆ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಪ್ರಮುಖರಾದ ತಾರಾನಾಥ್, ಅನ್ವರ್ ಕಾಸಿಂ, ಗಂಗಾಧರ ಶೆಟ್ಟಿ ರವಿಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು.

ಸುಳ್ಯದಲ್ಲಿ ಮತದಾರ ಪಟ್ಟಿ ಸಮಗ್ರ ಪರಿಷ್ಕರಣೆ ತರಬೇತಿ

ಸುಳ್ಯ: ಭಾರತ ಚುನಾವಣಾ ಆಯೋಗದ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಎಸ್‌ಐಆರ್ ತರಬೇತಿ ಶಿಬಿರ ಬುಧವಾರ ಬಂಟರ ಭವನದಲ್ಲಿ ನಡೆಯಿತು.

207 ಸುಳ್ಯ ವಿಧಾನಸಭಾ ಕ್ಷೇತ್ರ ಸಂಬಂಧಿಸಿದಂತೆ ಮತಗಟ್ಟೆಗೆ ನಿಯೋಜಿಸಲಾದ ಬೂತ್ ಮಟ್ಟದ ಅಧಿಕಾರಿ (ಬಿಎಲ್), ಬೂತ್ ಮಟ್ಟದ ಮೇಲ್ವಿಚಾರಕರು (ಬಿಎಲ್ ಸೂಪರ್‌ವೈಸರ್) ಹಾಗೂ ಬೂತ್ ಮಟ್ಟದ ಏಜೆಂಟರಿಗೆ(ಬಿಎಲ್) ಆಯೋಜಿಸಲಾಗಿದ್ದು, ಪ್ರಥಮ ಹಂತದ ತರಬೇತಿಯನ್ನು ತರಬೇತಿಯನ್ನು ಮತದಾರರ ನೋಂದಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಜಯಲಕ್ಷ್ಮಿ ಉದ್ಘಾಟಿಸಿ ಮಾಹಿತಿ ನೀಡಿದರು. ಮತದಾರರ ಉಪನೋಂದಣಾಧಿಕಾರಿ ಹಾಗೂ ಸುಳ್ಯ ತಹಶೀಲ್ದಾರ್ ಮಂಜುಳ ಎಂ., ಉಪ ತಹಶೀಲ್ದಾರ್ ಚಂದ್ರಕಾಂತ್ ಎಂ.ಆರ್., ಮಾಸ್ಟರ್ ತರಬೇತಿದಾರ ಸತೀಶ್ ಕುಮಾರ್ ಹಾಗೂ ಲಿಂಗಪ್ಪ ಬೆಳ್ಳಾರೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಳಿಕ ಮತದಾರ ಪಟ್ಟಿ ಪರಿಷ್ಕರಣೆ ಕುರಿತಾಗಿ ಸತೀಶ್ ಕುಮಾರ್, ಲಿಂಗಪ್ಪ ಬೆಳ್ಳಾರೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳು ರಾಜಕೀಯ ಪಕ್ಷಗಳ ಬೂತ್ ಮಟ್ಟದ ಪ್ರಮುಖರು ಉಪಸ್ಥಿತರಿದ್ದರು.

ಮತಗಟ್ಟೆ ಏಜೆಂಟರಿಗೆ ಎಸ್‌ಐಆರ್ ಕುರಿತು ತರಬೇತಿ ಕಾರ್ಯಾಗಾರದಲ್ಲಿ ತಹಶೀಲ್ದಾರ್ ಶ್ರೀಧರ್ ಸೂಚನೆ

ಅರ್ಹ ಮತದಾರರು ಹೊರಗುಳಿಯದಂತೆ ಎಚ್ಚರಿಕೆ ವಹಿಸಿ



ಮಡಿಕೇರಿ: ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರು ಹೊರಗುಳಿಯದಂತೆ ಮತ್ತು ಹೊಸ ಮತದಾರರನ್ನು ಸೇರಿಸುವ ನಿಟ್ಟಿನಲ್ಲಿ ಬೂತ್ ಮಟ್ಟದ ಅಧಿಕಾರಿಗಳ ಸಹಕಾರ ಮುಖ್ಯ. ಆದ್ದರಿಂದ ಬೂತ್ ಮಟ್ಟದ ಏಜೆಂಟರು ಮತ್ತು ಬೂತ್ ಮಟ್ಟದ ಅಧಿಕಾರಿಗಳು ಸಮನ್ವಯ ಸಾಧಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಮಡಿಕೇರಿ ತಾಲೂಕು ತಹಶೀಲ್ದಾರ್ ಆರ್. ಶ್ರೀಧರ್ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಮತಗಟ್ಟೆ ಏಜೆಂಟರುಗಳಿಗೆ ಎಸ್‌ಐಆರ್ ಕುರಿತು ನಡೆದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿ, ಏಜೆಂಟರು ಎಸ್‌ಐಆರ್ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ತಿಳಿದುಕೊಂಡು, ಪಾರದರ್ಶಕವಾಗಿ ಮತದಾರರ ಪಟ್ಟಿ ಸಿದ್ಧಗೊಳ್ಳಲು ಸಹಕರಿಸಬೇಕು. ಮತದಾರರಿಗೆ ಯಾವುದೇ ತೊಂದರೆಯಾಗದಂತೆ ಗಮನಹರಿಸಬೇಕು. ಕೈ ಬಿಟ್ಟ ಹೆಸರುಗಳನ್ನು ಮತ್ತೆ ಸೇರಿಸಲು ನಮೂನೆ ಭರ್ತಿ ಮಾಡಲು ಸಹಾಯ ಮಾಡಬೇಕು, ಮತಗಟ್ಟೆ ಹಂತದಲ್ಲಿನ ದೋಷಗಳನ್ನು ಗುರುತಿಸಿ, ಚುನಾವಣಾ ಅಧಿಕಾರಿಗಳಿಗೆ ಸರಿಯಾದ ಸಮಯದಲ್ಲಿ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು.

ಜವಾಬ್ದಾರಿಯಿಂದ ನಿರ್ವಹಿಸಿ

ತರಬೇತುದಾರ ಎಸ್.ಡಿ.ಪ್ರಶಾಂತ್ ಮಾತನಾಡಿ, ಮತಗಟ್ಟೆ ಮಟ್ಟದ ಏಜೆಂಟರುಗಳು ಅರ್ಹ ಮತದಾರರನ್ನು ಪಟ್ಟಿಗೆ ಸೇರಿಸಲು, ತಪ್ಪುಗಳನ್ನು ತಿದ್ದಲು ಮತ್ತು ಅರ್ಹರಲ್ಲದ ಮತದಾರರನ್ನು ತೆಗೆದುಹಾಕುವ ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಹೇಳಿದರು.

ಅಧಿಕಾರಿಗಳು ನಿರ್ದಿಷ್ಟ ಅವಧಿಯಲ್ಲಿ ಪ್ರತಿ ಮನೆಗೆ ಭೇಟಿ ನೀಡಿ, ಮತದಾರರ ಪಟ್ಟಿಯಲ್ಲಿರುವ ಹೆಸರುಗಳನ್ನು ಪರಿಶೀಲಿಸಬೇಕು, 18 ವರ್ಷ ತುಂಬಿದ ಯುವಕ-ಯುವತಿಯರು ಮತ್ತು ಹೊಸದಾಗಿ ಸ್ಥಳಾಂತರಗೊಂಡ ಅರ್ಹ ನಾಗರಿಕರಿಂದ ಫಾರ್ಮ್-6 ಅನ್ನು ಭರ್ತಿ ಮಾಡಿಸಿ ನೋಂದಾಯಿಸಿಕೊಳ್ಳಬೇಕು. ಮೃತಪಟ್ಟವರು, ಬೇರೆಡೆ ಸ್ಥಳಾಂತರಗೊಂಡವರು ಅಥವಾ ನಕಲಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲು ಫಾರ್ಮ್-7 ಅನ್ನು ಸ್ವೀಕರಿಸಬೇಕು, ಹೆಸರು, ವಿಳಾಸ, ವಯಸ್ಸು ಅಥವಾ ಭಾವಚಿತ್ರ ತಪ್ಪಾಗಿದ್ದರೆ ಅವುಗಳನ್ನು ಸರಿಪಡಿಸಲು ಹಾಗೂ ಒಂದೇ ವಿಧಾನಸಭಾ ಕ್ಷೇತ್ರದೊಳಗೆ ವಿಳಾಸ ಬದಲಾವಣೆಗೆ ಫಾರ್ಮ್-8 ಅನ್ನು ಸಂಗ್ರಹಿಸಬೇಕು ಎಂದು ಹೇಳಿದರು.

ವಿಶೇಷ ತೀವ್ರ ಪರಿಷ್ಕರಣೆ ಎಂದು ಲೇಬಲ್ ಮಾಡಲಾದ ಕಿಟ್ ಬ್ಯಾಗ್, ಯಾವುದೇ ಸೂಚಿಸಿದ ದಿನಾಂಕದದಂದು ಅಸ್ತಿತ್ವದಲ್ಲಿರುವ ಪ್ರತಿಯೊಬ್ಬ ಮತದಾರರಿಗೆ ಅಸ್ತಿತ್ವದಲ್ಲಿರುವ ಮತದಾರರ ಪೂರ್ವ ಮುದ್ರಿತ ವಿವರಗಳೊಂದಿಗೆ ಎಣಿಕೆ ನಮೂನೆಗಳ ಜೆರಾಕ್ಸ್ ಪ್ರತಿಗಳು, ಎಣಿಕೆಯ ಸಮಯದಲ್ಲಿ ಯಾವುದೇ ಮನೆಗೆ ಬೀಗ ಹಾಕಲಾಗಿದೆ ಅಥವಾ ಮುಚ್ಚಲಾಗಿದೆ ಎಂದು ಬಿಎಲ್‌ಒ ಕಂಡುಕೊಂಡರೆ, ಅವನು/ಅವಳು ಎಣಿಕೆ ನಮೂನೆಗಳನ್ನು ಮನೆಯಲ್ಲಿ ಅಳವಡಿಸಬೇಕು ಮತ್ತು ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಲು ಕನಿಷ್ಠ ಮೂರು ಸಲ ಮನೆಗೆ ಭೇಟಿ ನೀಡಬೇಕು ಎಂದರು.

ಮೊದಲೇ ಭರ್ತಿ ಮಾಡಿದ ಎಣಿಕೆ ನಮೂನೆ ಡೌನ್ಲೋಡ್ ಮಾಡಬಹುದು ಮತ್ತು ಭರ್ತಿ ಮಾಡಿದ ನಮೂನೆಗಳು ಮತ್ತು ದಾಖಲೆಗಳನ್ನು ಆನ್‌ಲೈನ್ ಮೋಡ್ ಮೂಲಕ ಅಪ್ಲೋಡ್ ಮಾಡಬಹುದು ಎಂದು ಬಿಎಲ್‌ಒ ಮತದಾರರಿಗೆ ತಿಳಿಸಬೇಕು ಎಂದರು.

ಕಾರ್ಯಾಗಾರದಲ್ಲಿ ಚುನಾವಣಾ ಶಿರಸ್ತೇದಾರರು ಹಾಗೂ ಸಿಬ್ಬಂದಿಗಳು, ಬೂತ್ ಮಟ್ಟದ ಅಧಿಕಾರಿಗಳು ಮತ್ತು ಏಜೆಂಟರುಗಳು ಇದ್ದರು.

ವಿಶೇಷವಾದ ತರಬೇತಿ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು, ಮತದಾರರ ಮಾಹಿತಿ ನವೀಕರಣ, ಹೊಸ ಮತದಾರರ ನೋಂದಣಿ, ಮೃತ ಹಾಗೂ ಸ್ಥಳಾಂತರಗೊಂಡ ಮತದಾರರ ಹೆಸರುಗಳ ತಿದ್ದುಪಡಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಕಾರ್ಯಾಗಾರದಲ್ಲಿ ವಿವರವಾದ ತರಬೇತಿ ನೀಡಲಾಯಿತು.

ರಾಣಿ ಅಬ್ಬಕ್ಕ ತುಳುವರ ಹೆಮ್ಮೆಯ ಪ್ರತೀಕ: ಡಾ. ತುಕಾರಾಮ ಪೂಜಾರಿ



ಬಂಟ್ವಾಳ: ರಾಣಿ ಅಬ್ಬಕ್ಕ ದೇವಿ ತುಳುವರ ಹೆಮ್ಮೆಯ ಪ್ರತೀಕ. ವಿದೇಶಿ ದಾಸ್ಯದ ವಿರುದ್ಧ ಹೋರಾಡಿದ ವೀರ ಮಹಿಳೆ. ಪೋರ್ಚುಗೀಸರ ಅಟ್ಟಹಾಸಕ್ಕೆ ದಿಟ್ಟ ಉತ್ತರ ನೀಡಿದ ರಾಣಿ ಅಬ್ಬಕ್ಕ ಇತಿಹಾಸದ ಪುಟಗಳಲ್ಲಿ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಗುರುತಿಸಲ್ಪಟ್ಟಿದ್ದಾಳೆ ಎಂದು ರಾಣಿ ಅಬ್ಬಕ್ಕ ದೇವಿ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ. ತುಕಾರಾಮ ಪೂಜಾರಿ ಹೇಳಿದರು.

ಬಂಟ್ವಾಳ ಜೈನ್ ಮಿಲನ್ ವತಿಯಿಂದ ಸಂಸ್ಕೃತಿ – ಸಂಸ್ಮರಣೆ ಎಂಬ ಧ್ಯೇಯದೊಂದಿಗೆ ಬಿ.ಸಿ.ರೋಡಿನ ಸಂಚಯಗಿರಿ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ರಾಜೇಂದ್ರ ಜೈನ್ ಪೆರ್ಲ ಅವರು ಅಧ್ಯಕ್ಷತೆ ವಹಿಸಿದ್ದರು. ಡಾ. ಸುದೀಪ್ ಸಿದ್ಧಕಟ್ಟೆ ಅವರು ಅತಿಥಿಯಾಗಿದ್ದರು. ಭಾರತೀಯ ಜೈನ್ ಮಿಲನ್ ವಲಯ 8 ಮಂಗಳೂರು ವಿಭಾಗ ಕಾರ್ಯದರ್ಶಿ ಸುಭಾಷ್ಚಂದ್ರ ಜೈನ್, ವೇಣೂರು ಜೈನ್ ಮಿಲನ್ ಪೂರ್ವಕಾರ್ಯದರ್ಶಿ ನಿರ್ಮಲ್ ಕುಮಾರ್ ಉಪಸ್ಥಿತರಿದ್ದರು. ಬಂಟ್ವಾಳ ಅಧ್ಯಕ್ಷ ರಾಜೇಂದ್ರ ಜೈನ್ ಸ್ವಾಗತಿಸಿದರು. ಕಾರ್ಯದರ್ಶಿ ಜಯಕೀರ್ತಿ ಇಂದ್ರ ಪಾಣೆಮಂಗಳೂರು ವರದಿ ವಾಚಿಸಿದರು. ಹರ್ಷರಾಜ್ ಬಲ್ಲಾಳ್ ನಿರ್ವಹಿಸಿದರು. ಸಾಮೂಹಿಕ ಶಾಂತಿಮಂತ್ರ ಪಠಣದ ಬಳಿಕ ತುಳು ಅಧ್ಯಯನ ಕೇಂದ್ರವನ್ನು ವೀಕ್ಷಣೆ ಮಾಡಲಾಯಿತು.

ಅಲೆಟ್ಟಿ-ಕೂರ್ನಡ್ಕ ರಸ್ತೆ ಅಭಿವೃದ್ಧಿಗೆ 7 ಕೋ.ರೂ. ಅನುದಾನ: ಅಭಿನಂದನೆ



ಸುಳ್ಯ: ಸುಳ್ಯ ತಾಲೂಕು ಸಂಪರ್ಕಿಸುವ ಅಂತರ್ ರಾಜ್ಯ ಗಡಿ ಪ್ರದೇಶ ಸುಳ್ಯ ಅಲೆಟ್ಟಿ-ಬಡ್ಡಡ್ಕ-ಕೂರ್ನಡ್ಕ ರಸ್ತೆಯ ಅಭಿವೃದ್ಧಿಗೆ ಅನುದಾನ ಒದಗಿಸಲು ಶಿಫಾರಸು ಮಾಡಿದ ಆರೋಗ್ಯ ಸಚಿವ ಯು.ಟಿ. ಖಾದರ್ ಅವರಿಗೆ ಸುಳ್ಯ ಕಾಂಗ್ರೆಸ್ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ಈ ಹಿನ್ನಲೆಯಲ್ಲಿ ಅಲೆಟ್ಟಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಸತ್ಯಕುಮಾರ್ ಆಡಿಂಜ ಅವರು ಮಾಜಿ ಸ್ಪೀಕರ್ ಯು.ಟಿ. ಖಾದರ್ ಮತ್ತು ಮಾಜಿ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮನವಿ ಮಾಡಿಕೊಂಡಿದ್ದರು. ಈ ಹಿನ್ನಲೆಯಲ್ಲಿ ಸಚಿವರಿಬ್ಬರ ಶಿಫಾರಸಿನ ಮೇರೆಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ರೂ.7 ಕೋಟಿ ಅನುದಾನ ಮಂಜೂರು ಮಾಡಿ ಆದೇಶ ಹೊರಡಿಸಿದ್ದರು. ಈ ಹಿನ್ನಲೆಯಲ್ಲಿ ಸುಳ್ಯ ಕಾಂಗ್ರೆಸ್ ಮುಖಂಡರ ತಂಡ ಆರೋಗ್ಯ ಸಚಿವ ಯು.ಟಿ. ಖಾದರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ಅಭಿನಂದನೆ ಸ್ವೀಕರಿಸಿ ಸಚಿವರು ಸುಳ್ಯದ ನಾಯಕರ ಸಂಘಟಿತ ಪ್ರಯತ್ನದಿಂದ ಅನುದಾನ ಮಂಜೂರಾಗಿದ್ದು, ಅಭಿವೃದ್ಧಿ ವಿಷಯದಲ್ಲಿ ಸುಳ್ಯದವರ ಒಗ್ಗಟ್ಟು ಎಲ್ಲರಿಗೂ ಮಾದರಿ ಎಂದರು. ಈ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಭರತ್ ಮುಂಡೋಡಿ, ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಸುಳ್ಯ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಕೆ.ಎಂ. ಮುಸ್ತಫ, ಸುಳ್ಯ ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಸತ್ಯಕುಮಾರ್ ಆಡಿಂಜ, ಕೆಪಿಸಿಸಿ ಸಂಯೋಜಕ ಎಸ್. ಸಂಶುದ್ದೀನ್, ಕೆಪಿಸಿಸಿ ಲೀಗಲ್ ಸೆಲ್ ಕಾರ್ಯದರ್ಶಿ ಮೂಸ ಪೈಂಬಚ್ಚಾಲ್, ಇಂಟಕ್ ಅಧ್ಯಕ್ಷ ಶಾಫಿ ಕುತ್ತಾಮೊಟ್ಟೆ, ಮಾಜಿ ಬ್ಲಾಕ್ ಅಧ್ಯಕ್ಷ ಪಿ.ಸಿ. ಜಯರಾಮ್, ಮಾಜಿ ಕಾರ್ಯದರ್ಶಿ ಪಿ.ಎಸ್. ಗಂಗಾಧರ್ ಮುಖಂಡ ತೇಜಕುಮಾರ್ ಬಡ್ಡಡ್ಕ, ಶರೀಫ್ ಕಂಠಿ, ಪ್ರಸನ್ನ ಕುಮಾರ್ ಅಲೆಟ್ಟಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಶಹೀದ್ ಪಾರೆ ಮತ್ತಿತರರಿದ್ದರು.

ಸಾಣೂರು ರಾಜೇಶ್ವರಿ ಸ್ಕೂಲ್‌ನ ವಿದ್ಯಾರ್ಥಿ ನಿಲಯದ ಉದ್ಘಾಟನೆ



ಕಾರ್ಕಳ: ಸಾಣೂರಿನ ರಾಜೇಶ್ವರಿ ನ್ಯಾಷನಲ್ ಸ್ಕೂಲ್ ಮತ್ತು ಪಿಯು ಕಾಲೇಜಿನಲ್ಲಿ ಶಾಲಾ ಪ್ರಾರಂಭೋತ್ಸವ ಹಾಗೂ ಡಾ. ಜೀವರಾಜ್ ಆಳ್ವ ವಿದ್ಯಾರ್ಥಿ ನಿಲಯದ ಉದ್ಘಾಟನೆ ಕಾರ್ಯಕ್ರಮ ಮಂಗಳವಾರ ಜರಗಿತು.

ಕಾರ್ಕಳ ಜೈನಮಠದ ಸ್ವಸ್ತಿ ಶ್ರೀ ಧ್ಯಾನಯೋಗಿ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ದೇವಸ್ಥಾನ ಕಟ್ಟಿ ಪ್ರತಿಷ್ಠೆ ಮಾಡುವುದು ಸುಲಭ. ಆದರೆ ಶಾಲೆ ಕಟ್ಟಿ ಮಕ್ಕಳಿಗೆ ಶಿಕ್ಷಣ ನೀಡುವುದು ಬಹಳ ಕಷ್ಟದ ಕೆಲಸ. ಮಕ್ಕಳ ಶಿಕ್ಷಣಕ್ಕಾಗಿ ಪೋಷಕರು ಹಗಲಿರುಳು ಶ್ರಮಿಸುತ್ತಾರೆ. ಸಾಲ-ಸೋಲು ಮಾಡಿ ಮಕ್ಕಳನ್ನು ಓದಿಸುತ್ತಾರೆ. ತಂದೆ-ತಾಯಿಯರು ದೇವರ ಸ್ವರೂಪವಾಗಿದ್ದು ಅವರ ಋಣವನ್ನು ಮಕ್ಕಳು ಎಂದಿಗೂ ಮರೆಯಬಾರದು ಎಂದರು. ಬೆಂಗಳೂರು ಅಖಿಲ ಕರ್ನಾಟಕ ಮಕ್ಕಳ ಒಕ್ಕೂಟದ ಕೆ. ಮೋಹನ್ ದೇವ್ ಆಳ್ವ, ಜ್ಞಾನಸುಧಾ ಟ್ರಸ್ಟ್ ಅಧ್ಯಕ್ಷ ಡಾ. ಸುಧಾಕರ ಶೆಟ್ಟಿ ಭಾಗವಹಿಸಿ, ಮಾತನಾಡಿದರು.

ಬಡಗಬೆಟ್ಟು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ಪುತ್ತಿಗೆ ಶ್ರೀಪತಿ ಭಟ್ ಹಾಗೂ ಕೊರಂಗ್ರಪಾಡಿ ಕುಮಾರಗುರು ತಂತ್ರಿ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಜೇಶ್ವರಿ ನ್ಯಾಷನಲ್ ಸ್ಕೂಲ್ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಾಲಾ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಿಜೆಪಿ ಮಂಗಳೂರು ಉತ್ತರ ಮಂಡಲ ಯುವ ಮೋರ್ಚಾ ಪದಾಧಿಕಾರಿಗಳ ಸಭೆ



ಮಂಗಳೂರು: ಬಿಜೆಪಿ ಮಂಗಳೂರು ನಗರ ಉತ್ತರ ಮಂಡಲ ಯುವ ಮೋರ್ಚಾ ಪದಾಧಿಕಾರಿಗಳ ಸಭೆ ಶಾಸಕ ಡಾ.ವೈ. ಭರತ್ ಶೆಟ್ಟಿ ಉಪಸ್ಥಿತಿಯಲ್ಲಿ ಕಾವೂರು ಬಿಜೆಪಿ ಕಾರ್ಯಾಲಯದಲ್ಲಿ ನಡೆಯಿತು.

ಸಭೆಯಲ್ಲಿ ಮಂಡಲ ಅಧ್ಯಕ್ಷ ರಾಜೇಶ್ ಕೊಟ್ಟಾರಿ ಅವರು ಯುವ ಮೋರ್ಚಾ ತಂಡದ ಮರು ಆಯ್ಕೆ ಹಾಗೂ ಪದಾಧಿಕಾರಿಗಳು ಮತ್ತು ಸದಸ್ಯರ ಘೋಷಣೆ ಮಾಡಿದರು. ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಡಾ.ವೈ. ಭರತ್ ಶೆಟ್ಟಿ ಅವರು ಪಕ್ಷ ಸಂಘಟನೆ ಹಾಗೂ ಮುಂಬರುವ ಚಟುವಟಿಕೆಗಳ ಕುರಿತು ಮಾರ್ಗ ದರ್ಶನ ನೀಡಿದರು. ಬಿಜೆಪಿ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ರಾಜ್ ಕೃಷ್ಣಾಪುರ, ಮಂಡಲ ಕಾರ್ಯದರ್ಶಿ ಹಾಗೂ ಯುವ ಮೋರ್ಚಾ ಮಂಡಲ ಪ್ರಭಾರಿ ಪುಷ್ಪರಾಜ್ ಮುಕ್ಕ, ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿ ಹಾಗೂ ಪ್ರಭಾರಿ ನವೀನ್ ರಾಜ್, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಆಶ್ರಿತ್ ನೊಂಡ, ಮಂಡಲ ಯುವ ಮೋರ್ಚಾ ಅಧ್ಯಕ್ಷ ರಕ್ಷಿತ್ ಆರ್. ಪೂಜಾರಿ, ಪ್ರಧಾನ ಕಾರ್ಯದರ್ಶಿಗಳಾದ ಸಂಜಿತ್ ಶೆಟ್ಟಿ, ಯಶ್‌ಪಾಲ್ ಸಾಲ್ಯಾನ್ ಹಾಗೂ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

ಬಿಜೈ ಸಂತ ಫ್ರಾನ್ಸಿಸ್ ಕ್ಸೇವಿಯರ್ ಶಾಲೆಯಲ್ಲಿ 250ನೇ ಯೋಗ ಶಿಬಿರ



ಮಂಗಳೂರು: ಪತಂಜಲಿ ಯೋಗ ಸಮಿತಿ ಭಾರತ್ ಸ್ವಾಭಿಮಾನ್ ಟ್ರಸ್ಟಿನ ಜಿಲ್ಲಾಧ್ಯಕ್ಷ ಯೋಗ ಗುರು ಡಾ. ಎಂ. ಜಗದೀಶ್ ಶೆಟ್ಟಿ ಬಿಜೈ ಇವರು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಬಿಜೈ ಸಂತ ಫ್ರಾನ್ಸಿಸ್ ಕ್ಸೇವಿಯರ್ ಹಿರಿಯ ಪ್ರೈಮರಿ ಶಾಲೆಯಲ್ಲಿ 250ನೇ ಉಚಿತ ಶಿಬಿರ ಜಿಲ್ಲಾಡಳಿತ, ಜಿ.ಪಂ., ಆಯುಷ್ ಇಲಾಖೆ ದ. ಕ. ಜಿಲ್ಲೆ ಆಯುಷ್ ವಿಭಾಗ, ಜಿಲ್ಲಾ ವೆನ್ಲಾಕ್ ಆಸ್ಪತ್ರೆ ಮಂಗಳೂರು ವೈದ್ಯಾಧಿಕಾರಿ ಡಾ. ಪ್ರಕಾಶ್ ಎ. ಜೆ. ಅವರ ಸಹಯೋಗದೊಂದಿಗೆ ನಡೆಸಲಾಯಿತು.

ಶಿಬಿರವನ್ನು ಲಕ್ಷ್ಮಣ್ ಅವರು ಉದ್ಘಾಟಿಸಿ, ನಾನು ಯೋಗವನ್ನು ಬಾಲ್ಯದಿಂದ ಕಲಿತಿದ್ದೇನೆ. ಸೂರ್ಯ ನಮಸ್ಕಾರವನ್ನು ನನ್ನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹೆಚ್ಚು ಉಪಯೋಗ ನೀಡಿದೆ ಎಂದರು. ಇನ್ನೋರ್ವ ಅತಿಥಿ ದ. ಕ. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಇರಾ ನೇಮು ಪೂಜಾರಿ ಮಾತನಾಡಿ, ಡಾ. ಶೆಟ್ಟಿ ಅವರು ಉತ್ತಮ ಸಮಾಜ ಸೇವೆ ಮಾಡುತ್ತಿದ್ದಾರೆ. ಯೋಗದಿಂದ ಮಾತ್ರ ಸಂಪೂರ್ಣ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ಪ್ರಮುಖರಾದ ಲ್ಯಾನ್ಸಿ ಪಿಂಟೋ, ಜಿಲ್ಲಾ ವೆನ್ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಪ್ರಕಾಶ್ ಎ.ಜೆ, ಯೋಗದ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು. ಈ ಸಂದರ್ಭ ಸಹ ಶಿಕ್ಷಕಿ ಭಾರತಿ ಶೆಟ್ಟಿ, ನಿರ್ಮಲ ಸಿಲ್ವಿಯಾ ಡಿಸೋಜಾ ಮುಖ್ಯೋಪಾಧ್ಯಾಯಿನಿ ಎಲಿಜ ಕೆ. ಶಾಂತಿ ಮರಿಯಾ ವೇಗಸ್, ಧನಲಕ್ಷ್ಮೀ ಶೆಟ್ಟಿ ಸೆಲಿನ ಪಾಯ್ಸ್, ರೇಚಲ್ ಡಿಸೋಜಾ, ಗೀತಾ ಹಾಗೂ 200ಕ್ಕೂ ಮಿಕ್ಕಿ ಮಕ್ಕಳು ಉಪಸ್ಥಿತರಿದ್ದರು.

ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನಲ್ಲಿ ಪರಿಸರ ದಿನಾಚರಣೆ



ಮಂಗಳೂರು: ನಗರದ ಕೊಡಿಯಾಲ್ ಬೈಲ್‌ನಲ್ಲಿರುವ ಎಕ್ಸ್ ಪರ್ಟ್ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಬಸಳೆ ಹಾಗೂ ತೊಂಡೆ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ನೆರವೇರಿತು.

ಕಾಲೇಜಿನ ಪ್ರಾಂಶು ಪಾಲ ಪ್ರೊ. ರಾಮಚಂದ್ರ ಭಟ್ ಮಾತನಾಡಿ, ವಿಶ್ವ ಪರಿಸರ ದಿನದ ಸಮಯದಲ್ಲಿ ಗಿಡ ನೆಟ್ಟು ಮತ್ತೆ ಮರೆತು ಬಿಡುವುದೇ ಹೆಚ್ಚು, ನಮ್ಮ ವಿದ್ಯಾರ್ಥಿಗಳು ಬಸಳೆ, ತೊಂಡೆ ಕಾಯಿಯನ್ನು ನೆಟ್ಟಿದ್ದು ಮಾತ್ರವಲ್ಲ ಪ್ರತಿದಿನ ನೀರು ಹಾಕಿ ಪೋಷಣೆ ಮಾಡುವ ಮೂಲಕ ಹಸಿರು ನಿರಂತರವಾಗಿ ಇರಲಿ ಎನ್ನುವ ಸಂದೇಶ ಸಾರಿದ್ದಾರೆ ಎಂದರು.

ಬಳಿಕ ವಿದ್ಯಾರ್ಥಿಗಳು ಹತ್ತಿರದಲ್ಲಿರುವ ಸಾರ್ವಜನಿಕ ಪಾರ್ಕ್ ನಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು. ಸಂಯೋಜಕ ಭೌತಶಾಸ್ತ್ರ ವಿಭಾಗದ ಉಪನ್ಯಾಸಕ ಸೌರಭ್ ಅಂಚನ್, ಕನ್ನಡ ವಿಭಾಗದ ಉಪನ್ಯಾಸಕ ಕರುಣಾಕರ ಬಳ್ಕೂರು, ಹಿಂದಿ ವಿಭಾಗದ ಉಪನ್ಯಾಸಕ ಪ್ರಮೋದ್ ಕಿಣಿ, ಜೀವಶಾಸ್ತ್ರ ವಿಭಾಗದ ಮುಖ್ಯಸ್ಥೆ ರಶ್ಮಿ ಎಚ್. ಸೇರಿದಂತೆ ಇನ್ನಿತರ ಉಪನ್ಯಾಸಕರು ಪಾಲ್ಗೊಂಡರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಶಿವಭಾಗ್ ಫೀಡರ್ ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಶಿವಭಾಗ್ 1ನೇ ಕ್ರಾಸ್‌ನಿಂದ 5ನೇ ಕ್ರಾಸ್‌ವರೆಗೆ, ತಾರೆತೋಟ, ಇ.ಎಸ್.ಐ, ಗೀತಾಂಜಲಿ, ಲೋವರ್ ಬೆಂದೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ವಾಮಂಜೂರು ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಪಚ್ಚನಾಡಿ, ದೇವಿನಗರ, ವಾಮಂಜೂರು, ಮಂಗಳಾನಗರ, ಅಮೃತನಗರ, ಆರ್.ಟಿ.ಓ ಟೆಸ್ಟ್ ಯಾರ್ಡ್, ಸಂತೋಷ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

'ಮಂಜು ಪ್ರಾಸಾದ' ಆವರಣದಲ್ಲಿ ಆಯೋಜನೆ | ಪ್ರದೀಪ ಕುಮಾರ ಕಲ್ಕೂರ ಮಾಹಿತಿ

ಜೂ.20, 21ರಂದು ಮಾವು-ಹಲಸು-ಮೇಳದ ಸಂಭ್ರಮ

ಮಂಗಳೂರು: ಕಲ್ಕೂರ ಪ್ರತಿಷ್ಠಾನ ಮಂಗಳೂರು ವತಿಯಿಂದ ಸಾವಯವ ಕೃಷಿಕ ಗ್ರಾಹಕ ಬಳಗದ ಸಹಕಾರದೊಂದಿಗೆ ಸಾವಯವ ಕೃಷಿಕರೇ ಬೆಳೆಸಿರುವ ಮಾವು ಹಲಸು ಮೇಳ ಜೂ. 20 ಹಾಗೂ 21ರಂದು ಬೆಳಗ್ಗೆ 7ರಿಂದ ಸಂಜೆ 7ರ ವರೆಗೆ ನಗರದ ಕದ್ರಿ ಕಂಬಳ ಮಲ್ಲಿಕಾ ಬಡಾವಣೆಯಲ್ಲಿರುವ 'ಮಂಜು ಪ್ರಾಸಾದ'ದ ಆವರಣದಲ್ಲಿ ಆಯೋಜಿಸಲಾಗಿದೆ.



ಈ ಮೇಳದಲ್ಲಿ ಬೆಳೆಗಾರರಿಗೆ ಮತ್ತು ಗ್ರಾಹಕರಿಗೆ ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಜೂ. 20ರಂದು ಬೆಳಗ್ಗೆ 10ಕ್ಕೆ ಶ್ರೀ ಜಿತಕಾಮಾನಂದ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಶರವು ರಾಘವೇಂದ್ರ ಶಾಸ್ತ್ರಿ ದೀಪ ಪ್ರಜ್ವಲನೆ ಮಾಡುವರು. ಡಾ. ಎಂ.ಬಿ. ಪುರಾಣಿಕ್ ಅಧ್ಯಕ್ಷತೆಯಲ್ಲಿ ವೈದ್ಯ ಡಾ. ಜೀವರಾಜ ಸೊರಕೆ ಉದ್ಘಾಟಿಸುವರು. ಶಾಸಕ ಡಿ. ವೇದವ್ಯಾಸ ಕಾಮತ್ ಮಾರಾಟ ಮಳಿಗೆಗಳನ್ನು ಉದ್ಘಾಟಿಸುವರು ಎಂದು ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜೂ. 21ಕ್ಕೆ ಯೋಗ ಸಾವಯವ ಆಹಾರ ಆರೋಗ್ಯ ಭಾಗ್ಯ ಶೀರ್ಷಿಕೆಯೊಂದಿಗೆ ಅದಮಾರು ಮಠದ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ಯೋಗ ಸಾವಯವ ಆಹಾರ ಜಾಗೃತ ಸಂದೇಶ ನೀಡುವರು. ಹಲಸು ಮಾವು ಆಹಾರ ಸೇವನೆ ವೈಜ್ಞಾನಿಕ ವಿಶ್ಲೇಷಣೆ ಉಪನ್ಯಾಸನವನ್ನು ಪಡುಬಿದ್ರೆಯ ಆಯುರ್ವೇದ ವೈದ್ಯ ಡಾ. ಎನ್. ಟಿ. ಅಂಚನ್ ನೀಡಲಿರುವರು. ಸಚಿವ ಯು.ಟಿ. ಖಾದರ್, ಸಂಸದ ಬ್ರಿಜೇಶ್ ಚೌಟ, ಶಾಸಕ ಡಾ.ವೈ ಭರತ್ ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಪರಿಸರ ತಜ್ಞ ಡಾ. ಮನೋಹರ್ ಉಪಾಧ್ಯಾಯ, ಗಣ್ಯರು ಭಾಗವಹಿಸಲಿದ್ದಾರೆ ಎಂದರು.


ರಾಮನಗರ, ಮಂಡ್ಯ, ಮೈಸೂರು, ಬೆಳಗಾಂ ಹಾಗೂ ಸ್ಥಳೀಯ ಕೃಷಿಕರು ಭಾಗವಹಿಸುತ್ತಿದ್ದು, ವಿವಿಧ ತಳಿಯ ಹಲಸು ರುದ್ರಾಕ್ಷ, ಚಂದ್ರಬರ್ಕೆ, ಮಾವಿನ ಹಣ್ಣುಗಳಾದ ಮಲ್ಲಿಕಾ, ಮಲ್ಗೋವ, ನೀಲಂ, ಕಾಳಪಾಡಿ, ಬಾದಾಮಿ, ತೋತಾಪುರಿ ಲಭ್ಯ. ಮಾವು ಹಲಸಿನಿಂದ ತಯಾರಿಸಿದ ಮೌಲ್ಯವರ್ಧಿತ ಸ್ವಾವಲಂಬಿ ಖಾದ್ಯಗಳಾದ ಹಲಸಿನ ಕಬಾಬ್, ಹಲಸಿನ ಗಾರಿಗೆ, ಚಿಪ್ಸ್, ಉಂಡ್ಲಕ, ಹಲಸಿನ ಪಾವುಬಾಜಿ, ಕಡುಬು, ಹಲಸಿನ ಕೇಕ್, ಹೋಳಿಗೆ, ಹಪ್ಪಳ, ಉಪ್ಪಿನಕಾಯಿ, ಐಸ್ ಕ್ರೀಂ, ವಿವಿಧ ತಾವರೆ ಹೂ ಮತ್ತು ಜಲಸಸ್ಯಗಳು, ಮಾವು ಹಲಸಿನ ಗಿಡಗಳು, ದೇಸಿ ತರಕಾರಿ ಬೀಜಗಳು, ಸಸಿಗಳು, ಕೃಷಿಗೆ ಸಂಬಂಧಿಸಿದ ಉಪಕರಣಗಳು, ಕೃಷಿ ಸಾಹಿತ್ಯ ಕೃತಿಗಳು ಇರಲಿವೆ ಎಂದರು. ಎರಡು ದಿನಗಳ ಕಾಲ ಬೆಳಗ್ಗೆ 8ರಿಂದ ಸಂಜೆ 7ರ ತನಕ ಸಾಂಸ್ಕೃತಿಕ ಪ್ರತಿಭಾನ್ವಿತರಿಂದ ಸೇವಾರ್ಥವಾಗಿ ಗಮಕ, ಸಂಗೀತ, ಯಕ್ಷ ಸಂಗೀತ, ಹರಿಕಥೆ, ಭಜನೆ ತಾಳಮದ್ದಳೆ, ಗಾನ ಸಂಭ್ರಮ, ಮಿಮಿಕ್ರಿ, ವಾದ್ಯ ಸಂಗೀತ, ಪರಿಸರ ಗೀತೆ ಅನಾವರಣಗೊಳ್ಳಲಿದೆ. ವಿದ್ಯಾರ್ಥಿ ಪ್ರತಿಭೆಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ ಎಂದು ತಿಳಿಸಿದರು.

ಸಾವಯವ ಕೃಷಿಕ ಗ್ರಾಹಕ ಬಳಗದ ಅಧ್ಯಕ್ಷ ಜಿ.ಆರ್. ಪ್ರಸಾದ್, ಸುಧಾಕರ ರಾವ್ ಪೇಜಾವರ, ಜನಾರ್ದನ ಹಂದೆ, ಶಿವಪ್ರಸಾದ್ ಪ್ರಭು, ದಯಾನಂದ ಕಟೀಲು ಉಪಸ್ಥಿತರಿದ್ದರು.

ಕೊಡಗು ಬಿಜೆಪಿ ಎಸ್.ಸಿ ಮೋರ್ಚಾ ಖಂಡನೆ

ಎಸ್‌ಐಆರ್‌ಗೆ ವಿರೋಧ ಹಾಸ್ಯಾಸ್ಪದ

ಮಡಿಕೇರಿ: ಪ್ರಗತಿಪರ ಸಂಘಟನೆಯ ಹೆಸರಿನಲ್ಲಿ ವಿವಿಧ ಸಂಘ-ಸಂಸ್ಥೆಗಳು ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಯನ್ನು ವಿರೋಧಿಸುತ್ತಿರುವುದು ಹಾಸ್ಯಾಸ್ಪದ ಮತ್ತು ದೇಶದ ಕಾನೂನಿಗೆ ತೋರುವ ಅಗೌರವವಾಗಿದೆ ಎಂದು ಬಿಜೆಪಿ ಎಸ್.ಸಿ ಮೋರ್ಚಾದ ಕೊಡಗು ಜಿಲ್ಲಾಧ್ಯಕ್ಷ ಪಿ.ಎಂ. ರವಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಎಸ್‌ಐಆರ್ ನ ಅವಶ್ಯಕತೆ ಇದೆ. ಇದರ ಗಂಭೀರತೆಯನ್ನು ಅರಿಯದೆ ವಿನಾಕಾರಣ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸುವುದರಿಂದ ಅಕ್ರಮ ಮತದಾನ ಮಾಡುವವರಿಗೆ ಪ್ರೇರಣೆ ನೀಡಿದಂತಾಗುತ್ತದೆ. ಈ ರೀತಿಯ ಪ್ರತಿಭಟನೆಗಳು ನೈಜ ಮತದಾರರ ಹಾದಿ ತಪ್ಪಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಎರಡು ದಶಕದ ನಂತರ ನಮ್ಮ ರಾಜ್ಯದಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಯನ್ನು ಚುನಾವಣಾ ಆಯೋಗ ನಡೆಸುತ್ತಿದೆ. ಇದಕ್ಕೆ ರಾಜ್ಯದ ಮತ್ತು ಜಿಲ್ಲೆಯ ಜನತೆ ಸಹಕಾರ ನೀಡಬೇಕೆ ಹೊರತು ಇಲ್ಲಸಲ್ಲದ ಹೇಳಿಕೆ ನೀಡಿ ಈ ಪ್ರಕ್ರಿಯೆಗೆ ತೊಡಕುಂಟು ಮಾಡಬಾರದು ಎಂದು ಮನವಿ ಮಾಡಿದ್ದಾರೆ. ಎಸ್‌ಐಆರ್ ಭಾರತೀಯ ಚುನಾವಣಾ ಆಯೋಗ ಮತ್ತು ರಾಜ್ಯ ಚುನಾವಣಾ ಆಯೋಗ ಕೈಗೊಂಡ ಅಭಿಯಾನವೇ ಹೊರತು ಕೇಂದ್ರ ಸರಕಾರದ ಕಾರ್ಯಕ್ರಮವಲ್ಲ ಎನ್ನುವುದನ್ನು ಪ್ರಗತಿಪರ ಸಂಘಟನೆಗಳು ಹಾಗೂ ಪ್ರತಿಭಟಿಸುತ್ತಿರುವ ಇತರ ಸಂಘಟನೆಗಳು ತಿಳಿದುಕೊಳ್ಳಬೇಕಾಗಿದೆ ಎಂದು ಪಿ.ಎಂ.ರವಿ ಸ್ಪಷ್ಟಪಡಿಸಿದ್ದಾರೆ.

ಸುತ್ತ ಮುತ್ತ

ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಗೆ ಪದಾಧಿಕಾರಿಗಳ ಆಯ್ಕೆ



ಕುಂಬಳೆ: ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಸೀತಾಂಗೋಳಿ ಘಟಕದ 2026–28ನೇ ಅವಧಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಅಧ್ಯಕ್ಷರಾಗಿ ಕೆ.ಎಂ.ನಸೀರ್ ಕಣ್ಣೂರು, ಪ್ರಧಾನ ಕಾರ್ಯದರ್ಶಿಯಾಗಿ ಸುಕುಮಾರ ಕುದ್ರೆಪ್ಪಾಡಿ, ಕೋಶಾಧಿಕಾರಿಯಾಗಿ ಸಿದ್ದಿಕ್ ಎಸ್.ಪಿ. ಅವರನ್ನು ಆರಿಸಲಾಗಿದೆ.

ಜುಲೈ 4, 5ರಂದು ಹಲಸು, ಮಾವು, ಮೇಳ- ಆಹಾರೋತ್ಸವ

ಕಾಸರಗೋಡು: ಕಾಸರಗೋಡು ನಗರದ ಕೋಟೆಕಣಿ ರಸ್ತೆ ಪರಿಸರದ ಜೀವನಸ್ ಮಾನಸ ಆಡಿಟೋರಿಯಂನಲ್ಲಿ ಜುಲೈ 4 ಮತ್ತು 5ರಂದು ಕೋಟೆಕಣಿ ರಾಮನಗರದ ಕಿಸಾನ್ ಕಾಸರಗೋಡು ಆಶ್ರಯದಲ್ಲಿ ಹಲಸು ಮಾವು ಮೇಳ – ಆಹಾರೋತ್ಸವ ನಡೆಯಲಿದೆ.



ಮೇಳದಲ್ಲಿ ಸಾವಯವ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಹಲಸು ಮತ್ತು ಮಾವಿನ ವಿವಿಧ ತಳಿಗಳ ಮಾರಾಟ, ವೈವಿಧ್ಯಮಯ ಆಹಾರೋತ್ಪನ್ನ ಸವಿಯುವ ಅವಕಾಶವಿದೆ. ಕೃಷಿ ಉತ್ಪನ್ನಗಳು ರೈತರಿಂದ ನೇರ ಗ್ರಾಹಕರಿಗೆ, ಮತ್ತು ವಿಚಾರ ವಿನಿಮಯ ಜರಗಲಿದೆ. ಆಹಾರ ಪ್ರಿಯರಿಗಾಗಿ ಮೇಳದ ಆವರಣದಲ್ಲೇ ಹಲಸಿನಕಾಯಿ ದೋಸೆ, ದೋಂಡಾ, ಕಬಾಬ್, ಒಟ್ಟು ಹಾವಿಗೆ ರೊಟ್ಟಿ, ಗುಳಿ ಅಪ್ಪ ರಸಾಯನ, ಗುಜ್ಜೆ ಮಂಚೂರಿ, ಹಲಸಿನ ಹಣ್ಣಿನ ಪಾಯಸ, ಹೋಳಿಗೆ, ಜಿಲೇಬಿ ಸೇರಿದಂತೆ ಹತ್ತಾರು ಬಗೆಯ ಸಾಂಪ್ರದಾಯಿಕ ತಿನಿಸುಗಳನ್ನು ತಾಜಾ ಸಿದ್ಧಪಡಿಸಿ ನೀಡಲಾಗುತ್ತದೆ. ಇದಲ್ಲದೆ ಹಪ್ಪಳ, ಸೋಂಟೆ, ಉಂಡ್ಲಕಾಳು, ಚಿಪ್ಸ್ ಹಲ್ವ ಕೂಡಾ ಲಭ್ಯವಿರುವುದು. ಗ್ರಾಹಕರ ಆರೋಗ್ಯ ಮತ್ತು ಸಾಂಪ್ರದಾಯಿಕ ರುಚಿಗೆ ಆದ್ಯತೆ ನೀಡುವ ಉದ್ದೇಶದಿಂದ ಎಲ್ಲಾ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಕೇವಲ ತೆಂಗಿನೆಣ್ಣೆಯನ್ನು ಮಾತ್ರ ಬಳಸಲಾಗುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ.

ಅರ್ಜಿಗಳ ಆಹ್ವಾನ

ಕಾಸರಗೋಡು: ಕಯ್ಯೂರು ಇ.ಕೆ.ನಾಯನಾರ್ ಸ್ಮಾರಕ ಸರಕಾರಿ ಐಟಿಐ ವಿದ್ಯಾಸಂಸ್ಥೆಯಲ್ಲಿ 13 ಟ್ರೇಡ್‌ಗಳಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜುಲೈ 7ರೊಳಗೆ ಯಾವುದೇ ಸರಕಾರಿ ಐಟಿಐ ಕೇಂದ್ರಕ್ಕೆ ತೆರಳಿ ಪ್ರಮಾಣಪತ್ರಗಳನ್ನು ಪರಿಶೀಲಿಸಬೇಕು.

ಜೂ.27ರಂದು ಉದ್ಯೋಗ ಮೇಳ

ಕಾಸರಗೋಡು: ವಿದ್ಯಾನಗರದಲ್ಲಿರುವ ಸಮುದಾಯ ಕೌಶಲ್ಯ ಉದ್ಯಾನವನದಲ್ಲಿ ಸ್ಕಿಲ್ ಪಾರ್ಕ್ ಸಂಸ್ಥೆಯು ಜೂ.27ರಂದು ಉದ್ಯೋಗ ಮೇಳವನ್ನು ಆಯೋಜಿಸಿದೆ. ಹೆಚ್ಚಿನ ಮಾಹಿತಿಗಾಗಿ 9447326319 ಸಂಪರ್ಕಿಸಬಹುದು.

ಕಾಸರಗೋಡು ಜಿಲ್ಲಾಮಟ್ಟದ ವೃಕ್ಷ ಸಮಿತಿ ಸಭೆ

ಕಾಸರಗೋಡು: ಜಿಲ್ಲಾ ಪಂಚಾಯತ್‌ನ ಜಿಲ್ಲಾಮಟ್ಟದ ವೃಕ್ಷ ಸಮಿತಿ ಸಭೆಯು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸಿದ್ದರು. ಅಭಿವೃದ್ಧಿ ಉದ್ದೇಶಗಳಿಗಾಗಿ ಮರಗಳನ್ನು ಕಡಿಯಲು ಅನುಮತಿ ಕೋರಿ ಬಂದ ವಿವಿಧ ಅರ್ಜಿಗಳನ್ನು ಸಭೆಯಲ್ಲಿ ಪರಿಗಣಿಸಲಾಯಿತು. ಅಭಿವೃದ್ಧಿ ಉದ್ದೇಶಗಳಿಗಾಗಿ ಕಡಿಯುವ ಪ್ರತಿ ಮರಕ್ಕಾಗಿ 10 ಪಟ್ಟು ಹೆಚ್ಚು ಗಿಡಗಳನ್ನು ನೆಡಬೇಕು ಮತ್ತು ನಿರ್ವಹಿಸಬೇಕು ಎಂದು ಸಭೆಯು ನಿರ್ದೇಶಿಸಿತು. ಈ ನಿಟ್ಟಿನಲ್ಲಿ ಸಂಬಂಧಪಟ್ಟವರಿಗೆ ಅಗತ್ಯದ ಸೂಚನೆಗಳನ್ನು ಸಹ ನೀಡಲಾಯಿತು. ಜಿಲ್ಲಾ ಪಂಚಾಯತ್ ಅಧಿಕಾರಿಗಳು, ಅರಣ್ಯ ಇಲಾಖೆ ಅಧಿಕಾರಿಗಳು, ವೃಕ್ಷ ಸಮಿತಿ ಸದಸ್ಯರಾದ ಪ್ರೊ.ಎಂ.ಗೋಪಾಲನ್, ಸುರೇಶ್ ಪೆರಿಯಂಗಾನಂ ಮತ್ತಿತರರಿದ್ದರು.

ಕಾಸರಗೋಡು ಜಿಲ್ಲಾ ಮಟ್ಟದ ಲೀಡ್ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆ | ಶಾಸಕ ಮಾಹಿನ್ ಸೂಚನೆ

ನವ ಉದ್ಯಮಿಗಳಿಗೆ ಸಾಲ ಒದಗಿಸಿ ಪ್ರೋತ್ಸಾಹ ನೀಡಬೇಕಿದೆ

ಕಾಸರಗೋಡು: ಜಿಲ್ಲೆಯಲ್ಲಿ ಹೊಸ ಉದ್ಯಮಿಗಳಿಗೆ ಬ್ಯಾಂಕ್‌ಗಳು ಸೇರಿದಂತೆ ಹಣಕಾಸು ಸಂಸ್ಥೆಗಳು ಸಂಪೂರ್ಣ ಬೆಂಬಲ ಹಾಗೂ ಪ್ರೋತ್ಸಾಹ ನೀಡಬೇಕು ಮತ್ತು ಸಿಬಿಲ್ ಸ್ಕೋರ್ (ಅರ್ಹತೆಯ ಮೌಲ್ಯಮಾಪನ) ಆಧಾರದ ಮೇಲೆ ಸಾಲ ನಿರಾಕರಿಸಬಾರದು ಎಂದು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹೇಳಿದ್ದಾರೆ.

ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಜರಗಿದ ಲೀಡ್ ಬ್ಯಾಂಕ್‌ಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಿಎಸ್‌ಆರ್ ನಿಧಿ ಬಳಸಿ

ಜಿಲ್ಲೆಯನ್ನು ಅಭಿವೃದ್ಧಿಗೊಳಿಸಲು ಸಿಎಸ್‌ಆರ್ ನಿಧಿಯನ್ನು ಬಳಸಬೇಕು ಮತ್ತು ವೈದ್ಯಕೀಯ ಕಾಲೇಜಿನ ಅಭಿವೃದ್ಧಿಗೆ ಹಾಗೂ ಇತರ ಜಿಲ್ಲೆಗಳಿಂದ ಕಾಸರಗೋಡಿಗೆ ಕೆಲಸ ನಿರ್ವಹಿಸಲು ಬರುವ ಸರಕಾರಿ ಅಧಿಕಾರಿಗಳಿಗೆ ಹಾಸ್ಟೆಲ್ ಸೌಲಭ್ಯಗಳು ಸೇರಿದಂತೆ ವಸತಿ ಸೌಕರ್ಯ ಒದಿಸಲು ಬ್ಯಾಂಕ್‌ಗಳ ಬೆಂಬಲ ಅಗತ್ಯವಿದೆ ಎಂದು ಸಲಹೆ ನೀಡಿದರು.

ಕಾಸರಗೋಡು ಜಿಲ್ಲಾಧಿಕಾರಿ ಮತ್ತು ಡಿಎಲ್‌ಆರ್‌ಸಿ ಅಧ್ಯಕ್ಷ ಅರ್ಜುನ್ ಪಾಂಡ್ಯನ್ ಮಾತನಾಡಿ, ಹಕ್ಕು ಪತ್ರದಡಿ ನೀಡಲಾದ ಭೂಮಿಗೆ ಸಾಲ ಒದಗಿಸಲು ಬ್ಯಾಂಕ್‌ಗಳು ಹಿಂಜರಿಯಬಾರದು ಮತ್ತು ಪರಿಶಿಷ್ಟ ವಲಯ ಪ್ರದೇಶದಲ್ಲಿ ಹೆಚ್ಚಿನ ಬ್ಯಾಂಕಿಂಗ್ ಸೇವೆಗಳನ್ನು ಪರಿಚಯಿಸಬೇಕು ಎಂದು ಹೇಳಿದರು.



ಕೇಂದ್ರ ಸರ್ಕಾರದ ಯೋಜನೆಯ ಚೆಕ್ ವಿತರಣೆ

ಸಭೆಯಲ್ಲಿ ಜಿಲ್ಲಾ ಸಾಲ ಯೋಜನೆ 2026–27ನೇ ಪುಸ್ತಕವನ್ನು ಶಾಸಕರು ಮತ್ತು ಜಿಲ್ಲಾಧಿಕಾರಿ ಬಿಡುಗಡೆಗೊಳಿಸಿದರು. ಇದೇ ವೇಳೆ ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆಯ ಚಂದಾದಾರರಿಗೆ 2 ಲಕ್ಷ ರೂ.ಗಳ ಚೆಕ್‌ಗಳನ್ನು ವಿತರಿಸಿದರು. ಸೈಬರ್ ವಂಚನೆಗಳ ವಿರುದ್ಧ ಸಾರ್ವಜನಿಕ ಜಾಗೃತಿ ಅಭಿಯಾನದ ಕುರಿತು ಚರ್ಚಿಸಲಾಯಿತು.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರಗತಿ

ಮಾರ್ಚ್‌ನ ಅಂಕಿ ಅಂಶಗಳ ಪ್ರಕಾರ ಕಾಸರಗೋಡು ಜಿಲ್ಲೆಯಲ್ಲಿ 293 ಬ್ಯಾಂಕ್ ಶಾಖೆಗಳು, 245 ಎಟಿಎಂಗಳು ಮತ್ತು 33 ನಗದು ಠೇವಣಿ ಯಂತ್ರಗಳಿವೆ. ಶಾಖೆಗಳ ಸಂಖ್ಯೆ 288 ರಿಂದ 293ಕ್ಕೆ ಏರಿಕೆಯಾಗಿರುವುದು ಹಣಕಾಸು ಕ್ಷೇತ್ರದ ಬಲವರ್ಧನೆಗೆ ಸಾಕ್ಷಿಯಾಗಿದೆ. ವ್ಯವಹಾರಗಳ ದೃಷ್ಟಿಯಿಂದಲೂ ಜಿಲ್ಲೆಯು ಉತ್ತಮ ಪ್ರಗತಿಯನ್ನು ಸಾಧಿಸಿದೆ. ಒಟ್ಟು ಹೂಡಿಕೆ ಶೇಕಡಾ 6.4ರಷ್ಟು ಹೆಚ್ಚಾಗಿ 20,528 ಕೋಟಿ ರೂ.ಗಳಿಗೆ ತಲುಪಿದೆ. ಸಾಲ ವಿತರಣೆಯಲ್ಲಿ ಶೇಕಡಾ 6.2ರಷ್ಟು ಬೆಳವಣಿಗೆಯೊಂದಿಗೆ 19,316 ಕೋಟಿ ರೂ.ಗಳನ್ನು ಒದಗಿಸಲು ಸಾಧ್ಯವಾಗಿದೆ.

ಜಿಲ್ಲೆಯ ಸಾಲ – ಠೇವಣಿ ಅನುಪಾತ ಶೇ. 94.10ರಷ್ಟಿದೆ. ಇದು ಕೇರಳದ ಸರಾಸರಿ ಶೇಕಡಾ 72.88ಕ್ಕಿಂತ ಅಧಿಕವಾಗಿದೆ. ಈ ಮೂಲಕ ಬ್ಯಾಂಕಿಂಗ್ ಕ್ಷೇತ್ರದ ಬೆಳವಣಿಗೆಯನ್ನು ತೋರಿಸುತ್ತದೆ. ವಾರ್ಷಿಕ ಸಾಲ ಯೋಜನೆ (ಎಸಿಪಿ) ವಿಷಯದಲ್ಲಿ ಜಿಲ್ಲೆಯು ಶೇಕಡಾ 123ರಷ್ಟು ಸಾಧಿಸಿದೆ. ಕೃಷಿ ಕ್ಷೇತ್ರದಲ್ಲಿ ಶೇಕಡಾ 116ರಷ್ಟು ಸಾಧನೆ ತೋರಿದ್ದರೂ ಪೂರಕ ಚಟುವಟಿಕೆಗಳಲ್ಲಿ ಸುಧಾರಣೆಗೆ ಇನ್ನೂ ಅವಕಾಶವಿದೆ. ಎಂಎಸ್‌ಎಂಇ ವಲಯದಲ್ಲಿ ಸೂಕ್ಷ್ಮ ಉದ್ಯಮಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದರೂ ಬ್ಯಾಂಕ್‌ಗಳು ಸಣ್ಣ ಮತ್ತು ಮಧ್ಯಮ ವಲಯಕ್ಕೆ ಹೆಚ್ಚಿನ ಸಾಲಗಳನ್ನು ಒದಗಿಸಬೇಕಾಗಿದೆ.

ಡಿಜಿಟಲ್ ವಂಚನೆಗಳ ಬಗ್ಗೆ ಅರಿವು

ಆರ್ಥಿಕ ಅಭಿವೃದ್ಧಿಯ ಜೊತೆಗೆ ಸುರಕ್ಷಿತ ಬ್ಯಾಂಕಿಂಗ್ ಕೂಡಾ ಆದ್ಯತೆಯಾಗಿದೆ. ಹೆಚ್ಚುತ್ತಿರುವ ಡಿಜಿಟಲ್ ವಂಚನೆಗಳು ಮತ್ತು ಡಿಜಿಟಲ್ ಬಂಧನದಂತಹ ವಂಚನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಬ್ಯಾಂಕ್‌ಗಳು ಉಪಕ್ರಮವನ್ನು ತೆಗೆದುಕೊಳ್ಳಬೇಕು. ಕೆವೈಸಿ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಹಣಕಾಸು ಸಾಕ್ಷರತಾ ಕೇಂದ್ರಗಳ ಮೂಲಕ ಜಾಗೃತಿ ತರಗತಿಗಳನ್ನು ಸಕ್ರಿಯಗೊಳಿಸಬೇಕು ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಬಾಕಿಯಿರುವ ಅರ್ಜಿ ವಿಲೇವಾರಿ ಮಾಡಿ

ಅದೇ ರೀತಿ ಶೈಕ್ಷಣಿಕ ಸಾಲಗಳು ಮತ್ತು ರಫ್ತು ಸಾಲಗಳಿಗೆ ವಿಶೇಷ ಪರಿಗಣನೆ ನೀಡಬೇಕು. ಪಿಎಂಎಫ್‌ಎಂಇ, ಪಿಎಂಇಜಿಪಿ ಮುಂತಾದ ಸರಕಾರಿ ಪ್ರಾಯೋಜಿತ ಯೋಜನೆಗಳ ಸಂದರ್ಭ ಸಂಬಂಧಪಟ್ಟ ವ್ಯವಸ್ಥಾಪಕರು ಬ್ಯಾಂಕ್‌ಗಳೊಂದಿಗೆ ಬಾಕಿಯಿರುವ ಅರ್ಜಿಗಳನ್ನು ಯಾವುದೇ ವಿಳಂಬವಿಲ್ಲದೆ ವಿಲೇವಾರಿ ಮಾಡಬೇಕು. ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಪ್ರತಿ ಶಾಖೆಗೆ ಕನಿಷ್ಠ ಎರಡು ಅರ್ಜಿ ಮಂಜೂರು ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸಭೆಯಲ್ಲಿ ಉಲ್ಲೇಖಿಸಲಾಯಿತು.

ಪರಿಶೀಲನಾ ಸಭೆಯಲ್ಲಿ ಕೆನರಾ ಬ್ಯಾಂಕ್‌ನ ಪ್ರಾದೇಶಿಕ ಮುಖ್ಯಸ್ಥ ಆರ್.ಪಿ.ಶ್ರೀನಾಥ್, ನಬಾರ್ಡ್ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಶರೋನ್‌ವಾಸ್, ಆರ್‌ಬಿಐ ತಿರುವನಂತಪುರ ಪ್ರತಿನಿಧಿ ವಿ.ಎಸ್.ಅಖಿಲ್, ಪ್ರಾದೇಶಿಕ ವ್ಯವಸ್ಥಾಪಕರು, ವಿವಿಧ ಬ್ಯಾಂಕ್‌ಗಳ ಹಣಕಾಸು ಸಾಕ್ಷರತಾ ಸಂಯೋಜಕರು, ಸರಕಾರಿ ನೌಕರರು ಮುಂತಾದವರು ಭಾಗವಹಿಸಿದ್ದರು. ಲೀಡ್ ಬ್ಯಾಂಕ್ ವ್ಯವಸ್ಥಾಪಕ ಎಸ್.ಶಿವ್ಪೇಶ್ ಸ್ವಾಗತಿಸಿ, ಹಣಕಾಸು ಸಾಕ್ಷರತಾ ಸಲಹೆಗಾರ ಆರ್. ಗಿರಿಧರ ವಂದಿಸಿದರು.

ಕ್ಯಾಂಪ್ಕೋ ಕಾಞಂಗಾಡು ಶಾಖೆಯ ಸದಸ್ಯನಿಗೆ ಶಿಕ್ಷಣ ನಿಧಿಯ ಹಸ್ತಾಂತರ



ಬದಿಯಡ್ಕ: ಸದಸ್ಯರ ಕುಟುಂಬಗಳ ಕಲ್ಯಾಣ ಮತ್ತು ಶೈಕ್ಷಣಿಕ ಪ್ರಗತಿಗೆ ಕ್ಯಾಂಪ್ಕೋ ನೆರವು ನೀಡುತ್ತಾ ಬಂದಿದ್ದು, ಈ ನಿಟ್ಟಿನಲ್ಲಿ ಕ್ಯಾಂಪ್ಕೋ ಕಾಸರಗೋಡು ಜಿಲ್ಲೆಯ ಕಾಞಂಗಾಡು ಶಾಖೆಯ ಸದಸ್ಯ ರಾಘವನ್ ಬಿ. ಅವರ ತಂದೆ ಕುಂಞಂಬು ಮಣಿಯಾಣಿ ವಾಝುಕ್ಕುಡನ್ ವೀಡು ಪುಲ್ಲೂರು ಅವರಿಗೆ ಶಿಕ್ಷಣ ನಿಧಿ ಯೋಜನೆಯಡಿ 50,000 ರೂ.ಗಳ ಪ್ರಥಮ ಕಂತನ್ನು ವಿತರಿಸಲಾಯಿತು.

ಎಂಎಸ್‌ಸಿ ಕೃಷಿ (ಜೆನೆಟಿಕ್ಸ್ ಮತ್ತು ಪ್ಲಾಂಟ್ ಬ್ರೀಡಿಂಗ್) ಮೊದಲ ಸೆಮಿಸ್ಟರ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಉನ್ನತ ಶಿಕ್ಷಣ ಪಡೆಯುತ್ತಿರುವ ಅವರ ಪುತ್ರಿ ಸ್ನೇಹಾ ಕೆ. ಅವರಿಗೆ ಈ ಆರ್ಥಿಕ ನೆರವನ್ನು ಮಂಜೂರು ಮಾಡಲಾಗಿದೆ. ಇತ್ತೀಚೆಗೆ ಪೆರ್ಲ ಇಡಿಯಡ್ಕದಲ್ಲಿ ನಡೆದ ಕ್ಯಾಂಪ್ಕೋ ಸದಸ್ಯರ ಬೆಳೆಗಾರರ ಸಭೆಯಲ್ಲಿ ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ಅವರು ಶಿಕ್ಷಣ ಸಹಾಯ ಧನವನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕ್ಯಾಂಪ್ಕೋದ ವಿದ್ಯಾನಿಧಿ ಮತ್ತು ಸಾಂತ್ವನ ಯೋಜನೆಗಳು ಸದಸ್ಯರ ಕಲ್ಯಾಣಕ್ಕೆ ಸಂಸ್ಥೆ ಹೊಂದಿರುವ ದೃಢವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಿದರು.

ಸದಸ್ಯರ ಮಕ್ಕಳ ಉನ್ನತ ಶಿಕ್ಷಣಕ್ಕೆ ಬೆಂಬಲ ನೀಡುವುದು ಕ್ಯಾಂಪ್ಕೋದ ಸಾಮಾಜಿಕ ಜವಾಬ್ದಾರಿಯ ಅವಿಭಾಜ್ಯ ಅಂಗವಾಗಿದ್ದು, ಶಿಕ್ಷಣದ ಮೂಲಕ ಕೃಷಿ ಕುಟುಂಬಗಳನ್ನು ಸಬಲೀಕರಣಗೊಳಿಸುವುದು ಸಂಸ್ಥೆಯ ಧ್ಯೇಯವಾಗಿದೆ ಎಂದು ನುಡಿದರು.

ಸಂಸ್ಥೆಯ ಉಪಾಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು, ಮುಖ್ಯ ಮಾರುಕಟ್ಟೆ ಅಧಿಕಾರಿ, ಬದಿಯಡ್ಕ ಪ್ರಾದೇಶಿಕ ವ್ಯವಸ್ಥಾಪಕರು, ಕಾಞಂಗಾಡು ಶಾಖಾ ವ್ಯವಸ್ಥಾಪಕರು ಮತ್ತು ಕ್ಯಾಂಪ್ಕೋದ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಪೆರಡಾಲ ಸೇವಾ ಸಹಕಾರಿ ಬ್ಯಾಂಕ್‌ನ ಬದಿಯಡ್ಕ ಶಾಖಾ ಕಚೇರಿ ಉದ್ಘಾಟನೆ



ಬದಿಯಡ್ಕ: ಗ್ರಾಮೀಣ ಪ್ರದೇಶದ ಜನರಿಗೆ ಶತಮಾನಗಳಿಂದ ಸೇವೆಯನ್ನು ನೀಡುತ್ತಾ ಬಂದಿರುವ ಸಹಕಾರಿ ಸಂಸ್ಥೆ ನಾಡಿನ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿದೆ. ಗ್ರಾಹಕರ ಸೌಕರ್ಯಕ್ಕಾಗಿ ಆಡಳಿತ ಮಂಡಳಿಯು ದಿಟ್ಟ ಹೆಜ್ಜೆಯನ್ನಿಟ್ಟು ಮುಂದುವರಿಯುತ್ತಾ ಬಂದಿದೆ. ಹಿರಿಯರ ಬೆವರಿನ ಫಲವಾಗಿ ಬೆಳೆದು ಬಂದ ಈ ಸಹಕಾರಿ ಸಂಸ್ಥೆಯು ಇನ್ನಷ್ಟು ಪ್ರಗತಿಯನ್ನು ಸಾಧಿಸುತ್ತಾ ನಾಡಿನ ಜನರಿಗೆ ಸೇವೆಯನ್ನು ನೀಡುವಂತಾಗಲಿ ಎಂದು ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ಶುಭಕೋರಿದರು.

ಪೆರಡಾಲ ಸೇವಾ ಸಹಕಾರಿ ಬ್ಯಾಂಕ್ ಬದಿಯಡ್ಕ ಶಾಖೆಯ ನೂತನ ಕಚೇರಿ ಇಲ್ಲಿನ ಬಸ್ ತಂಗುದಾಣದ ಪರಿಸರದ ಶಾಸ್ತ್ರೀಸ್ ಕಟ್ಟಡಕ್ಕೆ ಬುಧವಾರ ಸ್ಥಳಾಂತರಗೊಂಡಿದ್ದು, ಇದರ ಉದ್ಘಾಟನೆ ನೆರವೇರಿಸಿ, ಅವರು ಮಾತನಾಡಿದರು.

ಬ್ಯಾಂಕ್ ಅಧ್ಯಕ್ಷ ಕೆ.ಗಣಪತಿ ಪ್ರಸಾದ ಕುಳಮರ್ವ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಸಹಕಾರಿ ಇಲಾಖೆಯ ಸಹಾಯಕ ನೋಂದಾವಣಾಧಿಕಾರಿ ವಿನೋದ್ ಕುಮಾರ್ ಸಿ. ಅವರು ಸೇಫ್ ಲಾಕರ್ ವ್ಯವಸ್ಥೆ ಉದ್ಘಾಟಿಸಿ, ಗ್ರಾಹಕರ ಬೆಲೆಬಾಳುವ ವಸ್ತುಗಳ ಭದ್ರತೆಯ ದೃಷ್ಟಿಯಿಂದ ಲಾಕರ್ ವ್ಯವಸ್ಥೆಯನ್ನು ಅಳವಡಿಸಿರುವುದು ಶ್ಲಾಘನೀಯ. ಇದರ ಪ್ರಯೋಜನವನ್ನು ಪಡೆದುಕೊಳ್ಳಲಿ ಎಂದರು.

ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಜಿಲ್ಲಾ ಪಂಚಾಯತ್ ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ, ಬ್ಲಾಕ್ ಪಂಚಾಯತ್ ಸದಸ್ಯ ಮಹೇಶ್ ವಳಕ್ಕುಂಜ, ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಕುಂಜಾರು ಮುಹಮ್ಮದ್, ನಿವೃತ್ತ ಕಾರ್ಯದರ್ಶಿ ಅಜಿತ ಕುಮಾರಿ ವಿ., ಬ್ಯಾಂಕ್‌ನ ಮಾಜಿ ಅಧ್ಯಕ್ಷ ವಿ.ಶ್ರೀಕೃಷ್ಣ ಭಟ್, ಕೆ.ವಿಷ್ಣು ಭಟ್ ಕೋರಿಕ್ಕಾರು, ಜಯದೇವ ಖಂಡಿಗೆ ಶುಭಾಶಂಸನೆಗೈದರು. ಬ್ಯಾಂಕ್‌ನ ಕಾರ್ಯದರ್ಶಿ ಪಿ. ವಿಷ್ಣು ಶರ್ಮ ಸ್ವಾಗತಿಸಿ, ಉಪಾಧ್ಯಕ್ಷ ಅವಿನಾಶ್ ರೈ ವಿ. ವಂದಿಸಿದರು. ಬ್ಯಾಂಕ್‌ನ ನಿರ್ದೇಶಕರು, ಗ್ರಾಹಕರು ಪಾಲ್ಗೊಂಡಿದ್ದರು.

ಮಧೂರು ಬಂಟರ ಸಂಘದ ಭವನ ಕಾಮಗಾರಿ ಕುರಿತು ಪರಿಶೀಲನಾ ಸಭೆ



ಕಾಸರಗೋಡು: ಬಂಟರ ಸಂಘದ ಮಧೂರು ಸಮಿತಿ, ಮಹಿಳಾ ಸಮಿತಿ, ಯುವ ಬಂಟರ ಸಂಘಗಳ ಜಂಟಿ ಸಭೆಯು ಪರಕ್ಕಿಲದ ಕಾರ್ಯಾಲಯದಲ್ಲಿ ಜರಗಿತು. ಬಂಟರ ಸಂಘದ ಮಧೂರು ಸಮಿತಿಯ ಅಧ್ಯಕ್ಷ ಕುತ್ತಾರುಗುತ್ತು ರಾಮಕೃಷ್ಣ ಆಳ್ವ ಅಧ್ಯಕ್ಷತೆ ವಹಿಸಿದ್ದರು.

ಮಧೂರು ಬಂಟರ ಸಂಘದ ಸಭಾ ಭವನದ ಕಾಮಗಾರಿಗಳ ಪ್ರಗತಿ ಕುರಿತು ಅಧ್ಯಕ್ಷ ರಾಮಕೃಷ್ಣ ಆಳ್ವ ವಿವರಿಸಿದರು. ಮಧೂರು ಬಂಟರ ಭವನಕ್ಕೆ ಉದಾರ ಕೊಡುಗೆ ನೀಡಿದ ಕೊಡುಗೈದಾನಿ, ಉದ್ಯಮಿ ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಅವರನ್ನು ಅಭಿನಂದಿಸಲಾಯಿತು.

ಸದಾಶಿವ ಶೆಟ್ಟಿಗೆ ಅಭಿನಂದನೆ

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕಾಸರಗೋಡು ವಲಯ ಬಂಟರ ಸಂಘದ ಅಧ್ಯಕ್ಷ ಸುಬ್ಬಣ್ಣ ಶೆಟ್ಟಿ ಅಗತ್ಯದ ಸಮಯದಲ್ಲಿ ಮಧೂರು ಬಂಟರ ಭವನದ ಕಾಮಗಾರಿಗೆ ಧನ ಸಹಾಯ ನೀಡುವ ಮೂಲಕ ಕೊಡುಗೈದಾನಿ ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಅವರು ಕಾಮಗಾರಿ ಮುಂದುವರಿಯುವಂತೆ ಸಹಕರಿಸಿದರೆಂದು ಹೇಳಿದರು.

ಹಿರಿಯರಾದ ಶಿರಿಬಾಗಿಲು ರಾಮ ಶೆಟ್ಟಿ ಮಾಸ್ಟರ್, ಪಂಚಾಯತ್ ಮಟ್ಟದ ಬಂಟ ಯುವಕರ ಕ್ರಿಕೆಟ್ ಪಂದ್ಯಾಟವನ್ನು ಯಶಸ್ವಿಯಾಗಿ ನಡೆಸಿದ ಮಧೂರು ಯುವ ಬಂಟರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮಧೂರು ಪಂಚಾಯತ್ ಸದಸ್ಯರೂ ಆಗಿರುವ ಕಜೆ ನವನೀತ ರೈ ಅವರನ್ನು ಸಭೆಯಲ್ಲಿ ಅಭಿನಂದಿಸಲಾಯಿತು. ಯುವ ಬಂಟರ ಸಂಘದ ಉಪಾಧ್ಯಕ್ಷ ಉಲ್ಲಾಸ್ ಶೆಟ್ಟಿ ಮಹಿಳಾ ಬಂಟರ ಸಂಘದ ಗೌರವಾಧ್ಯಕ್ಷೆ ಕುದ್ರೆಪ್ಪಾಡಿ ಗುತ್ತು ಯಮುನಾ ಎಸ್.ಶೆಟ್ಟಿ ಅಧ್ಯಕ್ಷೆ ಶ್ಯಾಮಲಾ ಎಂ.ಶೆಟ್ಟಿ ಕುದ್ರೆಪ್ಪಾಡಿ, ಮಧೂರು ಬಂಟರ ಸಂಘದ ಕಾರ್ಯದರ್ಶಿ ಗಣೇಶ್ ರೈ ನಾಯಕ್ಕೋಡು ಮಾತನಾಡಿದರು. ಹಿರಿಯ ಸದಸ್ಯ ಅಶೋಕ್ ರೈ ಸ್ವಾಗತಿಸಿ, ಮಹಿಳಾ ಸಂಘದ ಸಹ ಕಾರ್ಯದರ್ಶಿ ಜಯ ಅಡಪ ಕೂಡ್ಲು ವಂದಿಸಿದರು.

ಮಂಜೇಶ್ವರ: ಉದುಮ ಶಾಸಕರಿಗೆ ಜನಶ್ರೀ ಯೂನಿಯನ್‌ನಿಂದ ಸನ್ಮಾನ



ಮಂಜೇಶ್ವರ: ಜನಶ್ರೀ ಮಂಜೇಶ್ವರ ಬ್ಲಾಕ್ ಯೂನಿಯನ್ ವತಿಯಿಂದ ನೂತನವಾಗಿ ಉದುಮ ಶಾಸಕರಾಗಿ ಆಯ್ಕೆಯಾದ ಜನಶ್ರೀ ಕಾಸರಗೋಡು ಜಿಲ್ಲಾಧ್ಯಕ್ಷ ಕೆ.ನೀಲಕಂಠನ್ ಅವರನ್ನು ಸನ್ಮಾನಿಸಲಾಯಿತು.

ಹೊಸಂಗಡಿ ವ್ಯಾಪಾರ ಭವನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬ್ಲಾಕ್ ಯೂನಿಯನ್ ಅಧ್ಯಕ್ಷ ಕೃಷ್ಣನ್ ಅಡ್ಕತೊಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಕೆ. ನೀಲಕಂಠನ್ ಉದ್ಘಾಟಿಸಿದರು.

ಬ್ಲಾಕ್ ಯೂನಿಯನ್ ಪರವಾಗಿ ಶಾಲು ಹೊದೆಸಿ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಬಳಿಕ ವಿವಿಧ ಮಂಡಲ ಯೂನಿಯನ್ ವತಿಯಿಂದ ಹಾರಾರ್ಪಣೆ ನಡೆಸಲಾಯಿತು.

ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಹಾಗೂ ಜನಶ್ರೀ ರಾಜ್ಯ ಸಮಿತಿ ಸದಸ್ಯ ಕುಂಞಂಬು ನಂಬ್ಯಾರ್, ಜನಶ್ರೀ ಜಿಲ್ಲಾ ಸಮಿತಿ ಸದಸ್ಯರಾದ ಶಶಿಧರನ್, ಸೀತಾರಾಮ ಮಲ್ಲ, ಆನಂದ ಮವ್ವಾರ್, ದಿವಾಕರ ಎಸ್.ಜೆ., ಗಣೇಶ ಭಂಡಾರಿ ಕುಂಬಳೆ, ಪೈವಳಿಕೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಟಿ.ರಾಘವೇಂದ್ರ ಭಟ್, ಅಜೀಜ್ ಕಲ್ಲೂರು, ಚನಿಯಪ್ಪ ಮಾಸ್ತರ್, ಜಯಂತಿ ಮೀಂಜ, ಮಿಸಿರಿಯ, ಜೆಸ್ಸಿ, ನಾರಾಯಣ ಏದಾರ್, ಹಮೀದ್ ಕಣಿಯೂರು, ವಿನ್ಸೆಂಟ್ ಡಿಸೋಜಾ ಮೊದಲಾದವರು ಶುಭಹಾರೈಸಿದರು. ಬ್ಲಾಕ್ ಕಾರ್ಯದರ್ಶಿ ವಸಂತ ಮಾಸ್ತರ್ ಸ್ವಾಗತಿಸಿ, ಜಿಲ್ಲಾ ಸಮಿತಿ ಸದಸ್ಯ ಮೊಹಮ್ಮದ್ ಜೆ. ವಂದಿಸಿದರು.

ಜನಗಣತಿ: ಜಿಲ್ಲಾ ಮಟ್ಟದ ಸ್ವಯಂ ಗಣತಿ ಕಾರ್ಯಕ್ಕೆ ಜಿಲ್ಲಾಧಿಕಾರಿ ಚಾಲನೆ

ಕಾಸರಗೋಡು: ಭಾರತ ಜನಗಣತಿ 2027ರ ಭಾಗವಾಗಿ ಸ್ವಯಂ ಗಣತಿ ಚಟುವಟಿಕೆಗಳ ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೆರವೇರಿಸಿದರು.

34 ಪ್ರಶ್ನೆಗಳನ್ನು ಒಳಗೊಂಡಿರುವ ಗಣತಿಯನ್ನು ಜಿಲ್ಲಾಧಿಕಾರಿ ಡಿಜಿಟಲ್ ರೂಪದಲ್ಲಿ ಉದ್ಘಾಟಿಸಿದರು. ಜನಗಣತಿ ಫ್ಲೋಚಾರ್ಟ್‌ನ್ನು ಎಡಿಎಂ ಕೆ.ವಿ.ಶ್ರುತಿ ಬಿಡುಗಡೆ ಮಾಡಿದರು. ಕಳೆದ ಬಾರಿಗಿಂತ ಭಿನ್ನವಾಗಿ ಆನ್‌ಲೈನ್‌ನಲ್ಲಿ ಕುಟುಂಬಗಳಿಗೆ ನೇರವಾಗಿ ಮಾಹಿತಿಗಳನ್ನು ಒದಗಿಸುವ ಸ್ವಯಂ ಗಣತಿ ವ್ಯವಸ್ಥೆಯು ಈ ಬಾರಿಯ ಜನಗಣತಿಯ ವಿಶೇಷತೆಯಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಮೊದಲ ಹಂತದಲ್ಲಿ ಸ್ವಯಂ ಗಣತಿ ಪ್ರಕ್ರಿಯೆಯನ್ನು ಮಂಗಳವಾರ ಪ್ರಾರಂಭಿಸಲಾಯಿತು. ಸ್ವಯಂ ಗಣತಿಯ ಜೂ.30ರಂದು ಮುಕ್ತಾಯಗೊಳ್ಳಲಿದೆ. ನಂತರ ಗಣತಿದಾರರು ಜುಲೈ ತಿಂಗಳಲ್ಲಿ



ಮನೆಗಳಿಗೆ ಭೇಟಿ ನೀಡಿ ಆನ್‌ಲೈನ್‌ನಲ್ಲಿ ಸಲ್ಲಿಸಿದ ಮಾಹಿತಿಯನ್ನು ಪರಿಶೀಲಿಸುತ್ತಾರೆ ಮತ್ತು ದೃಢೀಕರಿಸುತ್ತಾರೆ. ಮಾಹಿತಿಯನ್ನು ಒದಗಿಸಿದ ಬಳಿಕ ದೃಢೀಕರಣ 11 – ಅಂಕೆಯ ಐಡಿ ಸಂಖ್ಯೆಯನ್ನು ಸ್ವೀಕರಿಸಲಾಗುತ್ತದೆ. ನಂತರ ಜನಗಣತಿ ಅಧಿಕಾರಿಗಳು ಜುಲೈ 1ರಿಂದ ಜುಲೈ 30ರ ವರೆಗೆ ಮಾಹಿತಿ ಸಂಗ್ರಹಿಸಲು ಮನೆಗಳಿಗೆ ಭೇಟಿ ನೀಡುತ್ತಾರೆ. ಕಾರ್ಯಕ್ರಮದಲ್ಲಿ ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಮತ್ತು ಜನಗಣತಿ ಮಾಸ್ಟರ್ ಟ್ರೈನರ್ ರಾಜ್ ಕುಮಾರ್ ಭಾಗವಹಿಸಿದ್ದರು.

ಗ್ರಂಥಾಲಯಕ್ಕೆ ಸಂಬಂಧಿಸಿದ ಸಾಫ್ಟ್‌ವೇರ್ ತರಬೇತಿ ತರಗತಿ



ಉಪ್ಪಳ: ಕುಂಬಳೆ ಜಿಎಚ್‌ಎಸ್‌ಎಸ್‌ನಲ್ಲಿ ಗ್ರಂಥಾಲಯಕ್ಕೆ ಸಂಬಂಧಿಸಿದ ಸಾರ್ವಜನಿಕ ಸಾಫ್ಟ್‌ವೇರ್ 2ನೇ ಹಂತದ ಪ್ರಾಯೋಗಿಕ ತರಬೇತಿ ತರಗತಿಯನ್ನು ಆಯೋಜಿಸಲಾಗಿತ್ತು. ಮಂಜೇಶ್ವರ ತಾಲೂಕು ಗ್ರಂಥಾಲಯ ಪರಿಷತ್‌ನ ಅಧ್ಯಕ್ಷೆ ಶ್ರೀಕುಮಾರಿ ಕೆ. ಅಧ್ಯಕ್ಷತೆ ವಹಿಸಿದ್ದರು.

ಕಾಸರಗೋಡು ಜಿಲ್ಲಾ ಗ್ರಂಥಾಲಯ ಪರಿಷತ್‌ನ ಜಂಟಿ ಕಾರ್ಯದರ್ಶಿ ಟಿ.ರಾಜನ್ ಕಾರ್ಯಕ್ರಮ ಉದ್ಘಾಟಿಸಿ, ಮಾಹಿತಿ ನೀಡಿದರು. ಮಾಸ್ಟರ್ ತರಬೇತುದಾರರಾದ ಸುನೀಶ್ ಕಾಕಟ್ಟ, ವಿನೋದ್ ಅಯನ್ನೂರು, ಕೆ.ವಿ.ಸಜೀಶ್, ಸಲಾವುದ್ದೀನ್ ಎನ್., ಹಾದಿ ಅಬೂಬಕ್ಕರ್ ತರಬೇತಿಯ ನೇತೃತ್ವ ವಹಿಸಿದ್ದರು. ಮಂಜೇಶ್ವರ ತಾಲೂಕು ಗ್ರಂಥಾಲಯ ಪರಿಷತ್‌ನ ಕಾರ್ಯದರ್ಶಿ ಡಿ.ಕಮಲಾಕ್ಷ ಸ್ವಾಗತಿಸಿ, ಕಾಸರಗೋಡು ಜಿಲ್ಲಾ ಗ್ರಂಥಾಲಯ ಪರಿಷತ್‌ನ ಸದಸ್ಯ ಸಲಾವುದ್ದೀನ್ ಎನ್. ವಂದಿಸಿದರು.

ಕಾರ್ಮಿಕ ಇಲಾಖೆಗೆ ಬೀಡಿ ಮಜ್ದೂರ್ ಸಂಘದ ಪ್ರಮುಖರ ಮನವಿ

ಸಂಕಷ್ಟದಲ್ಲಿರುವ ಬೀಡಿ ಕಾರ್ಮಿಕರಿಗೆ ನೆರವಾಗಿ

ಕಾಸರಗೋಡು: ಕಾಸರಗೋಡು ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಲಕ್ಷಾಂತರ ಮಂದಿ ಬೀಡಿ ಕಾರ್ಮಿಕರಿದ್ದಾರೆ. ಇಂದು ಅನೇಕ ಕಾರ್ಮಿಕರು ಅನಾರೋಗ್ಯಕ್ಕೆ ತುತ್ತಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಬಿಎಂಎಸ್ ಕಾಸರಗೋಡು ಜಿಲ್ಲಾ ಕಾರ್ಯಾಲಯದಲ್ಲಿ ಮಂಗಳವಾರ ಜರಗಿದ ಬೀಡಿ ಮಜ್ದೂರ್ ಸಂಘದ ಜಿಲ್ಲಾ ವಾರ್ಷಿಕ ಪ್ರತಿನಿಧಿ ಸಮ್ಮೇಳನದಲ್ಲಿ ಪ್ರಮುಖ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬೀಡಿ ಕಾರ್ಮಿಕರಿಗೆ ಪಿಎಫ್, ಪಿಂಚಣಿ ಇತ್ಯಾದಿ ಸವಲತ್ತುಗಳು ಕೇವಲ ನಾಮಮಾತ್ರವಾಗಿವೆ. ತುಟ್ಟಿಭತ್ಯೆ ಮುಂತಾದ ಸೌಲಭ್ಯಗಳು ಲಭಿಸುತ್ತಿಲ್ಲ. ಆದ್ದರಿಂದ ಕೇರಳ ಸರ್ಕಾರದ ಕಾರ್ಮಿಕ ಇಲಾಖೆ ಅವರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಲಾಯಿತು.



ಭಾರತೀಯ ಮಜ್ದೂರ್ ಸಂಘದ ಕೇರಳ ರಾಜ್ಯ ಸಮಿತಿ ಸದಸ್ಯ ಎ.ವಿ.ಬಾಲಕೃಷ್ಣನ್ ಸಮಾವೇಶ ಉದ್ಘಾಟಿಸಿದರು. ಗಂಗಾಧರನ್ ಕೊವ್ವಲ್‌ಪಳ್ಳಿ ಅಧ್ಯಕ್ಷತೆ ವಹಿಸಿದ್ದರು. ಬಿಎಂಎಸ್ ಜಿಲ್ಲಾ ಕಾರ್ಯದರ್ಶಿ ಕೆ.ವಿ.ಬಾಬು, ಜಿಲ್ಲಾ ಉಪಾಧ್ಯಕ್ಷೆ ಗೀತಾ ಬಾಲಕೃಷ್ಣನ್, ಜಿಲ್ಲಾ ಜೊತೆ ಕಾರ್ಯದರ್ಶಿ ಪಿ.ದಿನೇಶ್ ಬಂಬ್ರಾಣ, ಭಾಸ್ಕರನ್ ಪೊಯಿನಾಚಿ, ಗುರುದಾಸ್ ಮಧೂರು, ಮುಳ್ಳೇರಿಯ ವಲಯ ಕಾರ್ಯದರ್ಶಿ ಆನಂದ ಮುಳ್ಳೇರಿಯ, ಕಾಸರಗೋಡು ವಲಯ ಕಾರ್ಯದರ್ಶಿ ಬಾಬುಮೋನ್ ಚೆಂಗಳ ಮಾತನಾಡಿದರು. ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಹರೀಶ್ ಕುದ್ರೆಪ್ಪಾಡಿ ಸಮಾರೋಪ ಭಾಷಣ ಮಾಡಿದರು. ರಾಜ್ಯ ಸಮಿತಿ ಸದಸ್ಯ ಟಿ.ಕೃಷ್ಣನ್ ಸ್ವಾಗತಿಸಿ, ಜಿಲ್ಲಾ ಜೊತೆ ಕಾರ್ಯದರ್ಶಿ ಮಿನಿ ಶ್ರೀನಿವಾಸನ್ ವಂದಿಸಿದರು.

ಅಧ್ಯಕ್ಷರಾಗಿ ನಾರಾಯಣ ತೊಟ್ಟಿ, ಉಪಾಧ್ಯಕ್ಷರಾಗಿ ರಾಮಚಂದ್ರ ಆಯ್ಕೆ

ವಿಹಿಂಪ ಕೋಡಿಬೈಲು ಉಪಖಂಡ ಸಮಿತಿ ರಚನೆ

ಉಪ್ಪಳ: ವಿಶ್ವ ಹಿಂದು ಪರಿಷತ್ ಕೋಡಿಬೈಲು ಉಪಖಂಡದ ನೂತನ ಸಮಿತಿ ರಚನೆ ಮತ್ತು ಧರ್ಮ ರಕ್ಷಾ ನಿಧಿ ಸಮರ್ಪಣಾ ಕಾರ್ಯಕ್ರಮವು ಕೋಡಿಬೈಲಿನಲ್ಲಿ ಜರಗಿತು. ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು.

ಅಧ್ಯಕ್ಷರಾಗಿ ನಾರಾಯಣ ತೊಟ್ಟಿ ಉಪಾಧ್ಯಕ್ಷರಾಗಿ ರಾಮಚಂದ್ರ ಯಶೋನಂದ ನಗರ, ಕಾರ್ಯದರ್ಶಿಯಾಗಿ ರಾಜೇಶ್ ಕೋಡಿಬೈಲು, ಬಜರಂಗ ದಳ ಸಂಯೋಜಕ್ ಆಗಿ ರಿತೇಶ್ ಯಶೋನಂದ ನಗರ, ವ್ಯವಸ್ಥಾ ಪ್ರಮುಖ್ ಆಗಿ ಕಾರ್ತಿಕ್ ಕೋಡಿಬೈಲು, ಮಾತೃಶಕ್ತಿ ಗೌರವಾಧ್ಯಕ್ಷೆಯಾಗಿ ಸರಸ್ವತಿ ಶೆಟ್ಟಿ ಕೋಡಿಬೈಲು, ಅಧ್ಯಕ್ಷೆಯಾಗಿ ಶಶಿಕಲಾ ಮಜಲು ಮುಳಿಂಜ, ಉಪಾಧ್ಯಕ್ಷೆಯಾಗಿ ಶಾಂತಿ ಕುಮಾರಿ ಯಶೋನಂದ ನಗರ, ಶೋಭಾ ಅಶೋಕ ಕೋಡಿಬೈಲು, ಪ್ರಧಾನ ಕಾರ್ಯದರ್ಶಿಯಾಗಿ



ಚಂದ್ರಿಕಾ ಕೋಡಿಬೈಲು, ಕಾರ್ಯದರ್ಶಿಯಾಗಿ ಶೋಭಾ ಸದಾಶಿವ, ಸಹನಾ, ಗಾಯತ್ರಿ ಕೋಡಿಬೈಲು, ಸತ್ಸಂಗ ಪ್ರಮುಖ್ ಆಗಿ ರೋಹಿಣಿ ಕೋಡಿಬೈಲು, ರಂಜಿತಾ ಯಶೋನಂದ ನಗರ, ಕೋಶಾಧಿಕಾರಿಯಾಗಿ ಕುಸುಮಾ ಸದಾನಂದ ಅವರನ್ನು ಆಯ್ಕೆ ಮಾಡಲಾಯಿತು. ಮಂಜೇಶ್ವರ ಪ್ರ. ಕಾರ್ಯದರ್ಶಿ ರಂಜಿತ್ ಕೋಡಿಬೈಲು ಪದಾಧಿಕಾರಿಗಳನ್ನು ಘೋಷಿಸಿದರು. ಭಾರತೀಯ ಕಿಸಾನ್ ಸಂಘದ ಕಾಸರಗೋಡು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಚೆರುಗೋಳಿ ಬೌದ್ಧಿಕ್ ನೀಡಿದರು.

ಸುತ್ತಮುತ್ತ

ಇಂದು ಸಾಂತೂರು ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಪಾದುಕಾನ್ಯಾಸ

ಶಿರ್ವ: ಇತಿಹಾಸ ಪ್ರಸಿದ್ಧ ಸಾಂತೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸುತ್ತು ಪೌಳಿ ಶಿಲಾಮಯಗೊಳಿಸುವ ಅಂಗವಾಗಿ (ಇಂದು) ಜೂ. 18 ರಂದು ಬೆಳಗ್ಗೆ ನಡುಬೆಟ್ಟು ವೇದಮೂರ್ತಿ ಸತೀಶ್ ತಂತ್ರಿಗಳ ನೇತೃತ್ವದಲ್ಲಿ ಬೆಳಗ್ಗೆ 9.50ರ ಕರ್ಕಾಟಕ ಲಗ್ನ ಗುರು ಪುಷ್ಯ ಯೋಗದಲ್ಲಿ ಪಾದುಕಾನ್ಯಾಸ ಸಮಾರಂಭ ಸಂಪನ್ನಗೊಳ್ಳಲಿದೆ. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಉಡುಪಿ ಶ್ರೀ ಕೃಷ್ಣಾಪುರ ಮಠದ ಯತಿವರ್ಯರಾದ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರು ವಹಿಸಲಿದ್ದಾರೆ.

ಈ ಸಂದರ್ಭ ಕ್ಷೇತ್ರದ ಪ್ರಧಾನ ಅರ್ಚಕರಾದ ವೇ.ಮೂ.ವಿಠಲ ಜೋಯಿಸರು, ಅರ್ಚಕರಾದ ವೇ.ಮೂ.ಗೋಪಾಲಕೃಷ್ಣ ತಂತ್ರಿ, ಗುರುರಾಜ ಜೋಯಿಸರು, ಕಾಪು ಕ್ಷೇತ್ರದ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವ ವಿನಯಕುಮಾರ್ ಸೊರಕೆ, ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶ ಸಮಿತಿ ಮುಂಬೈ ಘಟಕದ ಗೌರವ ಅಧ್ಯಕ್ಷರು, ಮಾಜಿ ಸಂಸದರಾದ ಗೋಪಾಲ್ ಸಿ.ಶೆಟ್ಟಿ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ದಿವಾಕರ ಎಂ.ಶೆಟ್ಟಿ, ಮುಂಬೈ ಘಟಕದ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ನಡಿಮನೆ, ಸಾಂತೂರು, ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಸುಧೀರ್ ರಾವ್ ಸಾಂತೂರು ಉಪಸ್ಥಿತರಿರುವರು ಎಂದು ಶ್ರೀ ದೇವಳದ ಪ್ರಕಟನೆ ತಿಳಿಸಿದೆ.

ಜ್ಯೋತಿ ಜಯರಾಮ್ ಶೆಟ್ಟಿಗೆ ಸಮಾಜ ಸೇವಾರತ್ನ ಪ್ರಶಸ್ತಿ ಪ್ರದಾನ



ಕಾರ್ಕಳ: ಚಾಮರಾಜನಗರ ಅನುಪಮಾ ಸೇವಾ ಟ್ರಸ್ಟ್‌ನ ಪ್ರಥಮ ವಾರ್ಷಿಕೋತ್ಸವದ ಪ್ರಯುಕ್ತ ಅಲ್ಲಿನ ಡಾ. ರಾಜಕುಮಾರ್ ಕಲಾಮಂದಿರ (ಜಿಲ್ಲಾಡಳಿತ ಭವನ)ದಲ್ಲಿ ಭಾನುವಾರ ನಡೆದ ರಾಷ್ಟ್ರಮಟ್ಟದ ಸಾಹಿತ್ಯ ಸಮ್ಮೇಳನ ಹಾಗೂ ಕವಿಗೋಷ್ಠಿ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸಮನ್ವಯ ವೇದಿಕೆ ಖಜಾಂಚಿ ಹಾಗೂ ಉಡುಪಿ ಜಿಲ್ಲಾಧ್ಯಕ್ಷೆ ಜ್ಯೋತಿ ಜಯರಾಮ್ ಶೆಟ್ಟಿ ಇವರಿಗೆ ರಾಷ್ಟ್ರಮಟ್ಟದ ಸಮಾಜ ಸೇವಾರತ್ನ ಪ್ರಶಸ್ತಿ ಪ್ರದಾನಿಸಿ ಗೌರವಿಸಲಾಯಿತು.

ಗ್ರಾಮ ಸಹಾಯಕ ಹುದ್ದೆ: ಅರ್ಜಿ ಆಹ್ವಾನ

ಉಡುಪಿ: ಉಡುಪಿ ತಾಲೂಕು ಅಲೆವೂರು ಗ್ರಾಮದ ಗ್ರಾಮ ಸಹಾಯಕ ತಾತ್ಕಾಲಿಕ ಹುದ್ದೆ ನೇಮಕಾತಿಗೆ, ಷರತ್ತಿಗೊಳಪಟ್ಟು 25 ರಿಂದ 45 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸದ್ರಿ ಗ್ರಾಮದಲ್ಲಿ ವಾಸವಿರುವ, ಓದು, ಬರಹ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರುವ, ಈ ಹಿಂದೆ ಗ್ರಾಮ ಸಹಾಯಕರಾಗಿದ್ದು, ಸೇವೆಯಲ್ಲಿರುವಾಗಲೇ ಮರಣ ಹೊಂದಿದವರ ಕುಟುಂಬದ ಸದಸ್ಯರು ಅಥವಾ ಸ್ಥಳೀಯ ಕಚೇರಿಗಳಲ್ಲಿ ಕೆಲಸ ನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಜೂನ್ 30 ರ ಒಳಗಾಗಿ ಉಡುಪಿ ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸ ಬಹುದಾಗಿದೆ. ನಿಗಧಿತ ಸಮಯದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಉಡುಪಿ ತಾಲೂಕು ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಟ್ರಾಫಿಕ್ ಜಾಮ್

ಬೊಳುವಾರಿನಿಂದ ಕೊಂಬೆಟ್ಟು ಭಾಗಕ್ಕೆ ಬರುವ ರಸ್ತೆಯನ್ನೂ ಎರಡು ವಾರಗಳಿಂದ ಬಂದ್ ಮಾಡಲಾಗಿದೆ. ಈ ಕಾರಣದಿಂದ ನಿತ್ಯ ಪ್ರಯಾಣಿಸುವ ಪ್ರಯಾಣಿಸಕರು ಸುತ್ತಿ ಬಳಸಿ ಸಂಚರಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. 20 ದಿನಗಳಲ್ಲಿ ಮುಗಿಸಲು ಶಾಸಕರು ಸೂಚಿಸಿದ್ದರು ಸಾವಿರಾರು ವಾಹನಗಳು ಸಂಚರಿಸುವ ಅತಿ ಅಗತ್ಯದ ರಸ್ತೆಯಾಗಿರುವುದರಿಂದ ಒಂದು ತಿಂಗಳು ಅವಧಿ ನೀಡಲು ಸಾಧ್ಯವಿಲ್ಲ, ತಂತ್ರಜ್ಞಾನಗಳನ್ನು ಬಳಸಿಕೊಂಡು 20 ದಿನಗಳಲ್ಲಿ ಕಾಮಗಾರಿ ಮುಗಿಸಿ ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಶಾಸಕ ಅಶೋಕ್ ರೈ ಅವರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದರು. ಈ ಸಂದರ್ಭದಲ್ಲಿ ಇಲಾಖೆ ಅಧಿಕಾರಿಗಳು 1 ತಿಂಗಳ ಅವಧಿಗೆ ಪಟ್ಟು ಹಿಡಿದಿದ್ದು, ಈಗ ಜಿಲ್ಲಾಧಿಕಾರಿಯವರ ಮೂಲಕ ಅಂಗೀಕಾರಗೊಂಡು ಬದಲಿ ರಸ್ತೆ ಸಂಚಾರಕ್ಕೆ ಸೂಚಿಸಲಾಗಿದೆ.

ಮೆಸ್ಕಾಂ ಜನಸಂಪರ್ಕ ಸಭೆ | ಮೆಸ್ಕಾಂ ಅಧಿಕಾರಿಗಳ ವಿರುದ್ಧ ದೂರುಗಳ ಸುರಿಮಳೆಗೈದ ಗ್ರಾಹಕರು

ಮಾವಿನಕಟ್ಟೆಯಲ್ಲಿ ಹೊಸ ಸಬ್‌ಸ್ಟೇಶನ್ ನಿರ್ಮಿಸಲು ಆಗ್ರಹ



ಕುಂದಾಪುರ: ತಲ್ಲೂರು ಮೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರು ಮೆಸ್ಕಾಂ ಅಧಿಕಾರಿಗಳ ವಿರುದ್ಧ ದೂರುಗಳ ಸುರಿಮಳೆಗೈದರು. ವಿದ್ಯುತ್ ಕಳ್ಳತನ, ಪದೇಪದೆ ವಿದ್ಯುತ್ ಕಡಿತ, ಲೈನ್‌ಮ್ಯಾನ್‌ಗಳ ಕೊರತೆ ಮತ್ತು ಹಳೆಯ ವಿದ್ಯುತ್ ತಂತಿಗಳ ಬದಲಾವಣೆ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಗ್ರಾಹಕರು ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಚಟುವಟಿಕೆಗಳಿಗೆ ಅಸಮಾಧಾನ ಮತ್ತು ದೂರುಗಳ ಸುರಿಮಳೆ

ತಲ್ಲೂರು ಭಾಗದಲ್ಲಿ ನಡೆಯುತ್ತಿರುವ ವಿದ್ಯುತ್ ಕಳ್ಳತನವನ್ನು ತಡೆಯಲು ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಉದಯ ಕುಮಾರ್ ತಲ್ಲೂರು ಆಕ್ಷೇಪಿಸಿದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಯೋಜನೆಯಡಿ ನಡೆದ ಕಾಮಗಾರಿಗಳ ಮಾಹಿತಿಯನ್ನು ಪತ್ರದ ಮೂಲಕ ಕೇಳಿದರೂ ಅಧಿಕಾರಿಗಳು ನೀಡಿಲ್ಲ ಎಂದು ದೂರಿದರಲ್ಲದೆ, ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲು ಗ್ರಾಹಕರನ್ನು ಸತಾಯಿಸಲಾಗುತ್ತಿದೆ ಎಂದು ಮಹಿಳೆಯೊಬ್ಬರು ಅಳಲು ತೋಡಿಕೊಂಡರು. ಕೆಂಡ ಭಾಗದಲ್ಲಿ ವಿದ್ಯುತ್ ಮಾರ್ಗದ ತಾಂತ್ರಿಕ ದೋಷದಿಂದ ಪದೇಪದೆ ವಿದ್ಯುತ್ ಕಡಿತ ವಾಗುತ್ತಿದ್ದು ಚಿತ್ತೂರು ಭಾಗದಲ್ಲಿ ಲೈನ್‌ಮ್ಯಾನ್‌ಗಳ ತೀವ್ರ ಕೊರತೆಯಿದೆ ಎಂದು ಗ್ರಾಮಸ್ಥರು ದೂರಿದರು.

ಮೂಲಸೌಕರ್ಯ ಅಭಿವೃದ್ಧಿಗೆ ಗ್ರಾಹಕರ ಒತ್ತಾಯ

ಮಾವಿನಕಟ್ಟೆಯಲ್ಲಿ ಹೊಸ ಸಬ್‌ಸ್ಟೇಶನ್ ನಿರ್ಮಿಸಬೇಕೆಂದು ಸಭೆಯಲ್ಲಿ ಸಾರ್ವಜನಿಕರು ಒತ್ತಾಯಿಸಿದರು. ಗಂಗೊಳ್ಳಿಯ ಲೋ-ವೋಲ್ಟೇಜ್ ಸಮಸ್ಯೆ ಇರುವ ಪ್ರದೇಶಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕೆಂದು ಬಿ.ರಾಘವೇಂದ್ರ ಪೈ ಮನವಿ ಮಾಡಿದರು.

ವಂಡ್ಸೆ ಭಾಗದ ಗ್ರಾಹಕರು ಮಾತನಾಡಿ, ತಮ್ಮ ಭಾಗದಲ್ಲಿ ವಿದ್ಯುತ್ ತಂತಿಗಳು ಬಹಳ ಹಳೆಯದಾಗಿದ್ದು, ಇವುಗಳ ತುರ್ತಾಗಿ ಬದಲಾಯಿಸಬೇಕೆಂದು ಆಗ್ರಹಿಸಿದರು. ಇದರೊಂದಿಗೆ ಅನೇಕ ಗ್ರಾಹಕರು ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ಪ್ರಸ್ತಾಪಿಸಿದರು.

ಸಭೆಯಲ್ಲಿ...

- ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲು ಗ್ರಾಹಕರನ್ನು ಸತಾಯಿಸಲಾಗುತ್ತಿದೆ
- ಪದೇಪದೆ ವಿದ್ಯುತ್ ಕಡಿತಗೊಳಿಸಲಾಗುತ್ತದೆ. ಲೈನ್‌ಮ್ಯಾನ್‌ಗಳ ಕೊರತೆ
- ವಿದ್ಯುತ್ ತಂತಿಗಳು ಬಹಳ ಹಳೆಯದಾಗಿದ್ದು, ಹೊಸ ತಂತಿ ಅಳವಡಿಸಲು ಆಗ್ರಹ

ಅಧಿಕಾರಿಗಳ ಭರವಸೆ

ಸಾರ್ವಜನಿಕರು ಪ್ರಸ್ತಾಪಿಸಿದ ಎಲ್ಲಾ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಆದ್ಯತೆಯ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

ಮೆಸ್ಕಾಂ ಉಡುಪಿಯ ಅಧೀಕ್ಷಕ ಇಂಜಿನಿಯರ್ ರಾಕೇಶ್ ಬಿ., ಕುಂದಾಪುರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಶಾಂತ್, ತಲ್ಲೂರು ಸಹಾಯಕ ಕಾರ್ಯನಿರ್ವಾ ಹಕ ಇಂಜಿನಿಯರ್ ಹರೀಶ್ ಕುಮಾರ್, ಸಹಾಯಕ ಇಂಜಿನಿಯರ್‌ಗಳಾದ ಶಶಿರಾಜ್, ಸುರೇಶ ಬಾಬು ಬಿ., ಗಂಗೊಳ್ಳಿ ಶಾಖಾಧಿಕಾರಿ ದಿನೇಶ ಶೆಟ್ಟಿ, ವಂಡ್ಸೆ ಶಾಖಾಧಿಕಾರಿ ರಾಜೇಶ್, ನಾಡ ಶಾಖಾಧಿಕಾರಿ ವಿಜಯ ಕುಮಾರ್, ವಾಸು ಮರಾಠಿ , ತಲ್ಲೂರು ಉಪವಿಭಾಗ ವ್ಯಾಪ್ತಿಯ ಗ್ರಾಹಕರು ಉಪಸ್ಥಿತರಿದ್ದರು.

ಕಾರ್ಕಳ ಕನ್ನಡ ಸಾಹಿತ್ಯ ಪರಿಷತ್ ಘಟಕದ ಕಾರ್ಯಕಾರಿ ಸಮಿತಿ ಸಭೆ



ಕಾರ್ಕಳ: ಕನ್ನಡ ಸಾಹಿತ್ಯ ಪರಿಷತ್ ಕಾರ್ಕಳ ತಾ. ಘಟಕದ ಕಾರ್ಯಕಾರಿ ಸಮಿತಿ ಸಭೆ ಕಾರ್ಕಳ ಹೋಟೆಲ್ ಪ್ರಕಾಶದಲ್ಲಿ ಜರುಗಿತು.

ಸದಸ್ಯರು ಕಾರ್ಯ ಪ್ರವೃತ್ತರಾಗಬೇಕು

ಸಭೆಯ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷ ಕೊಂಡಳ್ಳಿ ಪ್ರಭಾಕರ ಶೆಟ್ಟಿ ವಹಿಸಿ ಮಾತನಾಡಿ, ಪರಿಷತ್ ಘಟಕದ ಆಶ್ರಯದಲ್ಲಿ ನಡೆಯುವ ಸಾಹಿತ್ಯ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಸದಸ್ಯರೆಲ್ಲರೂ ಕಾರ್ಯ ಪ್ರವೃತ್ತರಾಗುವಂತೆ ವಿನಂತಿಸಿಕೊಂಡರು. ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಸಾಹಿತ್ಯ ಡಿಂಡಿಮ, ಹಿರಿಯರೆಡೆಗೆ ಸಾಹಿತ್ಯ ನಡೆ , ತಾಲೂಕು ಕಸಾಪ ಸದಸ್ಯರ ಸಮಾವೇಶ , ತಾಲೂಕು ಕವಿಗೋಷ್ಠಿ ಅಂತೆಯೇ ಮುಂದೆ ಅಕ್ಟೋಬರ್ ನಲ್ಲಿ ನಡೆಸಲಾಗುವ ತಾಲೂಕು ಸಾಹಿತ್ಯ ಸಮ್ಮೇಳನದ ರೂಪುರೇಷೆಗಳನ್ನು ಬಗ್ಗೆ ತಿಳಿಸಿದರು. ಅಂತೆಯೇ ಚರ್ಚಿಸಿ ಕಾರ್ಯಕ್ರಮಗಳನ್ನು ಯೋಜಿಸಲಾಯಿತು.

ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಉಪಸ್ಥಿತರಿದ್ದು, ಇದುವರೆಗೆ ಕಾರ್ಕಳ ತಾಲೂಕು ಘಟಕ ನಡೆಸಿದ ಎಲ್ಲಾ ಸಾಹಿತ್ಯ ಕಾರ್ಯಕ್ರಮಗಳು ಪ್ರಶಂಸನೀಯ ಮತ್ತು ಮಾದರಿಯಾಗಿದೆ ಎಂದರು. ಜಿಲ್ಲಾ ಗೌರವ ಪ್ರತಿನಿಧಿ ಎಸ್ ನಿತ್ಯಾನಂದ ಪೈ, ನರಸಿಂಹ ಮೂರ್ತಿ ,ಪ್ರಕಾಶ್ ಉಪಸ್ಥಿತರಿದ್ದರು.

ಕಸಾಪ ಸದಸ್ಯರಾದ ಬೇಬಿ ಈಶ್ವರಮಂಗಲ, ಶಿವ ಸುಬ್ರಮಣ್ಯ ಭಟ್ , ನಾಗೇಶ್ ನಲ್ಲೂರು, ಧರಣೇಂದ್ರ ಕುಮಾರ್ , ಸುಲೋಚನಾ , ಶೈಲಜಾ ಹೆಗ್ಡೆ ,ಡಾ ಸುಮತಿ, ಡಾ ಮಾಲತಿ ಪೈ ಉಪಸ್ಥಿತರಿದ್ದರು. ಈ ಸಂದರ್ಭ ನಿವೃತ್ತ ಶಿರಸ್ತೇದಾರ ಶಿವಪ್ಪ ತಮ್ಮ ಸ್ವರಚಿತ ಕವನವನ್ನು ವಾಚಿಸಿದರು. ಘಟಕ ಸಂಘಟನಾ ಕಾರ್ಯದರ್ಶಿ ಗಣೇಶ್ ಜಾಲ್ಸೂರು ಕಾರ್ಯಕ್ರಮ ನಿರೂಪಿಸಿದರು. ದೇವದಾಸ ಕೆರೆಮನೆ ವಂದಿಸಿದರು.

ಹಟ್ಟಿಯಂಗಡಿ ಶಾಲೆ: ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ



ಕುಂದಾಪುರ: ವಿದ್ಯಾರ್ಥಿಗಳು ಜೀವನದಲ್ಲಿ ಗುರಿ, ಇಚ್ಛೆ ಇಟ್ಟುಕೊಳ್ಳಬೇಕು, ವಿದ್ಯಾಭ್ಯಾಸ ಮಾಡಬೇಕೆಂಬ ಹಂಬಲ ಇರಬೇಕು. ಮಕ್ಕಳಿಗೆ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣ ನೀಡುವ ಅಗತ್ಯತೆ ಇದೆ. ವ್ಯಕ್ತಿತ್ವ ವಿಕಸನವಾದರೆ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ಮನುಷತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು. ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ತಾಲೂಕು ಕಾನೂನು ಸೇವೆಗಳ ಸಮಿತಿ ಅಧ್ಯಕ್ಷ ಅಬ್ದುಲ್ ರಹೀಮ್ ಹುಸೇನ್ ಶೇಖ್ ಹೇಳಿದರು.

ತಾ.ಕಾನೂನು ಸೇವೆಗಳ ಸಮಿತಿ ಕುಂದಾಪುರ, ಬಾರ್ ಅಸೋಸಿಯೇಶನ್ ಕುಂದಾಪುರ, ಅಭಿಯೋಗ ಇಲಾಖೆ ಕುಂದಾಪುರ, ಕಾರ್ಮಿಕ ಇಲಾಖೆ ಕುಂದಾಪುರ, ಶ್ರೀ ಸಿದ್ಧಿವಿನಾಯಕ ವಸತಿ ಶಾಲೆ ಹಟ್ಟಿಯಂಗಡಿ ಇವರ ಸಂಯುಕ್ತ ಆಶ್ರಯದಲ್ಲಿ ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ಶಾಲೆಯಲ್ಲಿ ಮಂಗಳವಾರ ಜರಗಿದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಟ್ಟಿಅಂಗಡಿ ಶ್ರೀ ಸಿದ್ಧಿವಿನಾಯಕ ಶಾಲೆಯ ಪ್ರಾಂಶುಪಾಲ ಶರಣ ಕುಮಾರ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರದ ಹಿರಿಯ ಸಿವಿಲ್ ನ್ಯಾಯಾಧೀಶ ಕುಮಾರ ಜಿ., 1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಶ್ರೀನಿವಾಸ ಕೆ.ಆರ್., 2ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಮಣಿಕಂಠ ಎಂ.ಎಸ್., ಕುಂದಾಪುರ ಬಾರ್ ಅಸೋಸಿಯೇಶನ್ ಅಧ್ಯಕ್ಷ ಜೆ.ಶ್ರೀನಾಥ ರಾವ್, ಕಾರ್ಯದರ್ಶಿ ಪಿ.ಜಯಚಂದ್ರ ಶೆಟ್ಟಿ, ಜಿಲ್ಲಾ ಬಾಲಕಾರ್ಮಿಕ ಮಂಡಳಿ ಯೋಜನಾ ನಿರ್ದೇಶಕಿ ಅಮೃತಾ ಉಪಸ್ಥಿತರಿದ್ದರು. ಮಕ್ಕಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಆಯುಷಿ ತಂಡ ಪ್ರಾರ್ಥಿಸಿ, ಚಿದಾನಂದ ಚಿಮ್ಮನಕಟ್ಟಿ ಸ್ವಾಗತಿಸಿ, ತನಿಷ್ಕಾ ನಿರೂಪಿಸಿ, ವಿಜೇಂದ್ರ ಕೆ. ವಂದಿಸಿದರು.

ಕಲ್ಮಾಡಿಪಾದೆ ಬಬ್ಬುಸ್ವಾಮಿ ದೈವಸ್ಥಾನದ ಸಂಪರ್ಕ ರಸ್ತೆ ಶಾಸಕರಿಂದ ಉದ್ಘಾಟನೆ



ಉಡುಪಿ: ನಗರಸಭೆಯ ಕಲ್ಮಾಡಿ ವಾರ್ಡಿನಲ್ಲಿ ಸುಮಾರು 13 ಲ.ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಕಲ್ಮಾಡಿ ಪಾದೆ ಬಬ್ಬುಸ್ವಾಮಿ ಸಂಪರ್ಕ ರಸ್ತೆ ಕಾಮಗಾರಿಯನ್ನು ಉಡುಪಿ ವಿಧಾನ ಸಭಾ ಕ್ಷೇತ್ರದ ಶಾಸಕ ಯಶ್‌ಪಾಲ್ ಸುವರ್ಣ ಉದ್ಘಾಟಿಸಿದರು.

ಮನವಿಯಂತೆ ರಸ್ತೆ ನಿರ್ಮಾಣ

ಬಳಿಕ ಮಾತನಾಡಿದ ಅವರು, ಬಬ್ಬು ಸ್ವಾಮಿ ದೈವಸ್ಥಾನದ ಸಮಗ್ರ ಜೀರ್ಣೋದ್ಧಾರ ಸಂದರ್ಭ ದೇವಸ್ಥಾನದ ಪ್ರಮುಖರ ಮನವಿಯಂತೆ 13 ಲಕ್ಷ ವೆಚ್ಚದಲ್ಲಿ ಸಂಪರ್ಕ ರಸ್ತೆಯನ್ನು ನಿರ್ಮಿಸಲಾಗಿದ್ದು, ಮುಂದಿನ ದಿನಗಳಲ್ಲಿಯೂ ಕಲ್ಮಾಡಿ ವಾರ್ಡಿನ ಅಭಿವೃದ್ಧಿಗೆ ವಿಶೇಷ ಮುತುವರ್ಜಿ ವಹಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಬಬ್ಬುಸ್ವಾಮಿ ಆಡಳಿತ ಸಮಿತಿಯ ಅಧ್ಯಕ್ಷರಾದ ಸುಂದರ ಜೆ. ಕಲ್ಮಾಡಿ, ಗುರಿಕಾರರಾದ ಮಾಧವ ಗುರಿಕಾರ, ಪ್ರಮುಖರಾದ ಜಯರಾಮ್ ಕಲ್ಮಾಡಿ, ರಮೇಶ್ ಮಾಸ್ಟರ್ ಕಲ್ಮಾಡಿ, ಜಯಶ್ರೀ ಅಶೋಕ್, ಸುರೇಶ್ ಕಲ್ಮಾಡಿ, ರೋಹಿತ್ ಕಲ್ಮಾಡಿ, ಅಶೋಕ್ ಸುವರ್ಣ, ವಿನೋದರ, ಮನೋಜ್ ಕುಮಾರ್ ಕಲ್ಮಾಡಿ, ಅಶೋಕ್ ಕುಮಾರ್, ಕಿಶೋರ್ ಮಲ್ಪೆ ಸ್ಥಳೀಯ ಮುಖಂಡರಾದ ಲಕ್ಷ್ಮೀಶ, ವಿವೇಕ್ ಮೊದಲಾದವರು ಉಪಸ್ಥಿತರಿದ್ದರು.

- 13 ಲ.ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ
- ಕಲ್ಮಾಡಿ ವಾರ್ಡಿನ ಅಭಿವೃದ್ಧಿಗೂ ವಿಶೇಷ ಆದ್ಯತೆ

ಮುಂದಿನ ಜನಾಂಗಕ್ಕಾಗಿ ಪರಿಸರ ಉಳಿಸಿ ಬೆಳೆಸುವ ಕಾರ್ಯವಾಗಲಿ: ರಮೇಶ್



ಕೋಟ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಪ್ರಗತಿಬಂಧು ಸ್ವ- ಸಹಾಯ ತಂಡಗಳ ಒಕ್ಕೂಟ ಕಾವಡಿ , ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾವಡಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಕಾವಡಿ ಶಾಲೆಯಲ್ಲಿ ಆಚರಿಸಲಾಯಿತು.

ಅತಿಥಿಯಾಗಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾ. ಯೋಜನೆ ಯೋಜನಾಧಿಕಾರಿ ರಮೇಶ್ ಪಿ.ಕೆ., ನಮ್ಮ ಪೂರ್ವಜರು ಬಿಟ್ಟು ಹೋದ ಪರಿಸರಲ್ಲಿ ಉಸಿರಾಡುತ್ತಿದ್ದೇವೆ, ನಾವೆಲ್ಲರೂ ನಮ್ಮ ಮುಂದಿನ ಪೀಳಿಗೆಗೆ ಗಿಡಗಳನ್ನು ನಾಟಿ ಮಾಡುವ ಮುಖಾಂತರ ಉತ್ತಮ ಪರಿಸರ ಕೊಡುಗೆಯಾಗಿ ನೀಡಬೇಕು ಎಂದರು.

ಜೊತೆಗೆ ಪರಿಸರದಲ್ಲಿ ನಾವೆಲ್ಲರೂ ಪ್ಲಾಸ್ಟಿಕಂತಹ ವಸ್ತುಗಳನ್ನು ಎಸೆಯುದರಿಂದ ಪರಿಸರ ಕಲುಷಿತಗೊಳ್ಳುತ್ತದೆ ಆದ್ದರಿಂದ ಪರಿಸರ ಮೇಲೆ ಇಂತಹ ವಸ್ತು ಎಸೆಯದಂತೆ ಜಾಗೃತೆ ವಹಿಸಬೇಕು ಎಂದರು.

ಎಲ್ಲೆಂದರಲ್ಲಿ ಕಸ ಎಸೆಯಬೇಡಿ

ವಡ್ಡರ್ಸೆ ಗ್ರಾ.ಪಂ. ವ್ಯಾಪ್ತಿಯಲ್ಲಿ ರಸ್ತೆ ಪಕ್ಕದಲ್ಲಿ ಪರಿಸರದಲ್ಲಿ ತ್ಯಾಜ್ಯ ಕಸಗಳನ್ನು ಎಲ್ಲೆಂದರಲ್ಲಿ ಎಸೆಯಬೇಡಿ, , ಕಸಗಳನ್ನು ಕಸ ವಿಲೇವಾರಿ ಮಾಡುವವರಿಗೆ ನೀಡಿ.

● ಲೋಕೇಶ್ ಕಾಂಚನ

ಕಾರ್ಯಕ್ರಮವನ್ನು ವಡ್ಡರ್ಸೆ ಗ್ರಾ.ಪಂ. ಅಧ್ಯಕ್ಷ ಲೋಕೇಶ್ ಕಾಂಚನ ಉದ್ಘಾಟಿಸಿದರು. ಶಾಲೆ ಮುಖ್ಯ ಶಿಕ್ಷಕಿ ರೇಖಾ ಪೂಜಾರಿ, ಈ ಕಾರ್ಯಕ್ರಮ ನಮ್ಮ ಶಾಲೆಯಲ್ಲಿ ಮಾಡಿದ್ದು ನಮ್ಮ ಭಾಗ್ಯ ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಘವೇಂದ್ರ ಕಾಂಚನ ವಹಿಸಿದ್ದರು. ಒಕ್ಕೂಟ ಅಧ್ಯಕ್ಷೆ ವಿಜಯಲಕ್ಷ್ಮೀ ಐತಾಳ ಮತ್ತಿತರರಿದ್ದರು. ಜಗದೀಶ್ ಎಂ. , ರಮೇಶ್ , ರಾಘವೇಂದ್ರ ಇದ್ದರು,

ಅಂಚೆ ಜನ ಸಂಪರ್ಕ ಅಭಿಯಾನ, ಆಧಾರ್ ನೋಂದಣಿ -ತಿದ್ದುಪಡಿ ಶಿಬಿರ



ಕೋಟ: ಭಾರತೀಯರ ಜೀವನದಲ್ಲಿ ಅಂಚೆ ಇಲಾಖೆ ಒಂದು ಜೀವನಾಡಿಯಾಗಿದೆ. ಮೊದಲು ಅಂಚೆ ತಲುಪಿಸುವ ಕಾರ್ಯಕ್ರಮಕ್ಕೆ ಮಾತ್ರ ಸೀಮಿತವಾಗಿದ್ದ ಅಮಚೆ ಇಲಾಖೆ ಇಂದು ಸರ್ಕಾರಿ ಸೇವೆಗಳಲ್ಲೂ ತನ್ನನ್ನು ತೊಡಗಿಸಿಕೊಂಡಿದೆ ಎಂದು ಸಾಲಿಗ್ರಾಮ ದೇವಳ ಆಡಳಿತ ಮಂಡಳಿ ಅಧ್ಯಕ್ಷ ಪ್ರಕಾಶ್ ಕಾರಂತ್ ಹೇಳಿದರು.

ಯುವ ವೇದಿಕೆ ಕೂಟ ಮಹಾಜಗತ್ತು ಸಾಲಿಗ್ರಾಮ ಶ್ರೀ ಗುರು ಫ್ರೆಂಡ್ಸ್ ರಥ ಬೀದಿ ಸಾಲಿಗ್ರಾಮ ಹಾಗೂ ಭಾರತೀಯ ಅಂಚೆ ಇಲಾಖೆ ಉಡುಪಿ ವಿಭಾಗ ಇವರ ಸಹಯೋಗದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ ಆಧಾರ್ ನೋಂದಣಿ -ತಿದ್ದುಪಡಿ ಶಿಬಿರದಲ್ಲಿ ಮಾತನಾಡಿದರು.


ಅತಿಥಿಯಾಗಿದ್ದ ಉಡುಪಿ ವಿಭಾಗ ಅಂಚೆ ಅಧೀಕ್ಷಕ ಜಯರಾಮ್ ಶೆಟ್ಟಿ , ಅಂಚೆ ಇಲಾಖೆಯಲ್ಲಿ ಸಿಗುವ ಸೌಲಭ್ಯಗಳ ಮಾಹಿತಿ ನೀಡಿದರು.

ಸುಮಾರು 250 ಹೆಚ್ಚು ಜನರು ಭಾಗವಹಿಸಿ ತಮ್ಮ ಆಧಾರ್ ಕಾರ್ಡ್ ಸರಿಪಡಿಕೊಂಡರು. ಅಧ್ಯಕ್ಷತೆಯನ್ನು ಯುವ ವೇದಿಕೆ ಕೂಟ ಮಹಾಜಗತ್ತು ಸಾಲಿಗ್ರಾಮ ಅಂಗ ಸಂಸ್ಥೆಯ ಅಧ್ಯಕ್ಷ ಸಚಿನ್ ಹೇರ್ಳೆ ವಹಿಸಿದ್ದರು. ಸಾಲಿಗ್ರಾಮ ದೇಗುಲದ ಉಪಾಧ್ಯಕ್ಷ ಚಂದ್ರಶೇಖರ್ ಉಪಾಧ್ಯ , ಸದಸ್ಯರಾದ ತಾರನಾಥ ಹೊಳ್ಳ, ಕೂಟ ಮಹಾಜಗತ್ತು ಸಾಲಿಗ್ರಾಮ ಅಧ್ಯಕ್ಷ ಪಿ ಚಂದ್ರಶೇಖರ್ ಹೊಳ್ಳ, ಶ್ರೀಗುರು ಫ್ರೆಂಡ್ಸ್ ರಥಬೀದಿ ಸಾಲಿಗ್ರಾಮ ಅಧ್ಯಕ್ಷ ಸಂಪತ್ ಕುಮಾರ್, ಯುವ ವೇದಿಕೆ ಗೌರವಧ್ಯಕ್ಷ ಪಿ. ವೈ.ಕೃಷ್ಣ ಪ್ರಸಾದ್ ಹೇರ್ಳೆ ಉಪಸ್ಥಿತರಿದ್ದರು.

ಉಡುಪಿ ಜಿಲ್ಲೆಯ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥರಾದ ಜೀವನ ಕೆ. ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಕೃಷ್ಣ ಐತಾಳ್ ಸ್ವಾಗತಿಸಿದರು. ಸುಧೀಂದ್ರ ಐತಾಳ್ ವಂದಿಸಿದರು. ಕೆ.ಶಶಿಧರ ಮಯ್ಯ ಕಾರ್ಯಕ್ರಮ ನಿರೂಪಿಸಿದರು.



ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷ ಸಂತೋಷ್ ಕುಮಾರ್ ಯಾದವ್ ಸಪತ್ನೀಕರಾಗಿ ಬುಧವಾರ ಬೆಳಿಗ್ಗೆ ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನಕ್ಕೆ ಆಗಮಿಸಿ ಉಚ್ಚಂಗಿ ಸಹಿತ ಶ್ರೀ ಮಾರಿಯಮ್ಮ ದೇವಿಯ ದರುಶನ ಪಡೆದು ಪ್ರಸಾದ ಸ್ವೀಕರಿಸಿದರು. ದೇವಳದ ವ್ಯವಸ್ಥಾಪನಾ ಸಮಿತಿ ಮತ್ತು ಅಭಿವೃದ್ಧಿ ಸಮಿತಿ ವತಿಯಿಂದ ಗೌರವಿಸಲಾಯಿತು. ಕಾರ್ಯನಿರ್ವಹಣಾಧಿಕಾರಿ ರವಿಕಿರಣ್, ವ್ಯವಸ್ಥಾಪನ ಸಮಿತಿ ಸದಸ್ಯ ಮಾಧವ ಆರ್ ಪಾಲನ್, ಮಾತೃ ವೈಭವ ಸೇವಾ ಸಮಿತಿ ಪ್ರಧಾನ ಕಾರ್ಯದರ್ಶಿ ಮತ್ತು ಪ್ರಚಾರ ಸಮಿತಿ ಪ್ರಧಾನ ಸಂಚಾಲಕ ಯೋಗೀಶ್ ವಿ.ಶೆಟ್ಟಿ, ನವದುರ್ಗಾ ಲೇಖನ ಯಜ್ಞ ಸಮಿತಿ ಕಾರ್ಯಧ್ಯಕ್ಷೆ ಸಾವಿತ್ರಿ ಗಣೇಶ್, ಪ್ರಚಾರ ಸಮಿತಿ ಸಂಚಾಲಕ ಜಯರಾಮ್ ಆಚಾರ್ಯ , ಪ್ರಬಂಧಕ ಗೋವರ್ಧನ್ ಸೇರಿಗಾರ್ ಮತ್ತಿತರರಿದ್ದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕುಂದಾಪುರ ತಾಲೂಕು ವಂಡ್ಸೆ ವಲಯ ಇವರ ಮಾರ್ಗದರ್ಶನದಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಗಿಡ ನಾಟಿ ಹಾಗೂ ಪರಿಸರ ಮಾಹಿತಿ ಕಾರ್ಯಕ್ರಮ ಬಗ್ವಾಡಿ ನೂಜಾಡಿ-2 ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ನಡೆಯಿತು.

ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಸ್ಮಾರ್ಟ್ ಎನರ್ಜಿ ಹಾರ್ವೆಸ್ಟಿಂಗ್ ವ್ಯವಸ್ಥೆಯ ಅಭಿವೃದ್ಧಿ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಶ್ರೀಪಾದ ರಾವ್, ಸಾತ್ವಿಕ್, ಶ್ರೀಶಾ , ಕೃಷ್ಣ ಹೆಬ್ಬಾರ್ ಇವರು ಅಕ್ಷತಾ ರಾವ್ ಎಲ್. ಮತ್ತು ಡಾ. ಗಣೇಶ್ ಶ್ರೀನಿವಾಸ ಶೆಟ್ಟಿ ಇವರ ಮಾರ್ಗದರ್ಶನದಲ್ಲಿ ಕಾಲ್ನಡಿಗೆಯ ಒತ್ತಡದಿಂದ ವಿದ್ಯುತ್ ಉತ್ಪಾದಿಸುವ ಸ್ಮಾರ್ಟ್‌ಎನರ್ಜಿ ಹಾರ್ವೆಸ್ಟಿಂಗ್ ವ್ಯವಸ್ಥೆ ಅಭಿವೃದ್ಧಿ ಪಡಿಸಿದ್ದಾರೆ.

ಯೋಜನೆ ಮುಖ್ಯ ಉದ್ದೇಶ

ದೈನಂದಿನ ಮಾನವ ಚಟುವಟಿಕೆಗಳಿಂದ ಉಂಟಾಗುವ ಶಕ್ತಿ ನವೀಕರಿಸಬಹುದಾದ ಇಂಧನದ ಮೂಲವಾಗಿ ಬಳಸಿಕೊಂಡು ಸುಸ್ಥಿರ ಇಂಧನ ಪರಿಹಾರ ಹಾಗೂ ಸ್ಮಾರ್ಟ್ ಮೂಲ ಸೌಕರ್ಯ ಅಭಿವೃದ್ಧಿಗೆ ಕೊಡುಗೆ ನೀಡುವುದು ಯೋಜನೆ ಮುಖ್ಯ ಉದ್ದೇಶ.

ಈ ತಂತ್ರಜ್ಞಾನ ರೈಲು ನಿಲ್ದಾಣಗಳು, ಬಸ್ ನಿಲ್ದಾಣಗಳು, ವಾಣಿಜ್ಯ ಮಳಿಗೆಗಳು, ಶಿಕ್ಷಣ ಸಂಸ್ಥೆಗಳ ಆವರಣಗಳು, ಮೆಟ್ಟಿಲುಗಳು, ಪಾದಚಾರಿ ಮಾರ್ಗಗಳಂತಹ ಹೆಚ್ಚಿನ ಜನಸಂಚಾರವಿರುವ ಸ್ಥಳಗಳಲ್ಲಿ ಅಳವಡಿಸಲು ಅಪಾರ ಸಾಧ್ಯತೆ ಹೊಂದಿದೆ. ಉತ್ಪಾದಿತ ಶಕ್ತಿಯನ್ನು ಇಂಟರ್‌ನೆಟ್ ಆಫ್ ಥಿಂಗ್ಸ್ ಸಾಧನಗಳು, ಸ್ಮಾರ್ಟ್ ಸಂವೇದಕಗಳು , ಇತರ ಕಡಿಮೆ ವಿದ್ಯುತ್ ಬಳಕೆ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಬಳಸಬಹುದಾಗಿದ್ದು ಸಾರ್ವಜನಿಕ ಸ್ಥಳಗಳ ಇಂಧನ ದಕ್ಷತೆ ಹೆಚ್ಚಿಸಲು ಸಹಾಯಕವಾಗಿದೆ. ಈ ಯೋಜನೆ ಕರ್ನಾಟಕ ರಾಜ್ಯ ವಿಜ್ಞಾನ - ತಂತ್ರಜ್ಞಾನ ಮಂಡಳಿ ಯಿಂದ ಅನುದಾನ ಪಡೆದಿದೆ.

ಪೈಝೋ ಎಲೆಕ್ಟ್ರಿಕ್ ಸಂವೇದಕ

ವ್ಯವಸ್ಥೆಯು ವ್ಯಕ್ತಿಗಳು ನಡೆಯುವಾಗ ಉಂಟಾಗುವ ಯಾಂತ್ರಿಕ ಒತ್ತಡವನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುತ್ತದೆ ಮತ್ತು ವಿದ್ಯುತ್ ಶಕ್ತಿಯನ್ನು ಸಂಗ್ರಹಿಸಿ ಕಡಿಮೆ ವಿದ್ಯುತ್ ಅಗತ್ಯವಿರುವ ವಿವಿಧ ಉಪಕರಣಗಳಿಗೆ ಬಳಸಬಹುದಾಗಿದೆ. ಈ ವ್ಯವಸ್ಥೆ ಕಾರ್ಯಕ್ಷಮತೆ ಹೆಚ್ಚಿಸಲು ಹೆಚ್ಚುವರಿ ವಿದ್ಯುತ್ ಶಕ್ತಿ ಉತ್ಪಾದಿಸುವ ಪೈಝೋ ಎಲೆಕ್ಟ್ರಿಕ್ ಸಂವೇದಕ ಅಳವಡಿಸಲಾಗಿದೆ.

ಮುದ್ರಾಡಿ ಶಾಲೆ: ಪರಿಸರ ಜಾಗೃತಿ ಮಾಹಿತಿ ಕಾರ್ಯಕ್ರಮ



ಹೆಬ್ರಿ: ಇಲ್ಲಿನ ಮುದ್ರಾಡಿ ಎಂಎನ್‌ಡಿಎಸ್‌ಎಂ ಅನುದಾನಿತ ಪ್ರೌಢಶಾಲೆಯ ಕಲ್ಪನಾ ಇಕೊ ಕ್ಲಬ್ ಹಾಗು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಇದರ ಜಂಟಿ ಆಶ್ರಯದಲ್ಲಿ 'ಪರಿಸರ ಜಾಗೃತಿ ಮಾಹಿತಿ ಕಾರ್ಯಕ್ರಮ''ವು ಇತ್ತೀಚೆಗೆ ನಡೆಯಿತು.

ಹಿರಿಯ ಸಮಾಜಸೇವಕ ಗಣಪತಿ ಎಂ. ಅವರು, ಹಣ್ಣಿನ ಗಿಡ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಗಣ್ಯರು ಸೇರಿ ಹಣ್ಣಿನ ಗಿಡಗಳನ್ನು ನೆಟ್ಟು ಪ್ರಕೃತಿ ಸಂರಕ್ಷಣೆಗೆ ಪ್ರತಿಜ್ಞೆ ಕೈಗೊಂಡರು.

ಪರಿಸರ ಪ್ರೀತಿ ಬೆಳೆಸಬೇಕು

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಕೃಷಿಕ, ಒಕ್ಕೂಟದ ಮಾಜಿ ಅಧ್ಯಕ್ಷ ಶ್ರೀನಿವಾಸ ಶೆಟ್ಟಿಗಾರ್, ಪರಿಸರ ಸಂರಕ್ಷಣೆ, ಮಳೆನೀರು ಕೊಯ್ಲು, ಪ್ಲಾಸ್ಟಿಕ್ ನಿಯಂತ್ರಣದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. 'ಒಂದು ಮಗು ಒಂದು ಗಿಡ' ಎಂಬ ಧ್ಯೇಯದೊಂದಿಗೆ ಮಕ್ಕಳಲ್ಲಿ ಪರಿಸರ ಪ್ರೀತಿ ಬೆಳೆಸುವಂತೆ ಕರೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿ ಡಾ.ಎಂ.ಎಸ್. ರಾವ್, ಹೆಬ್ರಿ ಅಲಯನ್ಸ್ ಕ್ಲಬ್ ಅಧ್ಯಕ್ಷ ಬಾಲಚಂದ್ರ ಎಂ., ಮುದ್ರಾಡಿ ವಲಯದ ಮೇಲ್ವಿಚಾರಕ ಉಮೇಶ್ ಬಿ. ಕೆ. ಪಾಲ್ಗೊಂಡು ಶುಭ ಹಾರೈಸಿದರು.

ಬಲ್ಲಾಡಿ ಅರ್ಧನಾರೀಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಶುಭಧರ ಶೆಟ್ಟಿ, ಪಂಚಾಯತ್ ನಿಕಟಪೂರ್ವ ಸದಸ್ಯರಾದ ಸನತ್ ಕುಮಾರ್, ಸೇವಾನಿರತರಾದ ಮಮತಾ, ಸುಜಯ, ಸುವಿಧಾ ಸಹಾಯಕಿ ಅಜಿತಾ ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕ ಬಲ್ಲಾಡಿ ಚಂದ್ರಶೇಖರ ಭಟ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಶಿಕ್ಷಕ ಪಿ. ವಿ. ಆನಂದ ಸಾಲಿಗ್ರಾಮ ನಿರೂಪಿಸಿ, ಶ್ಯಾಮಲಾ ವಂದಿಸಿದರು.